# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

ಮಂಗಳವಾರ, 27ನೇ ಜನವರಿ 2026

## ವಿಷಯಾನುಕ್ರಮಣಿಕೆ (INDEX)


1. ನಿಗದಿತ ಸಮಯಕ್ಕೆ ಸದನದ ಕಾರ್ಯಕಲಾಪವು ಅರಂಭಗೊಳ್ಳದಿರುವ ಕುರಿತು.

 - ಶ್ರೀ ಎಸ್.ಎಲ್.ಭೋಜೇಗೌಡ

2. ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿದ್ದ ವಿಷಯವನ್ನು ನಿಯಮ 330ಕ್ಕೆ ಪರಿವರ್ತಿಸಿರುವುದು ಹಾಗೂ ಇತ್ಯಾದಿ ವಿಷಯಗಳ ಬಗ್ಗೆ.

 - ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
 - ಶ್ರೀ ಬಿ.ಕೆ.ಹರಿಪ್ರಸಾದ್
 - ಶ್ರೀ ಡಿ.ಎಸ್.ಅರುಣ್
 - ಶ್ರೀ ಎಸ್.ಎಲ್.ಭೋಜೇಗೌಡ

3. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

47–ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿನ ಒಳಚರಂಡಿ ಯೋಜನೆ ಕುರಿತು.

 - ಶ್ರೀ ರಮೇಶ್ ಬಾಬು
 - ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

28– ಮೈಸೂರು ಜಿಲ್ಲೆಯಲ್ಲಿ ನಗರೋತ್ಥಾನ ಯೋಜನೆ ಬಗ್ಗೆ.

 - ಶ್ರೀ ಸಿ.ಎನ್.ಮಂಜೇಗೌಡ
 - ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

26– ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ನೌಕರರುಗಳು ತೆರಿಗೆ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ.

 - ಶ್ರೀ ವೈ.ಎಂ.ಸತೀಶ್
 - ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

64– ರಾಜ್ಯದ ಮಹಾನಗರ ಪಾಲಿಕೆ ಹಾಗೂ ಇತರೆ ನಗರಸಭಾ ಪೌರಕಾರ್ಮಿಕರ ಬಗ್ಗೆ.

 - ಶ್ರೀ ಶಿವಕುಮಾರ್. ಕೆ
 - ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)

**96– ತೆಂಗಿನ ಮರ ಕೆಂಪುಮೂತಿಹುಳ ಮತ್ತು ಅಣಬೆ ರೋಗಕ್ಕೆ ತುತ್ತಾಗುತ್ತಿರುವ ಬಗ್ಗೆ.**

- ಶ್ರೀ ಚಿದಾನಂದ ಎಂ.ಗೌಡ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**33– ತೋಟಗಾರಿಕೆ ಬೆಳೆಗಳಿಗೆ ನಷ್ಟ ಪರಿಹಾರ.**

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**27 - ಇಲಾಖೆಯಿಂದ ರಸ್ತೆಗಳಲ್ಲಿ ಬ್ಯಾನರ್ ಅಳವಡಿಸುವ ಕುರಿತು.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ರಹೀಂ ಖಾನ್(ಪೌರಡಳಿತ ಮತ್ತು ಹಜ್ ಸಚಿವರು)

**91+86- ಅಡಿಕೆ ತೋಟಗಳಿಗೆ ಎಲೆಚುಕ್ಕೆ ರೋಗ ವ್ಯಾಪಕವಾಗಿ ಹರಡಿರುವ ಬಗ್ಗೆ.**

- ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

**70 - ಜವಳಿ ಕ್ಷೇತ್ರದ ಸಮಸ್ಯೆಗಳ ಕುರಿತು.**

-ಶ್ರೀ ಎಂ.ನಾಗರಾಜ್

-ಶ್ರೀ ಶಿವಾನಂದ ಎಸ್.ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

**77– ಇನ್ವೆಸ್ಟ್ ಕರ್ನಾಟಕ 2025' ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ.**

– ಡಾ: ಉಮಾಶ್ರೀ

– ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**118– ಕೈಗಾರಿಕೆಗಳ ಸ್ಥಾಪನೆಯ ಕುರಿತು.**

- ಶ್ರೀ ಕೇಶವ್ ಪ್ರಸಾದ್ ಎಸ್.
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦4. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಮತ್ತು ಅಧಿಕಾರಿಗಳ ಕುರಿತು**

೦೫. ನಿಯಮ ೫೮ಎ ಮೇರೆಗೆ ಶೂನ್ಯ ವೇಳೆ ಪ್ರಸ್ತಾವಗಳು.

ಅ) "ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ (Traffic Jam) ಉಂಟಾಗಿರುವ ಬಗ್ಗೆ ಹಾಗೂ ೨೦೫೦ರ ದೂರದೃಷ್ಟಿಯನ್ನಿಟ್ಟುಕೊಂಡು ನಗರವನ್ನು ಸಂಚಾರ ಮುಕ್ತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು."

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಎಂ.ನಾಗರಾಜ್
- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

ಆ) "ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ರಿಶೇಲ್ ಡಿ'ಸೋಜಾ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯ ಬಂಧನಕ್ಕೆ ವಿಳಂಬ, ಪೊಲೀಸರ ಕರ್ತವ್ಯಲೋಪ ಮತ್ತು ತನಿಖೆಯಲ್ಲಿನ ಸಂಶಯಾಸ್ಪದ ಅಂಶಗಳ ಕುರಿತು .

- ಶ್ರೀ ಐವನ್ ಡಿ’ಸೋಜಾ
- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

ಇ) "ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ಕಿತ್ತೂರು ಸಂಸ್ಥಾನದ ವೀರ ಕಲಿ ಅಮಟೂರು ಬಾಳಪ್ಪನವರ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಕುರಿತು."

– ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

ಈ) "ಶಿವಮೊಗ್ಗ ಜಿಲ್ಲೆಯ ಅರಬಿಳಚಿ ಗ್ರಾಮದಲ್ಲಿ ರೂ. 2.31 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ 24x7 ಸರ್ಕಾರಿ ಹೆರಿಗೆ ಆಸ್ಪತ್ರೆ ಕಟ್ಟಡದ ಕಳಪೆ ಕಾಮಗಾರಿ ಮತ್ತು ಉದ್ಘಾಟನೆ ವಿಳಂಬದ ಬಗ್ಗೆ

– ಶ್ರೀಮತಿ ಬಲ್ಕೀಸ್ ಬಾನು
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

ಉ) "ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಹಜೇನಹಳ್ಳಿ ಗ್ರಾಮದ ’ಮುಗುಲಾ ಬೇಗಾರ’ (ಛಲವಾದಿ) ಜನಾಂಗಕ್ಕೆ ಸೇರಿದ ಇನಾಂ ಜಮೀನನ್ನು ಸರ್ಕಾರಿ ಎಂದು ವರ್ಗೀಕರಿಸಿರುವುದರ ವಿರುದ್ಧ ಹಾಗೂ ಸಮುದಾಯದ ಸಾಂಪ್ರದಾಯಿಕ ಹಕ್ಕುಗಳ ರಕ್ಷಣೆಯ ಕುರಿತು."

– ಶ್ರೀ ಎಫ್.ಹೆಚ್.ಜಕ್ಕಪ್ಪನವರ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

ಊ) "ಕರ್ನಾಟಕ ಲೋಕಸೇವಾ ಆಯೋಗವು (KPSC) ೩೮೪ ಕೆ.ಎ.ಎಸ್. (ಗ್ರೂಪ್ ’ಎ’ ಮತ್ತು ’ಬಿ’) ಹುದ್ದೆಗಳ ಮುಖ್ಯ ಪರೀಕ್ಷೆ ನಡೆಸಿ ೯ ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸದಿರುವ ಬಗ್ಗೆ ಹಾಗೂ ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಳ್ಳುವ ಕುರಿತು."

– ಶ್ರೀ ಸಿ.ಟಿ.ರವಿ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಋ) "ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಸ್ಥೆಗಳು ನೀಡುತ್ತಿರುವ 'ಗೌರವ ಡಾಕ್ಟರೇಟ್' ಪದವಿಗಳ ದುರುಪಯೋಗವನ್ನು ತಡೆಯಲು ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸುವ ಹಾಗೂ ಕಾನೂನುಬದ್ಧ ನಿಯಂತ್ರಣ ಹೇರುವ ಕುರಿತು."**
– ಶ್ರೀ ರಮೇಶ್ ಬಾಬು
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಎ) ಜಿಲ್ಲೆಯ ಜಲಮೂಲಗಳಿಗೆ ಕಸಾಯಿಖಾನೆ ಹಾಗೂ ಆಸ್ಪತ್ರೆಯ ಅಪಾಯಕಾರಿ ತ್ಯಾಜ್ಯ ಸುರಿಯುತ್ತಿರುವುದರಿಂದ ಉಂಟಾಗಿರುವ ಸಾರ್ವಜನಿಕ ಆರೋಗ್ಯದ ಗಂಭೀರ ಸ್ಥಿತಿಯ ಕುರಿತು."**

– ಶ್ರೀ ಡಿ.ಎಸ್ ಅರುಣ್
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಏ) ಪಶ್ಚಿಮ ಘಟ್ಟಗಳ ಭೂಕುಸಿತದ ಆತಂಕ ಮತ್ತು ಐ.ಐ.ಟಿ. ಧಾರವಾಡದ ವರದಿಯ ಹಿನ್ನೆಲೆಯಲ್ಲಿ ನದಿ ಜೋಡಣೆ ಯೋಜನೆಗಳ ಮರುಪರಿಶೀಲನೆಯ ಕುರಿತು."**
– ಶ್ರೀ ಕೆ.ಪ್ರತಾಪ್ ಸಿಂಹ ನಾಯಕ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ರಾಜ್ಯದ ನಾಲ್ಕು ಸಾರಿಗೆ ನಿಗಮಗಳ 1.15 ಲಕ್ಷ ನೌಕರರ ವೇತನ ಪರಿಷ್ಕರಣೆ ವಿಳಂಬ ಮತ್ತು 38 ತಿಂಗಳ ಬಾಕಿ ಪಾವತಿಸದ ಹಿನ್ನೆಲೆಯಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನ ಕುರಿತು."**
– ಶ್ರೀ ಜಗದೇವ ಗುತ್ತೇದಾರ
– ಶ್ರೀ ರಾಮಲಿಂಗಾ ರೆಡ್ಡಿ (ಸಾರಿಗೆ ಸಚಿವರು)

**ಒ) ರಾಜ್ಯದಲ್ಲಿ ಖಾಲಿ ಇರುವ ಸುಮಾರು ಎರಡು ಲಕ್ಷ ಸರ್ಕಾರಿ ಹುದ್ದೆಗಳ ನೇಮಕಾತಿ ವಿಳಂಬ ಮತ್ತು ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಹಿನ್ನಡೆಯ ಕುರಿತು**
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಓ) ಬಾಗಲಕೋಟೆ ಜಿಲ್ಲೆಯ ಐಹೊಳೆ ಗ್ರಾಮ ಸ್ಥಳಾಂತರ, ಬಾದಾಮಿ ಅಗಸ್ತ್ಯತೀರ್ಥ ಅಭಿವೃದ್ಧಿ ಹಾಗೂ ಕೂಡಲಸಂಗಮದ ಅಂತರಾಷ್ಟ್ರೀಯ ಬಸವ ಕೇಂದ್ರದ ಕಾರ್ಯ ಪೂರ್ಣಗೊಳಿಸುವ ಕುರಿತು.**
– ಶ್ರೀ ಪಿ.ಹೆಚ್.ಪೂಜಾರ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಔ) ಕನಕಗಿರಿ ತಾಲೂಕಿನ ಕಲಕೇರಿ ಗ್ರಾಮದ ದಲಿತ ಕಾಲೋನಿಯಲ್ಲಿ ಹುಳುಗಳಿಂದ ಕೂಡಿದ ಕಲುಷಿತ ನೀರು ಸರಬರಾಜು ಮತ್ತು ಸಾಂಕ್ರಾಮಿಕ ರೋಗ ಹರಡುವ ಭೀತಿಯ ಕುರಿತು.**

– ಶ್ರೀಮತಿ ಹೇಮಲತಾ ನಾಯಕ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಅಂ) ಸೊರಬದ ಸರ್ಕಾರಿ ಮಾದರಿ ಶಾಲೆಯಲ್ಲಿ ಶೌಚಾಲಯವಿಲ್ಲದೆ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರ ಮಾನ ಹರಾಜಾಗುತ್ತಿರುವ ದುಸ್ಥಿತಿಯ ಕುರಿತು.**

– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಮಧು ಬಂಗಾರಪ್ಪ ( ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು)

**ಅಃ) ರಾಜ್ಯದ ಗ್ರಾಮೀಣ ಭಾಗದ ಆಸ್ತಿ ನೋಂದಣಿಗೆ ವಿಘ್ನ ತಂದಿರುವ 'ಇ-ಸ್ವತ್ತು 2.0' ತಂತ್ರಾಂಶದ ತಾಂತ್ರಿಕ ದೋಷ ಹಾಗೂ ಬಾಕಿ ಇರುವ 36,000ಕ್ಕೂ ಅಧಿಕ ಅರ್ಜಿಗಳ ವಿಲೇವಾರಿ ಕುರಿತು.**

– ಶ್ರೀ ಕಿಶೋರ್ ಕುಮಾರ್
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಕ) ರಾಜ್ಯಪಾಲರ ಅಂಕಿತಕ್ಕೂ ಮುನ್ನವೇ 'ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕ-2025'ರ ಅಡಿಯಲ್ಲಿ ನೋಟಿಸ್ ನೀಡಿರುವ ಪೋಲೀಸರ ಕ್ರಮ ಮತ್ತು ಸಂವಿಧಾನದ ವಿಧಿ 20(1) ಹಾಗೂ 200ರ ಉಲ್ಲಂಘನೆಯ ಕುರಿತು.**

– ಶ್ರೀ ರವಿಕುಮಾರ್ ಎನ್
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)

**ಖ) ಕಾಡ್ಗಿಚ್ಚು ನಿಯಂತ್ರಣಕ್ಕೆ ಆಧುನಿಕ ಉಪಕ್ರಮಗಳನ್ನು ಹಾಗೂ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.**

– ಡಾ: ಧನಂಜಯ ಸರ್ಜಿ
– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು

**6. ಕಾರ್ಯದರ್ಶಿಯವರ ವರದಿ**

**7. ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಸದನದ ಕಲಾಪಗಳನ್ನು ನಡೆಸಬೇಕು ಎನ್ನುವ ಕುರಿತು.**

– ಶ್ರೀ ಐವನ ಡಿ'ಸೋಜಾ
– ಶ್ರೀ ರಮೇಶ್ ಬಾಬು
– ಶ್ರೀ ಬಿ,ಕೆ,ಹರಿಪ್ರಸಾದ್
– ಶ್ರೀ ಸಲೀಂ ಅಹಮದ್

**೮. ನಿಯಮ ೩೩೦ರ ಮೇರೆಗೆ ಚರ್ಚೆ.**

**ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಮತ್ತು ಸಿಎಲ್-೯ ಗಳಿಗೆ ನಿಯಮಾನುಸಾರ ಪರವಾನಿಗೆ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು.**

- ಶ್ರೀ ಛಲವಾದಿ ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಂತೋಷ ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಸಿ.ಟಿ.ರವಿ
- ಶ್ರೀ ಎನ್.ರವಿಕುಮಾರ್

**೯. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮಂಡನೆ**

- ಶ್ರೀ ಐವನ್ ಡಿ'ಸೋಜಾ
- ಶ್ರೀ ರಮೇಶ್ ಬಾಬು

**(ಪ್ರಸ್ತಾವವನ್ನು ಮಂಡಿಸಲಾಯಿತು)**

**10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ.**

- ಶ್ರೀ ಐವನ್ ಡಿ'ಸೋಜಾ

**11. ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ಚರ್ಚಿಸಲು ಅವಕಾಶ ನೀಡಬೇಕೆನ್ನುವ ಕುರಿತು.**

- ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ರಮೇಶ್ ಬಾಬು
- ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಸಲೀಂ ಅಹಮದ್

**12. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಆರ್.ಬಿ.ತಿಮ್ಮಾಪೂರ(ಅಬಕಾರಿ ಸಚಿವರು)
- ಶ್ರೀ ಕೆ.ಎಸ್.ನವೀನ್
- ಶ್ರೀ ಕೆ.ಪ್ರತಾಪಸಿಂಹ ನಾಯಕ
- ಶ್ರೀ ಸಂತೋಷ ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಅಬ್ದುಲ ಜಬ್ಬಾರ್

– ಶ್ರೀ ಡಿ.ಎಸ್.ಅರುಣ
– ಶ್ರೀಮತಿ ಭಾರತಿ ಶೆಟ್ಟಿ
– ಡಾ: ತಳವಾರ ಸಾಬಣ್ಣ
– ಶ್ರೀ ಹಣಮಂತಪ್ಪ ನಿರಾಣಿ
– ಶ್ರೀ ಪಿ.ಎಚ್. ಪೂಜಾರ್
– ಶ್ರೀ ಕೆ.ಶಿವಕುಮಾರ್

**13. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.**

– ಶ್ರೀ ಐವನ್ ಡಿ'ಸೋಜಾ

~~~~~~~~~~~~~~~~~~
~~~~~~~~~~~~~~~~~~

(19) 27/01/2026 12:00 ಎಸ್‌ಪಿಆರ್/ಬಿಎನ್‌ಎಸ್

# ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 27 ನೇ ಜನವರಿ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ

ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಅಪರಾಹ್ನ 12 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು

ಪೀಠದಲ್ಲಿ ಉಪಸ್ಥಿತರಿದ್ದರು

**1. ನಿಗದಿತ ಸಮಯಕ್ಕೆ ಸದನದ ಕಾರ್ಯಕಲಾಪವು ಅರಂಭಗೊಳ್ಳದಿರುವ ಕುರಿತು.**

**ಸಭಾಪತಿಯವರು:–** ಈಗ ಪ್ರಶ್ನೋತ್ತರಗಳು. ಮೊದಲನೆಯದು ಶ್ರೀ ರಮೇಶ್ ಬಾಬು ರವರದ್ದು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ದಯಮಾಡಿ....,

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪಗಳು ಮುಗಿಯುವವರೆಗೂ ನಾನು ಯಾರಿಗೂ ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ದಯಮಾಡಿ ಒಂದು ನಿಮಿಷ.

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪಗಳು ಮುಗಿಯುವವರೆಗೂ ನಾನು ಯಾರಿಗೂ ಅವಕಾಶವನ್ನು ನೀಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಮೊನ್ನೆ ತಾವು ಸದನವನ್ನು ಅಡ್ಜರ್ನ್ ಮಾಡಿ ಹೋಗಿದ್ದೀರಿ. ನಾವು ಬಹಳ ಗೌರವದಿಂದ ಪೀಠಕ್ಕೆ ಕೇಳುತ್ತಿದ್ದೇವೆ. ವಿಷಯ ಏನೆಂದರೆ, 11 ಗಂಟೆಗೆ ನಮಗೆ ನೋಟೀಸ್ ಇದೆ. ನಾವೂ ಸಹ ಇಲ್ಲಿಂದ 200–300 ಕಿಲೋಮೀಟರ್‌ಗಳಷ್ಟು ದೂರ ಹೊರಗಡೆ ಹೋಗಿ, ಅಲ್ಲಿಂದ ಇಲ್ಲಿಗೆ ಬಂದಿದ್ದೇವೆ. ಇವತ್ತು ನಮ್ಮ ಎರಡೂ ಪಕ್ಷದ್ದು ಅಂದರೆ ಬಿ.ಜೆ.ಪಿ. ಮತ್ತು ಜೆ.ಡಿ. (ಎಸ್.) ಪಕ್ಷಗಳ ಒಂದು ಕಾರ್ಯಕ್ರಮವಿತ್ತು. ನಾವು ನಮ್ಮ ಕೆಲಸವನ್ನು 10:50 ಕ್ಕೆ ಅಂದರೆ 10 ನಿಮಿಷಗಳ ಮುಂಚಿತವಾಗಿಯೇ ಅದನ್ನು ಮುಗಿಸಿ, ನಾವುಗಳೆಲ್ಲರೂ ಇಲ್ಲಿ ಕಾಯುತ್ತಿದ್ದೆವು. ಈಗ ಬೆಲ್ ಆಗುತ್ತದೆ, ಇನ್ನು ಸ್ವಲ್ಪ ಹೊತ್ತಿಗೆ ಬೆಲ್ ಆಗುತ್ತದೆ ಎಂದು ನಾವು ಕಾಯುತ್ತಿದ್ದೆವು. ಆದರೆ, ಯಾಕೋ ಬೆಲ್ ಆಗಲೇ ಇಲ್ಲ. ಅಂದರೆ 11:00 ಗಂಟೆಗೆ...,

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ. ಹೇಳುವುದನ್ನು ಮೊದಲು ಕೇಳಲು ಕಲಿಯಿರಿ. ನಾನು 10:30 ಗಂಟೆಗೆ ಬಂದಿದ್ದೇನೆ. ಆಗ ಸದನದಲ್ಲಿ 7 ಜನ ಸದಸ್ಯರಿದ್ದರು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ತಾವು ಬಂದಿದ್ದೀರಿ.

**ಸಭಾಪತಿಯವರು:–** ನಾನು ಕೋರಂ ಅನ್ನು ನೋಡಿ,...

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಒಂದೊಂದು ಸಾರಿ ಏನಾಗುತ್ತದೆ ಎಂದರೆ,...

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಒಂದೊಂದು ಸಾರಿ ಏನಾಗುತ್ತದೆ ಎಂದರೆ ಬೆಲ್ ಆಗಲೇ ಇಲ್ಲ. ಇನ್ನೊಂದು ಸಾರಿ ನಾವು ಪಡಸಾಲೆಯಲ್ಲಿ ಇರುತ್ತೇವೆ.

**ಸಭಾಪತಿಯವರು:–** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾವು ಪಡಸಾಲೆಯಲ್ಲಿ ಇರುತ್ತೇವೆ. ನಾವು ಗೌರವದಿಂದ..., ದಯಮಾಡಿ

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳುತ್ತೀರಾ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಸದನದ ಒಂದು ಗಂಟೆ ವಿನಾಕಾರಣ ಹಾಳಾಗಿದೆ. ಇದಕ್ಕೆ ಯಾರು ಕಾರಣ ಎನ್ನುವುದನ್ನು ನೀವು ಯೋಚನೆ ಮಾಡಬೇಕು. ಒಂದು ಗಂಟೆಗಳಷ್ಟು ಸಮಯ ವೇಸ್ಟ್ ಆಗಿದೆ.

**ಸಭಾಪತಿಯವರು:–** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಶ್ರೀ ಎಸ್.ಎಲ್‌ಭೋಜೇಗೌಡ ರವರೇ ನೀವು ಮಾತನಾಡಬೇಕೆಂದು ಮಾತನಾಡುತ್ತೀರೋ ಅಥವಾ ಮಂದಿಯ ಮಾತು ಕೇಳುತ್ತೀರೋ? ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಪೀಠಕ್ಕೆ ಗೌರವ ಕೊಡುವ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಪೀಠಕ್ಕೆ ಗೌರವ ಕೊಟ್ಟಿಲ್ಲ ಎನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಪೀಠಕ್ಕೆ ಗೌರವ ಕೊಡುವುದು ಆಗಿದ್ದರೆ 11:00 ಗಂಟೆಗೆ ಸದನ ಪ್ರಾರಂಭವಾಗಬೇಕಾಗಿತ್ತು.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನೀವು ಅಜೆಂಡಾ ತೆಗೆದು ಸದನದ ಪ್ರಾರಂಭ ಸಮಯ ಎಷ್ಟು ಇದೆ ಎಂದು ನೋಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನೀವು ಬೆಲ್ ಹಾಕಲೇ ಇಲ್ಲ.

**ಸಭಾಪತಿಯವರು:–** ಪ್ರಾರಂಭ ಸಮಯ 11:30 ಇದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನೀವು ಬೆಲ್ ಹಾಕಲೇ ಇಲ್ಲ; ಬೆಲ್ ಹಾಕಿದ್ದರೆ ನಾವು ಸದನದೊಳಗೆ ಬರುತ್ತಿದ್ದೆವು.

**ಸಭಾಪತಿಯವರು:–** ಅದು 11:30 ಸಮಯ ಇದ್ದು, ಎರಡೂ ಕಡೆಯವರು ನನಗೆ ಮನವಿ ಮಾಡಿಕೊಂಡಿದ್ದರು. ಅವರ ಕಾರ್ಯಕ್ರಮಗಳ ಬಗ್ಗೆ ತಿಳಿಸಿ, 10 ನಿಮಿಷ ಲೇಟ್ ಮಾಡಿ, ಶುರು ಮಾಡುವಂತೆ ಕೋರಿದ್ದರು. ಹೀಗಾಗಿ ನಾನು ಲೇಟ್ ಮಾಡಿದ್ದೇನೆ. ನಾನು ಇಬ್ಬರದ್ದೂ ಮಾತನ್ನು ಕೇಳಿದ್ದೇನೆ. ಇಬ್ಬರೂ ಮನವಿ ಮಾಡಿಕೊಂಡಿದ್ದರಿಂದ...

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಯಾರು ಮನವಿ ಮಾಡಿಕೊಂಡಿದ್ದರೋ, ನಮಗೆ ಗೊತ್ತಿಲ್ಲ.

**ಸಭಾಪತಿಯವರು:–** ನನ್ನನ್ನು ಕೇಳಿದ್ದಾರೆ; ಹೀಗಾಗಿ ನಾನು ಹೇಳಿದ್ದೇನೆ. ಸದನದಲ್ಲಿ 7 ಮಂದಿ ಇದ್ದಾಗ, ಕೋರಂ ಇಲ್ಲದೇ ಇದ್ದಾಗ ಹೇಗೆ ಬರುವುದು? ಈಗ ಕೋರಂ ಆಯಿತು; ಹೀಗಾಗಿ ನಾನು ಬಂದಿದ್ದೇನೆ. ಎರಡು

ನಿಮಿಷ ಮಾತ್ರವೇ ಬೆಲ್ ಅನ್ನು ಹಾಕಿದ್ದು. ಇದರ ಬಗ್ಗೆ ಕಾರ್ಯದರ್ಶಿಯವರನ್ನೇ ಕೇಳಿ. ನೀವು ಎಲ್ಲಾ ಮಾತನಾಡುತ್ತೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಅನಿವಾರ್ಯ ಕಾರಣಗಳಿಂದ ಆ ರೀತಿಯಾಗಿ ಮನವಿಗಳನ್ನು ಮಾಡಿ, ಅಂತಹ ಒಂದು ಪ್ರಬಲವಾದ ಕಾರಣವಿದ್ದರೆ, ಖಂಡಿತವಾಗಿಯೂ ಸಹ ಸಮಯಾವಕಾಶವನ್ನು ಕೊಡೋಣ. ಕೊಡಬೇಕಾದಂತಹ ಸಂದರ್ಭದಲ್ಲಿ ಕೆಲವೊಂದು ಸಾರಿ ಕೊಡಬೇಕಾಗುತ್ತದೆ ಹಾಗೂ ಆ ರೀತಿಯಾಗಿ ಮಾಡಬೇಕಾಗುತ್ತದೆ. ಆದರೆ, ವಿನಾಕಾರಣ ಸದನದ ಸಮಯವು ಒಂದು ಗಂಟೆಗಳಷ್ಟು ಹಾಳಾಗಿ ಹೋಗಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:–** ಇಲ್ಲಿ ಒಂದು ಗಂಟೆ ಅಲ್ಲ; ನೀವು ಅಜೆಂಡಾದಲ್ಲಿನ ಸಮಯವನ್ನು ನೋಡಿ. ಅಲ್ಲಿ 11:30 ಎಂಬುದಾಗಿ ಇದೆ. ನೀವು ಅಜೆಂಡಾವನ್ನು ಓದಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಆಗಲಿ, ಅರ್ಧ ಗಂಟೆ ವ್ಯರ್ಥವಾಯಿತು.

**ಸಭಾಪತಿಯವರು:–** ಯಾರೂ ಬರದೇ ಇದ್ದರೆ, ನಾನೇನು ಮಾಡಲಿ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಬೆಲ್ ಅನ್ನು ಏಕೆ ಹಾಕಲಿಲ್ಲ ಎಂದು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ. ಕೆಲವೊಂದು ಸಾರಿ ನಾನು ಕೆಲವರ ಮನವಿಗಳು ಏನಾದರೂ ಇದ್ದರೆ ಅವುಗಳನ್ನು ಕೇಳಬೇಕಾಗುತ್ತದೆ. ಅವರುಗಳನ್ನು ನನ್ನ ಬಳಿ ರಿಕ್ವೆಸ್ಟ್ ಮಾಡಿಕೊಂಡಿದ್ದರು. ಹೀಗಾಗಿ 12 ಗಂಟೆಗೆ ಸದನವನ್ನು ಪ್ರಾರಂಭ ಮಾಡುವುದಾಗಿ ನಾನು ಹೇಳಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಇಲ್ಲಿ ವೈಯಕ್ತಿಕವಾಗಿ ನನ್ನ ದೃಷ್ಟಿ ಏನಿದೆ ಎಂದು ಹೇಳಿದರೆ, ಪೀಠಕ್ಕೆ ಗೌರವ ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಇಲ್ಲಿ ಹಾಗೇನೂ ಇಲ್ಲ, ನನ್ನನ್ನು ಕೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಪೀಠಕ್ಕೆ ಗೌರವ ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಆದರೆ, ಪೀಠಕ್ಕೆ ಗೌರವ ಕೊಟ್ಟಿದ್ದಾರೆ ಎಂದು ಹೇಳಿದರೆ, ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ರಮೇಶ್ ಬಾಬು:–** ಪ್ರಶ್ನೆ ಸಂಖ್ಯೆ: 47 ಅನ್ನು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೆ...,

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪ ಮುಗಿಯಲಿ.

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಕಲಾಪವನ್ನು ನೀವು ಮಾಡಿ, ಬೇಡವೆಂದು ನಾನು ಹೇಳಿಲ್ಲ. ನನ್ನ ಚಿನ್ನಹವನ್ನು ತಾವು ಸ್ವಲ್ಪ ಕೇಳಬೇಕು.

**ಸಭಾಪತಿಯವರು:–** ಶ್ರೀ ರಮೇಶ್ ಬಾಬು ರವರೇ ಒಂದು ನಿಮಿಷ ತಡೆಯಿರಿ.

(ಮುಂದು)

(20)27-01-2025/12-10/bkp-ks **(ಸಭಾಪತಿಯವರ ಉಪಸ್ಥಿತಿ)**

**2. ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿದ್ದ ವಿಷಯವನ್ನು ನಿಯಮ 330ಕ್ಕೆ ಪರಿವರ್ತಿಸಿರುವುದು ಹಾಗೂ ಇತ್ಯಾದಿ ವಿಷಯಗಳ ಬಗ್ಗೆ.**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮೊನ್ನೆ ದಿವಸ ನಾವು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು. ಅದನ್ನು ನಿಯಮ 330ಕ್ಕೆ convert ಮಾಡಿದ್ದೇನೆಂದು ತಾವು ಹೇಳಿದ್ದೀರಿ. ಆದರೆ, ನಾವು ಅದನ್ನು ವಿರೋಧ ಮಾಡಿ ಶ್ರೀಯುತ ಆರ್.ಬಿ. ತಿಮ್ಮಾಪುರ್ ರವರ ರಾಜೀನಾಮೆಗೆ ಒತ್ತಾಯ ಮಾಡಿದ್ದೇವೆ. ನಾವು ಈ ಬಗ್ಗೆ ಧರಣಿ ಮಾಡುತ್ತಿರುವಾಗ ತಾವು ಸದನವನ್ನು ಮುಂದೂಡಿ ಹೋಗಿದ್ದೀರಿ. ಈಗ ಆ ವಿಷಯ ಮುಂದುವರಿದಿದೆ ಎಂದ ಮೇಲೆ ತಾವು ಅದಕ್ಕೆ ಮೊದಲು ಉತ್ತರ ಕೊಡಬೇಕು. ಆದಾದಮೇಲೆ ಈ ವಿಷಯ ಚರ್ಚೆಯಾಗಬೇಕಾಗಿದ್ದು, ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ನಾವು ಈಗಾಗಲೇ ಎಷ್ಟು ಬಾರಿ ನಿಲುವಳಿ ಸೂಚನೆಗಳನ್ನು ಮಂಡಿಸಿದ್ದೇವೋ, ಅವುಗಳಿಗೆ ಸಂಬಂಧಪಟ್ಟ ಹಾಗೆ ಎಲ್ಲಾ ಸಂದರ್ಭಗಳಲ್ಲಿಯೂ ಅವುಗಳನ್ನು ಬೇರೆ ಬೇರೆ ನಿಯಮಗಳಿಗೆ ತಾವು ವರ್ಗಾವಣೆ ಮಾಡಿಕೊಂಡು ಬಂದಿದ್ದೀರಿ. ಈ ರೀತಿಯಾದರೆ, ನಾವು ನಿಲುವಳಿ ಸೂಚನೆಯನ್ನು ಕೊಡುವುದಕ್ಕೆ ಅರ್ಥ ಏನಿದೆ? ನಿಯಮ 330 ರಡಿಯಲ್ಲಿ ಇದಕ್ಕೆ ಅವಕಾಶವನ್ನು ಕೊಡಿ ಎಂದು ಹೇಳಿ ನಾವೇ ಸೂಚನಾ ಪತ್ರವನ್ನು ಕೊಡಬಹುದು ಅಲ್ಲವೇ? ಅದನ್ನು ಏತಕ್ಕೆ ಈ ರೀತಿಯಲ್ಲಿ ಮಾಡುತ್ತಿದ್ದೀರಿ. ನಮ್ಮ ಅವಕಾಶಗಳನ್ನು ದಯವಿಟ್ಟು ಕಸಿದುಕೊಳ್ಳುವುದು ಬೇಕಾಗಿಲ್ಲ. ಏಕೆಂದರೆ, ಈ ವಿಚಾರ ರಾಜ್ಯದ ಸಮಸ್ಯೆಯಾಗಿದೆ. ನಮಗೆ ಬಂದಂತಹ ಮಾಹಿತಿಗಳ ಪ್ರಕಾರ 4,000 ಕೋಟಿ ರೂಪಾಯಿಗಳನ್ನು ಅಬಕಾರಿ ಇಲಾಖೆಯಲ್ಲಿ ವಸೂಲಿ ಮಾಡಿಕೊಟ್ಟಿದ್ದಾರೆಂದು ತಿಳಿದುಬಂದಿದೆ. ಇವತ್ತು ಆ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಏನು ಹೇಳಿದ್ದಾರೆಂದರೆ, ಇವತ್ತು 6,000 ಕೋಟಿ ರೂಪಾಯಿಗಳನ್ನು ನಾವು ಸಂಗ್ರಹ ಮಾಡಿ, ಅದನ್ನು ಈ ಸರ್ಕಾರಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದು ಮಂತ್ರಿಗಳದ್ದು ಆಗಿದ್ದ ಮೇಲೆ ಇಂತಹ ಭ್ರಷ್ಟಾಚಾರಿಗಳನ್ನು ಇಟ್ಟುಕೊಂಡು ರಾಜ್ಯದಲ್ಲಿ ಸರ್ಕಾರವನ್ನು ನಡೆಸುವಂತಹ ಅವಶ್ಯಕತೆ ಇದೆಯೇ? ಈ ವಿಚಾರವಾಗಿ ನಾವು ಕೇಳಬಾರದಾ? ಜನರು ನಮ್ಮನ್ನು ಇಲ್ಲಿಗೆ ಏತಕ್ಕಾಗಿ ಕಳುಹಿಸಿದ್ದಾರೆ. ಈ ವಿಷಯವಾಗಿ ನಾವು ಜನರಿಗೆ ಉತ್ತರವನ್ನು ಕೊಡಬೇಕೋ ಬೇಡವೋ ಹೇಳಿ. ಆದ್ದರಿಂದ, ಈ ವಿಷಯವಾಗಿ ಚರ್ಚೆ ಮಾಡಲು ಮೊದಲು ಇದಕ್ಕೆ ಅವಕಾಶ ಕೊಡಿ. ಆದಾದ ಮೇಲೆ ನೀವು ಪ್ರಶ್ನೋತ್ತರ ಸೇರಿದಂತೆ ಎಲ್ಲವನ್ನೂ ಮಾಡಿ. ಅದಕ್ಕೆ ನಾವೇನು ಬೇಡವೆಂದು ಹೇಳಿರುವುದಿಲ್ಲ.

**ಸಭಾಪತಿಯವರು:–** ನಾನು ನಿಮಗೆ ಇವತ್ತು ನಿಯಮ 330 ರಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡಲು ಅನುಮತಿಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಅಜೆಂಡಾದಲ್ಲಿ ಬಂದಿದೆ. ಒಂದು ಬಾರಿ ತೀರ್ಮಾನ ಮಾಡಿದ ಮೇಲೆ, ಇದರ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡುವುದಿಲ್ಲ. ನಿಯಮ 330 ರಡಿಯಲ್ಲಿ ಚರ್ಚಿಸಲು ನಿಮಗೆ ಹೆಚ್ಚು ಸಮಯವನ್ನು ಕೊಡುತ್ತೇನೆ. ನೀವು ಆಗ ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇದು ಗಂಭೀರವಾದ ವಿಚಾರ.

**ಸಭಾಪತಿಯವರು:–** ಈಗ ನಾನು ಹೇಳುವುದನ್ನು ನೀವು ಕೇಳುತ್ತೀರೋ ಇಲ್ಲವೋ ಹೇಳಿ. ನಾನು ನಿಮಗೆ ಇದನ್ನು convert ಮಾಡಿ ನಿಯಮ 330 ರಡಿಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಜೊತೆಗೆ ತಾವುಗಳು ಮಾತನಾಡಲಿಕ್ಕೆ ಹೆಚ್ಚು ಸಮಯವನ್ನು ಕೊಡುತ್ತೇನೆ. ನಿಮಗೆ ಬೇಕಾದಲ್ಲಿ ಇದರ ವಿಚಾರವಾಗಿ ಚರ್ಚೆ ಮಾಡಲು ನಿಯಮ 330 ರಡಿ ವಿಷಯವನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದರೆ ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ಎಷ್ಟು ಜನರು ಮಾತನಾಡುತ್ತಿರೋ ಮಾತನಾಡಿ, ನಾನು ಅದಕ್ಕೆ ಅನುಮತಿಯನ್ನು ಕೊಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದಕ್ಕೆ ಪ್ರಶ್ನೋತ್ತರ ಕಲಾಪ ಮುಗಿದ ಕೂಡಲೇ ಅವಕಾಶವನ್ನು ಕೊಡಿ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದಕ್ಕೆ ಪ್ರಶ್ನೋತ್ತರ ಕಲಾಪ ಮುಗಿದ ಕೂಡಲೇ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ನೀವುಗಳು ಕುಳಿತುಕೊಳ್ಳಿ ನಾನು ಮಾತನಾಡುತ್ತೇನೆ. ಎಲ್ಲವನ್ನೂ ನಿಮ್ಮ ಮಾತನ್ನೇ ಕೇಳಿ ನಡೆಸಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ,....

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, (ಗೊಂದಲ) ಇದರಲ್ಲಿ ಚರ್ಚೆ ಮಾಡುವಂತಹ ವಿಷಯ ಏನಿದೆ?

**ಸಭಾಪತಿಯವರು:–** ಶ್ರೀಯುತ ಭೋಜೇಗೌಡರವರೆ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರಿಗೆ ಗೌರವ ಕೊಡುವುದನ್ನು ಕಲಿಯಿರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಪೀಠಕ್ಕೆ ಅಗೌರವವನ್ನು ತೋರಿಸುವುದು ನಮ್ಮ ಜಾಯಮಾನದಲ್ಲಿ ಇರುವುದಿಲ್ಲ. ನಾವು ಆ ಒಂದು ಕೆಲಸವನ್ನು ಮಾಡುವುದಿಲ್ಲ.

ಈ ಪೀಠಕ್ಕೆ ಯಾರು ಯಾರು ಗೌರವವನ್ನು ಕೊಟ್ಟಿದ್ದಾರೋ, ಅದರ ಚರಿತ್ರೆಯನ್ನು ನೋಡಿದರೆ ಗೊತ್ತಾಗುತ್ತದೆ. ಪೀಠದಲ್ಲಿ ಇದ್ದವರನ್ನು ಎಳೆದು ಬಿಸಾಕಿರುವಂತಹ ವಿಚಾರ ಇಲ್ಲಿಯೇ ಇದೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಆ ಕೆಲಸವನ್ನು ನೀವೇ ಮಾಡಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಆ ಕೆಲಸವನ್ನು ನಾವು ಮಾಡಿರುವುದಲ್ಲ, ಪೀಠಕ್ಕೆ ಗೌರವ ಕೊಡುವಂತಹದ್ದು ನಮಗೆ ಇದೆ. ನಾನು ಇದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರ ಇತಿಹಾಸವನ್ನು ನೀವು ಮತ್ತು ನಾವು ಸಹ ಕೇಳಬೇಕು. ಸಭಾಪತಿಯವರ ಚರ್ಚೆ ಇದೆ. ಅದು ಬೇರೆ ವಿಚಾರ. ಆದರೆ, ಇವತ್ತು ಇದು ಒಂದು ದೊಡ್ಡ ಸಮಸ್ಯೆಯ ವಿಚಾರ. ಆದ್ದರಿಂದ, ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣವೇ ಈ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:–** ಪಾಯಿಂಟ್ ಆಫ್ ಆರ್ಡರ್ ಎಂದು ಏತಕ್ಕೆ ಹೇಳುತ್ತೀರಿ? ವಿಷಯವನ್ನು ಹಾಗೆಯೇ ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ ಪೀಠದಿಂದ ಸಭಾಪತಿಯವರನ್ನು ಎಳೆದು ಹಾಕುವಂತಹ ಪರಂಪರೆ ನಮ್ಮದಲ್ಲ ಎಂದು ಹೇಳಿದರು. ಅದರ ಬಗ್ಗೆ ವಿಚಾರಣೆಯಾಗಿ ಒಂದು ವರದಿ ಕೂಡ ತಮ್ಮಲ್ಲಿ ಇದೆ. ಅದರ ಬಗ್ಗೆ ಚರ್ಚೆಯಾಗಲಿ. ಚರ್ಚೆ ಮಾಡಿ, ಯಾರು ಎಳೆದು ಹಾಕಿದ್ದಾರೆಂದು ನೋಡೋಣ. ಆ ರೀತಿಯಾಗುವುದು ಬೇಡ. ಈ ವಿಚಾರ ನಮಗೂ ಗೊತ್ತಿದೆ. ಆದ್ದರಿಂದ, ಪ್ರಶ್ನೋತ್ತರ ಅವಧಿಯಾದ ನಂತರ ಚರ್ಚೆ ಮಾಡಲಿಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೀರಿ, ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನಾವು ಸಹ ತಯಾರು ಇದ್ದೇವೆ. ನಾವು ಚರ್ಚೆ ಮಾಡುವುದಿಲ್ಲವೆಂದು ಹೇಳುವುದಿಲ್ಲ.

**ಸಭಾಪತಿಯವರು:–** ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ನಾನು ಸಹ ಒಪ್ಪಿಕೊಂಡಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಆದ್ದರಿಂದ, ಇರುವಂತಹ ವಿಚಾರ ಇತಿಹಾಸಕ್ಕೆ ಹೋದಾಗ ನಮ್ಮ ಹತ್ತಿರ ಸಹ ಸ್ವಲ್ಪ ಇತಿಹಾಸ ಇರುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಒಂದು ಪಾಯಿಂಟ್ ಆಫ್ ಆರ್ಡರ್ ಇದೆ. ಇವತ್ತಿನ ಅಜೆಂಡಾದಲ್ಲಿ ಕ್ರಮಸಂಖ್ಯೆ "04. ರಾಜ್ಯಪಾಲರ ಭಾಷಣಕ್ಕೆ

ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ" ಎಂದು ಇದೆ. ರಾಜ್ಯಪಾಲರ ಭಾಷಣವಾದ ಮರುದಿನ ಮಾನ್ಯ ಸಭಾನಾಯಕರು ರಾಜ್ಯಪಾಲರು ತಮ್ಮ ಭಾಷಣವನ್ನು ಓದಿಲ್ಲವೆಂದು ಹೇಳಿದರು. ಟೇಬಲ್ ಮಾಡಿಲ್ಲವೆಂದು ಹೇಳಿದರು. ಅದಕ್ಕೆ ರಾಜ್ಯಪಾಲರ ವಿರುದ್ಧ ಘೋಷಣೆಗಳನ್ನು ಹಾಕಿದರು. ಹಾಕಿದ ಮೇಲೆ ವಿಷಯ ಈ ರೀತಿಯಾಗಿ ಅಜೆಂಡಾವನ್ನು ಹೇಗೆ ಸೇರಿಕೊಳ್ಳುತ್ತದೆ?

**ಸಭಾಪತಿಯವರು:–** ಇದರ ಬಗ್ಗೆ ನನ್ನ ತೀರ್ಮಾನವನ್ನು ಹೇಳುತ್ತೇನೆಂದು ಹೇಳಿದ್ದೇನೆ.

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೆ, ವಂದನಾರ್ಪಣಾ ಪ್ರಸ್ತಾವ ಎಂದು ಅಜೆಂಡಾದಲ್ಲಿ ಹೇಗೆ ಸೇರ್ಪಡೆ ಆಗುತ್ತದೆ? ಅದು ಟೇಬಲ್ ಆಗಿಲ್ಲ, ಅದರ ಬಗ್ಗೆ ಮಾತನಾಡಿಲ್ಲವೆಂದು ರಾಜ್ಯಪಾಲರು ಮಾತನಾಡಿದ ಮೇಲೆ ಸಭಾನಾಯಕರು ಅದನ್ನು ಒಪ್ಪಿಕೊಂಡ ಮೇಲೆ ಅದು ವಂದನಾರ್ಪಣಾ ಪ್ರಸ್ತಾವ ಹೇಗೆ ಆಗುತ್ತದೆ? ಅವರು ಒಪ್ಪಿಕೊಂಡಿಲ್ಲ.

**ಸಭಾಪತಿಯವರು:–** ಆಯಿತು, ಕುಳಿತುಕೊಳ್ಳಿ, ಯಾರೋ ಒಪ್ಪಿದರೆ ನಡೆಯುವುದಿಲ್ಲ, ರಾಜ್ಯಪಾಲರು ಭಾಷಣ ಮಾಡಿದ ನಂತರ ಅದು ರೆಕಾರ್ಡ್‌ಗೆ ಹೋಗಿದೆ.

**ಶ್ರೀ ಡಿ.ಎಸ್. ಅರುಣ್:–** ಮಾನ್ಯ ಸಭಾಪತಿಯವರೆ, ಸಭಾನಾಯಕರು ಹೇಳಿರುವುದನ್ನು ತೆಗೆಸಿಬಿಡಿ. ಅವರು ರಾಜ್ಯಪಾಲರಿಗೆ ಅಗೌರವವನ್ನು ತೋರಿದ್ದಾರೆ, ದಯಮಾಡಿ ಅದನ್ನು ತೆಗೆಸಿಬಿಡಿ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಪ್ರಾರಂಭದ ಮೊದಲನೆಯ ದಿನವೇ ಮೊದಲನೆಯ ಪ್ರಶ್ನೆಯೇ ನನ್ನದಾಗಿದೆ.

**ಸಭಾಪತಿಯವರು:–** ಇದೇ ವಿಚಾರವನ್ನು ಮತ್ತೆ ಮತ್ತೆ ಹೇಳಬೇಡಿ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೋ ಇಲ್ಲವೋ ಹೇಳಿ. ನಾನೇ ಮೊದಲು ಈ ವಿಚಾರವನ್ನು ಪ್ರಸ್ತಾಪ ಮಾಡಿರುತ್ತೇನೆ. ಸಭಾನಾಯಕರು ಭಾಷಣವನ್ನೇ ಮಾಡಲಿಲ್ಲ. ಸಂವಿಧಾನಕ್ಕೆ ವಿರೋಧ ಮಾಡಿದ್ದಾರೆಂದು ಹೇಳುತ್ತಾರೆ. ಇದು ಹೇಗೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ನನಗೆ ಇದುವರೆವಿಗೂ ಪೀಠದಿಂದ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:–** ನಾನು ಈ ವಿಚಾರವಾಗಿ ಏನು ಹೇಳಿದ್ದೇನೆಂದರೆ, ಇಂದು ಇದರ ಬಗ್ಗೆ ತೀರ್ಮಾನ ಕೊಡುತ್ತೇನೆಂದು ಹೇಳಿದ್ದೇನೆ. ನಾನು ತೀರ್ಮಾನ ಕೊಡುತ್ತೇನೆ, ಕುಳಿತುಕೊಳ್ಳಿ.

**(ಮುಂದು)**

**೩. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.**

ಪ್ರಶ್ನೆ ಸಂಖ್ಯೆ 47

( ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ರಮೇಶ್ ಬಾಬು(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿಯೂ ಸಹ ಮಾನ್ಯ ಸಚಿವರಿಗೆ ವಿನಂತಿಯನ್ನು ಮಾಡಿದ್ದೆ. ಮಾನ್ಯ ಸಚಿವರು ಈ ಬಗ್ಗೆ ಒಂದು ಸಭೆಯನ್ನು ಕರೆದು ಸಭೆಯಲ್ಲಿ ಚರ್ಚೆ ಮಾಡುತ್ತೇವೆಂದು ಹೇಳಿದ್ದರು. ಚಿಕ್ಕನಾಯಕಹಳ್ಳಿಯಲ್ಲಿ ಸುಮಾರು 65 ಕಿ.ಮೀ. ಒಳಗಡೆ ಏನು ಒಳಚರಂಡಿ ಯೋಜನೆಗೆ ಅಡಿಯಲ್ಲಿ ಪೈಪ್‌ಲೈನ್ ಅಥವಾ sanitary line ಮಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟು ಒಂದು ಟೆಂಡರ್ ಅನ್ನು ಕರೆದಿದ್ದಾರೆ. ಆದರೆ, ಇವತ್ತಿನವರೆಗೂ ಕೆಲಸ ಆಗಿರುವುದಿಲ್ಲ. ಈ ಬಗ್ಗೆ ನಾವು ಅನೇಕ ಬಾರಿ ವಿನಂತಿಯನ್ನು ಮಾಡಿದ್ದೇವೆ. ಅಲ್ಲಿನ ಸಂಬಂಧಪಟ್ಟ ಇಂಜಿನೀಯರ್‌ಗಳು ಸಹಿತ ಸಮರ್ಪಕವಾದ ಉತ್ತರಗಳನ್ನು ಕೊಡುತ್ತಾ ಇರುವುದಿಲ್ಲ. ಈ ಬಗ್ಗೆ ನಾನು ಮಂತ್ರಿಗಳಲ್ಲಿ 2-3 ಬಾರಿ ವಿನಂತಿ ಮಾಡಿ ಅದರ ಬಗ್ಗೆ ಒಂದು ಸಭೆಯನ್ನು ಮಾಡಬೇಕೆಂದು ಕೇಳಿದ್ದೆ. ಅವರ ಅಗ್ರಿಮೆಂಟ್ ಲ್ಯಾಪ್ಸ್ ಆಗಿದೆ. ಅದು ಲ್ಯಾಪ್ಸ್ ಆದ ಮೇಲೆಯೂ ಸಹ ಕೆಲಸವನ್ನು ಮುಂದುವರಿಸಿದ್ದಾರೆ. ಇವತ್ತಿನವರೆಗೂ ಸಹ ನಾನು ಏನೇನು ಮಾಹಿತಿಯನ್ನು ಕೇಳಿದ್ದೇನೆ, ಅದರ ಪೂರ್ಣವಾದ ಮಾಹಿತಿಯನ್ನು ನನಗೆ ಒದಗಿಸಿರುವುದಿಲ್ಲ. ನಾನು ಇದರ ಬಗ್ಗೆ ನನ್ನ ಎರಡನೆಯ ಪ್ರಶ್ನೆಯಲ್ಲಿ ಪೂರ್ಣವಾಗಿ ಕೇಳುತ್ತೇನೆ. ಸದರಿ ಕಾಮಗಾರಿಗೆ ಸಂಬಂಧಪಟ್ಟ ಕರಾರು ಸಂಖ್ಯೆ 7/2022-23 ರಿಂದ ಇಲ್ಲಿಯವರೆಗೆ ಇಲಾಖೆ ಮತ್ತು ಗುತ್ತಿಗೆದಾರರ ನಡುವೆ ಪತ್ರ ವ್ಯವಹಾರ ನಡೆದಿದೆಯೇ, ನಡೆದಿದ್ದಲ್ಲಿ ಅದರ ಪೂರ್ಣ ವಿವರಗಳನ್ನು ಒದಗಿಸುವುದು ಎಂದು ನಾನು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಕೊಟ್ಟಿರುವಂತಹ ವಿವರ ಅಪೂರ್ಣವಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಬೇಕು.

**ಸಭಾಪತಿಯವರು:-** ನಿಮಗೆ ಏನಾಗಬೇಕೆಂದು ಕೇಳಿ. ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ರಮೇಶ್ ಬಾಬು:-** ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಪಟ್ಟಿ ಮಾಡಿದ್ದಾರೆ. ನಾನು ಅವರಲ್ಲಿ ವಿನಂತಿ ಮಾಡುವುದೇನೆಂದರೆ ಈ ಬಗ್ಗೆ ಅವರು ಒಂದು ಸಭೆಯನ್ನು ಮಾಡಬೇಕು. ಸಭೆಯನ್ನು ಬೆಂಗಳೂರಿನಲ್ಲಿ ಮಾಡುತ್ತಾರೋ ಅಥವಾ ಚಿಕ್ಕನಾಯಕನಹಳ್ಳಿಗೆ ಬಂದು ಸಭೆಯನ್ನು ಮಾಡುತ್ತಾರೋ ಅದು

ಸಚಿವರಿಗೆ ಬಿಟ್ಟ ವಿಚಾರ. ಅಲ್ಲಿ 3 ವರ್ಷಗಳಿಂದ ಕೆಲಸ ವಿಳಂಭವಾಗಿದೆ. ಹಾಗಾಗಿ, ಒಂದು ಸಭೆಯನ್ನು ಮಾಡಬೇಕೆಂದು ಹೇಳಿ, ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಇದಕ್ಕೆ ಸಚಿವರು ಉತ್ತರ ಹೇಳಬೇಕು.

**ಶ್ರೀ ಬಿ.ಎಸ್. ಸುರೇಶ್(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೆ, ಚಕ್ಕನಾಯಕನಹಳ್ಳಿ ಪಟ್ಟಣಕ್ಕೆ ಒಳಚರಂಡಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ 2019ರಲ್ಲಿ ಕೊಟ್ಟಿರುತ್ತೇವೆ. ಇದರ ಅಂದಾಜು ಮೊತ್ತ 55 ಕೋಟಿ ರೂಪಾಯಿಗಳಾಗಿತ್ತು. ಸದರಿ ಕಾಮಗಾರಿಯ ಗುತ್ತಿಗೆಯನ್ನು ಮೆ॥ ಕೆ.ಗೌಡ ಅಂಡ್ ಕಂಪನಿ ಬೆಂಗಳೂರು ಜಂಟಿ ಉದ್ಯಮ ಮೆ॥ ಶುಭ ಸೇಲ್ಸ್ ಇಂಜಿನಿಯರ್ ಅಂಡ್ ಕಂಟ್ರಾಕ್ಟರ್ಸ್ ರವರಿಗೆ ಈ ಎರಡು ಗುತ್ತಿಗೆದಾರರಿಗೆ ಗುತ್ತಿಗೆಯನ್ನು ಕೊಟ್ಟಿದ್ದರು. ಆದಾದನಂತರ ಗುತ್ತಿಗೆಯ ಮೊತ್ತ ರೂ. 4182.00 ಲಕ್ಷಗಳಿಗೆ ವಹಿಸಲಾಗಿದೆ. 2022 ರಲ್ಲಿ ಕರಾರು ಆಗಿದೆ. ಆದಾದ ಮೇಲೆ ಅವರಿಗೆ ಕಾರ್ಯಾದೇಶವನ್ನು ದಿನಾಂಕ:13–07–2022 ರಲ್ಲಿ ಕೊಟ್ಟಿರುತ್ತೇವೆ.

ಇದಕ್ಕೆ ಸಮಯವನ್ನು 24 ತಿಂಗಳುಗಳ ಕಾಲಾವಕಾಶವನ್ನು ಕರಾರಿನಲ್ಲಿ ಹಾಕಿ ಕೊಟ್ಟಿರುತ್ತೇವೆ. ಆದರೆ 2024ರ 7ನೇ ತಿಂಗಳಿಗೆ ಕೆಲಸ ಮುಗಿಯಬೇಕಾಗಿತ್ತು. ಏತಕ್ಕಾಗಿ ಕೆಲಸ ಆಗಿಲ್ಲ ಎನ್ನುವುದಕ್ಕೆ ಹಲವಾರು ಕಾರಣಗಳಿವೆ. ಈ ಆಂತರಿಕ ಕೊಳವೆ ಮಾರ್ಗ 250 ಮಿಲಿಮೀಟರ್ ವ್ಯಾಸದಿಂದ 450 ಮಿಲಿಮೀಟರ್ ವ್ಯಾಸದವರೆಗೆ... ಇದು U.P.V.C., D.W.C. (Double Wall Corrugated) ಹಾಗೂ R.C.C. (Reinforced Cement Concrete) pipes ಆಗಿರುತ್ತದೆ. ಅದರಲ್ಲಿ ಸುಮಾರು 54.94 ಕೊಳವೆಗಳನ್ನು ಪೂರೈಕೆ ಮಾಡಿದ್ದೇವೆ. ಇನ್ನು 6.5 ಕಿ.ಮೀ ಮಾತ್ರ ಬಾಕಿ ಉಳಿಸಿದ್ದೇವೆ.

ಇನ್ನೊಂದರಲ್ಲಿ 61.47 ಕಿ.ಮೀ ಕೊಳವೆಗಳನ್ನು ನಾವು ಹಾಕಬೇಕಾಗಿತ್ತು. ಅದರಲ್ಲಿ 45.30 ಕಿ.ಮೀ. ಅನ್ನು ಅಳವಡಿಸಲಾಗಿದೆ ಹಾಗೂ ಸುಮಾರು 16.17 ಕಿ.ಮೀ. ಇನ್ನೂ ಸಹ ನಾವು ಕೊಳವೆಗಳನ್ನು ಹಾಕಬೇಕಾಗಿದೆ. ಆ ಕಾಮಗಾರಿಯೂ ಸಹ ಬಾಕಿ ಇರುತ್ತದೆ. ಆದಾದ ಮೇಲೆ machine–hole ಸುಮಾರು 2,396 ಇತ್ತು. ಅದರಲ್ಲಿ 1485 ಪೂರ್ಣಗೊಂಡಿದ್ದು, ಇನ್ನುಳಿದ 107 ಸಂಖ್ಯೆ precast machine–hole ಗಳನ್ನು ಈಗ ಒದಗಿಸಲಾಗಿದೆ. ಆ ಕಾಮಗಾರಿ ಪ್ರಗತಿಯಲ್ಲಿ ಇದೆ. House Connections ಗೆ ಸಂಬಂಧಪಟ್ಟಂತೆ ಸುಮಾರು 6,100 ಸಂಖ್ಯೆ ಇದೆ. ಇದರಲ್ಲಿ, ಸುಮಾರು 4,825 ಅನ್ನು ಮಾಡಲಾಗಿದೆ ಹಾಗೂ ಬಾಕಿ ಕಾಮಗಾರಿಯು ಪ್ರಗತಿಯಲ್ಲಿದೆ. S.T.P. (Sewage Treatment Plant) ಗಳಲ್ಲಿ ಸುಮಾರು 2.60 ದಶಲಕ್ಷ ಲೀಟರ್.....

**ಸಭಾಪತಿಯವರು:–** ಈ ಬಗ್ಗೆ ಸಭೆಯನ್ನು ಮಾಡಬೇಕೆಂದು ಸದಸ್ಯರು ಕೇಳುತ್ತಿದ್ದಾರೆ, ಸಭೆಯನ್ನು ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಅಷ್ಟು ಮಾತ್ರ ಹೇಳಿ.

**ಶ್ರೀ ಬಿ.ಎಸ್. ಸುರೇಶ್:–** ನಾನು ಪೂರ್ಣ ವಿವರ ಹೇಳುತ್ತಿದ್ದೆ. ನಾನು ಪೂರ್ಣ ವಿವರವನ್ನು ಓದಬೇಕೋ ಬೇಡವೋ ಹೇಳಿ.

**ಸಭಾಪತಿಯವರು:–** ಸಭೆಯನ್ನು ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಅಷ್ಟು ಮಾತ್ರ ಹೇಳಿ.

**ಶ್ರೀ ಬಿ.ಎಸ್. ಸುರೇಶ್:–** ಮಾನ್ಯ ಸಭಾಪತಿಯವರೆ, ಅಲ್ಲಿ ಜಾಗವನ್ನು ಜಿಲ್ಲಾಡಳಿತದಿಂದ ಕೊಡಲಿಕ್ಕೆ ಸ್ವಲ್ಪ ಲೇಟ್ ಆಗಿತ್ತು.

**(ಮುಂದು)**

**(021) 27.01.2026 12.20 ಎಸ್‌ವಿ–ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಎಸ್.ಸುರೇಶ (ಮುಂದು):–**

ಮಲಿನ ನೀರು ಸಂಸ್ಕರಣೆಯನ್ನು ಮಾಡಬಾರದೆಂದು ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದರು. ಅದರಿಂದಾಗಿ ಸ್ವಲ್ಪ ವಿಳಂಬವಾಯಿತು. ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಇನ್ನೊಂದೆರಡು S.T.P. (Sewage Treatment Plant) ಗಳ ಭೂಸ್ವಾಧೀನ ಪ್ರಕ್ರಿಯೆ ಮುಗಿದಿಲ್ಲ. ಅದು ನಡೆಯುತ್ತಿದೆ. ಎರಡು ವರ್ಷಗಳೊಳಗೆ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ 2026ರ ಜೂನ್ ವೇಳೆಗೆ ಈ ಕೆಲಸವನ್ನು ಮುಕ್ತಾಯಗೊಳಿಸುತ್ತೇವೆ. ಪೂರ್ತಿಯಾಗಿ ಹಣವನ್ನು ಪಾವತಿ ಮಾಡಿರುವುದಿಲ್ಲ. ನಮ್ಮ ಹತ್ತಿರ ದುಡ್ಡು ಇದೆ. ಭೌತಿಕ ಪ್ರಗತಿ ಎಷ್ಟಾಗಿದೆಯೆಂಬುದನ್ನು ನೋಡಿಕೊಂಡು ಹಣ ಬಿಡುಗಡೆ ಮಾಡುತ್ತೇವೆ. ನಮ್ಮ ಗುತ್ತಿಗೆದಾರರ ಬಳಿ ಇನ್ನೂ ಹಣವಿದೆ. ಇನ್ನು ಐದಾರು ತಿಂಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿ ಜನರಿಗೆ ನೀಡುತ್ತೇವೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಅನುಬಂಧ 1 ಮತ್ತು 2 ಎಂದು ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪೂರಕವಾಗಿ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ಸುಮ್ಮನೆ ದಿನಾಂಕಗಳನ್ನು narrative ಮಾಡಿದ್ದಾರೆ. ಆ ದಿನಾಂಕಗಳಂದು ಸಭೆಗಳಾಯಿತೋ ಅಥವಾ ಇಲ್ಲವೋ ಎನ್ನುವುದಕ್ಕೆ ಪೂರಕ ಮಾಹಿತಿ ಇಲ್ಲ. ಮಾಹಿತಿಯನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಮಾನ್ಯ ಸಚಿವರು ಅಲ್ಲಿ ಒಂದು ಸಭೆಯನ್ನು ನಡೆಸಿದರೆ ಅಲ್ಲಿ ಏನಾಗಿದೆಯೆಂಬುದು ತಿಳಿಯುತ್ತದೆ.

**ಶ್ರೀ ಬಿ.ಎಸ್.ಸುರೇಶ:–** ಮಾನ್ಯ ಸಭಾಪತಿಯವರೆ, ಅವರು ಕೇಳಿರುವ ಎಲ್ಲಾ ದಾಖಲಾತಿಗಳನ್ನು ಒದಗಿಸಿಕೊಡುತ್ತೇನೆ. ಸ್ಥಳೀಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರೊಂದಿಗೆ ಸಭೆಯನ್ನು ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಹಾಗೂ ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಬೇಕು ಹಾಗೂ ಉತ್ತರವನ್ನು ಕೂಡ ಚಿಕ್ಕದಾಗಿ ಹೇಳಬೇಕು. ಪುರಾಣ ಹೇಳುವುದು ಬೇಡ. ಮುಂದಿನ ಪ್ರಶ್ನೆ ಮಾನ್ಯ ಸಿ.ಎನ್. ಮಂಜೇಗೌಡ.

**ಪ್ರಶ್ನೆ ಸಂಖ್ಯೆ: 28**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ಹಂಚಿಕೆಯಾಗಿರುವ ಒಟ್ಟು ರೂ. 16,600 ಲಕ್ಷ ಪೈಕಿ ರೂ.9,272 ಲಕ್ಷ ಬಾಕಿಯಿದೆಯೆಂದು ಹೇಳಿದ್ದಾರೆ. ಇದನ್ನು ಯಾವಾಗ ಕೊಡುತ್ತಾರೆ ಎಂದು ಮಾನ್ಯ ಸಚಿವರು ಹೇಳಬೇಕು. ಅದರ ಬಗ್ಗೆ ತಾವು ಉತ್ತರದಲ್ಲಿ ಹೇಳಿಲ್ಲ. ಅದಾದ ನಂತರ ಮಾರ್ಚ್ ಒಳಗಾಗಿ ಪೂರ್ಣಗೊಳಿಸುವುದಾಗಿ ನಿಗದಿ ಪಡಿಸಲಾಗಿರುವ ಕಾಮಗಾರಿಗಳಿಗಾಗಿ ಸರಗೂರು ಮತ್ತು ನಂಜನಗೂಡು ಇಲ್ಲಿ ಇನ್ನೂ ಟೆಂಡರ್ ಕೂಡ ಕರೆದಿರುವುದಿಲ್ಲ. ಆದರೆ ಮಾರ್ಚ್ ಒಳಗೆ ಹೇಗೆ ಪೂರೈಸುತ್ತೀರಿ? ಅದನ್ನು ದಯಮಾಡಿ ತಿಳಿಸಬೇಕು.

**ಶ್ರೀ ಕೆ.ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):–** ಮಾನ್ಯ ಸಭಾಪತಿಯವರೆ, ಮೈಸೂರು ಜಿಲ್ಲೆಗೆ ರೂ.166 ಕೋಟಿ allocation ಆಗಿತ್ತು. ಅದರಲ್ಲಿ ರೂ.73.29 ಕೋಟಿಗಳು ಈಗಾಗಲೇ ಬಿಡುಗಡೆಯಾಗಿದೆ. ಅದರಲ್ಲಿ ಇನ್ನೂ ರೂ.5 ಕೋಟಿ ಹಣ ಅಲ್ಲಿಯೇ reserve ಆಗಿದೆ. ನಗರೋತ್ಥಾನ ಯೋಜನೆಯಲ್ಲಿ ಕೆಲಸ ಮುಗಿದ ಮೇಲೆ ಅದರ ಬಿಲ್ D.M.A. (Directorate of Municipal Administration) ಬಳಿ ಬಂದಾಗ clear ಆಗುತ್ತದೆ. ಆದರೂ ಸ್ವಲ್ಪ ಬಿಲ್‌ಗಳು ಬಂದಿವೆ, ಇನ್ನು ಸ್ವಲ್ಪ ಬಿಲ್‌ಗಳು ಬರುವುದಿದೆ. ಮೂರನೆಯ ಪ್ರಶ್ನೆಯಲ್ಲಿ ಇನ್ನೂ ಟೆಂಡರ್ ಆಗಿಲ್ಲ ಎಂದು ತಾವು ಹೇಳಿದ್ದೀರಿ. ಅದರ ಬಗ್ಗೆ ಸ್ವಲ್ಪ ಮಾಹಿತಿಯಿದೆ. 2–3 ಬಾರಿ ಟೆಂಡರ್ ಕರೆಯಲಾಗಿತ್ತು. ಆದರೂ single tender ಆಗಿ clear ಆಗಿರುವುದಿಲ್ಲ. ಇತ್ತೀಚೆಗೆ ಮೂರು ಮಂದಿ ಹಾಕಿದ್ದಾರೆ. ಒಬ್ಬರಿಗೆ clear ಆಗಿದ್ದು, ಇನ್ನು 15 ದಿನಗಳಲ್ಲಿ tender process ಅನ್ನು ಅಂತಿಮಗೊಳಿಸಲಾಗುತ್ತದೆ. ಮಾನ್ಯ ಸದಸ್ಯರು, before March ಇದನ್ನು ಹೇಗೆ ಪೂರೈಸುತ್ತೀರಿ ಎಂದು ಕೇಳಿದ್ದಾರೆ. ನಾವು ಇನ್ನೊಂದು 3–4 ತಿಂಗಳ ಸಮಯಾವಕಾಶವನ್ನು ಕೊಡಬಹುದು. ಇದರ ಬಗ್ಗೆ ಶೀಘ್ರವಾಗಿ ಕಾರ್ಯ ನಿರ್ವಹಿಸುವ ಒಬ್ಬ ಅಧಿಕಾರಿಯನ್ನು ನೇಮಿಸಿ, ವಿವರಗಳನ್ನು ನೀಡಬೇಕೆಂದು ತಾವು ಕೋರಿದ್ದೀರಿ. ನಾನು Superintending Engineer (S.E.) ಅಥವಾ C.E. (Chief Engineer) ಇವರಲ್ಲಿ ಒಬ್ಬರನ್ನು ನೇಮಕ ಮಾಡಿ ಶೀಘ್ರವಾಗಿ ಕಾರ್ಯ ನಿರ್ವಹಿಸಲು ತಿಳಿಸುತ್ತೇನೆ.

**ಶ್ರೀ ಸಿ.ಎನ್.ಮಂಜೇಗೌಡ:–** ಮಾನ್ಯ ಸಚಿವರೆ, ಕಾಮಗಾರಿಗಳನ್ನು ಮಾಡುತ್ತೀರಿ. Third–party inspection ಮಾಡಿ ಯಾವುದಾದರೂ ದೂರು ಬಂದಿದೆಯೇ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಬೇಕು. ಎರಡನೆಯದಾಗಿ ಬೆಂಗಳೂರಿನ ನಂತರ ಮೈಸೂರು ಹೆಚ್ಚು ಬೆಳೆದಿರುವ ಜಿಲ್ಲೆಗಳಲ್ಲಿ ಒಂದಾಗಿದೆ. 2022–23ರಲ್ಲಿ ಶ್ರೀಮತಿ ನಿರ್ಮಲ ಸೀತಾರಾಮನ್ ಅವರು ಮೈಸೂರಿಗೆ ಬಂದಾಗ ಮೈಸೂರಿನ ಸಂಸ್ಕೃತಿ ಮತ್ತು ಪಾರಂಪರಿಕತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್‌ನ

ನೆರವು ಪಡೆದುಕೊಳ್ಳಬೇಕೆಂದು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದರು. ಅವರು ಕಂಡಂಥ ಕನಸಿಗೆ ಏನಾದರೂ ಸಕಾರಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಮೈಸೂರಿನ ಅಭಿವೃದ್ಧಿಗೆ ಏನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

**ಶ್ರೀ ಕೆ. ರಹೀಂ ಖಾನ್:–** ಮಾನ್ಯ ಸಭಾಪತಿಯವರೆ, ಈಗಾಗಲೇ ನಗರೋತ್ಥಾನ ಯೋಜನೆಯಡಿಯಲ್ಲಿ ಅರ್ಧಕ್ಕಿಂತ ಹೆಚ್ಚು ಕೆಲಸ ಪ್ರಾರಂಭವಾಗಿಲ್ಲ. ಅರ್ಧದಷ್ಟು ಕೆಲಸ ನಡೆಯುತ್ತಿದೆ. ಆ process complete ಆದ ಮೇಲೆ ಮುಂದಿನ scheme ಅನ್ನು ಪ್ರಾರಂಭ ಮಾಡುವ ವಿಚಾರವಿದೆ. ನಗರೋತ್ಥಾನ ಯೋಜನೆ ಪೂರ್ಣಗೊಂಡ ನಂತರ ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆಯುವ ಯೋಜನೆಯನ್ನು ಮಾಡಲಾಗಿದೆ. ಇದು ಪೂರ್ಣಗೊಂಡ ನಂತರ ಅದು next process ನಲ್ಲಿ ಆಗುತ್ತದೆ.

**ಪ್ರಶ್ನೆ ಸಂಖ್ಯೆ: 26**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ಬಳ್ಳಾರಿ ಸಿಟಿ ಕಾರ್ಪೋರೇಷನ್ tax collection ನಲ್ಲಿ ಹಗರಣ ಆಗಿರುವ ಬಗ್ಗೆ ನನ್ನ ಪ್ರಶ್ನೆ ಇತ್ತು. Tax collect ಮಾಡುತ್ತಾರೆ. ಆದರೆ ಆ ಟ್ಯಾಕ್ಸ್ ಅನ್ನು ಅಧಿಕಾರಿಗಳು ಖಜಾನೆಗೆ ಕಟ್ಟದೆ ಸುಮಾರು ರೂ.2.8 ಲಕ್ಷಗಳವರೆಗೆ ಹಗರಣ ಆಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆನು. ಅವರನ್ನು suspend ಮಾಡಿ ಪುನಃ ವಾಪಸ್ ತೆಗೆದುಕೊಳ್ಳಲಾಗಿದೆ ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಒಂದು ಬಾರಿ ಅಧಿಕಾರಿಗಳು ದುಡ್ಡನ್ನು collect ಮಾಡಿ ಖಜಾನೆಗೆ ಕಟ್ಟಲಿಲ್ಲವೆಂದರೆ ಅದಕ್ಕಿಂತ ದೊಡ್ಡ ಅಪರಾಧವಿಲ್ಲ. ಅವರನ್ನು 6 ತಿಂಗಳುಗಳ ಕಾಲ ಅಮಾನತುಗೊಳಿಸಿ ಪುನಃ ಕರ್ತವ್ಯಕ್ಕೆ ತೆಗೆದುಕೊಳ್ಳುವುದರಲ್ಲಿ ಏನು ಅರ್ಥವಿದೆ? ಅವರನ್ನು ಏಕೆ terminate ಮಾಡುವುದಿಲ್ಲ? ಇದು ನನ್ನ ಮೂಲ ಪ್ರಶ್ನೆ. ಸಚಿವರು ಉತ್ತರಿಸಿದ ನಂತರ ಚಿಕ್ಕ ಉಪಪ್ರಶ್ನೆಯೊಂದನ್ನು ಕೇಳುತ್ತೇನೆ.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಸಕರು ಹೇಳಿರುವುದು ಸರಿಯಿದೆ. ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಅಪಾರ್ಟ್‌ಮೆಂಟ್ ಒಂದರಲ್ಲಿ ಹಣವನ್ನು ಸಂಗ್ರಹ ಮಾಡುತ್ತಾರೆ. 5 ಜನ ಅಧಿಕಾರಿಗಳು ಸುಮಾರು ರೂ.2,80,179 ಗಳನ್ನು ಸಂಗ್ರಹ ಮಾಡಿ ಖಜಾನೆಗೆ ಕಟ್ಟಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದ ಮೇಲೆ ಅವರನ್ನು ಕೂಡಲೇ ಅಮಾನತು ಮಾಡಿದ್ದೇವೆ. 6 ತಿಂಗಳಾಗಿತ್ತು. ವೀರೇಶ, ಮನೋಹರ, ದೊಡ್ಡಬಸಪ್ಪ ಇವರನ್ನು ಅಮಾನತುಗೊಳಿಸಲಾಗಿತ್ತು. ಅವರಿಂದ ಲಿಖಿತ ಹೇಳಿಕೆಯನ್ನು ಪಡೆದುಕೊಂಡಿದ್ದೆವು. ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಇಲಾಖಾ ವಿಚಾರಣೆಯನ್ನೂ ಮಾಡಲಾಗಿದೆ. Simultaneously, ಅವರನ್ನು ಅಮಾನತು ಮಾಡಲಾಗಿತ್ತು. ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಆರೋಪಿಗಳು ಈಗಾಗಲೇ ಖಜಾನೆಗೆ ಹಣವನ್ನು ಪಾವತಿ ಮಾಡಿದ್ದಾರೆ. 6 ತಿಂಗಳ ಅಮಾನತು ಅವಧಿ ಮುಕ್ತಾಯಗೊಂಡ ನಂತರ ಅವರನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕಾನೂನು ಹೇಳುತ್ತದೆ. ಆದ್ದರಿಂದ ಆ ವಾರ್ಡ್ ಬಿಟ್ಟು ಬೇರೆಯ ವಾರ್ಡ್‌ಗೆ ಅವರನ್ನು ಹಾಕಿದ್ದೇವೆ. ಅವರ ಮೇಲಿನ ವಿಚಾರಣೆ ಇನ್ನೂ ಬಾಕಿಯಿದ್ದು, ನಿವೃತ್ತ ನ್ಯಾಯಾಧೀಶರ ಮೂಲಕ ವಿಚಾರಣೆ ನಡೆಯುತ್ತಿದೆ. ಗಾಂಧಿನಗರ ಪೋಲೀಸ್ ಠಾಣೆಯಲ್ಲಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಚಾರ್ಜ್‌ಶೀಟ್ ಸಹ ಮಾಡಲಾಗಿದೆ. ಅಂತಿಮ ವರದಿ ಬಂದ ಮೇಲೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ತಕ್ಷಣಕ್ಕೆ ಹಣವನ್ನು ವಾಪಸ್ ಕಟ್ಟಲಾಗಿದೆ. ವಿಚಾರಣೆ

ಹಂತದಲ್ಲಿದೆ. ಅಂತಿಮ ವರದಿ ಬಂದ ನಂತರ ಕಾನೂನು ರೀತ್ಯಾ ಅವರ ಮೇಲೆ ಏನೇನು ಕ್ರಮಗಳಾಗಬೇಕೋ ಅದನ್ನು ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆದು ತೆಗೆದುಕೊಳ್ಳುತ್ತೇವೆ.

**ಶ್ರೀ ವೈ.ಎಂ.ಸತೀಶ್:–** ಮಾನ್ಯ ಸಚಿವರೆ, ಎಷ್ಟು ದಿನಗಳಲ್ಲಿ ಈ investigation complete ಮಾಡುತ್ತಾರೆ ಎನ್ನುವುದು ಒಂದು. ಮಾನ್ಯ ಸಭಾಪತಿಯವರ ಮೂಲಕ ಸರ್ಕಾರಕ್ಕೆ ನೀಡುವ ಒಂದೆರಡು ಸಲಹೆಗಳೇನೆಂದರೆ ಶಾಸಕರಿಗೆ ಒಂದು ವಿಶೇಷವಾದ ಕೋರ್ಟ್ ಇದೆ. ಜನಪ್ರತಿನಿಧಿಗಳಿಗೆ ಸಂಬಂಧಿಸಿದ ಯಾವುದಾದರೂ ವಿಶೇಷ ಪ್ರಕರಣಗಳಿದ್ದರೆ ಅಲ್ಲಿ ತೆಗೆದುಕೊಳ್ಳಲಾಗುತ್ತದೆ. ಅಧಿಕಾರಿಗಳ ಮೇಲಿನ corruption charges or any disciplinary actions ಮೇಲೆ ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ಏಕೆ ಒಂದು ವಿಶೇಷ ನ್ಯಾಯಾಲಯ ಮಾಡಬಾರದು? ಈ ನಡುವೆ ಅಧಿಕಾರಿಗಳ ಭ್ರಷ್ಟಾಚಾರ ಬಹಳವಾಗಿದೆ. ಅದಕ್ಕೆ ನನ್ನ ಸಲಹೆಯೇನೆಂದರೆ ಪ್ರತಿಯೊಂದು district headquarters ನಲ್ಲಿ ಒಂದು Special Court ಅನ್ನು ಮಾಡಲು ಸರ್ಕಾರ ಮನಸ್ಸು ಮಾಡಿದರೆ ಇಂಥ ತನಿಖೆಗಳು ಬೇಗ ಆಗುತ್ತದೆ.

**(ಮುಂದು)**

**(22) 27-1-2026, 12.30, ಕೆಜಿ:ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ವೈ.ಎಂ.ಸತೀಶ್ (ಮುಂದು):–**

ನಮ್ಮ ಮನೆಯ built-up area ವನ್ನು ಕಡಿಮೆ ಮಾಡಿದರೆ ನಮಗೆ ಎಷ್ಟು ಕೊಡುತ್ತೀರಿ ಎಂದು ಅಧಿಕಾರಿಗಳು ನನಗೆ ಕೇಳುತ್ತಾರೆ. Property tax ಅನ್ನು reduce ಮಾಡುತ್ತೇವೆಂದು ಹೇಳುತ್ತಾರೆ. ಬಳ್ಳಾರಿಯಲ್ಲಿ ಇಂತಹ ಹಗರಣಗಳು ನಡೆಯುತ್ತವೆ. ಇದಕ್ಕೆ ನಾನೇ witness. ನನ್ನನೇ ಕೇಳಿದ್ದಾರೆ. ಮಾನ್ಯ ಸಚಿವರೇ ನನ್ನನ್ನೇ ಕೇಳಿದ್ದಾರೆ. ಕೊನೆಯದಾಗಿ, ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಬೆಂಗಳೂರಿನಲ್ಲಿ ಯಾವ ರೀತಿ each and every property ಗೆ PID (Property Identification Number) ಕೊಟ್ಟು property tax ಕಟ್ಟುವುದಕ್ಕೆ online challan generate ಮಾಡಿದ್ದಾರೆ. ಬಳ್ಳಾರಿಯಲ್ಲಿಯು PID's ಕೊಟ್ಟಿದ್ದಾರೆ. ಅಲ್ಲಿ ಏತಕ್ಕೆ property tax ಕಟ್ಟುವುದಕ್ಕೆ online challan generate ಮಾಡಿ ಅದರಿಂದ ಅದು ನೇರವಾಗಿ ತೆರಿಗೆಯನ್ನು ಸರ್ಕಾರದ ಖಜಾನೆಗೆ ಕಟ್ಟುವಂತೆ ಮಾಡುವ ಸಿಸ್ಟಮ್‌ನ್ನು digitize ಮಾಡುತ್ತಿಲ್ಲ? ಇದನ್ನು ಆದಷ್ಟು ಬೇಗ ಮಾಡಿದರೆ property tax ಹಗರಣಗಳು ಕಡಿಮೆಯಾಗುತ್ತವೆ. ಅದೇರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಒಂದು Fast Track Court ಅನ್ನು establish ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಕಾನೂನು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಮಾನ್ಯ

ಸದಸ್ಯರು ಹೇಳಿರುವ ಪ್ರಕಾರ, Fast Track Court ಗಳನ್ನು ಮಾಡುವುದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಆ ಕೆಲಸವನ್ನು ಮಾಡುತ್ತೇನೆ. ಮಾನ್ಯ ಸದಸ್ಯರು ಜೊತೆಗೆ online digitization ಬಗ್ಗೆ ಹೇಳಿದ್ದಾರೆ. ಇದು ಈಗಾಗಲೇ ಪ್ರಗತಿಯಲ್ಲಿದೆ. ಬೆಂಗಳೂರು ಮಹಾನಗರದಲ್ಲಿ ಇರುವ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳು, ಮಹಾನಗರ ಸಭೆಗಳು ಯಾವುವು ಇವೆ, ಅವುಗಳನ್ನು ಅದೇರೀತಿ ಮಾಡುವ ಕೆಲಸವನ್ನು ಮಾಡುತ್ತೇವೆ. ಅಲ್ಲದೇ, ಮಾನ್ಯ ಸದಸ್ಯರು ಇಲಾಖಾ ವಿಚಾರಣೆಯು ಯಾವಾಗ ಮುಗಿಯುತ್ತದೆ ಎಂದು ಕೇಳಿದ್ದಾರೆ. ಈಗಾಗಲೇ ಇಲಾಖಾ ವಿಚಾರಣೆಯು ವಿಚಾರಣೆಯ ಹಂತದಲ್ಲಿದ್ದು, ಇದುವರೆಗೂ ವಿಚಾರಣಾಧಿಕಾರಿಗಳು ಒಟ್ಟು 06 ಸಭೆಗಳನ್ನು ಮಾಡಿದ್ದಾರೆ. ಅಂತಿಮ ವರದಿಗೆ ಮೂರು ತಿಂಗಳ ಕಾಲವಾಶ ಇದ್ದು, ಅಂತಿಮ ವರದಿ ಬಂದ ಕೂಡಲೇ ಅವರಿಗೆ ಯಾವ ತರಹದ punishment ಕೊಡಬೇಕು ಎನ್ನುವುದನ್ನು ಮುಂದಿನ ಸಭೆಯಲ್ಲಿ ಈ ವಿಚಾರವನ್ನು ತಿಳಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು Business Advisory Committee meeting ಯಲ್ಲಿಯೂ ಸದನದಲ್ಲಿ ಎಷ್ಟು ಜನ ಸಚಿವರು ಹಾಜರು ಇರಬೇಕೆಂದು ಹೇಳಿದ್ದೀರಿ. ಆದರೆ, ಇಂದು ಸದನ ಪ್ರಾರಂಭವಾದಾಗ ಇಬ್ಬರು ಸಚಿವರು ಇದ್ದರು. ಈಗ 4 ಜನ ಸಚಿವರು ಇದ್ದಾರೆ. ಆದರೂ ಸಹ, 9 ಜನ ಸಚಿವರಲ್ಲಿ ಕೇವಲ 4 ಜನ ಸಚಿವರು ಮಾತ್ರ ಇದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಸುಮ್ಮನಿರಿ. ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕಡ್ಡಾಯವಾಗಿ ಸದನದಲ್ಲಿ ಹಾಜರು ಇರಬೇಕಾದವರ ಬಗ್ಗೆ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾವು 9 ಜನರು ಇದ್ದೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಎನ್.ಚೆಲುವರಾಯಸ್ವಾಮಿಯವರು ಇದ್ದಾರೆಂದು ಹೇಳಿದೆ.

**(ಗೊಂದಲ)**

**ಡಾ॥ ಎಂ.ಆರ್.ಸೀತಾರಾಂ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ೯ ಜನ ಸಚಿವರು ಇದ್ದಾರೆಂದು ನೋಡಿದ ತಕ್ಷಣ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಂದು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದವರ ೯ ಜನ ಸಚಿವರ ಪಟ್ಟಿಯನ್ನು ಓದುವುದಕ್ಕೆ ಹೇಳಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಹೇಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲಿ 4 ಜನರು ಇದ್ದಾರೆ. ಈಗ ಸದನದಲ್ಲಿ ಯಾರು ಇದ್ದಾರೆಂದು ದಯವಿಟ್ಟು ಆ ಪಟ್ಟಿಯನ್ನು ಓದಿ ಹೇಳಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾನಾಯಕರು ವಿಧಾನಸಭೆಗೆ ಹೋಗುತ್ತೇನೆಂದು ಹೇಳಿದ್ದಾರೆ. ಅವರಿಗೆ ಅನುಮತಿ ಕೊಟ್ಟಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಭಾನಾಯಕರ ಬಗ್ಗೆ ಪ್ರಶ್ನೆ ಮಾಡಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಕಡ್ಡಾಯವಾಗಿ ಹಾಜರು ಇರಬೇಕಾದವರ ಪಟ್ಟಿಯಲ್ಲಿ ೯ ಜನರ ಹೆಸರು ಇದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾನಾಯಕರು ಇಲ್ಲಿಗೆ ಬರಲಿ. ಆಗ ಸರ್ಕಾರಕ್ಕೆ ಹೇಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಕೆ.ಶಿವಕುಮಾರ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ : 64**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ವಿವರವಾಗಿ ಒದಗಿಸಿದ್ದಾರೆ. ಮಾನ್ಯ ಸಚಿವರು ಸುಮಾರು 6,400 ಪೌರಕಾರ್ಮಿಕರನ್ನು Municipality ಯಲ್ಲಿ permanent ಮಾಡುವುದು ಹಾಗೂ ಅದೇರೀತಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೂ ಹೆಚ್ಚು ಕಡಿಮೆ 6,000 ಪೌರಕಾರ್ಮಿಕರನ್ನು ಖಾಯಂ ಮಾಡಬೇಕಾಗಿರುವುದು ಬಾಕಿ ಇದೆ ಎಂದು ಹೇಳಿದ್ದಾರೆ. ಆದರೆ, ಮಾನ್ಯ ಸಚಿವರು ಇವರನ್ನು ಯಾವಾಗ regularize ಮಾಡುತ್ತಾರೆಂದು ಹೇಳಿಲ್ಲ. ಅದೇರೀತಿ ನಾನು Underground Drainage ವಿಭಾಗದಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆಂದು ಪ್ರಶ್ನೆ ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ರಾಜ್ಯದಲ್ಲಿ ಒಟ್ಟು 664 ಜನರು ಕೆಲಸ ಮಾಡುತ್ತಿದ್ದು, ಇದರ ಕಡತ ಆರ್ಥಿಕ ಇಲಾಖೆಯಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ, ರಾಜ್ಯದಲ್ಲಿ 1,000 ಕ್ಕಿಂತಲೂ ಹೆಚ್ಚಿನ ಜನರು Underground Drainage ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವು ಯಾವಾಗ ಈ ಪ್ರಶ್ನೆಯನ್ನು ಕೇಳಿದರೂ ಸಹ, ಮಾನ್ಯ ಸಚಿವರು ಈ ಕಡತ ಆರ್ಥಿಕ ಇಲಾಖೆಯಲ್ಲಿ ಇದೆ ಎಂದು ಉತ್ತರ ಕೊಡುತ್ತಿದ್ದಾರೆ. ಇವತ್ತು ನಮ್ಮ society ನಾಗರಿಕವಾಗಿ ಇಷ್ಟೊಂದು ಬೆಳೆದಿದ್ದರೂ ಸಹ, ಕಳೆದ 7 ವರ್ಷಗಳಿಂದ ಸುಮಾರು 85 ಜನ ಪೌರಕಾರ್ಮಿಕರು Underground Drainage clean ಮಾಡುವಾಗ, pit clean ಮಾಡುವಾಗ ಹಾಗೂ Septic Tank clean ಮಾಡುವ ಸಂದರ್ಭಗಳಲ್ಲಿ ಮೃತಪಟ್ಟಿರುತ್ತಾರೆ. ನಾವು ಇವತ್ತಿನ ದಿವಸ Artificial Intelligence ಬಗ್ಗೆ ಮಾತನಾಡುತ್ತಿದ್ದೇವೆ. ಈಗ ಯಾವ ದೇಶದಲ್ಲಿಯೂ ಸಹ ಈ ತರಹ Sucking Machine ಅನ್ನು ತೆಗೆದುಕೊಳ್ಳುತ್ತಿದ್ದಾರೆ. Artificial Intelligence ನಿಂದ ಎಲ್ಲಿ block ಆಗಿದೆ ಎಂದು ಗೊತ್ತಾಗುವುದಿಲ್ಲವೇ? ಈಗ ಹಾಲಿ ಖಾಸಗಿ ಕಂಪನಿಗಳು ಅದೇ ರೀತಿ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಒಂದು technology ಅನ್ನು ತೆಗೆದುಕೊಂಡು ಬಂದು ಈ ರೀತಿ ಪೌರಕಾರ್ಮಿಕರು ಮಾಡುವುದನ್ನು end ಮಾಡಬೇಕು. ಮೊನ್ನೆ ದಿವಸ ಬಿಜಾಪುರದಲ್ಲಿ ಮೃತಪಟ್ಟಿದ್ದಾರೆ. ಆದರೆ, ಅದಕ್ಕೆ ಯಾವುದೇ ರೀತಿಯ ಕ್ರಮವನ್ನು ತೆಗೆದಿಕೊಂಡಿರುವುದಿಲ್ಲ. ಒಬ್ಬ ಮನುಷ್ಯ manhole ಒಳಗೆ ಇಳಿದು clean ಮಾಡುವುದನ್ನು ನೋಡಿದರೆ ಅದರ ಕಷ್ಟಗೊತ್ತಾಗುತ್ತದೆ. ನಾವು ಇದನ್ನು ಎಲ್ಲಿಯೂ ಮಾಡುವುದಕ್ಕೆ ಹೋಗುವುದಿಲ್ಲ. ಈ ತರಹದ ಒಂದು ಅಭ್ಯಾಸ ಆಗುತ್ತಿದೆ. ಆದರೆ, ಇದು ಆಗಬಾರದು. ಅದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಪೌರಕಾರ್ಮಿಕರನ್ನು

ಖಾಯಂ ಮಾಡಬೇಕು. ಮಾನ್ಯ ಸಚಿವರು ಆ ಕಡತ ಆರ್ಥಿಕ ಇಲಾಖೆಯ ಮುಂದೆ ಇದೆ ಎಂದು ಹೇಳುತ್ತಿದ್ದರೆ, ನಾವು ಆ ಕಡತ ಎಷ್ಟು ದಿವಸಗಳಿಂದ ಅಲ್ಲಿ ಇದೆ ಅಂದುಕೊಳ್ಳಬೇಕು; ಇದರಿಂದ ಸುಮಾರು ೮೫ ಜನರು ಸತ್ತಿದ್ದಾರೆ. ಹಾಗಾಗಿ, ಇದು ಕೊನೆಯಾಗಬೇಕು. ಸರ್ಕಾರ Artificial Intelligence use ಮಾಡಬೇಕು. ನಾವು ಸುಮ್ಮನೆ Silicon Valley, ಎಂದು ಹೇಳುತ್ತಿದ್ದೇವೆ. India is fifth largest economy in the world ಎಂದು slogan ಅನ್ನು ಹೇಳುತ್ತೇವೆ. ಆದರೆ, ಇಲ್ಲಿ ಜನರು ಸಾಯುತ್ತಿದ್ದಾರೆ. ಇದರಿಂದ ಮೃತಪಟ್ಟ ಕಾರ್ಮಿಕರಿಗೆ ಸರ್ಕಾರ ೫ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತಿತ್ತು. ಆದರೆ, ಈಗ ಸರ್ಕಾರ ಪರಿಹಾರವನ್ನು ಏಕೆ ಕೊಡುತ್ತಿಲ್ಲ? ಅವರಿಗೆ ಪರಿಹಾರ ಕೊಡಬೇಕು. ಅದೇರೀತಿ ಅವರ ಮಕ್ಕಳಿಗೆ compassionate grounds ಮೇಲೆ ಕೆಲಸ ಕೊಡುತ್ತಿಲ್ಲ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು PK (Poura Karmika) ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಸುಮಾರು 1,೦೦೦ ಕ್ಕಿಂತ ಹೆಚ್ಚಿಗೆ PK (Poura Karmika) ರವರದ್ದು ಬಾಕಿ ಇದೆ. ಏಕೆಂದರೆ, internal reservation ಸಲುವಾಗಿ High Court ನಲ್ಲಿ stay ಆಗಿದೆ. ಅದರ ಸಲುವಾಗಿ ಬಾಕಿ ಆಗಿದೆ. ನಾವು ತಕ್ಷಣ ಮಾಡಬೇಕೆಂದು ಪತ್ರ ಬರೆದಾಗ, High Court ನಿಂದ stay ಆಗಿದೆ ಎಂದು ಬಂದಿದೆ. ಈ ಪ್ರಶ್ನೆ ಎರಡು ಬಾರಿ ಬಂದಿದೆ. ಮಾನ್ಯ ಸದಸ್ಯರು UGD ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಇದು Urban Development Minister ರವರಿಗೆ ಬರುತ್ತದೆ. ಇದಕ್ಕೆ ಅವರು ಉತ್ತರ ಕೊಡುತ್ತಾರೆ. ಮಾನ್ಯ ಸದಸ್ಯರು ಹೇಳಿರುವುದು ಸರಿ ಇದೆ. ನಾವು ಇದರ ಬಗ್ಗೆ ಒಂದೆರಡು ಬಾರಿ ಸಭೆಗಳನ್ನು ಮಾಡಿದ್ದೇವೆ. ಏಕೆಂದರೆ, ಅವರು seriously ಕೆಲಸ ಮಾಡುವಂತಹ ಸಂದರ್ಭದಲ್ಲಿ ಸುಮಾರು ಜನರು ಮೃತ ಪಟ್ಟಿರುತ್ತಾರೆ. ಅದರ ಬಗ್ಗೆ ನಾನು ಮತ್ತು ಮಾನ್ಯ ಸಚಿವರಾದ ಬಿ.ಎಸ್.ಸುರೇಶ್‌ರವರು ಸಭೆಗಳನ್ನು ಮಾಡಿ ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ಮಾಡುತ್ತೇವೆ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ಎಸ್.ಸಿ/ಎಸ್.ಟಿ ಪೌರಕಾರ್ಮಿಕರ ಮಕ್ಕಳಿಗೆ Corporations and Municipalities ಗಳಿಂದ ಓದುವುದಕ್ಕೆ ಹಣವನ್ನು ಕೊಡುತ್ತಿದ್ದರು. Law course ಮಾಡುತ್ತಿದ್ದರೆ 4೦,೦೦೦ ಗಳನ್ನು ಹಾಗೂ Medical course ಮಾಡುತ್ತಿದ್ದರೆ ೬೦,೦೦೦ ಗಳನ್ನು ಕೊಡುತ್ತಿದ್ದರು. ಕಳೆದ ೩-4 ವರ್ಷಗಳಿಂದ ಈ ಹಣವನ್ನು ಕೊಡುತ್ತಿಲ್ಲ. ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರೆ ಆಗಬೇಕೇ? ಈ ಹಣ ಕೊಡುವುದನ್ನು ನಿಲ್ಲಿಸುವುದಕ್ಕೆ ಇವರಿಗೆ ಯಾರು authorize ಮಾಡಿದ್ದಾರೆ? S.C.P-T.S.P

(Scheduled Castes Sub–Plan and Tribal Sub–Plan) ಹಣವನ್ನು ಇದಕ್ಕೆ ಬಳಕೆ ಮಾಡಲಿ. ಇವರು ಇದನ್ನು ಏಕೆ ನಿಲ್ಲಿಸಿದರು? ಇವತ್ತಿನ ದಿವಸ ಪೌರಕಾರ್ಮಿಕರ ಮಕ್ಕಳು Engineering College or Medical College ಗೆ ಹೋಗಿ ರೂ.೮೦,೦೦೦, ಒಂದು ಲಕ್ಷ ರೂಪಾಯಿಗಳ ಶುಲ್ಕವನ್ನು ಕಟ್ಟಿ ಕಾಲೇಜಿಗೆ ಸೇರುವುದಕ್ಕೆ ಆಗುತ್ತದೆಯೇ? ಇದು ಬಹಳ ದೊಡ್ಡ ಸಮಸ್ಯೆಯಾಗುತ್ತಿದೆ. ಈಗ ಸದನದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರು ಇದ್ದಾರೆ. ಹಾಗಾಗಿ, ಅವರ ಗಮನಕ್ಕೂ ಈ ವಿಷಯವನ್ನು ತರುವುದಕ್ಕೆ ತಮ್ಮ ಮೂಲಕ ಕೇಳುತ್ತಿದ್ದೇನೆ. ದಯಮಾಡಿ, ಇದನ್ನು ಮುಂದುವರೆಸಬೇಕು. ದಯಮಾಡಿ 2ನೇ ತಲೆಮಾರಿನ ಹಾಗೂ 3ನೇ ತಲೆಮಾರಿನ ಪೌರಕಾರ್ಮಿಕರ ಮಕ್ಕಳಿಗೆ ಯಾರಿಗೂ ಕೆಲಸ ಕೊಡಬೇಡಿ. ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರು ಆಗುವುದು ಬೇಡವೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಸರ್ಕಾರ ಅವರಿಗೆ ಓದುವುದಕ್ಕೆ ಅವಕಾಶ ಕೊಡಲಿ. ಅವರಲ್ಲಿ Graduates ಇದ್ದಾರೆ, Lawyers ಇದ್ದಾರೆ. Engineering, Medical courses ಮಾಡುತ್ತಿದ್ದಾರೆ. ಸರ್ಕಾರ ಪೌರಕಾರ್ಮಿಕರ ಮಕ್ಕಳಿಗೆ ಹಣ ಕೊಡುವುದನ್ನು ನಿಲ್ಲಿಸಿಬಿಟ್ಟರೆ, ಅವರು ಅವರ ಮಕ್ಕಳನ್ನು M.B.B.S. ಓದಿಸುವುದಕ್ಕೆ ಆಗುತ್ತದೆಯೇ? ಇದು ಬಹಳ ಅನ್ಯಾಯ ಆಗುತ್ತಿದೆ. ಈ ಹಣ ಕೊಡುವುದನ್ನು ಕಳೆದ 3–4 ವರ್ಷಗಳಿಂದ ನಿಲ್ಲಿಸಲಾಗಿದೆ. ಅದಕ್ಕೆ ಮಾನ್ಯ ಸಭಾಪತಿಗಳಾದ ತಾವು ಇದರಲ್ಲಿ intervene ಆಗಬೇಕು. ಇದನ್ನು ದಯಮಾಡಿ ಜಾರಿ ಗೊಳಿಸಬೇಕು. ಆ ಮಕ್ಕಳಿಗೆ ಮುಖ್ಯವಾಗಿ fees ಕೊಡಬೇಕು. ಅವರ ಮಕ್ಕಳು ಓದುವುದನ್ನು ಬಿಟ್ಟು ಮತ್ತೆ ಮನೆಗಳ ಮುಂದೆ ಕಸ ಎತ್ತುವುದಕ್ಕೆ ಬರುತ್ತಿದ್ದಾರೆ. ನಾನು ಅವರನ್ನು ಪ್ರಶ್ನೆ ಮಾಡಿದಾಗ ಅವರು fees ಕಟ್ಟುವುದಕ್ಕೆ ಆಗಲಿಲ್ಲ ಅದಕ್ಕೆ ವಾಪಸ್ಸು ಬಂದಿದ್ದೇವೆಂದು ಹೇಳಿದರು. ಅವರ ಕೈಯಲ್ಲಿ Convocation Certificate ತೆಗೆದುಕೊಳ್ಳಲು ಆಗಲಿಲ್ಲ. ಏಕೆಂದರೆ, scholarship ಬಂದಿಲ್ಲವೆಂದು ಹೇಳುತ್ತಾರೆ. ಇನ್ನೊಂದು ಕಡೆ fees ಕಟ್ಟುವುದಕ್ಕೆ ಅವರ ಕಡೆ ಹಣ ಇಲ್ಲ. ಇದು ಯಾವ ಮಟ್ಟಕ್ಕೆ ನಡೆಯುತ್ತಿದೆ?

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಮಾನ್ಯ ಸದಸ್ಯರು ನೀಡಿರುವಂತಹ ಸಲಹೆಯನ್ನು consider ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಬಸವನಗೌಡ ಬಾದರ್ಲಿಯವರ ಪ್ರಶ್ನೆ ಸಂಖ್ಯೆ 53 ಅನ್ನು ಕೇಳಲು ಅವರು ಹಾಜರಿರುವುದಿಲ್ಲ.

**ಪ್ರಶ್ನೆ ಸಂಖ್ಯೆ : 96**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಕಾಂಗ್ರೆಸ್ ಪಕ್ಷಕ್ಕೂ ಮತ್ತು ತೆಂಗಿನ ಮರದ ರೋಗಕ್ಕೂ ಬಹಳ ದೊಡ್ಡ ನಂಟು ಇದೆ. ಈ ಹಿಂದೆ ಕೃಷಿ ಸಚಿವರು ಮಾನ್ಯ ಎಸ್.ಎಂ.ಕೃಷ್ಣರವರ ಸಚಿವ ಸಂಪುಟದಲ್ಲಿ ತೋಟಗಾರಿಕೆ ಇಲಾಖೆಗೆ ಕೈ ಹಾಕಿ ದೊಡ್ಡ ಒಂದು ನಷ್ಟವನ್ನು ಅನುಭವಿಸಿದ್ದರು. ಈಗ ಮಾನ್ಯ ಕೃಷಿ ಸಚಿವರು ಉತ್ತರ ಕೊಡುತ್ತಿದ್ದಾರೆ. ಈಗ ವಿವರವಾದ ಉತ್ತರ ಬಂದಿದೆ. ವಿಶೇಷವಾಗಿ ನಮ್ಮ ತುಮಕೂರು ಜಿಲ್ಲೆಯಲ್ಲಿ ತೆಂಗು ಬೆಳೆಗೆ ನುಸಿಪೀಡೆ ರೋಗದ ಜೊತೆಗೆ ಕೆಂಪುಮೂತಿ ಹುಳ ಮತ್ತು ಅಣಬೆ ರೋಗ ಎನ್ನುವ ಎರಡು ರೋಗಗಳು ಬಂದು ಕಳೆದ 2-3 ವರ್ಷಗಳಿಂದ ರೈತರು ಮತ್ತು ತೆಂಗು ಬೆಳೆಗಾರರು ಬಹಳಷ್ಟು ಭಾದಿತರಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ, ನಾನು ಪ್ರಶ್ನೆ ಕೇಳಿದ್ದು, ಇದರ ಬಗ್ಗೆ ಮಾನ್ಯ ಸಚಿವರಿಗೆ ಮಾಹಿತಿ ಇದ್ದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ತುಮಕೂರು ಜಿಲ್ಲೆಯನ್ನು 'ಕಲ್ಪತರು ನಾಡು' ಎಂದು ಕರೆಯುತ್ತೇವೆ. ತುಮಕೂರು ಜಿಲ್ಲೆಯಲ್ಲಿ 1.79 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯನ್ನು ಬೆಳೆಯುತ್ತಿದ್ದು, ನಮ್ಮ ರಾಜ್ಯದ ಒಟ್ಟು contribution ನಲ್ಲಿ ತುಮಕೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳ contribution ಸುಮಾರು ಶೇಕಡಾ 80% ರಷ್ಟು ಇದೆ. ಈ ಮೂರು ಜಿಲ್ಲೆಗಳಲ್ಲಿ ತೆಂಗು ಬೆಳೆಗಾರರನ್ನು ಹಾಗೂ ತೆಂಗು ಬೆಳೆಯನ್ನು ಈ ರೋಗ ಬಾಧಿಸುತ್ತಿದೆ. ಈ ಬೆಳೆಯಿಂದ ಒಂದು ವರ್ಷಕ್ಕೆ ಸರ್ಕಾರಕ್ಕೆ ಆದಾಯ ಸುಮಾರು 427 million ರೂಪಾಯಿಗಳಷ್ಟು ಇದ್ದು ಆದಾಯ ರಾಜ್ಯ ಸರ್ಕಾರಕ್ಕೆ export ಆಗುತ್ತದೆ.

(ಮುಂದು)

**(023) 27.01.2026/12.40/ಎಂವಿ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಚಿದಾನಂದ್ ಎಂ. ಗೌಡ (ಮುಂದು):-**

ನಮ್ಮ ದೇಶದ ಕೇಂದ್ರ ಸರ್ಕಾರದಿಂದ ಸುಮಾರು 427 ಮಿಲಿಯನ್ ರೂಪಾಯಿಗಳಷ್ಟು ವ್ಯವಹಾರ ನಡೆಯುತ್ತದೆ. ಇಷ್ಟು ದೊಡ್ಡದಾಗಿರತಕ್ಕಂಥದ್ದಕ್ಕೆ ತಮ್ಮ ಉತ್ತರದಲ್ಲಿ ಒಂದು ಮಾಹಿತಿ ನೀಡಿದ್ದಾರೆ. ಈಗ ಕೆಂಪುಮೂತಿ ಹುಳು ಮತ್ತು ಅಣಬೆ ರೋಗಕ್ಕೆ ತುತ್ತಾಗಿ, ಮರ ಮತ್ತು ಬೆಳೆ ನಷ್ಟವಾದರೆ ರೈತರಿಗೆ ಪ್ರತಿ ಮರಕ್ಕೆ ನೀಡುವ ಪರಿಹಾರದ

ಮೊತ್ತವೆಷ್ಟು? ಮತ್ತೆ ಕಳೆದ ಮೂರು ವರ್ಷದಿಂದ ಎಷ್ಟು ಮರಗಳು ಬಲಿಯಾಗಿವೆ ಎಂದು ಕೇಳಿದ್ದೇನೆ. ಅದಕ್ಕೆ ಒಂದೇ ರೀತಿಯ ಉತ್ತರ ನೀಡಿದ್ದಾರೆ.

**ಸಭಾಪತಿಯವರು:–** ತಾವು ಇದಕ್ಕೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಾಧಿತವಾಗಿರುವ ಅಂದರೆ ಈ ಮೂರು ವರ್ಷದಲ್ಲಿ 10.56 ಲಕ್ಷ ತೆಂಗಿನ ಮರಗಳು ಕೆಂಪುಮೂತಿ ಹುಳು ರೋಗದಿಂದ ಅದೇ ರೀತಿ 26.48 ಲಕ್ಷ ತೆಂಗಿನ ಮರಗಳು ಅಣಬೆ ರೋಗದಿಂದ ಬಾಧಿತವಾಗಿವೆ. ಆದರೆ, ಅವುಗಳಿಗೆ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲವೆಂದು ತಿಳಿಸಿದ್ದಾರೆ. ಅದಕ್ಕೆ ನನ್ನ ವಿನಂತಿ ಏನೆಂದರೆ, ಈಗ ಏನು ವಿಮಾ ಯೋಜನೆ ಇದೆ. ಈ ಬೆಳೆಗೂ ಕೂಡ, ಈಗಾಗಲೇ ಅಡಕ್ಕೆ ಮತ್ತು ಕರಿಮೆಣಸಿಗೆ ಇದೆ. ನಾನು ನಂತರ ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಇದಕ್ಕೆ ಉತ್ತರ ಹೇಳಿ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ, ಈಗಾಗಲೇ ಉತ್ತರ ನೀಡಿದ್ದೇವೆ. ನಾವು treatment ಮತ್ತು ಸಹಾಯಧನ ಕೊಡುತ್ತಿದ್ದೇವೆ. ಅದೇ ರೀತಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸಹ ಪರಿಷ್ಕೃತ ಯೋಜನೆಗಳ ಅಡಿಯಲ್ಲಿ ಸಾಕಷ್ಟು ಕೊಡುತ್ತಿದ್ದೇವೆ. ಈಗ ಹೆಚ್ಚುವರಿಯಾಗಿ ರೈತರಿಗೆ ಏನು ನಷ್ಟವಾಗುತ್ತಿದೆ ಅದಕ್ಕೆ Coconut Development Board ನಿಂದಲೂ ಸಹ ರೈತರಿಗೆ ಮೊದಲನೆ ಮತ್ತು ಎರಡನೆ ವರ್ಷದಲ್ಲಿ ಸುಮಾರು 17,500/– ರೂಪಾಯಿಗಳನ್ನು ನೀಡುತ್ತಿದ್ದೇವೆ. ಈಗ ಮೊದಲನೆಯದಾಗಿ ತೆಂಗಿನ ಮರಗಳಿಗೆ ಆಗಿರತಕ್ಕಂತಹ ಕೆಂಪುಮೂತಿ ಹುಳು ರೋಗಕ್ಕೆ 8,817 ಹೆಕ್ಟೇರ್ ಪ್ರದೇಶ ಮತ್ತು ಅಣಬೆ ರೋಗಕ್ಕೆ 22,071 ಹೆಕ್ಟೇರ್ ಪ್ರದೇಶ ತುತ್ತಾಗಿ ನಷ್ಟವಾಗಿರುವುದಕ್ಕೆ ಕೊಟ್ಟಿದ್ದೇವೆ. ಈಗ ಒಂದು ಹೆಕ್ಟೇರ್‌ಗೆ ರೂ.54,000/– ಗಳನ್ನು ಎರಡು ವರ್ಷದ ಅವಧಿಗೆ ಸಹಾಯಧನ ನೀಡುಲಾಗುತ್ತಿದೆ. ಮೊದಲನೇ ವರ್ಷ 45,250/– ರೂಪಾಯಿಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ 8,750/– ರೂಪಾಯಿಗಳ ಸಹಾಯಧನವನ್ನು ನೀಡಲಾಗುತ್ತಿದೆ. ಈಗ ಏನಾದರೂ ಹೆಚ್ಚುವರಿಯಾಗಿ treatment ಮಾಡುತ್ತಿರುವಂಥದ್ದು ಮತ್ತು ಸಹಾಯಧನ ಕೊಡುತ್ತಿರುವಂಥದ್ದು ಮತ್ತು ಈ ರೋಗದ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ವರದಿಯಲ್ಲಿ ಏನೇನು ಇದೆ ನಾವು ಅದಕ್ಕೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕಿಂತ ಹೆಚ್ಚುವರಿಯಾಗಿ ಮಾನ್ಯ ಸದಸ್ಯರ ಸಲಹೆ ಇದ್ದರೆ, ನಾವು ಅದನ್ನೂ ಸಹ implement ಮಾಡುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ಆದರೆ, treatment ಗೆ ಮಾತ್ರ ಕೊಡುತ್ತಿದ್ದಾರೆ. ಅದೂ ಸಹ ಒಂದು ಹೆಕ್ಟೇರ್‌ಗೆ ೧7,೫೦೦/– ರೂಪಾಯಿಗಳು ಮಾತ್ರ. ಈಗ ಒಂದು ಹೆಕ್ಟೇರ್ ಎಂದರೆ, ಎರಡೂವರೆ ಎಕರೆಗೆ ೧7,೫೦೦/– ರೂಪಾಯಿಗಳು ಮಾತ್ರ. ಈಗ ಮಾನ್ಯ ಸಚಿವರಿಗೆ ಗೊತ್ತಿರುವಂತೆ, ಬೇರೆ ಬೆಳೆಯಾದರೆ ಅದಕ್ಕೆ ಔಷಧಿ ಸಿಂಪಡಿಸುವುದು ಬಹಳ ಸುಲಭವಿರುತ್ತದೆ. ಆದರೆ, ಒಂದೊಂದು ತೆಂಗಿನ ಗಿಡ ನಮ್ಮಲ್ಲಿ tall growing plants ಹತ್ತಿರತ್ತಿರ ಸುಮಾರು ೮೦, ೯೦ ಮತ್ತು ೧೦೦ ಅಡಿಗಳವರೆಗೆ ಎತ್ತರವಿರುತ್ತವೆ. ಅಷ್ಟು ಎತ್ತರಕ್ಕೆ ಯಾವ ರೀತಿಯಲ್ಲಿ ಕೀಟನಾಶಕ ಸಿಂಪಡಿಸುವುದಕ್ಕೆ ಸಾಧ್ಯವಿದೆ? ಅದಕ್ಕೆ ಇಲ್ಲಿಯವರೆಗೆ ವೈಜ್ಞಾನಿಕವಾದ ಚಿಂತನೆಯಾಗಲಿ ಮತ್ತು ಸಂಶೋಧನೆಯಾಗಲಿ ಏನೂ ಕೂಡ ಅಗಿಲ್ಲ. ಈಗ ಯಾವ ರೀತಿಯಾಗಿ ೧೦೦ ಅಡಿಗಳ ಎತ್ತರಕ್ಕೆ ಔಷಧಿ ಸಿಂಪಡಣೆ ಸಾಧ್ಯವಿದೆ? ಇವರು ಏನಾದರೂ ಅದಕ್ಕೆ ಡ್ರೋನ್‌ಗಳನ್ನು ನೀಡಿದ್ದಾರೆಯೆ? ಈಗ ಡ್ರೋನ್ ಮುಖಾಂತರ ಔಷಧಿ ಸಿಂಪಡಣೆ ಮಾಡುವುದಕ್ಕೆ ಇಲಾಖೆಯಲ್ಲಿ ಯೋಜನೆಗಳಿವೆಯೆ ಎಂದರೆ, ಆ ರೀತಿಯ ಯೋಜನೆಗಳು ಇಲ್ಲ. ಈಗ ತೆಂಗಿನ ಮರದ ಬುಡಕ್ಕೆ ಏನಾದರೂ ಔಷಧಿ ನೀಡಿದ್ದಾರೆಯೆ ಎಂದರೆ, ಅದಕ್ಕೂ ಕೂಡ ಇಲ್ಲ. ಆದರೆ, ಕೀಟನಾಶಕವನ್ನು ಸಿಂಪಡಣೆ ಮಾಡಿ ಎಂದು ಹೇಳುತ್ತಾರೆ. ಉದಾಹರಣೆಗೆ; ನನ್ನದೇ ಸುಮಾರು ೫೦ ಎಕರೆಯಷ್ಟು ತೆಂಗಿನ ತೋಟವಿದೆ. ನಮ್ಮ ತೋಟ ಕೂಡ ರೋಗದಿಂದ ಬಾಧಿತವಾಗಿದೆ. ಅದಕ್ಕೆ ನಾನು ಇಲಾಖೆಯ ಅಧಿಕಾರಿಗಳನ್ನು ಕರೆದು ಕೇಳಿದಾಗ, ಅವರು ನಾಲ್ಕೈದು ಮೂಟೆಯಷ್ಟು ಗೊಬ್ಬರ ಕೊಟ್ಟರು. ಅದು ಅಲ್ಲಿಗೆ ಮುಗಿಯಿತು. ಇನ್ನೇನೂ ಕೂಡ ಆಗಿಲ್ಲ. ಈಗ ತೆಂಗಿನ ಮರ ಒಣಗುತ್ತಿದೆ. ಈಗ ಒಂದು ತೆಂಗಿನ ಮರವನ್ನು ಬೆಳೆಸುವುದಕ್ಕೆ ೬ ರಿಂದ ೧೦ ವರ್ಷ ಸಮಯ ಬೇಕು. ಆದರೆ, ಒಂದು ತೆಂಗಿನ ಮರ ನೂರು ವರ್ಷಗಳವರೆಗೆ ಬಾಳುತ್ತದೆ ಮತ್ತೆ ಅದು ನೂರು ವರ್ಷಗಳವರೆಗೆ ಫಸಲು ನೀಡುತ್ತದೆ. ಹಾಗಾಗಿ, ನಾವು ಅದನ್ನು ಕಲ್ಪವೃಕ್ಷವೆಂದು ಕರೆಯುತ್ತೇವೆ. ಅದರ ಜೊತೆಗೆ ಉಪ ಉತ್ಪನ್ನಗಳ ಬಗ್ಗೆ ಸರ್ಕಾರದ ಯೋಜನೆಗಳು ಏನೂ ಇಲ್ಲ. ಉಪ ಉತ್ಪನ್ನಗಳು ರೈತರಿಗೆ ಪ್ರೋತ್ಸಾಹ ಕೊಡುತ್ತವೆ.

**ಸಭಾಪತಿಯವರು:–** ಏನು ಮಾಡಬೇಕೆಂದು ಹೇಳಿ.

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ತೆಂಗಿನ ಎಳನೀರಿನಿಂದ ಐಸ್‌ಕ್ರೀಮ್ ಮಾಡುವಂಥದ್ದು. ಇದನ್ನು ಸರ್ಕಾರ ವಿಶೇಷವಾಗಿ ತೆಗೆದುಕೊಂಡು ಉಪ ಉತ್ಪನ್ನಗಳಿಂದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಉಪ ಉತ್ಪನ್ನಗಳನ್ನು ತಯಾರು ಮಾಡಬೇಕು. ಮತ್ತೆ ರೈತರಿಗೆ ಹೆಚ್ಚೆಚ್ಚು

ಪ್ರೋತ್ಸಾಹ ಕೊಡಬೇಕು. ಕೊಬ್ಬರಿಗೆ ಒಳ್ಳೆಯ ಬೆಲೆ ನೀಡಬೇಕು. ಮತ್ತೆ ಕೊಬ್ಬರಿ ಎಣ್ಣೆ ತಯಾರಿಸುವುದಕ್ಕೆ ಸಹಕಾರ ನೀಡಬೇಕು. ಇದಕ್ಕೆ ಇಲಾಖೆಯವರು ಆಲೋಚನೆ ಮಾಡಿ, ನೂರು ವರ್ಷಗಳವರೆಗೆ ಫಸಲು ನೀಡುವಂತಹ ತೆಂಗಿನ ಮರವನ್ನು ಉಳಿಸಬೇಕು. ನಮ್ಮ ಕಡೆಗಳಲ್ಲಿ ರೈತರು ಅಡಕೆಯನ್ನು ಬೆಳೆಯುತ್ತಾರೆ. ಏಕೆಂದರೆ, ಅದಕ್ಕೆ ವಿಮೆ ಇದೆ. ಅದಕ್ಕೆ ನನ್ನ ಕಡೆಯಿಂದ ಸರ್ಕಾರಕ್ಕೆ ವಿಶೇಷವಾದ ಬೇಡಿಕೆ ಏನೆಂದರೆ, ತೆಂಗಿನ ಮರಗಳಿಗೂ ಕೂಡ ವಿಮೆ ಕೊಡುವಂಥದ್ದು ಆಗಬೇಕು. ಈಗ ಸದ್ಯಕ್ಕೆ ತೆಂಗಿನ ಮರಕ್ಕೆ ವಿಮೆ ಇಲ್ಲ. ಅದಕ್ಕೆ ವಿಮೆ ಕೊಡಬೇಕು.

**ಶ್ರೀ ಎನ್.ಚಲುವರಾಯ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಮರು ನಾಟಿ ಮಾಡುವುದಕ್ಕೆ ಸಹ ಅವಕಾಶಗಳಿವೆ. ಅದಕ್ಕೂ ಸಹ ಸಹಾಯಧನವಿದೆ. ಆದರೆ, ಮಾನ್ಯ ಸದಸ್ಯರು ಮೇಜರ್ ಆಗಿ ಕೇಳುತ್ತಿರುವುದು ಏನೆಂದರೆ, ಅಡಕೆ ಬೆಳೆಗೆ ನೀಡುತ್ತಿರುವಂತೆ ತೆಂಗಿನ ಬೆಳೆಗೂ ಸಹ ವಿಮೆ ನೀಡಬೇಕೆಂದು ಕೇಳುತ್ತಿದ್ದಾರೆ. ಇದರ ವಿಮೆಗೆ ಸಂಬಂಧಪಟ್ಟಂತೆ recommend ಮಾಡಿ, ಅದನ್ನು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಬೇಕಾಗುತ್ತದೆ. ಈಗ ಅಡಕೆಗೆ ಏನು ಪರಿಹಾರ ಕೊಡುತ್ತಿದ್ದೇವೆ ಅದೇ ರೀತಿಯಲ್ಲಿ ತೆಂಗಿನ ಬೆಳೆಗೂ ಸಹ ಪರಿಹಾರ ನೀಡಬೇಕೆಂದು ಕೇಳುತ್ತಿದ್ದಾರೆ. ಅದನ್ನು ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಅದನ್ನು ಮಾಡುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಚಿದಾನಂದ್ ಎಂ. ಗೌಡ:–** ಮಾನ್ಯ ಸಭಾಪತಿಯವರೇ, ಇಲಾಖೆಯ ಅಧಿಕಾರಿಗಳು ತಿಳಿಸಿರುವಂತೆ ಪ್ರಸ್ತಾವನೆ ಸಲ್ಲಿಸುವುದಕ್ಕೆ ಮಾನ್ಯ ಸಚಿವರು ಇನ್ನು ಅನುಮತಿ ನೀಡಿಲ್ಲವಂತೆ. ಈಗ ಪ್ರಸ್ತಾವನೆಗೆ ಮಾನ್ಯ ಸಚಿವರು ಅನುಮತಿ ಕೊಟ್ಟ ನಂತರ ಅಧಿಕಾರಿಗಳ ಮೂಲಕ ಅದು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಈ ವಿಷಯ ಮಂಡ್ಯ ಜಿಲ್ಲೆಗೂ ಸಹ ಸೇರಿದೆ. ಅದಕ್ಕೆ ದಯಮಾಡಿ ಮಾನ್ಯ ಕೃಷಿ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಪ್ರಸ್ತಾವನೆ ಸಲ್ಲಿಸಿ, ತೆಂಗು ಬೆಳಗಾರರನ್ನು ಸಹ ವಿಮಾ ಯೋಜನೆಗೆ ಒಳಪಡಿಸಬೇಕು ಮತ್ತು ಈ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು. ನಾವು ತಕ್ಷಣ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತಹ ಕೆಲಸ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಮತ್ತು ಅಧಿಕಾರಿಗಳು ಸೇರಿಕೊಂಡು ಒಟ್ಟಿಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ನಾವು ಮತ್ತು ಅಧಿಕಾರಿಗಳಿಂದ ಬೇರೆ ತೀರ್ಮಾನವಿಲ್ಲ. ಈಗ ಕೊಬ್ಬರಿಗೂ ಸಹ ಒಳ್ಳೆಯ ದರವಿದೆ. ಈ ವರ್ಷ ಇರುವುದಕ್ಕೆ ಹೋಲಿಕೆ ಮಾಡಿದರೆ, ಕಳೆದ ಎರಡು

ವರ್ಷದಿಂದ ಕೊಬ್ಬರಿ ಬೆಳೆಗಾರರಿಗೆ ಸ್ವಲ್ಪ ಸಮಾಧಾನವಿದೆ. ಈಗ ಕೊಬ್ಬರಿಗೆ 48,000/- ರೂಪಾಯಿಗಳ ದರವಿದೆ. ಆದುದರಿಂದ, ಇನ್ನು ಮುಂದೆ ಏನು ಎಚ್ಚರಿಕೆ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: ೩೩**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಕೃಷಿ ಸಚಿವರು ಇಡೀ ರಾಜ್ಯದಲ್ಲಿಯೇ ಪ್ರಥಮವಾಗಿ ಕಲಬುರಗಿ ಜಿಲ್ಲೆಗೆ ೬೦೦ ಕೋಟಿ ರೂಪಾಯಿಗಳ ಹೆಚ್ಚಿನ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ಮಾನ್ಯ ಕೃಷಿ ಸಚಿವರಿಗೆ ತಮ್ಮ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ, ತೋಟಗಾರಿಕೆ ಏನಾಗಿದೆ ಎಂದರೆ, ಬಾಧಿತ ಪ್ರದೇಶ ಅಂದಾಜು 12,೦೦೦ ಹೆಕ್ಟೇರ್. ಅದರಲ್ಲಿ ಸುಮಾರು ೮೦ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಅಂದರೆ, ಲಿಂಬೆ ಮತ್ತು ದಾಳಿಂಬೆ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದ್ದು, ಇವುಗಳ ರಫ್ತು ಮತ್ತು ಅದರ ಸಾಮರ್ಥ್ಯ ಹೆಚ್ಚಿಸಲು ಶೈತ್ಯಾಗಾರಗಳ ಅಗತ್ಯವಿದೆ ಎಂದು ತಜ್ಞರ ವರದಿಗಳು ಕೂಡ ತಿಳಿಸಿವೆ. ಪ್ರಸ್ತುತ 2 ರಿಂದ ೩ ಪ್ರಮುಖ ಶೈತ್ಯಾಗಾರಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಇವುಗಳು ಸಾಕಾಗುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಇವುಗಳು ಮಾರುಕಟ್ಟೆಗೆ ತಲುಪುವ ಮೊದಲೇ ಹಣ್ಣು ಹಂಪಲುಗಳು ಶೇಕಡಾ 15 ರಿಂದ ೨೦ರಷ್ಟು ಹಾಳಾಗುತ್ತವೆ. ಶೈತ್ಯಾಗಾರಗಳನ್ನು ಜಿಲ್ಲಾ ಮಟ್ಟದಲ್ಲಿ ಮಾಡಿದರೆ ಸರಿಯಾಗುವುದಿಲ್ಲ. ಅದಕ್ಕೆ ಇವುಗಳನ್ನು ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಕೂಡ ಶೈತ್ಯಾಗಾರಗಳನ್ನು ನಿರ್ಮಾಣ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ (ಕೃಷಿ ಸಚಿವರು) (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವರ್ಷ 11 ಶೈತ್ಯಾಗಾರಗಳನ್ನು ಮಾಡುವುದಕ್ಕೆ ವಿವಿಧ ಜಿಲ್ಲೆಗಳಾದ ಹಾಸನ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ರಾಮನಗರ, ಬೆಳಗಾವಿ, ವಿಜಯಪುರ, ಚಿತ್ರದುರ್ಗ ಮತ್ತು ಮೈಸೂರು ಈ ರೀತಿ ಎಲ್ಲಾ ಕಡೆಗಳಲ್ಲಿ ಮಾಡುತ್ತಿದ್ದೇವೆ. ಈಗ Type-1 ಮತ್ತು Type-C ಎಂದು ಮಾಡತಕ್ಕಂಥದ್ದು. ಈಗ Type-1 ಮತ್ತು Type-೨ ಗೆ ಬೇರೆ ಬೇರೆ ರೀತಿಯ ಸಬ್ಸಿಡಿಗಳನ್ನು ಕೊಡುತ್ತಿದ್ದೇವೆ. ಅದರಲ್ಲಿ ೫೦೦ ರಿಂದ ೫,೦೦೦ ಮೆಟ್ರಿಕ್ ಟನ್ ಸಾಮರ್ಥ್ಯ ಇರುವಂತಹ ಶೈತ್ಯಾಗಾರಗಳನ್ನು ಮಾಡುತ್ತಿದ್ದೇವೆ. ಮತ್ತೆ ಸಹಾಯಧನವನ್ನು ಸಹ ಕೊಡುತ್ತಿದ್ದೇವೆ. ಈಗ ಸಹಾಯಧನ ತಡವಾಗಿದೆ ಎಂದು ಹೇಳಿದ್ದಾರೆ. ಆದರೆ, ರೈತರಿಗೆ ಯಾವುದೂ ಸಹ ತಡವಾಗಿಲ್ಲ. ಇದು ನೇರವಾಗಿ Vendor ಗೆ ಹೋಗುತ್ತದೆ. ಈಗ ಶೇಕಡಾ 4೫ರಷ್ಟು ಇದ್ದಂತಹ ಸಬ್ಸಿಡಿಯನ್ನು ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮೊನ್ನೆಯ

ದಿವಸ ಅದನ್ನು ಶೇಕಡಾ ೯೦ರಷ್ಟು ಸಬ್ಸಿಡಿಗೆ ಏರಿಸಿದ್ದಾರೆ. ಹಾಗಾಗಿ, ಅದು ಬಿಡುಗಡೆಯಾಗಬೇಕಾಗಿದೆ. ಅದು Vendor ಗೆ ಹೋಗುವುದರಿಂದ ರೈತರಿಗೆ ಏನು ತೊಂದರೆ ಇಲ್ಲ. ನಾವು ಅದನ್ನು ಕೊಡುತ್ತೇವೆ. ಇನ್ನೂ ಹೆಚ್ಚು ಶೈತ್ಯಾಗಾರಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೃಷಿ ಇಲಾಖೆಯವರು ಯಾವ ರೀತಿ ೬೦೦ ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಆ ಪ್ರಕಾರ ನೀಡಲಿ. ಆದರೆ, ಅದನ್ನು ವಿಳಂಬ ಮಾಡುವುದು ಬೇಡ. ರೈತರಿಗೆ ತುಂಬಾ ಕಷ್ಟವಿದೆ. ಏಕೆಂದರೆ, ಅವರು ಹಣ್ಣು ಹಂಪಲಗಳನ್ನು ಬೆಳೆದು ತಮ್ಮ ಜೀವನ ನಡೆಸುತ್ತಾರೆ. ಅವರಿಗೆ ಬಹಳ ಕಷ್ಟವಿದೆ. ಅವರಿಗೂ ಸಹ ಬಹಳ ಶೀಘ್ರವಾಗಿ ಯಾವ್ಯಾವ ಯೋಜನೆಯಲ್ಲಿ ಕೊಡಬೇಕೆಂದು ಇದೆ ಅದನ್ನು ನೀಡಲಿ. ಈ ಯೋಜನೆಯ ಕನಿಷ್ಠ ಮಿತಿ ೫೦೦ ಮೆಟ್ರಿಕ್ ಟನ್ ಎಂದು ನಿಗದಿಪಡಿಸಿದ್ದಾರೆ. ಅತ್ಯಂತ ಕಡಿಮೆ ಇರುವಂತಹ ಬಡವರು ಇದನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಖಾಸಗಿಯವರಿಗೂ ಸಹ ಪ್ರೋತ್ಸಾಹ ನೀಡಲಿ ಮತ್ತೆ ಇಲಾಖೆಯ ಕಡೆಯಿಂದಲೂ ಸಹ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಒಂದು ಗಟ್ಟಿ ನಿರ್ಧಾರ ತೆಗೆದುಕೊಂಡು ಬೆಳೆ ಹಾನಿಗೆ ಯಾವ ಪ್ರಕಾರ ಮಾಡಿದ್ದಾರೆ, ಆ ಪ್ರಕಾರವಾಗಿ ಈ ಹಣ್ಣು ಹಂಪಲು ಮತ್ತು ನಿಂಬೆ ಇನ್ನಿತರೆ ಎಲ್ಲಾ ಹಣ್ಣುಗಳಿಗೆ ಕೃಷಿ ಇಲಾಖೆಯಲ್ಲಿ ಯಾವ ಪ್ರಕಾರದ ನಿರ್ಧಾರ ತೆಗೆದುಕೊಂಡಿದ್ದಾರೆ ಅದೇ ಪ್ರಕಾರದ ನಿರ್ಧಾರವನ್ನು ಇವರಿಗೂ ಕೂಡ ಅನ್ವಯಿಸತಕ್ಕಂತಹ ರೀತಿಯಲ್ಲಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ವರ್ಷ ಸುಮಾರು ೮೦ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಅದಕ್ಕೂ ಕೂಡ ಏನಾದರೂ ಸಹಾಯಧನ ಕೊಡುತ್ತಾರೋ ಅಥವಾ ಪರಿಹಾರ ಕೊಡುತ್ತಾರೋ ಎಂದು ಯಾವುದಾದರೂ ನಿರ್ಧಾರ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಾ, ಅದರಲ್ಲೂ ಕಲಬುರಗಿ ಜಿಲ್ಲೆಯಲ್ಲಿ ಹೆಚ್ಚಿಗೆ ಹಾನಿಯಾಗಿದೆ. ಅದಕ್ಕೆ ಪರಿಹಾರಧನ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಚಲುವರಾಯ ಸ್ವಾಮಿ:–** ಮಾನ್ಯ ಸದಸ್ಯರು ಹೇಳಿರುವಂಥದ್ದಕ್ಕೆ examine ಮಾಡುತ್ತೇವೆ. ಆದಷ್ಟು ತಕ್ಷಣ ಪರಿಹಾರ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**(ಮುಂದು)**

(24) 27.01.2026 12.50 LL-AK (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 27**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಮೊದಲನೆಯ ಪ್ರಶ್ನೆಗೆ, ...ಜಾಹೀರಾತು ಪ್ರದರ್ಶನ ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಅದೇ ರೀತಿ, ಜಾಹೀರಾತು ಪ್ರದರ್ಶನ ಮಾಡುವುದಕ್ಕೆ ಇಲಾಖೆಯಿಂದ ಶುಲ್ಕ ವಸೂಲು ಮಾಡಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ, ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ ಎಂದು ಉತ್ತರ ನೀಡಿರುತ್ತಾರೆ. ಬ್ಯಾನರ್ ಹಾಕುವುದಕ್ಕೆ ನಗರ ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯಬೇಕು. ತದನಂತರ, ಬ್ಯಾನರ್ ಅಳತೆಯ ಮೇರೆಗೆ ಶುಲ್ಕವನ್ನು ನಿಗದಿ ಮಾಡುತ್ತಾರೆ. ನಾನು ಒಂದು ಪ್ರಮುಖವಾದ ವಿಚಾರವನ್ನು ಉಲ್ಲೇಖ ಮಾಡಿರುವುದೇನೆಂದರೆ, ಅಳವಡಿಸಲಾದ ಬ್ಯಾನರ್, ಪೋಸ್ಟರ್, ಬಾವುಟ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಪೌರಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುತ್ತೀರಾ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು, ಅಂತಹ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆ. ಹಾಗಾಗಿ, ಸರ್ಕಾರದಲ್ಲಿ ನನ್ನ ವಿನಂತಿ ಇರುವುದೇನೆಂದರೆ, ಪ್ರಸ್ತುತ ನಮ್ಮಲ್ಲಿ ಇರುವಂತಹ ಪೌರಕಾರ್ಮಿಕರಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಮಹಿಳಾ ಪೌರಕಾರ್ಮಿಕರಿದ್ದು, ಅವರೇ ಇಂತಹ ಪೋಸ್ಟರ್, ಬ್ಯಾನರ್‌ಗಳನ್ನು ತೆಗೆದು ಹೊರಗಡೆ ಹಾಕಬೇಕಾಗಿರುತ್ತದೆ. ಅಂತಹ ಸಂದರ್ಭದಲ್ಲಿ ತಾವು, ಅಳವಡಿಸಲಾದ ಪೋಸ್ಟರ್‌ಗಳನ್ನು ತೆಗೆಯದೇ ಬಿಟ್ಟಿರುವಂತವರ ಹಾಗೂ ಅನಧಿಕೃತವಾಗಿ ಅಳವಡಿಸಿರುವವರಿಂದ ಹಣವನ್ನು ವಸೂಲು ಮಾಡಿ, ಈ ಪೌರಕಾರ್ಮಿಕರಿಗೆ ಹೆಚ್ಚುವರಿ ಕೆಲಸಕ್ಕೆ ಹಣವನ್ನು ಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

ಇನ್ನೊಂದು ಬಹಳ ಪ್ರಮುಖವಾದ ವಿಚಾರವೇನೆಂದರೆ, ಶಿಡ್ಲಘಟ್ಟದಲ್ಲಿ ಬ್ಯಾನರ್ ತೆರವುಗೊಳಿಸಿರುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಅಂದರೆ, ಮಾನ್ಯ ಸಚಿವರ ಮಗನ ಚಲನಚಿತ್ರದ ಬ್ಯಾನರ್ ಅಳವಡಿಸಿದಂತಹ ಸಂದರ್ಭದಲ್ಲಿ, ಸ್ವಾಭಾವಿಕವಾಗಿ ಸಾರ್ವಜನಿಕರಿಂದ ದೂರು ಬಂದಿರುತ್ತದೆ. ಅಂತಹ ದೂರುಗಳ ಆಧಾರದ ಮೇರೆಗೆ, ಯಾವುದೇ ರೀತಿಯಾದಂತಹ ಅವಘಡ ಆಗಬಾರದೆಂದು ಹಾಗೂ ಸಂಚಾರಕ್ಕೆ ತೊಂದರೆ ಆಗುತ್ತದೆ ಎನ್ನುವಂಥದ್ದನ್ನು ಮನಗಂಡು ಬ್ಯಾನರ್ ಅನ್ನು ತೆಗೆಯುವಂತಹ ಕೆಲಸವನ್ನು ಅಲ್ಲಿನ ಮಹಿಳಾ ಅಧಿಕಾರಿಯವರಾದ ಶ್ರೀಮತಿ ಅಮೃತಾ ಗೌಡರವರು ಮಾಡಿರುತ್ತಾರೆ. ಆದರೆ, ಆ ಸಂದರ್ಭದಲ್ಲಿ ಆ ಮಹಿಳಾ ಅಧಿಕಾರಿಯವರಿಗೆ ಶ್ರೀ ಬಿ.ವಿ. ರಾಜೀವ್ ಗೌಡರವರು ಫೋನ್ ಮಾಡಿ ಬಹಳ ಕೆಟ್ಟದಾಗಿ ಮಾತನಾಡಿರುತ್ತಾರೆ. ತದನಂತರ, ಆ ಮಹಿಳಾ ಅಧಿಕಾರಿಯವರು ಮಾಧ್ಯಮದ ಮುಂದೆ ಅಳುತ್ತಾ, ಹೇಳಿಕೆ ನೀಡಿರುವುದನ್ನು ನಾವೆಲ್ಲರೂ

ನೋಡಿರುತ್ತೇವೆ. ನಂತರ, ಆ ಮಹಿಳಾ ಅಧಿಕಾರಿಯವರು ಘಟನೆಗೆ ಸಂಬಂಧಿಸಿದಂತೆ, ತಮ್ಮ ವೈಯಕ್ತಿಕ ದೂರನ್ನು ನೀಡಿರುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿರುದ್ಧವೂ ಮಾತನಾಡಿರುತ್ತಾರೆ ಹಾಗೂ ಕಲಬುರಗಿ ಜಿಲ್ಲಾಧಿಕಾರಿಯವರ ವಿರುದ್ಧವೂ ಸಹ ಮಾತನಾಡಿರುತ್ತಾರೆ. ಅದರ ಬಗ್ಗೆಯೂ ಸಹ ಹೇಳಲಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಏನು ಮಾತನಾಡಿರುತ್ತಾರೆ?

**ಸಭಾಪತಿಯವರು:–** ಅದನ್ನು ಬಿಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಹೇಳೋಣ.

**ಸಭಾಪತಿಯವರು:–** ಶ್ರೀಮತಿ ಭಾರತಿ ಶೆಟ್ಟಿಯವರೇ, ಈ ಪ್ರಶ್ನೆ ಬಗ್ಗೆ ಮಾತ್ರ ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆ ಮಹಿಳಾ ಅಧಿಕಾರಿಗೆ ಶ್ರೀ ಬಿ.ವಿ. ರಾಜೀವ್ ಗೌಡರವರು ಬಹಳ ಕೆಟ್ಟದಾಗಿ ಮಾತನಾಡುತ್ತಾ, ನನ್ನ ಒಳ್ಳೆಯತನವನ್ನು ನೀವು ನೋಡಿದ್ದೀರಿ. ನನ್ನ ಕೆಟ್ಟತನವನ್ನು ನೀವು ನೋಡಿರುವುದಿಲ್ಲ. ಬೆಂಕಿ ಹಚ್ಚುತ್ತೇನೆ, 31 ವಾರ್ಡ್‌ಗಳಲ್ಲಿ ಧಂಗೆ ಎಬ್ಬಿಸುತ್ತೇನೆ, ಈ ರೀತಿಯ ಮಾತುಗಳನ್ನು ಉಲ್ಲೇಖ ಮಾಡಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಆ ಮಹಿಳಾ ಅಧಿಕಾರಿಯವರಾದ ಶ್ರೀಮತಿ ಅಮೃತಾ ಗೌಡರವರು, ಅವರ ವೈಯಕ್ತಿಕ ದೂರನ್ನು ದಾಖಲಿಸಿರುತ್ತಾರೆ. ತದನಂತರ, ಸಾರ್ವಜನಿಕ ದೂರನ್ನು ಸಹ ದಾಖಲಿಸಿರುತ್ತಾರೆ. ಹಾಗಾಗಿ, ಸರ್ಕಾರದಲ್ಲಿ ನನ್ನ ವಿನಂತಿ ಇರುವುದೇನೆಂದರೆ, ಇದು ಕೇವಲ ಒಬ್ಬ ಅಮೃತಾ ಗೌಡರವರಿಗೆ ಆಗಿರುವಂತಹ ಅವಮಾನ ಆಗಿರುವುದಿಲ್ಲ. ಅಲ್ಲದೇ, ಅವರು ಸರ್ಕಾರದ ಒಂದು ಇಲಾಖೆಯ ಅಧಿಕಾರಿಯಾಗಿರುವ ಕಾರಣ, ನಾನು ಈ ಪ್ರಶ್ನೆಯನ್ನು ಕೇಳಿರುತ್ತೇನೆ. ಆದಾಗ್ಯೂ, ಇದುವರೆವಿಗೂ ಸಂಬಂಧಪಟ್ಟ ಇಲಾಖೆಯಿಂದ ಒಂದು suo-moto ಕೇಸ್ ದಾಖಲಿಸಿರುವುದಿಲ್ಲ. ತದನಂತರ, ಆ ಕೇಸಿನ ಪರಿಣಾಮ ಏನಾಯಿತೆಂದರೆ, ಸರ್ಕಾರದ ಇಲಾಖೆಯಲ್ಲಿ ಮಹಿಳಾ ಅಧಿಕಾರಿಗೆ ರಕ್ಷಣೆ ಇಲ್ಲ. ಜೊತೆಗೆ, ಶ್ರೀ ಬಿ.ವಿ. ರಾಜೀವ್ ಗೌಡರವರನ್ನು ಬಂಧಿಸುವುದಕ್ಕಾಗಿ ಮೂರು ವಿಶೇಷ ಪೋಲೀಸ್ ತಂಡಗಳನ್ನು ರಚನೆ ಮಾಡಲಾಗಿರುತ್ತದೆ.

**ಸಭಾಪತಿಯವರು:–** ಆಯಿತು, ಸಾಕು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದು ಮಹಿಳೆಯರ ರಕ್ಷಣೆಯ ಪ್ರಶ್ನೆಯಾಗಿದ್ದು, ಇದಕ್ಕೆ ಸರ್ಕಾರದಿಂದ ನನಗೆ ಒಳ್ಳೆಯ ಉತ್ತರ ಬೇಕು.

**ಸಭಾಪತಿಯವರು:–** ಆಯಿತು, ತಮ್ಮ ಪ್ರಶ್ನೆಗೆ ಸರ್ಕಾರ ಮೊದಲು ಉತ್ತರ ಹೇಳಲಿ. ನಂತರ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮೊದಲು ನಾನು ನನ್ನ ವಿಷಯವನ್ನು ಹೇಳಿಬಿಡುತ್ತೇನೆ. ಈ ವಿಷಯದಲ್ಲಿ ಸಂಬಂಧಪಟ್ಟ ಇಲಾಖೆಯಿಂದಲೇ ಮೊದಲು suo-moto ಪ್ರಕರಣ ದಾಖಲಾಗಿದ್ದರೆ, ಅದಕ್ಕೆ ಒಂದು ತೂಕ ಇರುತ್ತಿತ್ತು ಅಥವಾ ಅದರಲ್ಲಿ ಒಂದು ಗಟ್ಟಿತನ ಇರುತ್ತಿತ್ತು. ಆದರೆ, ಈ ವಿಷಯದಲ್ಲಿ ಆ ಮಹಿಳಾ ಅಧಿಕಾರಿಯವರು ತಮ್ಮ ವೈಯಕ್ತಿಕ ಕೇಸ್ ದಾಖಲು ಮಾಡಿರುವುದರಿಂದ, ಪೋಲೀಸ್‌ನವರು ಮೂರು ತಂಡಗಳಾಗಿ ರಚನೆಯಾಗಿ ಶ್ರೀ ಬಿ.ವಿ. ರಾಜೀವ್ ಗೌಡರವರನ್ನು ಬಂಧಿಸುವುದಕ್ಕೆ ಹೋಗಿರುತ್ತಾರೆ. ಆದರೆ, ಆ ಮನುಷ್ಯ ಪೋಲೀಸರಿಗೆ ಸಿಕ್ಕಿರುವುದಿಲ್ಲ. ಆತ ಅಷ್ಟು ದೊಡ್ಡ ವ್ಯಕ್ತಿ. ಆದಾಗ್ಯೂ, ನಿನ್ನೆಯ ದಿವಸ ರಾತ್ರಿ ಪೋಲೀಸರು ಆತನನ್ನು ಕೇರಳದಲ್ಲಿ ಬಂಧಿಸಿ ನಮ್ಮ ರಾಜ್ಯಕ್ಕೆ ಕರೆತಂದಿರುತ್ತಾರೆ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ...ಆಗ ಇವರ ಧ್ವನಿ ಎಲ್ಲಿ ಹೋಗಿತ್ತು ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ಬಿಡಿ. ಆ ಬಗ್ಗೆ ನಾನು ಮಾತನಾಡುತ್ತೇನೆ. ದಯಮಾಡಿ ಈಗ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಭಾರತಿ ಶೆಟ್ಟಿಯವರು ಮಾತನಾಡಲಿ. ಮಧ್ಯದಲ್ಲಿ ಉಳಿದವರು ಯಾರೂ ಮಾತನಾಡಬೇಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ನಮಗೆ ಮಾತ್ರ ಜೋರು ಮಾಡುತ್ತೀರಿ. ಆದರೆ, ಅವರಿಗೆ ಮಾತ್ರ ತಾವು ಜೋರು ಮಾಡುವುದಿಲ್ಲ.

**ಸಭಾಪತಿಯವರು:–** ಅವರಿಗೆ ನಾನು ಅವಕಾಶ ಕೊಟ್ಟಿದ್ದೇನೆ. ತಾವು ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಕಿಶೋರ್ ಕುಮಾರ್ ಪುತ್ತೂರು:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ. ಆದರೆ, ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಮಾತನಾಡುವಾಗ ತಾವು ಜೋರು ಮಾಡುವುದಿಲ್ಲ. ತಾವು ಅವರಿಗೂ ಜೋರು ಮಾಡಬೇಕು. ಆದರೆ, ತಾವು ನಮಗೆ ಮಾತ್ರ ಜೋರು ಮಾಡುತ್ತೀರಿ. ಅವರಿಗೆ ಮಾತ್ರ ಮಾತನಾಡುವುದಕ್ಕೆ ರೈಟ್ಸ್ ಇದೆಯೇ?

**ಸಭಾಪತಿಯವರು:–** ಆಯಿತು, ಈಗ ಶ್ರೀಮತಿ ಭಾರತಿಶೆಟ್ಟಿಯವರು ಮಾತನಾಡುತ್ತಾರೆ. ತಾವು ಏತಕ್ಕೆ ಕಿರಿಕಿರಿ ಮಾಡುತ್ತಿರಿ. ದಯಮಾಡಿ, ಈಗ ತಾವು ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಯಾರು, ಏನು ಬೇಕಾದರೂ ಹೇಳಲಿ. ಅವರ ಧ್ವನಿ ಎಲ್ಲಿ ಇತ್ತು, ನಮ್ಮ ಧ್ವನಿ ಎಲ್ಲಿದೆ ಎಂದು ನಮಗೆ ಗೊತ್ತುಂಟು. ಅವರ ಹತ್ತಿರ ಕೇಳಿ, ನಾನು

ಕಲಿತುಕೊಳ್ಳಬೇಕಾಗಿರುವುದಿಲ್ಲ. ಇವೊತ್ತಿನ ದಿವಸ ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರಿಗೆ ಯಾವ ರೀತಿಯ ರಕ್ಷಣೆ ಸಿಗುತ್ತದೆ ಎಂಬುದರ ಬಗ್ಗೆ ನಾನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಲ್ಲಿ ಸರ್ಕಾರದ ಬೇಲಿಯ ಒಳಗಡೆಯೇ ಒಬ್ಬ ಮಹಿಳಾ ಅಧಿಕಾರಿಗೆ ರಕ್ಷಣೆ ಇರುವುದಿಲ್ಲ.

**ಸಭಾಪತಿಯವರು:–** ಈಗ ಏನು ಮಾಡಬೇಕೆಂಬುದನ್ನು ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಮಾನ್ಯ ನ್ಯಾಯಾಲಯ, ಒಬ್ಬ ಸರ್ಕಾರಿ ಮಹಿಳಾ ಅಧಿಕಾರಿಯ ಬಗ್ಗೆ ಇಷ್ಟು ಕೀಳಾಗಿ ಮಾತನಾಡಿದ್ದಕ್ಕೆ ಮತ್ತು ಅವರ ಗೌರವಕ್ಕೆ ಧಕ್ಕೆ ತಂದಿದ್ದಕ್ಕಾಗಿ ಪೊಲೀಸರು ಆತನ ವಿರುದ್ಧ ಸೆಕ್ಷನ್ 79 ಅನ್ನು ಏತಕ್ಕೆ ಹಾಕಿರುವುದಿಲ್ಲವೆಂದು ಕೇಳಿರುತ್ತದೆ.

**ಸಭಾಪತಿಯವರು:–** ಆಯಿತು, ಸಾಕು. ಮಾನ್ಯ ಸಚಿವರೇ, ತಾವು ಉತ್ತರ ನೀಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಇಲ್ಲ, ತಾವು ನಂತರ ತಮ್ಮ ಪ್ರಶ್ನೆಯನ್ನು ಕೇಳಿ. ಈಗ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಸುರೇಶ್ ಬಿ.ಎಸ್. (ನಗರಾಭಿವೃದ್ಧಿ ಸಚಿವರು) (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನಾನು ಉತ್ತರ ನೀಡುತ್ತೇನೆ. ಈ ಮಹಿಳಾ ಅಧಿಕಾರಿಯವರಾದ ಶ್ರೀಮತಿ ಅಮೃತಾ ಗೌಡರವರ ವಿಷಯಕ್ಕೆ ಸಂಬಂಧಿಸಿದಂತೆ, ಘಟನೆ ನಡೆದ ತಕ್ಷಣವೇ ಪೌರಾಯಕ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ದೂರು ನೀಡುತ್ತಾರೆ. ಇದರ ಜೊತೆಗೆ, ಅಲ್ಲಿನ ಪುರಸಭಾ ಸಿಬ್ಬಂದಿಗಳು ಸಹ ದೂರು ನೀಡುತ್ತಾರೆ. ಅದರಂತೆ, ಈಗ ಪೊಲೀಸರು ಆತನನ್ನು ಅರೆಸ್ಟ್ ಮಾಡಿಕೊಂಡು ಬಂದಿರುತ್ತಾರೆ.

**ಸಭಾಪತಿಯವರು:–** ಆದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ, ಪೌರಾಡಳಿತ ಇಲಾಖೆಯವರು ಏತಕ್ಕೆ suo-moto ಕೇಸ್ ದಾಖಲಿಸಿರುವುದಿಲ್ಲವೆಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುತ್ತಾರೆ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಅಮೃತಾ ಗೌಡರವರು ಪೌರಾಡಳಿತ ಇಲಾಖೆಯ ಆಯುಕ್ತರಾಗಿದ್ದು, ಅವರೇ ಈ ಪ್ರಕರಣದಲ್ಲಿ ದೂರು ನೀಡಿರುತ್ತಾರೆ. ಅದಕ್ಕಿಂತಲೂ ಬೇರೆ ಏನು ಮಾಡುವುದಕ್ಕೆ ಸಾಧ್ಯವಿದೆ?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸರ್ಕಾರವೇ suo-moto ಕೇಸ್ ಹಾಕಬೇಕಾಗಿತ್ತು.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಅವರು ಕೂಡ ಒಬ್ಬ ಸರ್ಕಾರಿ ಅಧಿಕಾರಿಯಾಗಿರುತ್ತಾರೆ. It's a common sense.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಯಾರಿಗೆ ಕಾಮನ್ ಸೆನ್ಸ್ ಇರಬೇಕು? ಸರ್ಕಾರಕ್ಕೋ ಅಥವಾ ನಮಗೋ? ಯಾರಿಗೆ ಕಾಮನ್ ಸೆನ್ಸ್ ಇರಬೇಕು? ಸರ್ಕಾರಕ್ಕೆ ಕಾಮನ್ ಸೆನ್ಸ್ ಇರಬೇಕು.

**ಸಭಾಪತಿಯವರು:–** ಮಾನ್ಯ ಭಾರತಿ ಶೆಟ್ಟಿಯವರೇ, ಮಾನ್ಯ ಸಚಿವರು ಮೊದಲು ಉತ್ತರ ನೀಡಲಿ. ದಯಮಾಡಿ, ಈಗ ತಾವು ಕುಳಿತುಕೊಳ್ಳಿ. ಈ ರೀತಿ ನಡು ನಡುವೆ ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಏನೆಂದರೆ, ನಾವು ಕಾಂಗ್ರೆಸ್ ಪಕ್ಷ. ಮಾನ್ಯ ಭಾರತಿ ಶೆಟ್ಟಿಯವರು ಬಿ.ಜೆ.ಪಿ. ಪಕ್ಷ ಎಂದು ನಾನು ಮಾತನಾಡುತ್ತಿಲ್ಲ. ಈ ಪ್ರಕರಣದಲ್ಲಿರುವ ಮಹಿಳಾ ಅಧಿಕಾರಿ ನಮಗೆ ಸಹೋದರಿ ಸಮಾನ. ಹಾಗಾಗಿ, ಘಟನೆಗೆ ಸಂಬಂಧಿಸಿದಂತೆ, ಶ್ರೀಮತಿ ಅಮೃತಾ ಗೌಡರವರು ದೂರು ನೀಡಿರುತ್ತಾರೆ. ಅದರಂತೆ, ಆರೋಪಿ ಯಾವುದೇ ಪಕ್ಷಕ್ಕೆ ಸೇರಿದ್ದರೂ ಸಹ, ಆತನನ್ನು ಬಂಧಿಸುವುದಕ್ಕಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ(ಎಸ್.ಪಿ.)ಯವರು ಈಗಾಗಲೇ ಮೂರು ಪೊಲೀಸ್ ತಂಡಗಳನ್ನು ರಚನೆ ಮಾಡಿ, ಹೊರ ರಾಜ್ಯದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ನಿನ್ನೆಯ ದಿವಸ ರಾತ್ರಿ ಅರೆಸ್ಟ್ ಮಾಡಿ, ನಮ್ಮ ರಾಜ್ಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಅದರಂತೆ, ಒಬ್ಬ ಮಹಿಳಾ ಅಧಿಕಾರಿಗೆ ಫೋನ್‌ನಲ್ಲಿ ಬೆದರಿಕೆ ಹಾಕಿದ್ದಕ್ಕೆ ಕಾನೂನಿನಲ್ಲಿ ಯಾವ ಯಾವ ಸೆಕ್ಷನ್‌ಗಳಿವೆ, ಆ ಎಲ್ಲಾ ಸೆಕ್ಷನ್‌ಗಳನ್ನು ಎಸ್.ಪಿ.ಯವರು ಹಾಕಿರುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸೆಕ್ಷನ್ 79 ಅನ್ನು ಹಾಕಬೇಕೆಂದು ಮಾನ್ಯ ನ್ಯಾಯಾಲಯ ತನ್ನ ಆದೇಶದಲ್ಲಿ ಹೇಳಿರುತ್ತದೆ. ಆದರೆ, ಸರ್ಕಾರದಿಂದ ಆ ಸೆಕ್ಷನ್ ಅನ್ನು ಹಾಕಿರುವುದಿಲ್ಲ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಸೆಕ್ಷನ್ 79 ಏನು ಹೇಳುತ್ತದೆ ಎಂಬುದನ್ನು ಅವರು ಹೇಳಲಿ.

**ಸಭಾಪತಿಯವರು:–** ಈಗ ಈ ಪ್ರಕರಣ ಮಾನ್ಯ ನ್ಯಾಯಾಲಕ್ಕೆ ಹೋಗಿರುತ್ತದೆಯಲ್ಲವೇ?

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಹೌದು. ಈ ಪ್ರಕರಣ ಈಗ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದೆ.

**ಸಭಾಪತಿಯವರು:–** ಆಯಿತು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಆದೇಶ ಬರಲಿ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, he has been arrested. He is in custody.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಹಾಗಾಗಿ, ಈ ವಿಚಾರದ ಬಗ್ಗೆ ಇಷ್ಟು ಚರ್ಚೆ ಸಾಕು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಒಂದು ನಿಮಿಷ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಇದು ಏನು ಪ್ರಶ್ನೋತ್ತರ ಅವಧಿಯೋ ಅಥವಾ ಏನು? ತಾವು ಭಾಷಣ ಮಾಡುತ್ತಿದ್ದೀರಲ್ಲಾ? ಈಗಾಗಲೇ ತಾವು ಪ್ರಶ್ನೆ ಕೇಳಲು ಶುರು ಸುಮಾರು ಹತ್ತು ಸಮಯ ಆಗಿರುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಇದೊಂದೇ ಪ್ರಕರಣದ ಬಗ್ಗೆ ಮಾತನಾಡುತ್ತಿಲ್ಲ. ನಾನು ಯಾವುದೇ ಪಾರ್ಟಿಯನ್ನು ಉಲ್ಲೇಖ ಮಾಡಿ ಮಾತನಾಡುತ್ತಿಲ್ಲ. ನಾಳೆಯ ದಿವಸ ಇದು ಆ ಪಾರ್ಟಿಗೂ ಆಗಬಹುದು ಅಥವಾ ನಮ್ಮ ಪಾರ್ಟಿಗೂ ಆಗಬಹುದು. ಅದು ಪ್ರಶ್ನೆ ಬೇರೆ. ಆದರೆ, ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ, ನನಗೆ ಅನ್ನಿಸುವ ಪ್ರಕಾರ ನಮ್ಮ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಸಿಗುತ್ತಿಲ್ಲ. ಇವೊತ್ತಿನ ದಿವಸ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮಹಿಳೆ ಆದರೂ ಕೂಡ ಅವರಿಗೆ ರಕ್ಷಣೆ ಸಿಗುತ್ತಿಲ್ಲ. ಉದಾಹರಣೆಗೆ, ಡಿ.ಜಿ.ಪಿ. ಡಾ॥ ಕೆ. ರಾಮಚಂದ್ರರಾವ್‌ರವರ ಪ್ರಕರಣವನ್ನೇ ತೆಗೆದುಕೊಳ್ಳಿ.

**ಸಭಾಪತಿಯವರು:–** ನಾನು ಹೇಳುವುದನ್ನು ತಾವು ಕೇಳಿ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಯಾವ ಪ್ರಕರಣಕ್ಕೆ ಯಾವ ಪ್ರಕರಣವನ್ನು ಸಂಬಂಧ ಮಾಡಿದರೆ ಹೇಗೆ? ಶ್ರೀಮತಿ ಅಮೃತಾ ಗೌಡರವರ ಪ್ರಕರಣಕ್ಕೂ ಡಾ॥ ಕೆ. ರಾಮಚಂದ್ರರಾವ್‌ರವರ ಪ್ರಕರಣಕ್ಕೂ ಏನು ಸಂಬಂಧ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದವರೇ, ಪ್ರಶ್ನೋತ್ತರ ಅವಧಿಯಲ್ಲಿ ಒಂದೊಂದು ಪ್ರಶ್ನೆಗೆ ಹತ್ತು ನಿಮಿಷ ಸಮಯ ತೆಗೆದುಕೊಂಡರೆ ನಾನು ಹೇಗೆ ಸದನ ನಡೆಸಬೇಕು? ದಯಮಾಡಿ, ತಾವು ಕುಳಿತುಕೊಳ್ಳಿ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ನಮ್ಮ ಮಹಿಳಾ ಅಧಿಕಾರಿಯವರ ಬಗ್ಗೆ ನಾವು ಮಾತನಾಡಬೇಕು. ಡಾ॥ ಕೆ. ರಾಮಚಂದ್ರರಾವ್‌ರವರ ವಿಚಾರ ಇಲ್ಲಿ ಏತಕ್ಕೆ ಮಾತನಾಡಬೇಕು?

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ತಾವು ಪೂರ್ತಿಯಾಗಿ ಕೇಳಿ ನಂತರ ತಾವು ಮಾತನಾಡಿ.

**ಸಭಾಪತಿಯವರು:–** ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇರುವ ಪ್ರಕರಣದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನ್ಯಾಯಾಲಯದಲ್ಲಿ ಆಗಿರುವುದನ್ನು ನ್ಯಾಯಾಲಯ ವಿಚಾರಣೆ ಮಾಡುತ್ತದೆ.

**ಸಭಾಪತಿಯವರು:–** ಕೋರ್ಟ್ ವಿಚಾರದ ಬಗ್ಗೆ ತಾವು ಇಲ್ಲಿ ಮಾತನಾಡಬೇಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಇವೊತ್ತಿನ ದಿವಸ ಡಾ॥ ಕೆ. ರಾಮಚಂದ್ರರಾವ್‌ರವರ ಕೇಸ್‌ನಲ್ಲಿ ಏನಾಯಿತು? ಈ ಹಿಂದೆ ಅವರ ಮಲಮಗಳು ಚಿನ್ನ ಕಳ್ಳಸಾಗಾಣಿಕೆ ಪ್ರಕರಣದಲ್ಲಿ ಸಿಕ್ಕಿಬಿದ್ದರು. ಆಗ ಅವರನ್ನು ಕಡ್ಡಾಯ ರಜೆ ಮೇಲೆ ಹೋಗಬೇಕೆಂದು ಸೂಚಿಸಲಾಯಿತು. ತದನಂತರ, ಅವರು ರಜೆಯಿಂದ ಬಂದ ನಂತರ, ಅವರಿಗೆ ಪ್ರಮೋಷನ್ ಆಯಿತು. ತದನಂತರ, ಅವರು ಅಶ್ಲೀಲ ವಿಡಿಯೋದ ಮುಖಾಂತರ ಸಿಕ್ಕಿಹಾಕಿಕೊಂಡಿರುತ್ತಾರೆ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಡಾ॥ ಕೆ. ರಾಮಚಂದ್ರರಾವ್‌ರವರಿಗೂ ಈ ಪ್ರಶ್ನೆಗೂ ಸಂಬಂಧ ಇಲ್ಲ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಆದರೆ, ಈ ಪ್ರಕರಣದಲ್ಲಿ ಒಬ್ಬ ಮಹಿಳಾ ಅಧಿಕಾರಿಗೆ ತೊಂದರೆಯಾಗಿದೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಮಂಜುನಾಥ್ ಭಂಡಾರಿಯವರದ್ದು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಒಂದು ನಿಮಿಷ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ತಮಗೆ ಎಷ್ಟು ಕಾಲಾವಕಾಶ ನೀಡುತ್ತಾರೆ? ತಾವು ಮಾತನಾಡಲು ಪ್ರಾರಂಭ ಮಾಡಿ ಹತ್ತು ನಿಮಿಷದ ಸಮಯ ಆಗಿರುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲ.

**ಸಭಾಪತಿಯವರು:–** ಇದೇ ರೀತಿ ಆದರೆ, ನಾನು ಪ್ರಶ್ನೋತ್ತರ ಅವಧಿಯನ್ನು 1–00 ಗಂಟೆಗೆ ಕಡಿತಗೊಳಿಸುತ್ತೇನೆ.

**ಶ್ರೀ ಸುರೇಶ್ ಬಿ.ಎಸ್.:–** ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ ಆರೋಪಿಗೆ ತಕ್ಕದಾದ ಶಿಕ್ಷೆ ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಆತನಿಗೆ ಕ್ಷಮೆ ನೀಡುವಂತಹ ಪ್ರಶ್ನೆಯೇ ಇಲ್ಲ. ಈ ಪ್ರಕರಣದಲ್ಲಿ ಪೌರಾಯುಕ್ತರಾದ ಶ್ರೀಮತಿ ಅಮೃತಾ ಗೌಡರವರು ಪಕ್ಷಾತೀತವಾಗಿ ದೂರು ನೀಡಿರುತ್ತಾರೆ. ಆದುದರಿಂದ, ಸರ್ಕಾರ ಯಾರು ಆರೋಪಿ ಇದ್ದಾನೆ, ಆತನಿಗೆ ತಕ್ಕ ಶಿಕ್ಷೆ ಕೊಡುವವರೆಗೂ ಬಿಡುವುದಿಲ್ಲ. ಹಾಗಾಗಿ, ಈ ವಿಚಾರವನ್ನು ಇಲ್ಲಿಗೆ ಬಿಡಬೇಕೆಂದು ವಿನಂತಿಸುತ್ತೇನೆ. ಈ ವಿಚಾರಕ್ಕೆ ಬೇರೆ ವಿಚಾರಕ್ಕೆ ಲಿಂಕ್ ಮಾಡಿದರೆ ಅದು ಡೈವರ್ಟ್ ಆಗುತ್ತದೆ. It's a diversion.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಆದರೆ, ಸರ್ಕಾರವೇ suo-moto ಕೇಸ್ ದಾಖಲಿಸಬೇಕೆಂದು ವಿನಂತಿ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 59**

**(ಈ ಹಂತದಲ್ಲಿ ಮಾನ್ಯ ಸದದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ: 11**

**(ಈ ಹಂತದಲ್ಲಿ ಮಾನ್ಯ ಸದದಸ್ಯರಾದ ಶ್ರೀ ಪುಟ್ಟಣ್ಣನವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ: 07**

**ಸಭಾಪತಿಯವರು:–** ಮಾನ್ಯ ತಳವಾರ್ ಸಾಬಣ್ಣನವರೇ, ತಮ್ಮ ಪ್ರಶ್ನೆ ಅರಣ್ಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(೦25) 27.01.2026 ವೈಎಲ್–ಎಕೆ 1.00 (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 91 + 86**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಮೊದಲ ಆಕ್ಷೇಪವೇನೆಂದರೆ, ಈ ವಿಚಾರವಾಗಿ ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲದೇ ಇರುವುದು,...

**ಸಭಾಪತಿಯವರು:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ತಾವು ಅದನ್ನು ಹೇಳುವುದು ಬೇಡ. ತಾವು ಪ್ರಶ್ನೆ ಕೇಳಿ, ಮಾನ್ಯ ತೋಟಗಾರಿಗೆ ಸಚಿವರು ಮಾನ್ಯ ಕೃಷಿ ಸಚಿವರಿಗೆ authority ಕೊಟ್ಟಿದ್ದಾರೆ. ನಾನು ಸಹ ಅದಕ್ಕೆ ಅನುಮತಿ ನೀಡಿದ್ದು, ತಾವು ಪ್ರಶ್ನೆ ಕೇಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ನಾನು ವಿವರಣೆಯನ್ನು ಕೇಳಬೇಕಾಗಿದೆ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರು ಸದನಕ್ಕೆ ಗೈರು ಹಾಜರಿದ್ದು, ನನ್ನ ಪರವಾಗಿ ಕೃಷಿ ಸಚಿವರು ಉತ್ತರ ನೀಡುತ್ತಾರೆ ಎಂದು ಹೇಳಿದ್ದಾರೆ. ಹಾಗಾಗಿ, ನೀವು ಪ್ರಶ್ನೆ ಕೇಳಿ. ಅದನ್ನು ಬಿಟ್ಟು ಭಾಷಣ ಮಾಡುತ್ತಿದ್ದೀರಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರೇ ಉತ್ತರ ನೀಡಲಿ. ಆದರೆ, ನನ್ನ ಅನುಭವವನ್ನು ಹೇಳುವುದೇನೆಂದರೆ, ಕಳೆದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದಾಗ ಮಾನ್ಯ ತೋಟಗಾರಿಕೆ ಸಚಿವರಿಗೆ ವಿಶೇಷ ಕಾರಣ ಇದ್ದ ಪ್ರಯುಕ್ತ ಸದನಕ್ಕೆ ಬರಲಿಲ್ಲ. ಆದರೆ, ಈ ಅಧಿವೇಶನದಲ್ಲಿಯೂ ತೋಟಗಾರಿಕೆ ಸಚಿವರು ಬರಲಿಲ್ಲ, ಏತಕ್ಕೆ?

**ಸಭಾಪತಿಯವರು:–** ಹಾಗಾದರೆ, ಮುಂಬರುವ ದಿನಗಳಲ್ಲಿ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಿದರೆ ಆಗುವುದಿಲ್ಲ.

**ಸಭಾಪತಿಯವರು:–** ಮತ್ತೆ ನಾನು ಹೇಳುವ ಮಾತನ್ನು ಕೇಳುವುದಿಲ್ಲವೆಂದರೆ ಏನು ಮಾಡಲಿ? ಸಂಬಂಧಪಟ್ಟ ಸಚಿವರೇ ತಮಗೆ ಉತ್ತರ ನೀಡಬೇಕೆಂದರೆ, ಮುಂಬರುವ ದಿನಗಳಲ್ಲಿ ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಮಾನ್ಯ ಕೃಷಿ ಸಚಿವರು ಉತ್ತರ ನೀಡುತ್ತಾರೆ ಕೇಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರೇ ಉತ್ತರ ನೀಡಲಿ ಎಂದು ಹೇಳಿದ್ದೇನೆ ಅಲ್ಲವೇ?

**ಸಭಾಪತಿಯವರು:–** ಹಾಗಾದರೆ, ಪ್ರಶ್ನೆ ಕೇಳಿ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಸುಮಾರು 20 ವರ್ಷಗಳಿಂದ ಈ ಸಮಸ್ಯೆಗಳು ಕಂಡುಬರುತ್ತಿವೆ. ನಮ್ಮ ಊರಿನಲ್ಲಿಯೇ ಆಗಲಿ, ಬೇರೆ ಕಡೆ ಆಗಲಿ. ಈ ಸದನದಲ್ಲಿಯಂತೂ ಉತ್ತರ ಸಿಗುವುದಿಲ್ಲ. ಕೊನೆ ಪಕ್ಷ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಕರಾವಳಿ ಭಾಗದ ರೈತರೊಂದಿಗೆ ಸಭೆಗಳನ್ನು ಕರೆದು, ತೋಟಗಾರಿಕೆ ಸಚಿವರು ಈವರೆವಿಗೂ ಸಭೆಗಳನ್ನು ಮಾಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಸುಮಾರು 20 ವರ್ಷಗಳಿಂದ ಇರುವಂಥ ಈ ಸಮಸ್ಯೆ ವರ್ಷಗಳಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಅವರ ಉತ್ತರದಲ್ಲಿಯೇ ಹೇಳಿರುವ ಪ್ರಕಾರ 88,559 ಹೆಕ್ಟೇರ್ ಪ್ರದೇಶಗಳಲ್ಲಿ ಎಲೆಚುಕ್ಕೆ ರೋಗವು ಕಂಡುಬಂದಿರುತ್ತದೆ. ಲಕ್ಷಾಂತರ ರೈತರ ಕುಟುಂಬಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಒಂದು ಗಂಭೀರವಾದ ಪ್ರಯತ್ನ ಸರ್ಕಾರದ ವತಿಯಿಂದ ಆಗಬೇಕು ಮತ್ತು ಉತ್ತರ ಸಿಗಬೇಕೆನ್ನುವುದು ನಮ್ಮ ಆಗ್ರಹವಾಗಿದೆ. ಅವರ ಭಾವನೆಗಳಿಗೆ ಸ್ವರ ಕೊಡುವ ದೃಷ್ಟಿಯಲ್ಲಿ ತಮ್ಮ ಮುಂದೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅಡಿಕೆ ಬೆಳೆಗಾರರಿಗೆ ಸಹಾಯಧನ ನೀಡುತ್ತಿದ್ದೇವೆ ಎನ್ನುವಂಥ ಮಾಹಿತಿ ಇದ್ದು, ಈ ಸಮಸ್ಯೆಯನ್ನು,... ಸರ್ಕಾರದ ಉತ್ತರದಲ್ಲಿ ಎಷ್ಟೆಷ್ಟು ಸಹಾಯಧನವನ್ನು ನೀಡುತ್ತಿದ್ದೇವೆ ಎಂದು ತಿಳಿಸಿದ್ದು, ಆ ಹಣ ಸಾಕಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆ. ಇದರ ಬಗ್ಗೆ ಯಾರನ್ನು ಕೇಳಬೇಕು? ಸಂಬಂಧಪಟ್ಟ ಸಚಿವರು ರೈತರ ಸಭೆಯನ್ನು ಕರೆಯಬೇಕು. ಕನಿಷ್ಠ ಪಕ್ಷ ಪೌರಾಡಳಿತ ಸಚಿವರಾದರೂ ಅಧಿವೇಶನ ನಡೆಯುವ ಸಂದರ್ಭದಲ್ಲಿ ಉತ್ತರ ನೀಡುವಾಗ ಸಭೆ ಕರೆಯುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತಾರೆ. ಆದರೆ, ಸಭೆ ಕರೆಯುತ್ತಾರೆಯೇ, ಬಿಡುತ್ತಾರೆಯೇ ಎನ್ನುವುದು ಮುಂದಿನ ಪ್ರಶ್ನೆ. ಆದರೆ, ಸಭೆ ಕರೆಯುತ್ತೇವೆ ಎನ್ನುವಂಥ ವಿಶ್ವಾಸವನ್ನಾದರೂ ಸಂಬಂಧಪಟ್ಟವರಿಗೆ ಕೊಡುತ್ತಾರೆ. ಆ ರೀತಿ ಆಯಾಯ ಏರಿಯಾಗಳಲ್ಲಿ ಸಭೆ ಕರೆದು ಅವರ ಬೇಡಿಕೆಗಳನ್ನು ಈಡೇರಿಸಬೇಕು. ಹವಾಮಾನದ ಬಗ್ಗೆ ಹೇಳಿದ್ದು, ಪಂಚಾಯಿತಿಯಿಂದ ಪಂಚಾಯಿತಿಗೆ ವ್ಯತ್ಯಾಸವಾಗಿದೆ; ಕರಾವಳಿ ಪ್ರದೇಶದಲ್ಲಿ ಈ ವರ್ಷ ಮಳೆ ಜಾಸ್ತಿಯಾಗಿದೆ ಎನ್ನುವಂಥ ವಿಚಾರವು ಇಡೀ ಲೋಕಕ್ಕೆ ಗೊತ್ತಿದೆ. ಆದರೆ, ಪರಿಹಾರ ಮೊತ್ತ ಕಡಿಮೆ ಬರುತ್ತಿದೆ. ಏತಕ್ಕೆ ಪರಿಹಾರ ಮೊತ್ತ ಕಡಿಮೆ ಬರುತ್ತಿದೆ ಎನ್ನುವಂಥ ರೈತರ ಪ್ರಶ್ನೆಗಳಿಗೆ ಉತ್ತರ ಕೊಡುವವರು ಯಾರು ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು) (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳಿದ ಹಾಗೆ ಇದು ಸುಮಾರು 20 ವರ್ಷಗಳಿಂದ ಇರುವಂಥ ಸಮಸ್ಯೆಯಾಗಿದೆ. ಇದು ಇವತ್ತಿನ ಸಮಸ್ಯೆಯಾಗಿಲ್ಲ ಎನ್ನುವುದನ್ನು ಈಗಾಗಲೇ ಮಾನ್ಯ ಸದಸ್ಯರೇ ಹೇಳಿದ್ದಾರೆ. ಇವತ್ತಿನ ದಿವಸ ಈ ವಿಚಾರವಾಗಿ ಸಾಕಷ್ಟು ಗಂಭೀರವಾದ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಮಾನ್ಯ ತೋಟಗಾರಿಕೆ ಸಚಿವರು ಈ ಸಂದರ್ಭದಲ್ಲಿಲ್ಲ. ಆದರೆ, ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿದ್ದು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ

ಗಮನಕ್ಕೂ ತಂದು, ಶಾಶ್ವತವಾಗಿ ಪರಿಹಾರ ಹುಡುಕಲು ಏನು ಸಾಧ್ಯ ಇದೆ ಎಂಬುದರ ಬಗ್ಗೆ ಸಹ ಸಾಕಷ್ಟು ಚರ್ಚೆಯಾಗಿದೆ. ಆದರೆ, ಎಲೆಚುಕ್ಕೆ ರೋಗದಿಂದ 88,559 ಹೆಕ್ಟೇರ್ ಪ್ರದೇಶವು ಬಾಧಿತವಾಗಿದ್ದು, ಇದನ್ನು ಸರಿಪಡಿಸಲು ಕೇಂದ್ರ ಸರ್ಕಾರದ M.I.D.H. (Mission for Integrated Development of Horticulture) ಮಾರ್ಗಸೂಚಿಯನ್ವಯ ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಗಳು ಇದೆಲ್ಲದರ ಬಗ್ಗೆ ವರದಿಯನ್ನು ತಯಾರು ಮಾಡಿ, ರೂ.57,776.33 ಲಕ್ಷಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಎರಡೂ ಷೇರನ್ನು ಸಹ ಬಿಡುಗಡೆಗೊಳ್ಳಿಸಿ, ಈ ರೋಗವನ್ನು ಸಂಪೂರ್ಣವಾಗಿ ಪರಿಹಾರ ಮಾಡಬೇಕು. ಅದನ್ನು ಹೊರತುಪಡಿಸಿ, ಕರಪತ್ರಗಳ ಮೂಲಕ ಆ ಭಾಗದ ರೈತರಿಗೆ ಹಸಿರೆಲೆ ಗೊಬ್ಬರ ಮತ್ತು ರಸ ಗೊಬ್ಬರದ ಬಳಕೆ, ಪೋಷಕಾಂಶದ ನಿರ್ವಹಣೆ ಇವುಗಳ ವ್ಯತ್ಯಾಸಗಳಿಂದ ಆಗುತ್ತಿದ್ದು, ಅದನ್ನು ಸಹ ಸರಿಪಡಿಸಿಕೊಳ್ಳುವ ಬಗ್ಗೆ ಸಾಕಷ್ಟು ರೈತರ ಗಮನಕ್ಕೆ ತರಲಾಗುತ್ತಿದೆ. ರೈತರ ಬೇಡಿಕೆಯಂತೆ ವಿಮಾ ಮೊತ್ತದಲ್ಲಿ ರೂ.47,254.13 ಲಕ್ಷ ಪರಿಹಾರ ಸಿಕ್ಕಿದೆ. 3,65,920 ಅಡಿಕೆ ಫಲಾನುಭವಿಗಳಿಗೆ ಪರಿಹಾರ ತಲುಪಿದೆ. ತುಮಕೂರು ಭಾಗದ ಮಾನ್ಯ ಸದಸ್ಯರು ಹೇಳಿದ ಹಾಗೆ ತೆಂಗಿನ ಗಿಡ ಹಾಗೂ ಅಡಿಕೆ ಗಿಡಕ್ಕೂ ವ್ಯತ್ಯಾಸ ಇದ್ದು, ಅಡಿಕೆ ಗಿಡಕ್ಕೆ ವಿಮಾ ಮೊತ್ತ ಬರುವುದರಿಂದ ಮಾನ್ಯ ಸದಸ್ಯರ ಸಲಹೆಯಂತೆ ಮಾನ್ಯ ತೋಟಗಾರಿಕೆ ಸಚಿವರು ಬಂದ ತಕ್ಷಣ ಶಿವಮೊಗ್ಗದಲ್ಲಿ ಸಂಬಂಧಪಟ್ಟ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ಕರೆಸಿ, ಸಭೆ ಹಮ್ಮಿಕೊಂಡು ಎಲ್ಲರ ಸಲಹೆಯನ್ನು ಪಡೆದು, ಇನ್ನೂ ಹೆಚ್ಚಿನ ರೀತಿಯಲ್ಲಿ ಗಂಭೀರವಾಗಿ ಏನೇನು ಕ್ರಮ ಕೈಗೊಳ್ಳಲು ಸಾಧ್ಯ ಇದೆ, ಅದನ್ನು ತೆಗೆದುಕೊಳ್ಳುವಂತೆ ವಿನಂತಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಎರಡು–ಮೂರು ಭಾಗಗಳಲ್ಲಿ ಕ್ರಮಕೈಗೊಳ್ಳಬೇಕು.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ತುಂಬಾ ಮಂದಿ ಸದಸ್ಯರು ಅಡಿಕೆ ಬೆಳೆಗಾರರ ವಿಚಾರವಾಗಿ ಪ್ರಸ್ತಾಪ ಮಾಡಲು ಈ ಸದನದಲ್ಲಿಯೇ ಇರುವುದರಿಂದ ನಿಯಮ 330 ರಡಿ ಈ ವಿಚಾರವಾಗಿ ಚರ್ಚಿಸಲು ಅವಕಾಶ ಕಲ್ಪಿಸಬೇಕಾಗಿ ವಿನಂತಿಸುತ್ತೇನೆ.

**ಸಭಾಪತಿಯವರು:–** ನಿಯಮ 330 ರಡಿ ಚರ್ಚಿಸಲು ಅವಕಾಶಕ್ಕಾಗಿ ಬರೆದು ಕಳುಹಿಸಿಕೊಡಿ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಇಬ್ಬರೂ ಈ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅಡಿಕೆ ಬೆಳೆಗೆ ಬರುವ ಈ ರೋಗವು ಮಲೆನಾಡು ಪ್ರದೇಶವಾದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಹೆಚ್ಚಾಗಿ ಕಂಡುಬರುತ್ತಿದೆ. ಈ ಮೂರು ಜಿಲ್ಲೆಗಳಲ್ಲಿ ಬಹಳ ವೇಗವಾಗಿ ಬೆಳೆಯುತ್ತಿರುವಂಥ ರೋಗವಾಗಿದ್ದು, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಈ ಸಂಬಂಧ

ವಿಶೇಷವಾಗಿ ಒಂದು ಸಭೆಯನ್ನು ಕರೆದು, ಇದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಚರ್ಚೆ ಮಾಡಿದ್ದೆವು. ಬಹಳಷ್ಟು ಪರಿಹಾರ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇಡೀ ದೇಶದಲ್ಲಿ ಈ ರೋಗ ಹರಡುತ್ತಿರುವುದನ್ನು ನೋಡಿದಾಗ 1950ನೇ ಇಸವಿಯಲ್ಲಿ ಇಡೀ ದೇಶದಲ್ಲಿ ಶೇಕಡ 0.271 ಹೆಕ್ಟೇರ್ ಪ್ರದೇಶಕ್ಕೆ ಈ ರೋಗ ಹರಡಿದ್ದು, 2022-23ನೇ ಸಾಲಿನಲ್ಲಿ ಶೇಕಡ 0.938 ಹೆಕ್ಟೇರ್ ಪ್ರದೇಶಗಳಿಗೆ ಈ ರೋಗವು ಹರಡಿದೆ. ಆದರೆ, ಇಡೀ ದೇಶ ಒಳಗೊಂಡಂತೆ ಕರ್ನಾಟಕದಲ್ಲಿಯೇ ಅತೀ ಹೆಚ್ಚಾಗಿ ಈ ರೋಗ ಹರಡುತ್ತಿದೆ. 1950ನೇ ಇಸವಿಯಲ್ಲಿ ಕರ್ನಾಟಕದಲ್ಲಿ 0.105 ಹೆಕ್ಟೇರ್ ಪ್ರದೇಶದಲ್ಲಿ ಈ ರೋಗ ಹರಡಿದರೆ, 2022-23ನೇ ಸಾಲಿನಲ್ಲಿ ಶೇಕಡ 0.674 ಹೆಕ್ಟೇರ್ ಪ್ರದೇಶದಲ್ಲಿ ಈ ರೋಗವು ಹರಡಿದೆ. ಈ ಸಂಬಂಧ ತಜ್ಞರೆಲ್ಲರೂ ಸೇರಿ ಯಾವ ರೀತಿ ವರದಿಯನ್ನು ಕೊಡುತ್ತಿದ್ದಾರೆ ಎಂದರೆ, 2030ನೇ ಇಸವಿಗೆ ಕೇವಲ ಕರ್ನಾಟಕದಲ್ಲಿಯೇ ಸುಮಾರು ಶೇ. 15.0 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಈ ರೋಗ ಹರಡುತ್ತದೆ ಎನ್ನುವಂಥ ವರದಿಯನ್ನು ಕೊಟ್ಟಿದ್ದಾರೆ. ಇಡೀ ದೇಶದಲ್ಲಿ 2017-18 ರಿಂದ 2022-23ನೇ ಸಾಲಿನವರೆಗೂ ಶೇಕಡ 4.33 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಈ ರೋಗ ಹರಡಿದರೆ, ಕರ್ನಾಟಕದಲ್ಲಿಯೇ ಶೇಕಡ 3.95 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈ ರೋಗ ಹರಡುತ್ತದೆ. ಈ ರೀತಿಯಾಗಿ ವೇಗವಾಗಿ ಬೆಳೆಯುತ್ತಿರುವಂಥ ರೋಗಗಳಿಗೆ,...

**ಸಭಾಪತಿಯವರು:-** ಮಾನ್ಯ ಬಲ್ಕೀಸ್ ಬಾನುರವರೇ, ಏನಾಗಬೇಕು ಅದನ್ನು ಹೇಳಿ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಒಂದು ಕಡೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಿಂದ ರೈತರಿಗೆ ಸರಿಯಾಗಿ ವಿಮಾ ಮೊತ್ತ ಸಿಗುತ್ತಿಲ್ಲ. ಏತಕ್ಕಾಗಿ ವಿಮಾ ಮೊತ್ತ ಸಿಗುತ್ತಿಲ್ಲವೆಂದರೆ, ಮಳೆಯ ಮಾಪನ ಕೇಂದ್ರದವರು ಅಳತೆ ಮಾಡುವಾಗ ಪಂಚಾಯತ್ ಕಟ್ಟಡದ ಮೇಲೆ ಅಳತೆ ಮಾಡಿದ್ದಾರೆ. ಪಂಚಾಯತ್ ಕಟ್ಟಡದ ಮೇಲೆ ಮಳೆ ಬರುತ್ತದೆ ಎಂದು ಛಾವಣಿ ಅಳವಡಿಸಿದ್ದು, ಅಲ್ಲಿ ಸರಿಯಾದ ರೀತಿಯಲ್ಲಿ ಮಳೆ ಮಾಪನ ಕೇಂದ್ರದವರು ಅಳತೆ ಮಾಡಲು ಆಗುತ್ತಿಲ್ಲ. ಆದ್ದರಿಂದ ಸರಿಯಾದ ರೀತಿ ವಿಮಾ ಮೊತ್ತ ಸಿಗುತ್ತಿಲ್ಲ. ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ ಎಂಬುದನ್ನು ಸಹ ಸರಿಯಾಗಿ ಹೇಳಲು ಆಗುತ್ತಿಲ್ಲ. ಒಂದು ಕಡೆ ಬೆಳೆ ನಷ್ಟವಾದರೆ, ಮತ್ತೊಂದು ಕಡೆ ಇಳುವರಿ ನಷ್ಟವಾಗಿದೆ. ಇವೆರಡೂ ಕಾರಣದಿಂದಾಗಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಜನರು ತತ್ತರಿಸಿ ಹೋಗಿದ್ದಾರೆ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಈ ಸಂಬಂಧ ವಿಶೇಷವಾಗಿ ತಂಡವನ್ನು ರಚಿಸಬೇಕು. ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯಧನ ಬರಬೇಕಾಗಿರುವುದರಿಂದ, ಸದನದ ಮೂಲಕ ಕೇಂದ್ರ ಸರ್ಕಾರದವರಿಗೆ ಹೆಚ್ಚಿನ ಸಹಾಯಧನಕ್ಕಾಗಿ ಮನವಿ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಳೆಯ ಮಾಪನ ಕೇಂದ್ರಗಳು ಹಾಳಾಗಿರುವುದು ನನ್ನ ಗಮನಕ್ಕೂ ಬಂದಿದೆ. ಮಾನ್ಯ ಕಂದಾಯ ಸಚಿವರು ಈಗಾಗಲೇ ಈ ಸಂಬಂಧ

ಚರ್ಚಿಸಿದ್ದು, ಮೂರು ಸಾವಿರಗಳಷ್ಟು ಹೊಸದಾದ ಮಳೆ ಮಾಪನ ಕೇಂದ್ರವನ್ನು ಅಳವಡಿಸಬೇಕೆಂದು ಟೆಂಡರ್ ಕರೆದು ಕ್ರಮಕೈಗೊಳ್ಳಲಾಗಿದೆ. ಜೊತೆಗೆ ಮಾನ್ಯ ಬಲ್ಕೀಸ್ ಬಾನುರವರು ಹೇಳಿದ ಹಾಗೆ ತಜ್ಞರ ಸಮಿತಿಯನ್ನು ರಚನೆ ಮಾಡಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾಲ್ಕೈದು ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವಂಥ ಅಡಿಕೆ ಬೆಳೆಗಾರರು ಬಹಳಷ್ಟು ನಷ್ಟವನ್ನು ಅನುಭವಿಸಿದ್ದಾರೆ. ವಿಮಾ ಮೊತ್ತವು ಎಲ್ಲಾ ಜಿಲ್ಲೆಗಳಲ್ಲಿ ವಿತರಣೆಯಾಗಿದ್ದು, ಕಾರವಾರದಲ್ಲಿ ಮಾತ್ರ ವಿಮಾ ಕಂಪನಿಯ ವ್ಯತ್ಯಾಸದಿಂದಾಗಿ ವಿಮಾ ಮೊತ್ತ ವಿತರಣೆಯಾಗಿಲ್ಲ. ಆದಷ್ಟು ಬೇಗ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಕಾರ್ಯದರ್ಶಿಯವರಿಗೆ ಜಿಲ್ಲಾಧಿಕಾರಿಯವರೊಂದಿಗೆ ಸಭೆ ಮಾಡಿ, ವಿಮಾ ಮೊತ್ತವನ್ನು ಭರಿಸಬೇಕೆಂದು ಸೂಚನೆಯನ್ನು ನೀಡಿದ್ದೇವೆ. ಜೊತೆಗೆ ಇನ್ನೂ ಸ್ವಲ್ಪ ಹೆಚ್ಚಿನ ಕ್ರಮವನ್ನು ಮತ್ತು ತಜ್ಞರ ಸಮಿತಿಗಳ ವರದಿಯನ್ನು ಕಾರ್ಯಗತಗೊಳಸುವುದರ ಬಗ್ಗೆ ಸರ್ಕಾರವು ಗಂಭೀರವಾಗಿ ಕ್ರಮಕೈಗೊಳ್ಳುತ್ತದೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿಯವರನ್ನು ಸೇರಿಸಿಕೊಂಡು, war footing ನಲ್ಲಿ ಪ್ರಚಾರ ಮಾಡಬೇಕು.

**(ಮುಂದು)**

**(26) 27.01.2026/1.10/ ಎಸ್‌ಕೆ.ಆರ್‌ಎನ್** **ಸಭಾಪತಿಯವರ ಉಪಸ್ಥಿತಿ**

**ಶ್ರೀಮತಿ ಬಲ್ಕೀಸ್ ಬಾನು (ಮುಂದು)**

ರೈತರು ಇದನ್ನು ಯಾವ ರೀತಿ ತಡೆಗಟ್ಟಬೇಕು. ಒಂದು ಕಡೆ ಔಷಧಿ ಎಂದರೆ precautionary measures ಏನು ಕೊಡಬೇಕು? ಅದನ್ನು ಕೂಡ ಒಂದು ಪ್ರಚಾರದಲ್ಲಿ ಮಾಡಬೇಕೆಂಬ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಎನ್. ಚಲುವರಾಯ ಸ್ವಾಮಿ (ಕೃಷಿ ಸಚಿವರು) (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರ ಪರವಾಗಿ):-** ಆಯಿತು.

**ಪ್ರಶ್ನೆ ಸಂಖ್ಯೆ: 70**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ಅದರೂ ಕೂಡ ಈ ಪ್ರಶ್ನೆಗಳ ಜೊತೆಗೆ ನಾನು ಇನ್ನೊಂದು ಉಪ ಪ್ರಶ್ನೆಯನ್ನು ಕೇಳಬಯಸುವುದೇನೆಂದರೆ, ಬೆಂಗಳೂರು, ತುಮಕೂರು, ಮಂಡ್ಯ ಮತ್ತು ಮೈಸೂರು ಹಲವಾರು ಭಾಗಗಳಲ್ಲಿ ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವಂತಹ ನೌಕರರನ್ನು ನಾನು ನೋಡಿದ್ದೇನೆ. ಈ ಹಲವಾರು ಫ್ಯಾಕ್ಟರಿಗಳಲ್ಲಿ ನೌಕರರು ಕೆಲಸ ಮಾಡುವಂತಹ ಸ್ಥಳದಲ್ಲಿ ಈಗಲೂ ಕೂಡ ಅವರಿಗೆ ಸರಿಯಾಗಿ ವೇತನ ಕೊಡದೇ ಇರುವಂತಹದ್ದು ಮತ್ತು ಹಳೆಯ ಕನಿಷ್ಟ ವೇತನವನ್ನು ಕೊಡುವಂತಹದ್ದು. ಅವರಿಗೆ ದೀರ್ಘಕಾಲವಾಗಿ ಕೆಲಸ ಮಾಡಿಸುವಂತಹದ್ದು. ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ವಿಶೇಷವಾಗಿ ಕೆಲಸ ಮಾಡುವಂತಹ ಹೆಣ್ಣು ಮಕ್ಕಳಿಗೆ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಕುಡಿಯುವ ನೀರಿನ ಕೊರತೆ ಇರುವಂತಹದ್ದು. ಈ ವಿಷಯದ ಕುರಿತಾಗಿ, ಇಲಾಖೆಯ ವತಿಯಿಂದ ಅವರಿಗೆ ಸರಿಯಾದ ರೀತಿಯಲ್ಲಿ ಮೂಲಸೌಲಭ್ಯವನ್ನು ಮಾಡುವಂತಹ ಕೆಲಸವಾಗಬೇಕಾಗುತ್ತದೆ. ಇ.ಎಸ್.ಐ., ಪಿ.ಎಫ್., Insurance ಕೊಡುವ ಬಗ್ಗೆ ಅವರಿಗೆ ವಿಳಂಬ ಆಗಿರುವಂತಹದ್ದು. ಇವೆಲ್ಲವುಗಳ ಜೊತೆಗೆ ಕೆಲವು Washing units ಮತ್ತು Dying units ಈಗಾಗಲೇ ಮುಚ್ಚಿರುವಂತಹದ್ದು. ಇದಕ್ಕೆ ಕಾರಣವೇನೆಂದರೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಇದಕ್ಕೆ ಬೇಗ ಅನುಮತಿ ಸಿಗುತ್ತಿಲ್ಲ. ಹಾಗಾಗಿ ಹಲವಾರು ಯೂನಿಟ್‌ಗಳು ಬಂದ್ ಆಗಿರುವಂತಹ ಸಂದರ್ಭದಲ್ಲಿ ಅಲ್ಲಿರುವ ನೌಕರರು ನಿರುದ್ಯೋಗ ಸಮಸ್ಯೆಗೆ ಒಳಗಾಗುವಂತಹದ್ದನ್ನು ನೋಡುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಿ ಕ್ರಮ ಕೈಗೊಳ್ಳಬೇಕು ಎನ್ನುವ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. "ಪ್ರಧಾನ ಮಂತ್ರಿ ಮಿತ್ರ" ಯೋಜನೆಯಲ್ಲಿ ಜವಳಿ ಪಾರ್ಕ್‌ಗಳನ್ನು ಬಹಳ ದೊಡ್ಡದಾಗಿ ಮಾಡಬೇಕೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಪ್ರಗತಿ ಪರವಾದ ಕರ್ನಾಟಕ ರಾಜ್ಯದಲ್ಲಿ "ಜವಳಿ ನಿಧಿ" ಯೋಜನೆಯನ್ನು ತಂದಿದ್ದಾರೆ. 2025 ರಿಂದ 2030ರವರೆಗೆ 2 ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಯೋಜನೆಯನ್ನು ತಂದಿರುವುದು ಸ್ವಾಗತಾರ್ಹವಾದ ಕ್ರಮ. ಅವುಗಳು ಬಜೆಟ್ ಕಾಗದದಲ್ಲಿ ಇರಬಾರದು. ಅವು ಅನುಷ್ಠಾನವಾಗಿ ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿಯನ್ನು ಮಾಡುತ್ತೇನೆ. ಎಲೆಕ್ಟ್ರಿಕಲ್ ವಿಚಾರದ ಬಗ್ಗೆ ನೋಡುವುದಾದರೆ, ಬಹಳಷ್ಟು ಸಬ್ಸಿಡಿಗಳನ್ನು ಕೊಟ್ಟಿದ್ದಾರೆ. ಆ ಸಬ್ಸಿಡಿ ಕೊಟ್ಟಿರುವುದು ಉತ್ತೇಜನಕಾರಿಯಾಗಿದ್ದರೂ ಕೂಡ, ಇಲ್ಲಿ ವಿಚಾರ

ಬಂದಿರುವುದೇನೆಂದರೆ, ಕೈಮಗ್ಗದಲ್ಲಿ ಕೆಲಸ ಮಾಡುವಂತಹವರಿಗೆ ಏನಾಗಿದೆ ಎಂದರೆ, ಈಗ ಅವರು ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ನೇಕಾರಿಕೆ ಕೆಲಸಗಳನ್ನು ಮಾಡುವಂತಹರಿಗೆ competition ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತು hand embroidery ಮತ್ತು handloom ಕೆಲಸ ಮಾಡುವಂತಹರಿಗೆ ಆಗುತ್ತಿಲ್ಲ. ಮಾನ್ಯ ಸಚಿವರು ಅವರ ಬಗ್ಗೆ ಸ್ವಲ್ಪ ಕಾಳಜಿಯನ್ನು ವಹಿಸಿಕೊಡುವ ಕೆಲಸವನ್ನು ಮಾಡಿದರೆ, ಈ ಒಂದು ನಿರುದ್ಯೋಗ ಸಮಸ್ಯೆ ಮತ್ತು ನೇಕಾರರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕೆಂದು ನಾನು ತಮ್ಮ ಮೂಲಕ ಅವರಿಗೆ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾನು ಸವಿಸ್ತಾರವಾಗಿ ಉತ್ತರವನ್ನು ನೀಡಿದ್ದೇನೆ. ಬೇರೆ ರಾಜ್ಯಗಳಿಗಿಂತ ಈಗಾಗಲೇ ಕರ್ನಾಟಕ ರಾಜ್ಯ ಜವಳಿ ನೀತಿಯಲ್ಲಿ ಬಹಳಷ್ಟು ಮಾದರಿ ರೀತಿಯಲ್ಲಿ ಕಾರ್ಯನಿರ್ವಹಿಸಿದೆ ಎಂಬ ಬಗ್ಗೆ ಮಾಹಿತಿಯನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳ ಬಗ್ಗೆ quote ಮಾಡಿದ್ದಾರೆ. ಆ ರಾಜ್ಯಗಳಿಗಿಂತಲೂ ನಾವು ಒಳ್ಳೆಯ ಜವಳಿ ನೀತಿಯನ್ನು ಜಾರಿಗೆ ತಂದಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ಕೊಡಬಯಸುತ್ತೇನೆ. 2004 ರಿಂದ ಜವಳಿ ನೀತಿ ಪ್ರಾರಂಭವಾಗಿತ್ತು. 2008–2013 ರಲ್ಲಿ ಜವಳಿ ನೀತಿಗೆ ಹಿಂದಿನ ಸರ್ಕಾರ ಕೂಡ 145 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಕೊಟ್ಟು, ಜವಳಿ ನೀತಿಗೆ ಉತ್ತೇಜನ ನೀಡಲಾಗುತ್ತಿದೆ. ಅದರಲ್ಲಿ 10 ಸಾವಿರ ಜನರಿಗೆ ಉದ್ಯೋಗ ಕೊಡಬೇಕು ಮತ್ತು investment ಗೂ ಕೂಡ ಪ್ರೋತ್ಸಾಹ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಆಗ 5,710 ಕೋಟಿ ರೂಪಾಯಿಗಳಷ್ಟು investment ಕೂಡ ಆಗಿದೆ. ಹಿಂದಿನ ಸರ್ಕಾರ 145 ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು. ನಮ್ಮ ಸರ್ಕಾರ 2013 ಮತ್ತು 2018ರಲ್ಲಿ 691 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೊಟ್ಟಿರುವ ಬಗ್ಗೆ ಮಾಹಿತಿಯನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ. 2019 ರಿಂದ 2024ರಲ್ಲಿ 954 ಕೋಟಿ ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಟ್ಟಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ಅತಿ ಹೆಚ್ಚಿನದಾಗಿ ಸಬ್ಸಿಡಿ ಕೊಟ್ಟಿರುವಂತಹ ರಾಜ್ಯ ನಮ್ಮದಾಗಿದೆ. ಮಾನ್ಯ ಸದಸ್ಯರು ಕೈಮಗ್ಗ ನೇಕಾರರ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕೈಮಗ್ಗ ನೇಕಾರರಿಗೂ ಕೂಡ 1 ಹೆಚ್.ಪಿ., ಯಿಂದ 10 ಹೆಚ್.ಪಿ., ವರೆಗೂ ಉಚಿತವಾಗಿ ವಿದ್ಯುತ್‌ನ್ನು ಕೊಟ್ಟಿರುವಂತಹದ್ದು ಯಾವುದಾದರೂ ಸರ್ಕಾರವಿದ್ದರೆ, ಅದು ನಮ್ಮ ಸನ್ಮಾನ್ಯ ಸಿದ್ಧರಾಮ್ಯನವರ ಸರ್ಕಾರ. 1 ಹೆಚ್.ಪಿ., ಯಿಂದ 10 ಹೆಚ್.ಪಿ., ವಿದ್ಯುತ್‌ನ್ನು ಕೊಟ್ಟ ನಂತರ 10 ಹೆಚ್.ಪಿ., ಯಿಂದ 20 ಹೆಚ್.ಪಿ., ವರೆಗೂ ಬೇಡಿಕೆಯನ್ನು ಇಟ್ಟರು. ಬೇರೆ ರಾಜ್ಯಗಳಲ್ಲಿ ಪ್ರತಿ

ಯೂನಿಟ್‌ಗೆ 5 ರೂಪಾಯಿಗಳಿದ್ದರೆ, ನಮ್ಮ ರಾಜ್ಯದಲ್ಲಿ ಪ್ರತಿ ಯೂನಿಟ್‌ಗೆ 1 ರೂಪಾಯಿ 25 ಪೈಸೆಯನ್ನು ಕೊಟ್ಟಿದ್ದೇವೆ. ಈ ರೀತಿಯ ಅನೇಕ ಪ್ರೋತ್ಸಾಹಗಳನ್ನು ಇವತ್ತು ಈ ನೂತನ ಜವಳಿ ನೀತಿಯಲ್ಲಿ ತಂದಿದ್ದೇವೆ. ಈ ಹೊಸ ನೀತಿ ಒಂದು ವರ್ಷದ ಹಿಂದೆ ತರಬೇಕಾಗಿತ್ತು. ಕಳೆದ ಮೂರು ಜವಳಿ ನೀತಿಗಳಲ್ಲಿ ಏನೇನು ಆಗಿದೆ, ಆಗಿಲ್ಲ ಎಂಬ ಬಗ್ಗೆ ವಿಮರ್ಶೆ ಮಾಡಿದಾಗ, ಅದರ ಜೊತೆಗೆ ಅನೇಕ ಜನ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದರು. ಅವರೆಲ್ಲರನ್ನು ಕರೆಯಿಸಿ, ಒಂದು ಸಭೆ ಮಾಡಿ, ಈಗ ಹೊಸ ಜವಳಿ ನೀತಿಯನ್ನು ಅತಿ ಶೀಘ್ರದಲ್ಲಿ ಘೋಷಣೆ ಮಾಡುತ್ತೇವೆ. ಅದರಲ್ಲಿ ಕೈಮಗ್ಗ ನೇಕಾರರಿಗೆ ಅನುಕೂಲವಾಗುತ್ತದೆ. ಇನ್ನೊಂದು ವಿಷಯ ದೊಡ್ಡ ದೊಡ್ಡ mega Industries ನಲ್ಲಿ ಹೆಣ್ಣು ಮಕ್ಕಳು ಕಾರ್ಮಿಕರಾಗಿ ಕೆಲಸ ಮಾಡುತ್ತಾರೋ, ಅವರಿಗೆ ನಾವು ರೂ.2,000 ಗಳಿಂದ 3,000 ಗಳವರೆಗೆ incentive ಕೊಡುತ್ತೇವೆ. ಆ ಕಾರ್ಖಾನೆಗಳು ಅವರಿಗೆ ರೂ. 12,000/- ರಿಂದ 15,000/- ಗಳವರೆಗೆ ಸಂಬಳವನ್ನು ಕೊಡುತ್ತಾರೆ. ಆ ಸಂಬಳವನ್ನು ಹೊರತುಪಡಿಸಿ ಇನ್ನುಳಿದ್ದನ್ನು ಸರ್ಕಾರ ಕೊಡುತ್ತದೆ. "ನೇಕಾರ ಸಮ್ಮಾನ್ ಯೋಜನೆ"ಯಲ್ಲಿ ಮೊದಲು ರೂ. 2,500 ಕೊಡುವಂತಹದ್ದನ್ನು ಈಗ ರೂ. 5,000/- ಗಳವರೆಗೆ ಹೆಚ್ಚಿಸಿದ್ದೇವೆ. ಹೊಸ ಜವಳಿ ನೀತಿಯಲ್ಲಿ ಅದನ್ನು ಕೂಡ ಹೆಚ್ಚಿಗೆ ಮಾಡುವಂತಹ ಪ್ರಸ್ತಾವನೆಯನ್ನು ಕೂಡ ಮಾಡುತ್ತಿದ್ದೇವೆ. ಇದೆಲ್ಲವನ್ನೂ ಜವಳಿ ನೀತಿಯಲ್ಲಿ ಮಾಡಿದ್ದೇವೆ. ಇದರಲ್ಲಿ ಇನ್ನೂ ಏನಾದರೂ ಮಾಡುವಂತಹದ್ದರ ಬಗ್ಗೆ ಮಾನ್ಯ ಸದಸ್ಯರ ಸಲಹೆಗಳನ್ನು ತೆಗೆದುಕೊಂಡು, ಅದರಲ್ಲಿ ಅಳವಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 77**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಉಮಾಶ್ರೀ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ರಾಜ್ಯದಲ್ಲಿ ಈಗಾಗಲೇ "ಇನ್ವೆಸ್ಟ್ ಕರ್ನಾಟಕ 2025" ಅನ್ನು ಮಾಡಿದ್ದಾರೆ. ಅದರಲ್ಲಿ ಸುಮಾರು 98 ಕಂಪನಿಗಳ ಜೊತೆ ಒಡಂಬಡಿಕೆಯನ್ನು ಕೂಡ ಮಾಡಿಕೊಂಡಿದ್ದೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದು ಬಹಳ ಸಂತೋಷದ ವಿಷಯ. "ಇನ್ವೆಸ್ಟ್ ಕರ್ನಾಟಕ 2022" ರಲ್ಲಿ ಸುಮಾರು 57 ಕಂಪನಿಗಳಿಗೆ ಬಂಡವಾಳ ಹೂಡುವುದಕ್ಕೆ ಒಪ್ಪಂದ ಮಾಡಿಕೊಂಡು ಸಹಿ ಮಾಡಿದೆ. 20 ಯೋಜನೆಗಳಿಗೆ ರಾಜ್ಯ ಮಟ್ಟದ ಒಪ್ಪಿಗೆ ನೀಡಿ ಅನುಮೋದನೆ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಹೇಳುತ್ತಾರೆ.

ಮಾನ್ಯ ಸಭಾಪತಿಯವರೇ, ಈ ಇಲಾಖೆಯ ಸಚಿವರಾಗಿ ಬಂದ ಮೇಲೆ completely digitalize ಆಗಿರುವಂತಹದ್ದು. ಏಕಗವಾಕ್ಷಿ ಪದ್ಧತಿ ಬಂದಿರುವಂತಹದ್ದನ್ನು ನಾವು ಕೇಳಿದ್ದೇವೆ. ಸುಮಾರು 150 ಸೇವೆಗಳನ್ನು ಅದರ ಮೂಲಕ ಕೊಡುತ್ತಾರೆ. ಅದರ ಮೂಲಕ 30 ಇಲಾಖೆಗಳು ಇತ್ಯಾದಿ ಭಾಗವಹಿಸುತ್ತದೆ. ಅದರೂ ಸಹ ಸುಮಾರು 37 ಸಂಸ್ಥೆಗಳಿಗೆ ಒಪ್ಪಿಗೆ ಸಿಕ್ಕಿಲ್ಲ. ಅದು ಏತಕ್ಕೆ ಈ ರೀತಿಯಾಗುತ್ತಿದೆ? ಸಮಿತಿಗಳ ಮುಂದೆ ಅವರ ಅರ್ಜಿಗಳು ಬಾಕಿಯಿದ್ದಾವೆಯೋ ಅಥವಾ ಅವರು ಅರ್ಜಿಗಳು ಹಾಕಿಲ್ಲವೋ, ಯಾವ ಕಾರಣಕ್ಕೆ ಇವುಗಳೆಲ್ಲ ಸ್ಥಗಿತವಾಗಿದೆ ಅಥವಾ ಅನುಮತಿ ಪಡೆದಿಲ್ಲ ಎನ್ನುವುದು ಮೊದಲನೆಯದು. ಯಾವ ಯಾವ ಜಿಲ್ಲೆಗಳಲ್ಲಿ ಯಾವ್ಯಾವ ಕಂಪನಿಗಳು ಇನ್ವೆಸ್ಟ್ ಕರ್ನಾಟಕ 2022 ರ ಒಡಂಬಡಿಕೆಯ ಪ್ರಕಾರ ಆಗಿದೆ ಎನ್ನುವಂತಹ ಮಾಹಿತಿ ಬೇಕು. ಈ ಮಾಹಿತಿಯನ್ನು ನಾನು ಏತಕ್ಕೆ ಕೇಳುತ್ತಿದ್ದೇನೆಂದರೆ, ನಮ್ಮ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಭಾಗಗಳನ್ನು ಸಮತೋಲನವನ್ನು ಕಾಪಾಡಿಕೊಂಡಿದ್ದಾರೋ, ಇಲ್ಲವೋ ಮತ್ತು ಅಲ್ಲಿ ಕೂಡ investments ಬರಬೇಕಾಗಿದೆ ಎನ್ನುವಂತಹದ್ದು. ಈಗ ನಾನು ನೋಡಿರುವ ಪ್ರಕಾರ "ಇನ್ವೆಸ್ಟ್ ಕರ್ನಾಟಕ 2025" ರಲ್ಲಿ ಸ್ವಲ್ಪ ಮಟ್ಟಿಗೆ ಉತ್ತರ ಕರ್ನಾಟಕ ಮತ್ತು ಹೈದರಬಾದ್ ಕರ್ನಾಟಕ ಭಾಗದಲ್ಲಿ ಕೆಲವೊಂದು investments ಮಾನ್ಯ ಸಚಿವರ ನೇತೃತ್ವದಲ್ಲಿ ಬಂದಿದೆ. 2022ರಲ್ಲಿ ಏತಕ್ಕೆ ಅನುಮತಿ ಸಿಗುತ್ತಿಲ್ಲ? ಬೃಹತ್ ಕೈಗಾರಿಕೆಗಳು ಬರಬೇಕೆಂದರೆ, ಕನಿಷ್ಟ ಐದು ವರ್ಷಗಳು ಬೇಕಾಗುತ್ತದೆ. ಅದು 2022 ನೇ ಇಸವಿಯಲ್ಲಿ ಆಗಿದ್ದು, ಈಗಾಗಲೇ 2026ರ ಇಸವಿಯಲ್ಲಿದ್ದೇವೆ. ಅದರಲ್ಲಿ ಅಷ್ಟೊಂದು ಪೆಂಡಿಂಗ್ ಉಳಿದಿದೆ. ಅದರಲ್ಲಿ ಏತಕ್ಕೆ ಉಳಿದಿವೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತಸೌಲಭ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ನಾನು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದೇನೆ. ಇದರಲ್ಲಿ ಎರಡು ಭಾಗಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಇತ್ತೀಚಿನ "ಇನ್ವೆಸ್ಟ್

ಕರ್ನಾಟಕ 2025" ರ ಬಗ್ಗೆ ಕೇಳಿದ್ದಾರೆ. ಈ ವಿಷಯದ ಕುರಿತಾಗಿ, ನಾನು ಎಲ್ಲಾ ವೇದಿಕೆಯಲ್ಲಿ ಹೇಳಿದ್ದೇನೆ. ನಾನು ಈ ಸದನದಲ್ಲಿ ಕೂಡ ಹೇಳಬಯಸುತ್ತೇನೆ. ಒಟ್ಟು 10,27,000 ಕೋಟಿ ರೂಪಾಯಿಗಳು ಇವತ್ತಿನ ದಿವಸ MoUs ಮತ್ತು ಒಪ್ಪಂದಗಳು commitments ಆಗಿರುವಂತಹದ್ದು. ಅದರಲ್ಲಿ ಸುಮಾರು 98 ಕಂಪನಿಗಳು ಈಗಾಗಲೇ MoU sign ಮಾಡಿ, 6,23,970 ಕೋಟಿ ರೂಪಾಯಿಗಳಷ್ಟು ಇವತ್ತಿನ ದಿವಸ MoU ಗೆ ಸಹಿ ಮಾಡಿದ್ದೇವೆ.

**(ಮುಂದು)**

(27) 27.01.2026 1.20 TCH-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಬಿ.ಪಾಟೀಲ್ (ಮುಂದು)**

ನಾನು ಅಧಿಕಾರ ವಹಿಸಿಕೊಂಡ ಮೇಲೆ on paper and reality ಮೇಲೆ ಮಾಡುತ್ತೇವೆಂದು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಈಗಾಗಲೇ ಸುಮಾರು ಶೇ.46ರಷ್ಟು commitments ನಮ್ಮ Global Investors' Meet ನಲ್ಲಿ ಆಗಿತ್ತು. ನಾವು ಇವತ್ತಿನ ದಿವಸ ಅವುಗಳನ್ನು ಜಾರಿಗೊಳಿಸುವುದಕ್ಕೆ ವಿವಿಧ ಹಂತದಲ್ಲಿವೆ. ಅಂದರೆ ಇವತ್ತಿನ ದಿವಸ realization ಆಗಿದೆ. ಅದರಲ್ಲಿ ಶೇ.58 ರಷ್ಟು manufacturing ಹಂತದಲ್ಲಿವೆ. ಅಂದರೆ ಸುಮಾರು ರೂ.4.71 ಲಕ್ಷಗಳಷ್ಟು, ನಮ್ಮ ರೂ.10,27,000 commitments ಮೂಲಕ ನಾವು ಜಾರಿಗೊಳಿಸಿದ್ದೇವೆ. ಉಳಿದವುಗಳು CFA ನಲ್ಲಿ ವಿವಿಧ ಹಂತದಲ್ಲಿವೆ. ಎರಡನೆಯದಾಗಿ, ಮಾನ್ಯ ಸದಸ್ಯರು single window ಬಗ್ಗೆ ಕೇಳಿರುವಂಥದ್ದು. ಏನು ನಮ್ಮ ಯೋಜನೆ ಇತ್ತು, ಇದು single windowದಲ್ಲಿ ನಮಗೆ ಬಹಳಷ್ಟು ಕೆಟ್ಟ ಹೆಸರು ಬರುತ್ತಿತ್ತು. Single Window ಆದಮೇಲೆ, 'Single Window has many windows' ಎಂದು ಸಾಕಷ್ಟು ಬಾರಿ ಹೇಳುತ್ತಿದ್ದರು. ನಾವು Microsoft company ಮೂಲಕ ಇವತ್ತಿನ ದಿವಸ ಸುಮಾರು 28 ಇಲಾಖೆ ಮಾಡಿ in the various departments ನಲ್ಲಿ 130 services ನಲ್ಲಿ ನಾವು ಈಗಾಗಲೇ ಸುಮಾರು 22 services ಅನ್ನು ಬೇರೆ ಬೇರೆ ಇಲಾಖೆಯಗಳಲ್ಲಿ ಅವರು amendment and rules ಮಾಡಿಕೊಳ್ಳಬೇಕಾಗುತ್ತದೆ. ಇದೆಲ್ಲವನ್ನೂ ಮಾಡಿ ಇದನ್ನು ನಾವು follow-up ಮಾಡುತ್ತಿದ್ದೇವೆ. ಅದನ್ನು review ಮಾಡಲು ಇತ್ತೀಚೆಗೆ ಸಭೆ ಇಟ್ಟುಕೊಂಡಿದ್ದೆವು. ಆ 22 services ಹೊರತುಪಡಿಸಿ ಇವತ್ತಿನ ದಿವಸ ಬಹುತೇಕ ಎಲ್ಲಾ Portals ಕೂಡ connect ಕೂಡ ಆಗಿವೆ. ಎಲ್ಲವೂ digitalization ಕೂಡ ಆಗಿವೆ. ಇನ್ನು ಮಾನ್ಯ ಸದಸ್ಯರು 2022ನೇ ಸಾಲಿನ ಪ್ರಶ್ನೆ ಕೇಳಿರತಕ್ಕಂಥದ್ದು. ಆಗ 'Invest Karnataka-2022' ರಲ್ಲಿ ಸುಮಾರು 57 ಕಂಪನಿಗಳು ರೂ. 5,41,369ಗಳು ಬಂಡವಾಳ ಹೂಡುವುದಕ್ಕೆ ಒಪ್ಪಂದಕ್ಕೆ ಸಹಿ ಮಾಡಿರುವಂಥದ್ದು. ಈಗಾಗಲೇ ಸುಮಾರು 20 ಯೋಜನೆಗಳಿಗೆ ಇವತ್ತಿನ ದಿವಸ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಯಿಂದ ಅನುಮತಿ ನೀಡಿ ಇವುಗಳಿಂದ ಸುಮಾರು ರೂ.2,01,167 ಕೋಟಿಗಳು ಬಂಡವಾಳ

ಹೂಡಿಕೆಯಾಗಲಿದೆ. ಅದಕ್ಕೆ ಸುಮಾರು 70,740 ಹುದ್ದೆಗಳು ಸೃಷ್ಟಿಯಾಗುತ್ತದೆ. ಇವುಗಳಲ್ಲಿ ಸುಮಾರು 2 ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿವೆ. ಅದಕ್ಕೆ ಸುಮಾರು ರೂ.4,093 ಕೋಟಿಗಳು ಬಂಡವಾಳ ಹೂಡಿಕೆಯಾಗಿದೆ. ರೂ. 1,415 ಜನರಿಗೆ ಉದ್ಯೋಗ ಸಿಕ್ಕಿದೆ. ಇವೆಲ್ಲವೂ ಬೃಹತ್ ಯೋಜನೆಗಳು. ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ಎಲ್ಲರ ಗಮನಕ್ಕೆ ತರಬೇಕಾಗಿರುತ್ತದೆ. 2022ನೇ ಸಾಲಿನದ್ದು ಹಿಂದಿನ ಸರ್ಕಾರ ಎಂದು ನಾನು ಮಾತನಾಡುವುದಕ್ಕೆ ಆಗುವುದಿಲ್ಲ. ಯಾವುದೇ ಸರ್ಕಾರದ ಯೋಜನೆಗಳು ಬಂದಾಗ ಬೃಹತ್ ಯೋಜನೆಗಳನ್ನು ground ಮಾಡುವುದಕ್ಕೆ ಕನಿಷ್ಠ 2 ರಿಂದ 3 ವರ್ಷಗಳು ಬೇಕಾಗುತ್ತದೆ. ಹಾಗಾಗಿ, ಇವತ್ತಿನ ದಿವಸ 2022-23ನೇ ಸಾಲಿನದ್ದು ಕೂಡ ವಿವಿಧ ಹಂತದಲ್ಲಿ ಈ ಯೋಜನೆಗಳಿವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಡಾ: ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಕೇಳಿದ್ದು permission ಏಕೆ delay ಆಗುತ್ತಿದೆ? 57 ರಲ್ಲಿ ಸುಮಾರು 20ಕ್ಕೆ ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರೆ. ಇನ್ನೂ ಸುಮಾರು 37 ಕ್ಕೆ ಅನುಮತಿ ಕೊಡಬೇಕಾಗಿದೆ. ಏಕೆ delay ಆಗುತ್ತಿದೆ, ಅದಕ್ಕೆ ಕಾರಣವೇನು ಮತ್ತು ಯಾವ ಜಿಲ್ಲೆಯಲ್ಲಿ ಇವೆಲ್ಲಾ start ಆಗುತ್ತಿವೆಯೆಂದು ಎಂದು ವಿವರ ಕೊಡಬೇಕು.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, permission ಕೊಡುವುದು ಯಾವುದೂ ನಮ್ಮಲ್ಲಿ delay ಆಗುವುದಿಲ್ಲ. ನಮ್ಮಲ್ಲಿ ಏಕ ಗವಾಕ್ಷಿಯಿಂದ clear ಆದ ನಂತರ ಅವರ ತಮ್ಮ ಹೂಡಿಕೆ arrangements ಇರಬಹುದು ಅಥವಾ ಕೇಂದ್ರ ಸರ್ಕಾರದ . . . ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿದ್ದೇನೆ.

**ಡಾ: ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರ ಉತ್ತರದಲ್ಲಿ ಕೊಟ್ಟಿದ್ದೀರಿ, 20 ಯೋಜನೆಗಳಿಗೆ ಒಪ್ಪಿಗೆ ಸಿಕ್ಕಿದೆ. ಇದನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮಿಂದ ಯಾವುದೂ ಕೂಡ delay ಆಗಿರುವುದಿಲ್ಲ. ಏಕೆಂದರೆ ನಮಗೆ investments ಬರಬೇಕು. ಅವರು ತಮ್ಮ ವಿವಿಧ ಇಲಾಖೆಗಳ permissions ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ. ಅಲ್ಲಿಯ permission ತೆಗೆದುಕೊಳ್ಳಬೇಕಾಗುತ್ತದೆ. ಇದೆಲ್ಲಾ ಪಡೆದುಕೊಳ್ಳಲು ಅವರಿಂದ delay ಆಗುತ್ತದೆ, ಆದರೆ ಇವತ್ತಿನ ದಿವಸ ಸಾಮಾನ್ಯವಾಗಿ ನಮ್ಮ ಇಲಾಖೆಯಿಂದ delay ಆಗುವುದಿಲ್ಲ. ಯಾವ್ಯಾವಾಗ ಯೋಜನೆಗಳು ನಮಗೆ ಬರುತ್ತದೋ ಆ ಎಲ್ಲಾ ಯೋಜನೆಗಳಲ್ಲಿ ಸುಮಾರು 20 ಯೋಜನೆಗಳನ್ನು ಕೂಡ ಈಗಾಗಲೇ ವಿವಿಧ ಹಂತದಲ್ಲಿವೆ. ಇದರ ಅರ್ಥ ಅವುಗಳಿಗೆ permission ಕೊಟ್ಟಿಲ್ಲ ಎಂದಲ್ಲ. ಅವುಗಳು ವಿವಿಧ ಹಂತದಲ್ಲಿವೆ. ಅವುಗಳು ಬಂದಾಗ realization ಕೂಡ ಆಗುತ್ತದೆ.

**ಪ್ರಶ್ನೆ ಸಂಖ್ಯೆ. 118**
**(ಉತ್ತರ ಲಗತ್ತಿಸಿದೆ)**

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಸ್ಪಷ್ಟವಾಗಿ ಕೇಳಿದ್ದೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, "ಪ್ರಸಕ್ತ ಸಾಲಿನಲ್ಲಿ (01.01.2025 ರಿಂದ ಪ್ರಸ್ತುತದವರೆಗೆ) ರಾಜ್ಯ ಉನ್ನತ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 313 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ರೂ.60,918ಕೋಟಿ ಮೊತ್ತದ ಬಂಡವಾಳ ಹೂಡಿಕೆ ಮತ್ತು 85,544 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ" ಎಂದು ಹೇಳಿದ್ದಾರೆ. ನನಗೆ ನಿರೀಕ್ಷೆ ಬೇಕಾಗಿರಲಿಲ್ಲ. As on date ಎಷ್ಟಾಗಿತ್ತು ಎನ್ನುವುದು ನನಗೆ ಬೇಕಾಗಿತ್ತು. ಅದಕ್ಕೆ ನನಗೆ ಉತ್ತರ ಬೇಕು.

ಆಮೇಲೆ "ಪ್ರಸಕ್ತ ಸಾಲಿನಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನೆ ಸಮಿತಿಯಿಂದ ವಿಜಯಪುರ ಜಿಲ್ಲೆಯಲ್ಲಿ 5 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ" ಎಂದು ಹೇಳಿದ್ದಾರೆ. ಹಾಗಾದರೆ ಆ 5 ಯೋಜನೆಗಳೇನು ಎಂಬುದಕ್ಕೆ ನನಗೆ ಉತ್ತರ ಬೇಕು.

ಹಾಗೆಯೇ ಪ್ರಸಕ್ತ ಸಾಲಿನಲ್ಲಿ ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಬಂಡವಾಳ ಹೂಡಿಕೆಯಾಗಿದೆ ಮತ್ತು ಎಷ್ಟು ಜನಕ್ಕೆ ಉದ್ಯೋಗ ಸಿಗುತ್ತದೆ ಎಂದು ಕೇಳಿರುವುದಕ್ಕೆ, " ಇವುಗಳಿಂದ ರೂ.1,698.14 ಕೋಟಿ ಬಂಡವಾಳ ಹೂಡಿಕೆ ಮತ್ತು 1,725 ಉದ್ಯೋಗಾವಕಾಶಗಳನ್ನು ನಿರೀಕ್ಷಿಸಲಾಗಿದೆ. ನಿರೀಕ್ಷೆ ಎಂದರೆ ಮುಂದೆ ಯಾವುದೋ ಆಗುವಂಥದ್ದು. ಇವತ್ತಿಗೆ ಅಲ್ಲಿ ಎಷ್ಟು industries ಬಂದಿವೆ? ಅದು ಎಷ್ಟು ಜನಕ್ಕೆ ಉದ್ಯೋಗ ಕೊಡುತ್ತಿವೆ? ಎಂಬ ಪ್ರಶ್ನೆಗೆ ಅವರ ಹತ್ತಿರ ಉತ್ತರ ಇಲ್ಲ.

ಇನ್ನೊಂದು ಪ್ರಶ್ನೆಗೆ "ಪ್ರಸಕ್ತ ಸಾಲಿನಲ್ಲಿ ಅನುಮೋದನೆಯಾದ ಯೋಜನೆಗಳು ವಿವಿಧ ಅನುಷ್ಠಾನ ಹಂತಗಳಲ್ಲಿರುತ್ತವೆ" ಎಂದು ಹೇಳಿದ್ದಾರೆ. ವಿವಿಧ ಅನುಷ್ಠಾನ ಹಂತಗಳಲ್ಲಿರುತ್ತವೆ ಎಂದರೆ ಅಲ್ಲಿ ಪಾಯವನ್ನು ತೋಡಿದ್ದಾರೆಯೇ, ಬಿಲ್ಡಿಂಗ್ ಕಟ್ಟುತ್ತಿದ್ದಾರೆಯೇ ಮತ್ತು ಅವು ಯಾವ ಹಂತದಲ್ಲಿವೆ. ಯಾವ ಸಮಯದಲ್ಲಿ ಇವು ಪೂರ್ಣಗೊಳ್ಳುತ್ತವೆ. ಉತ್ತರದಲ್ಲಿ ಇದರ ವಿವರ ಕೊಡಬೇಕಲ್ಲವೇ? ಮಾನ್ಯ ಸಭಾಪತಿಯವರೇ, ಒಂದೇ ಒಂದು pageನಲ್ಲಿ ಉತ್ತರ ಕೊಟ್ಟಿದ್ದಾರೆ. ಇಡೀ ವಿಜಯಪುರದ ಚಿತ್ರಣ ನನ್ನ ಕಣ್ಮುಂದೆ ಇರುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಇಲ್ಲವಲ್ಲಾ. ಅಂದರೆ ಏಕೆ ಇಷ್ಟು ಅಸಡ್ಡೆ. ಮಾನ್ಯ ಸಚಿವರು ಇಷ್ಟು ಅಸಡ್ಡೆ ಉತ್ತರ ಕೊಡಬೇಕಾಗಿತ್ತೇ? ನನಗೆ ಉತ್ತರ ಬೇಕು.

**ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ವಿಜಯಪುರ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರ ಕಳಕಳಿಯ ಬಗ್ಗೆ ನಾನು ಮೆಚ್ಚುಗೆ ವ್ಯಕ್ತಪಡಿಸುತ್ತೇನೆ.

ನಾನು ಕೂಡ ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಅಲ್ಲಿಯೇ ಹುಟ್ಟಿ ಬೆಳೆದವನು. ಅವರು ಅಲ್ಲಿಗೆ ಓಟಿನ ಸಲುವಾಗಿ ಬಂದಿದ್ದೀರಿ, ಇರಲಿ. ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. 2022 ರಲ್ಲಿ ನಿಮ್ಮ ಹಿಂದಿನ ಸರ್ಕಾರ ಇತ್ತಲ್ಲವೇ? ಮಾನ್ಯ ಸದಸ್ಯರಾದ ಡಾ: ಉಮಾಶ್ರೀ ಯವರು 2022ರದ್ದು ಪ್ರಶ್ನೆ ಕೇಳಿದ್ದರು. 2022ರದ್ದು ಅದು realization ಆಗುವುದಕ್ಕೆ ಎರಡು-ಮೂರು ವರ್ಷಗಳು ಬೇಕಾಗುತ್ತದೆ. ವಿಶೇಷವಾಗಿ ವಿಜಯಪುರದ್ದು ಯಾವುದು ಆ 5 ಕಂಪನಿಗಳು ಎಂದು ಇಲ್ಲಿ ಕೇಳಿದ್ದಾರೆ. ಮಾನ್ಯ ಸಭಾಪತಿಯವರು ಅನುಮತಿ ಕೊಟ್ಟರೆ ನಾನು ಆ 5 ಕಂಪನಿಗಳನ್ನು ನಿಮಗೆ ಓದಿ ಹೇಳಿಬಿಡುತ್ತೇನೆ. 1) Hexa Climate Solutions Private Limited ಇವರು ಸುಮಾರು ರೂ. 8,000 ಕೋಟಿಗಳು investment ಮಾಡುತ್ತಿದ್ದಾರೆ. 2) Melstarr Aviations Tech Private Limitedನವರು Aerospace and Defence ನಲ್ಲಿ, ಅವರು ಅಲ್ಲಿ Airport ನಲ್ಲಿ ಮಾಡಲಿಕ್ಕೆ ಸುಮಾರು ರೂ.300 ಕೋಟಿಗಳು investment ಮಾಡುತ್ತಿದ್ದಾರೆ. 3) Renaissance Solar and Electronic Materials ಅವರು electronicsನಲ್ಲಿ 5,000 ಕೋಟಿಗಳು investment ಮಾಡುತ್ತಿದ್ದಾರೆ. 4) Suzlon Energy Limited ಈಗಾಗಲೇ ಅವರೇ ಸ್ವತಃ ಭೂಮಿ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಿದ್ದಾರೆ. ಅಂದರೆ fan wings ಬರುತ್ತವಲ್ಲಾ ಅವುಗಳನ್ನು ಉತ್ಪಾದನೆ ಮಾಡುವಂಥದ್ದು. 5) Wings Agriculture Private Limited ಬಹಳ ಪ್ರಮುಖವಾಗಿ Wings and Viterra ಆ ಕಂಪನಿ ಒಂದು collaboration ಇರುತ್ತದೆ. ಅವರು global leaders. ಎಲ್ಲಾ pulses ಸೇರಿರುವ ಅಂದರೆ ತೊಗರಿ ಮತ್ತು ವಿವಿಧ oil seeds ಈ ಎಲ್ಲವನ್ನೂ procure ಮಾಡುವಂಥದ್ದು. ವಿಶೇಷವಾಗಿ ತೊಗರಿ ವಿಜಯಪುರ ಜಿಲ್ಲೆ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಬಹಳಷ್ಟು ಅನುಕೂಲವಾಗುವಂಥದ್ದು. ಇದಲ್ಲದೇ Tata Power Company Ltd ರವರ ಜೊತೆ ಕೂಡ ನಾವು ಇತ್ತೀಚೆಗೆ ಚರ್ಚೆ ಮಾಡುತ್ತಿದ್ದೇವೆ. ಇತ್ತೀಚೆಗೆ ಟಾಟಾ ಛೇರ್ಮನ್ ರವರನ್ನು ಕೂಡ ಭೇಟಿ ಆಗಿದ್ದೇವೆ. ಅಲ್ಲಿ Tata Power Company Ltd ರವರು Solar Wingos and Wafers ಸಲುವಾಗಿ ಸುಮಾರು ರೂ.7,900 ಕೋಟಿಗಳು investment ಮಾಡುತ್ತಿದ್ದಾರೆ. ಇದೆಲ್ಲದಕ್ಕೂ ಕೂಡ ನಾವು ಅವರಿಗೆ incentives offer ಮಾಡುತ್ತಿದ್ದೇವೆ. ಬೇರೆ ರಾಜ್ಯದವರು incentives offer ಮಾಡುತ್ತಾರೆ. ಅವರಿಗಿಂತಲೂ ನಾವು ಜಾಸ್ತಿ ಮಾಡಬೇಕಾಗುತ್ತದೆ. ಇದು competition ಇರುತ್ತದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲೂ ಕೂಡ start ಆಗಿದೆ. Tata Power Company Ltd ಗೂ ಕೂಡ ನಾವು ಏನೇನು incentives ಕೊಡುತ್ತಿದ್ದೇವೆಂದು best of the incentive ನಾವು ವಿಜಯಪುರಕ್ಕೆ ಕೊಡುವುದಕ್ಕೆ ಇತ್ತೀಚೆಗೆ ಮತ್ತೆ ಟಾಟಾ ಛೇರ್ಮನ್‌ರವರನ್ನೂ ದಾವೋಸ್‌ನಲ್ಲಿ ಮತ್ತೆ ಭೇಟಿ ಮಾಡಿ ಅವರನ್ನು convince ಮಾಡುವಂತಹ ಕೆಲಸ ಮಾಡಿದ್ದೇವೆ. ವಿಜಯಪುರ ಜಿಲ್ಲೆಯಲ್ಲಿ ಸುಮಾರು ಎಲ್ಲಾ ಒಟ್ಟು ರೂ. 35,000 ಕೋಟಿಗಳಷ್ಟು

incentives ಅನ್ನು ನಾವು foloowup ಮಾಡುತ್ತಿದ್ದೇವೆ. ಅವು ವಿವಿಧ ಹಂತದಲ್ಲಿವೆ. ಆಮೇಲೆ ಇವತ್ತಿನ ದಿವಸ ಯಾವುದೇ ಒಂದು ಯೋಜನೆಯನ್ನು announce ಮಾಡಿದರೆ next day ಕಟ್ಟಡ ಕಟ್ಟುವುದಕ್ಕೆ ಆಗುವುದಿಲ್ಲ. ಅದಕ್ಕೆ permissions ಎಲ್ಲಾ ಕೂಡ ಆಗಬೇಕಾದರೆ ಕನಿಷ್ಠ ಒಂದು ವರ್ಷ ತೆಗೆದುಕೊಳ್ಳುತ್ತದೆ. ಆಮೇಲೆ ಇದೆಲ್ಲಾ ground ಆಗಲು ಸುಮಾರು 2 ರಿಂದ 3 ವರ್ಷಗಳು ಬೇಕಾಗುತ್ತದೆ. ಉದಾಹರಣೆಗೆ ಇವರದ್ದು 2022-23ನೇ ಸಾಲಿನದ್ದು. ಹಿಂದಿನ Global Investors' Meet ಗೆ compare ಮಾಡಿದರೆ ಈಗ ನಾವು ಶೇ48 ರಷ್ಟು ground ಮಾಡಿದ್ದೇವೆ. Manufactures ನಲ್ಲಿ ಶೇ.58 ರಷ್ಟು ground ಮಾಡಿದ್ದೇವೆ. ಹಾಗಾಗಿ, ಬಹಳ ಗಂಭೀರವಾಗಿ ನಮ್ಮ ವಿಜಯಪುರ ಜಿಲ್ಲೆಯ ಬಗ್ಗೆ ಅವರಿಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನನಗೂ ಇದೆಯೆಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ನಮ್ಮ ಜಿಲ್ಲೆಗೆ ಬಂದು ಇಷ್ಟು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ಹಿಂದೆ ನೀರಾವರಿ ಸಚಿವನಾಗಿದ್ದಾಗ ಅಲ್ಲಿಗೆ ನೀರನ್ನು ತೆಗೆದುಕೊಂಡು ಬಂದು ಕೊಟ್ಟಿದ್ದೇನೆ. ನೀವೆಲ್ಲಾ ಅದನ್ನು ನೋಡಿದ್ದೀರಿ. ಈಗ industries ಕೂಡ ಆಗಬೇಕೆಂಬ ಕನಸಿದೆ. ಆ industries ಮಾಡುವುದಕ್ಕೆ ನಾವು ಬಹಳ ಗಂಭೀರವಾಗಿದ್ದೇವೆ. ನಾನೇ Industries minister ಆಗಿದ್ದು, ವಿಜಯಪುರ ಜಿಲ್ಲೆಯಲ್ಲಿ generalize ಮಾಡುವುದರ ಜೊತೆಗೆ ನಮ್ಮ ಜಿಲ್ಲೆಗೆ industries ಬರಬೇಕೆನ್ನುವುದು ನನ್ನದು ಬಹಷ್ಟು ಕಳಕಳ ಇದೆ. I am personally following it up. ಇದರಲ್ಲಿ ಎಲ್ಲಾ ground ಆಗುತ್ತದೆಂದು ನಾನು ಹೇಳುವುದಿಲ್ಲ. ಇದರಲ್ಲಿ ಮೂರ್ನಾಲ್ಕು ಕಂಪನಿಗಳು ಖಂಡಿತವಾಗಿಯು ground ಆಗುತ್ತದೆ.

**(ಮುಂದು)**

(28)27.1.2026/1.30/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್. ಎಸ್:-** ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆಯಿದೆ. ವಿಜಯಪುರ ಜಿಲ್ಲೆಯಲ್ಲಿ ಹೆಚ್ಚು ಸಂಖ್ಯೆಯ ನಿರುದ್ಯೋಗಿ ಯುವಕ ಯುವತಿಯರಿದ್ದಾರೆಂದು ನಾನು ಕೇಳಿದ್ದೆ. ಮಾನ್ಯ ಸಚಿವರು ಇಷ್ಟು ಜನರು ಉದ್ಯೋಗವನ್ನರಸಿ ಬಂದಿದ್ದಾರೆಂದು ನನಗೆ ಅದರ ಒಂದು statistics ಕೊಡಬೇಕಾಗಿತ್ತು. ಹಾಗೆಯೇ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಏನು ಮಾಡಿದ್ದೇವೆಂದು ಹೇಳುವುದಕ್ಕೆ ತಕ್ಷಣಕ್ಕೆ ಒಂದು ಯೋಜನೆ ಬೇಕು. ನೀವು ಹೇಳುತ್ತಿರುವುದೆಲ್ಲವೂ ಕೂಡ ದೀರ್ಘಕಾಲದ ಯೋಜನೆ; ಅದಕ್ಕೆ 2 ರಿಂದ 5 ವರ್ಷಗಳು ಬೇಕೆಂದು ಹೇಳುತ್ತಿದ್ದೀರಿ. ಆಯಿತು, 2 ರಿಂದ 5 ವರ್ಷಗಳು ಬೇಕು. 2022 ರಿಂದ ಆಗಿರುವುದೇ ಇನ್ನೂ materialise ಆಗಿಲ್ಲ. ಕಾಂಕ್ರೀಟ್ ಆಗಿ ground ಮೇಲೆ ಏನಾಗಿದೆ ಎಂಬ ಬಗ್ಗೆಯಾದರೂ ಸ್ವಲ್ಪ ವಿವರಣೆ ಕೊಡಬೇಕಾಗಿತ್ತಲ್ಲವೇ? ಹಾಗೆಯೇ ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ವಿಜಯಪುರ ಜಿಲ್ಲೆಯಲ್ಲಿ ಎಷ್ಟು ಸಂಖ್ಯೆಯ ಕೈಗಾರಿಕೆಗಳನ್ನು ಸ್ಥಾಪಿಸಲು ಹೂಡಿಕೆ ಆಕರ್ಷಿಸಿದೆ ಎಂದು ಪ್ರಶ್ನೆ

ಕೇಳಿದ್ದೆ. ನನ್ನ ಪ್ರಶ್ನೆಗೆ ನಿರ್ದಿಷ್ಟವಾಗಿ ಇಷ್ಟು ಮೊತ್ತ, ಈ ಹಂತದಲ್ಲಿದೆ ಎಂದು ನಿಖರವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು. ಆದರೆ ಇಲ್ಲಿ ನಿಖರವಾದಂತಹ ಉತ್ತರ ಇಲ್ಲ.

**ಶ್ರೀ ಎಂ.ಬಿ. ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಇವರಿಗೆ ಸಂಪೂರ್ಣವಾದಂತಹ ಹಿಂದಿನ ಸರ್ಕಾರದ ಲಿಸ್ಟ್ ನಮ್ಮ ಮುಂದೆ ಇದೆ. ಅದನ್ನು ಸಹ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. 2022ರ Global Investors' Meet ನಲ್ಲಿ ಯಾವ ಯಾವ ಕಂಪನಿಗಳು, ಏನೇನು status ಇದೆ ಎಂಬುದನ್ನು ಸಹ ಕೊಡುತ್ತೇನೆ. ನಮ್ಮದು ಬರೀ 11 ತಿಂಗಳಿನದ್ದು ಮಾತ್ರ. 11 ತಿಂಗಳಿನ ಬಗ್ಗೆ ಹೆಮ್ಮೆಯಿಂದ ಹೇಳುತ್ತೇನೆ. ಶೇ.48ರಷ್ಟು ಏನೇನು ಮಾಡಿದ್ದೇವೆ, ಅದರಲ್ಲಿ ಶೇ.58ರಷ್ಟು ಏನು manufacturers ಇದ್ದಾರೆ, ಆ ಲಿಸ್ಟನ್ನು ಸಹ ಇವರಿಗೆ ಕೊಡುತ್ತೇನೆ. ಇದು ಮೊದಲನೆಯದು. ಎರಡನೆಯದಾಗಿ ಎಷ್ಟು ಜನರಿಗೆ ಉದ್ಯೋಗ ದೊರಕಿದೆ ಎಂಬುದು ಕಾರ್ಮಿಕ ಇಲಾಖೆಗೆ ಬರುತ್ತದೆ. ಅದು ನನ್ನ ಕಡೆ ಬರುವುದಿಲ್ಲ. ಎಷ್ಟು ಜನರಿಗೆ ಉದ್ಯೋಗ ದೊರಕಿದೆ ಎಂಬ statistics ಅನ್ನು ಸಂಬಂಧಪಟ್ಟ ಇಲಾಖೆಯಿಂದ ತೆಗೆದುಕೊಂಡು ಮಾಹಿತಿ ಕೊಡುತ್ತೇನೆ.

**ಶ್ರೀ ಕೇಶವ ಪ್ರಸಾದ್. ಎಸ್:–** ಮಾನ್ಯ ಸಭಾಪತಿಯವರೇ, ಅದರ ಪ್ರತಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಬಿ. ಪಾಟೀಲ್:**– ಮಾನ್ಯ ಸಭಾಪತಿಯವರೇ, 2022 ಮತ್ತು 2025ರ ಮಾಹಿತಿಯುಳ್ಳ 2 ಪ್ರತಿಗಳನ್ನು ಕೊಡುತ್ತೇ

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 27ನೇ ಜನವರಿ 2026 ಸಮೂಹ-II ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 108 ಪ್ರಶ್ನೆಗಳ ಪೈಕಿ 26 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

**4. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಮತ್ತು ಅಧಿಕಾರಿಗಳ ಕುರಿತು**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು**

1. ಶ್ರೀ ರಾಮಲಿಂಗರೆಡ್ಡಿಯವರು, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
2. ಶ್ರೀ ಸತೀಶ್ ಜಾರಕಿಹೊಳಿಯವರು, ಮಾನ್ಯ ಲೋಕೋಪಯೋಗಿ ಸಚಿವರು
3. ಶ್ರೀ ಎನ್. ಚಲುವರಾಯಸ್ವಾಮಿಯವರು, ಮಾನ್ಯ ಕೃಷಿ ಸಚಿವರು
4. ಶ್ರೀ ತಂಗಡಗಿ ಶಿವರಾಜ್ ಸಂಗಪ್ಪರವರು, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
5. ಶ್ರೀ ಡಿ. ಸುಧಾಕರ್‌ರವರು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು
6. ಶ್ರೀ ಸಂತೋಷ್ ಎಸ್. ಲಾಡ್‌ರವರು, ಮಾನ್ಯ ಕಾರ್ಮಿಕ ಸಚಿವರು
7. ಶ್ರೀ ಕೆ. ವೆಂಕಟೇಶ್‌ರವರು, ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು
8. ಶ್ರೀ ಮಂಕಾಳ ಎಸ್ ವೈದ್ಯರವರು, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು
9. ಶ್ರೀ ಮಧು ಬಂಗಾರಪ್ಪನವರು, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿ**

1. ಶ್ರೀ ಹೇಮಂತ್. ಎನ್. ಭಾ.ಆ.ಸೇ., ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಜಿಲ್ಲೆ
2. ಶ್ರೀಮತಿ ರೋಹಿಣಿ ಸಿಂಧೂರಿ ದಾಸರಿ, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂ.ಎಸ್.ಎಂ.ಇ & ಗಣಿ)
3. ಶ್ರೀಮತಿ ಪೂವಿತ ಎಸ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆ.ಯು.ಐ.ಡಿ.ಎಫ್.ಸಿ) ಬೆಂಗಳೂರು
4. ಶ್ರೀ ಆರ್. ರವಿಶಂಕರ್, ಐ.ಎಫ್.ಎಸ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಬೆಂಗಳೂರು.
5. ಶ್ರೀ ವಿಜಯ್. ಬಿ.ಪಿ. ನಿರ್ದೇಶಕರು (ಮಾನವ ಸಂಪನ್ಮೂಲ), ಕರ್ನಾಟಕ ವಿದ್ಯುತ್ ಸಾರಿಗೆ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್) ಬೆಂಗಳೂರು.

**ಸಭಾಪತಿಯವರು:-** ಇವತ್ತಿನ ಅಜೆಂಡಾ ಪ್ರಕಾರ ಇಷ್ಟು ಜನ ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕಾಗಿದೆ.

## 5) ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ: "ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ (Traffic Jam) ಉಂಟಾಗಿರುವ ಬಗ್ಗೆ ಹಾಗೂ 2050ರ ದೂರದೃಷ್ಟಿಯನ್ನಿಟ್ಟುಕೊಂಡು ನಗರವನ್ನು ಸಂಚಾರ ಮುಕ್ತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು."**

– – – – –

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಭಾರತದ ಸಿಲಿಕಾನ್ ಸಿಟಿ ಎಂದು ಹೆಸರಾದ ಬೆಂಗಳೂರಿನಲ್ಲಿ ವಾಹನ ದಟ್ಟಣೆ ಸಮಸ್ಯೆಯನ್ನು ಬಗೆಹರಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಈ ನಡುವೆ ಅಂತಾರಾಷ್ಟ್ರೀಯ ಸಂಸ್ಥೆಯೊಂದರ ಸಮೀಕ್ಷೆ ಜಗತ್ತಿನಲ್ಲಿಯೇ ಅತಿ ಹೆಚ್ಚು ಟ್ರಾಫಿಕ್ ಜಾಮ್ ಇರುವ ನಗರಗಳ ಪೈಕಿ ಬೆಂಗಳೂರಿಗೆ ಎರಡನೇ ಸ್ಥಾನ ನೀಡಿರುವ ಬಗ್ಗೆ ದಿನಾಂಕ 23.1.2026ರ ವಿಶ್ವವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಮೀಕ್ಷಾ ವರದಿಯನ್ವಯ ಅತಿ ಹೆಚ್ಚು ಟ್ರಾಫಿಕ್ ದಟ್ಟಣೆ ಇರುವ ನಗರಗಳ ಪಟ್ಟಿಯಲ್ಲಿ ಮೆಕ್ಸಿಕೊ ನಗರ ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಈ ವರದಿಯು ವರ್ಷದಿಂದ ವರ್ಷಕ್ಕೆ ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ದಟ್ಟಣೆಯನ್ನು ತೋರಿಸಿದೆ. ನಗರದ ಸರಾಸರಿ ದಟ್ಟನೆಯ ಮಟ್ಟ ಶೇ. 74.4ರಷ್ಟಿದೆ. ಇದು 2024ಕ್ಕೆ ಹೋಲಿಸಿದರೆ 1.7 ಶೇಕಡ ಹೆಚ್ಚಳ ಕಂಡಿದೆ. ಪ್ರಯಾಣಿಕರು 15 ನಿಮಿಷದಲ್ಲಿ ಕೇವಲ 4.2 ಕಿ.ಮೀಗಳನ್ನು ಮಾತ್ರ ಕ್ರಮಿಸಲು ಸಾಧ್ಯ. ಪೀಕ್ ಅವರ್‌ನಲ್ಲಿ ಸರಾಸರಿ ವೇಗವು ಗಂಟೆಗೆ 13.9 ಕಿ.ಮೀ. ಆಗಿದ್ದು, ಕಳೆದ ವರ್ಷಕ್ಕಿಂತ ಗಂಟೆಗೆ 1 ಕಿ.ಮೀ ವಿಳಂಬವಾಗಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ದಯಮಾಡಿ ಬೆಂಗಳೂರಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ವಾಹನಗಳನ್ನು ಗಮನಿಸಿ 2050ರ ದೂರದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅಂದು ಇರಬಹುದಾದ ವಾಹನಗಳ ಸಂಖ್ಯೆ, ಜನಸಂಖ್ಯೆಯನ್ನು ಆಧರಿಸಿ ನಗರದ ರಸ್ತೆಗಳನ್ನು ಅಗಲೀಕರಿಸುವ, ಟ್ರಾಫಿಕ್ ಮುಕ್ತಗೊಳಿಸುವ ಯೋಜನೆಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ: 26.1.2026ರಂದು ''ಟ್ರಾಫಿಕ್ ಜಾಂ: ವಿಶ್ವದಲ್ಲೇ ಬೆಂಗಳೂರಿಗೆ 2ನೇ ಸ್ಥಾನ'' ಎಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. ''ರಾಜಧಾನಿಯ ಟ್ರಾಫಿಕ್ ವಿಶ್ವದಲ್ಲೇ ಎರಡನೇ ಸ್ಥಾನ ಮತ್ತು ದೇಶದಲ್ಲೇ ಮೊದಲ ಸ್ಥಾನ ಗಳಿಸಿದೆ. ಈ ಮೂಲಕ 2025ರಲ್ಲಿ ಮೆಕ್ಸಿಕೋ ನಗರದ ನಂತರ ಸಿಲಿಕಾನ್ ಸಿಟಿ ಬೆಂಗಳೂರು ಅತ್ಯಂತ ಸಂಚಾರ ದಟ್ಟಣೆಯ ನಗರವಾಗಿ ಹೊರಹೊಮ್ಮಿದೆ. 2023ರಲ್ಲಿ ಬೆಂಗಳೂರು 6ನೇ ಅತ್ತಯಂತ ಸಂಚಾರ ದಟ್ಟಣೆಯ ನಗರವಾಗಿತ್ತು. 2024ರಲ್ಲಿ 3ನೇ ಸ್ಥಾನ ಪಡೆದಿತ್ತು. 2025ರ ವೇಳೆಗೆ 2ನೇ ಸ್ಥಾನಕ್ಕೆ ಬಂದಿದ್ದು, 2026ರ ಅಂತ್ಯದ ವೇಳೆಗೆ ಮೊದಲ ಸ್ಥಾನ ಗಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ. 2025ರಲ್ಲಿ ಬೆಂಗಳೂರಿನಲ್ಲಿ ಜನದಟ್ಟಣೆಯ ಸಮಯದಲ್ಲಿ ಸರಾಸರಿ ವೇಗ ಗಂಟೆಗೆ 13.9 ಕಿ.ಮೀ ಆಗಿದ್ದು, ಇದು 2024ಕ್ಕೆ ಹೋಲಿಸಿದರೆ 1 ಕಿ.ಮೀ. ನಿಧಾನವಾಗಿದೆ ಎಂದು ವರದಿ ಹೇಳುತ್ತದೆ.

ವರದಿಯ ಪ್ರಕಾರ, ಟ್ರಾಫಿಕ್‌ನಲ್ಲಿ ಕಳೆಯುವ ಸಮಯವನ್ನು ಒಂದು ವರ್ಷಕ್ಕೆ ಲೆಕ್ಕ ಹಾಕಿದಾಗ ಬೆಂಗಳೂರಿನ ಜನ ಟ್ರಾಫಿಕ್‌ನಲ್ಲಿಯೇ 168 ಗಂಟೆ ಕಳೆಯುತ್ತಾರೆ. ಇದು 7 ದಿನ 40 ನಿಮಿಷಗಳಿಗೆ ಸಮಾನವಾಗಿದೆ. 2024ಕ್ಕೆ ಹೋಲಿಸಿದರೆ 12 ಗಂಟೆ 46 ನಿಮಿಷ ಜಾಸ್ತಿಯಾಗಿದೆ. ದಿನನಿತ್ಯ ನೂರಾರು ಹೊಸ ವಾಹನಗಳು ರಸ್ತೆಗೆ ಕಾಲಿಡುತ್ತಿರುವುದು ಮತ್ತು ಸ್ಥಗಿತಗೊಂಡ ಕಾಮಗಾರಿ ಸೇರಿ ವಿವಿಧ ನ್ಯೂನತೆ ಸಂಚಾರ ದಟ್ಟಣೆಗೆ ಕಾರಣವಾಗಿದೆ'' ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಬೆಂಗಳೂರು ನಗರದ ಟ್ರಾಫಿಕ್ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಅತೀ ಶೀಘ್ರವಾಗಿ ಟ್ರಾಫಿಕ್ ಸಮಸ್ಯೆ ಪರಿಹರಿಸಲು ಮತ್ತು ಸ್ಥಗಿತಗೊಂಡ ಕಾಮಗಾರಿ ಸೇರಿ ವಿವಿಧ ನ್ಯೂನತೆಗಳನ್ನು ಸರಿಪಡಿಸಲು ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಆ) "ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ರಿಶೇಲ್ ಡಿ'ಸೋಜಾ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯ ಬಂಧನಕ್ಕೆ ವಿಳಂಬ, ಪೋಲೀಸರ ಕರ್ತವ್ಯಲೋಪ ಮತ್ತು ತನಿಖೆಯಲ್ಲಿನ ಸಂಶಯಾಸ್ಪದ ಅಂಶಗಳ ಕುರಿತು."**

\- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಕದ್ರಾ ಗ್ರಾಮದ ಯುವತಿ ರಿಶೇಲ್ ಕಿಸ್ತೋದ ಡಿ'ಸೋಜಾ ಇವರ ಆತ್ಮಹತ್ಯೆ ಪ್ರಕರಣಕ್ಕೆ ನ್ಯಾಯಸಮ್ಮತವಾಗಿ ತನಿಖೆ ನಡೆಸುವ ಬಗ್ಗೆ ಹಾಗೂ ಆತ್ಮಹತ್ಯೆ ಪ್ರಕರಣ ದಾಖಲಾಗಿ 16 ದಿನ ಕಳೆದರು ಆರೋಪಿ ಚಿರಾಗ್ ಚಂದ್ರಹಾಸ್ ಕೋಠಾರಕರ ಈತನಿಗೆ ಬಂಧಿಸದೆ ತನಿಖೆಯಲ್ಲಿ ಕರ್ತವ್ಯಲೋಪ ಮಾಡಿದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಕದ್ರಾ ಗ್ರಾಮದ ರೀನಾ ಡಿ'ಸೋಜಾ ಹಾಗೂ ಕ್ರಿಸ್ತೋದ ಡಿ'ಸೋಜಾ ಇವರ ಮಗಳಾದ ರಿಶೇಲ್ ಡಿ'ಸೋಜಾ ಇವಳು ದಿನಾಂಕ 9-1-2026ರಂದು ಆರೋಪಿ ಚಿರಾಗ್ ಚಂದ್ರಹಾಸ್ ಕೋಠಾರಕರ ಈತನ ಮಾನಸಿಕ ಕಿರುಕುಳ ಹಾಗೂ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ಮಾಡಿದ ಕಾರಣ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಸದರಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕದ್ರಾ ಪೋಲೀಸ್ ಠಾಣೆಯಲ್ಲಿ ದೂರು ಸಂಖ್ಯೆ 03-2026 ರಂತೆ ಕಲಂ 108ರ ಅನ್ವಯ ಪ್ರಕರಣ ದಾಖಲಿಸಿರುತ್ತಾರೆ.

ಸದರಿ ಈ ಸಾವಿನ ಹಿಂದೆ ಪ್ರಭಾವಿ ವ್ಯಕ್ತಿಯ ಪುತ್ರನ ಕಿರುಕುಳದಿಂದಲೆ ಯುವತಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ ಎಂದು ದಿನಪತ್ರಿಕೆಯಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ವರದಿಯಾಗಿರುತ್ತದೆ. ಮೃತರ ಶವ ಪರೀಕ್ಷೆಯನ್ನು ಸರಕಾರದ ಆದೇಶವನ್ನು ಉಲ್ಲಂಘಿಸಿ ರಾತ್ರಿ ಸಮಯದಲ್ಲಿ ತರಾತುರಿಯಲ್ಲಿ ಶವ ಪರೀಕ್ಷೆಯನ್ನು ನಡೆಸಿದ್ದು, ಇದರಿಂದ ವೈದ್ಯರು ಹಾಗೂ ಅಧಿಕಾರಿಗಳ ಮೇಲೆ ಒತ್ತಡ ಇದ್ದಿರಬಹುದೆಂಬ ಅನುಮಾನ ಕಂಡುಬಂದಿರುತ್ತದೆ. ಶವ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಅಪರಿಚಿತ ಯುವಕರು ಸ್ಥಳಕ್ಕೆ ಬಂದು ವೀಕ್ಷಣೆ ಮಾಡಲು ಯತ್ನಿಸಿರುವುದು ಮತ್ತಷ್ಟು ಸಂಶಯಕ್ಕೆ ಕಾರಣವಾಗಿರುತ್ತದೆ. ಸದರಿ ಶವ ಪರೀಕ್ಷೆಯ ಸಮಯದಲ್ಲಿ ಮೃತಳ ಎದೆಯ ಭಾಗದಲ್ಲಿ ಕಚ್ಚಿದ ಗಾಯಗಳು ಹಾಗೂ ರಕ್ತದ ಕಲೆಗಳು ಕಂಡು ಬಂದಿರುವುದು ತಿಳಿದುಬಂದಿರುತ್ತದೆ. ಆದರೆ ಈ ಮಹತ್ವದ ಮಾಹಿತಿಯನ್ನು ಪೋಲೀಸರು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಅದಲ್ಲದೆ ಶವ ಪರೀಕ್ಷೆಗೂ ಮುನ್ನ ಅಗತ್ಯ ಮಾದರಿ ಸಂಗ್ರಹಿಸುವ ಬಗ್ಗೆ ಪೋಲೀಸರು ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದು ತಿಳಿದುಬಂದಿರುತ್ತದೆ. ಯುವತಿ ಆತ್ಮಹತ್ಯೆಗೆ ಬಳಸಿದ್ದ ಸೀರೆಯನ್ನು ಪೋಲೀಸರು ನಾಲ್ಕು ದಿನಗಳ ನಂತರ ವಶಕ್ಕೆ ಪಡೆದಿರುವುದು ತನಿಖೆಯಲ್ಲಿನ ನಿರ್ಲಕ್ಷ್ಯವನ್ನು ತೋರಿಸುತ್ತದೆ.

ಈವರೆಗೂ ಆರೋಪಿಯನ್ನು ಬಂಧಿಸದೆ ಇರುವುದು ಪ್ರಕರಣದ ಬಗ್ಗೆ ಗಂಭೀರ ಅನುಮಾನಗಳಿಗೆ ಕಾರಣವಾಗಿದೆ ಎಂದು ತಿಳಿದುಬಂದಿರುತ್ತದೆ. ಈ ಆತ್ಮಹತ್ಯೆಗೆ ಯಾವುದೇ ನ್ಯಾಯ ಒದಗಿಸಿಲ್ಲ ಹಾಗೂ ತನಿಖೆಯಲ್ಲಿ ಕರ್ತವ್ಯಲೋಪ ಆಗಿದೆ ಎಂದು ಸ್ಥಳೀಯರು ಹೋರಾಟ ಮಾಡುತ್ತಿದ್ದು, ಹೋರಾಟ ತೀವ್ರಗೊಳ್ಳುವ ಮುಂಚೆಯೇ ಜಿಲ್ಲಾಡಳಿತಕ್ಕೆ ಸೂಚನೆ ನೀಡಿ ಸೂಕ್ತ ಹಾಗೂ ನ್ಯಾಯಸಮ್ಮತ ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಆತ್ಮಹತ್ಯೆಗೆ ಒಳಗಾದ ಯುವತಿಗೆ ನ್ಯಾಯ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:– "ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ಕಿತ್ತೂರು ಸಂಸ್ಥಾನದ ವೀರ ಕಲಿ ಅಮಟೂರು ಬಾಳಪ್ಪನವರ ಪ್ರತಿಮೆಯನ್ನು ಪ್ರತಿಷ್ಠಾಪಿಸುವ ಕುರಿತು."**

– – – – –

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿಟಿಎಸ್) ಶಿಕ್ಷಕರ ಕ್ಷೇತ್ರ:–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯ ಅವಕಾಶಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಅಮಟೂರು ಬಾಳಪ್ಪ ಪ್ರತಿಮೆ ಸ್ಥಾಪನೆಗೆ ಆಗ್ರಹ ಎಂಬ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಅಮಟೂರು ಬಾಳಪ್ಪ ಪ್ರತಿಮೆ ಸ್ಥಾಪನೆಗೆ ಆಗ್ರಹ ಎಂಬ ವಿಷಯವು ಪ್ರಕಟವಾಗಿದ್ದು ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮನ ಬಲಗೈ ಬಂಟ, ಬ್ರಿಟಿಷ್ ಅಧಿಕಾರಿ ಥ್ಯಾಕರೆಯನ್ನು ಗುಂಡಿಕ್ಕಿ ಹತ್ಯೆಗೈದ ಗುರಿಕಾರ ಅಮಟೂರು ಬಾಳಪ್ಪನವರ ಮೂರ್ತಿಯನ್ನು ಬೆಳಗಾವಿ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ಪ್ರತಿಷ್ಠಾಪಿಸುವಂತೆ ಹಣಬರ ಸಮಾಜದ ಮುಖಂಡರಾದ ಡಾ. ಎಸ್.ಡಿ. ಪಾಟೀಲ್‌ರವರು ಆಗ್ರಹಿಸಿದ್ದಾರೆ.

ಈಗಾಗಲೇ ವಿಧಾನಸೌಧದ ಮುಂದೆ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಡಾ. ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧೀಜಿ ಅವರ ಪ್ರತಿಮೆಗಳನ್ನು ಸ್ಥಾಪಿಸಿರುವುದು ಸ್ವಾಗತಾರ್ಹ. ಅದೇ ರೀತಿ 1824ರಲ್ಲಿ ಬ್ರಿಟಿಷರ ವಿರುದ್ಧ ಕಿತ್ತೂರು ಸಂಸ್ಥಾನದ ಗೆಲುವಿಗೆ ಕಾರಣರಾಗಿದ್ದ ಅಮಟೂರು ಬಾಳಪ್ಪನವರ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕೆಂದು ಹಣಬರ ಸಮಾಜದ ಈ ಆಗ್ರಹವನ್ನು ಗಂಭೀರವಾಗಿ ಪರಿಗಣಿಸಿ ಕಿತ್ತೂರು ಕಲಿ ಹಣಬರ ಹುಲಿ ಅಮಟೂರು ಬಾಳಪ್ಪನವರ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಈ) "ಶಿವಮೊಗ್ಗ ಜಿಲ್ಲೆಯ ಅರಬಿಳಚಿ ಗ್ರಾಮದಲ್ಲಿ ರೂ. 2.31 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ 24X7 ಸರ್ಕಾರಿ ಹೆರಿಗೆ ಆಸ್ಪತ್ರೆ ಕಟ್ಟಡದ ಕಳಪೆ ಕಾಮಗಾರಿ ಮತ್ತು ಉದ್ಘಾಟನೆ ವಿಳಂಬದ ಬಗ್ಗೆ**

– – – – –

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು.

ರಾಜ್ಯದ ಪ್ರತಿಷ್ಠಿತ ದಿನ ಪತ್ರಿಕೆಯಾದ 'ವಿಜಯವಾಣಿ' ಪತ್ರಿಕೆಯಲ್ಲಿ ಆಸ್ಪತ್ರೆ ಕಟ್ಟಡಕ್ಕೆ ಕಳಪೆ ಹಣೆಪಟ್ಟಿ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಶಿವಮೊಗ್ಗ ಜಿಲ್ಲೆಯ ಸುಸಜ್ಜಿತ ಆಸ್ಪತ್ರೆಯಲ್ಲಿ ಸೇವೆ ಪಡೆಯಲು ಅರಬಿಳಚಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರ ನಿರೀಕ್ಷೆ ಸದ್ಯಕ್ಕೆ ಈಡೇರುವ ಲಕ್ಷಣಗಳಿಲ್ಲ. ರೂ. 2.31 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ 24X7 ಹೆರಿಗೆ ಆಸ್ಪತ್ರೆ ಕಟ್ಟಡ ಕಾಮಗಾರಿ ಕಳಪೆಯಾಗಿದೆ ಎಂಬ ಕಳಂಕ ಹೊತ್ತ ಹಿನ್ನೆಲೆಯಲ್ಲಿ ಉದ್ಘಾಟನೆ ಭಾಗ್ಯವಿಲ್ಲದೆ ಮೂಲೆಗುಂಪಾಗಿದೆ. ಗ್ರಾಮಸ್ಥರು ಹತ್ತಾರು ವರ್ಷ ಅಲೆದಾಡಿ ಜನಪ್ರತಿನಿಧಿಗಳ ಮೂಲಕ ಅನುದಾನ ತಂದು ಹೆರಿಗೆ ಆಸ್ಪತ್ರೆ ನಿರ್ಮಾಣವಾದರೂ, ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳು ಮಾಡಿದ ಯಡವಟ್ಟಿನಿಂದ ಕೋಟ್ಯಂತರ ರೂಪಾಯಿ ನೀರಿನಲ್ಲಿ ಹೋಮ ಮಾಡಿದಂತಾಗಿದೆ. ಅರಬಿಳಚಿ ಭಾಗದ ಗ್ರಾಮಸ್ಥರು ಅನಿವಾರ್ಯವಾಗಿ ಮೂಲಸೌಕರ್ಯಗಳಿಲ್ಲದ ಹಳೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಿದೆ. ಒಂದು ವರ್ಷದ ಹಿಂದೆ ಉದ್ಘಾಟನೆಗೆ ಸಿದ್ಧವಾದ ಕಟ್ಟಡದ ಸಿಮೆಂಟ್‌ಅನ್ನು ಕೈಯಲ್ಲಿ ಕೆರೆದರೆ ಕಿತ್ತು ಬರುತ್ತಿತ್ತು. ಇದನ್ನು ಗಮನಿಸಿದ ಗ್ರಾಮಸ್ಥರು ಕಳಪೆ ಕಾಮಗಾರಿ ಪ್ರಶ್ನಿಸಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನು ಸ್ಥಳಕ್ಕೆ ಕರೆಸಿ ವಸ್ತುಸ್ಥಿತಿ ದರ್ಶನ ಮಾಡಿಸಿರುತ್ತಾರೆ.

ಅರೆಬಿಳಚಿ ಸರ್ಕಾರಿ ಆಸ್ಪತ್ರೆ ವ್ಯಾಪ್ತಿಗೆ ಅಕ್ಕಪಕ್ಕದ 12 ಗ್ರಾಮದ ಸುಮಾರು 13,623ಕ್ಕೂ ಹೆಚ್ಚು ಗ್ರಾಮಸ್ಥರು ಈ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿದ್ದು, ಕಟ್ಟಡ ತಾರಸಿವರೆಗೆ ಗುಣಮಟ್ಟದಿಂದ ಕೂಡಿದ್ದು, ಆದರೆ ಕಟ್ಟಡದ ಸಿಮೆಂಟ್ ಪ್ಲಾಸ್ಟರಿಂಗ್ ಹಾಗೂ ಅಳವಡಿಸಿರುವ ಬಾಗಿಲು ಕಿಟಕಿಗಳು ಕಳಪೆಯಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದ್ದು, ಹೊಸದಾಗಿ ಸಂಪೂರ್ಣ ಪ್ಲಾಸ್ಟರಿಂಗ್ ಮಾಡುವಂತೆ ತಿಳಿಸಿದ್ದರೂ ಈವರೆಗೆ ಯಾವುದೇ ಕೆಲಸಗಳನ್ನು ಮಾಡಿಲ್ಲ ಎಂಬುದು ಅರಬಿಳಚಿ ಗ್ರಾಮಸ್ಥರ ದೂರು. ಈ ಬಗ್ಗೆ ಕೂಡಲೇ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸೂಕ್ತ ಕ್ರಮ ವಹಿಸಬೇಕೆಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(29) 27-01-2026 1-40 KH/VK (ಸಭಾಪತಿಯವರ ಉಪಸ್ಥಿತಿ)

**ಉ) "ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಹಜೇನಹಳ್ಳಿ ಗ್ರಾಮದ 'ಮುಗುಲಾ ಬೇಗಾರ' (ಛಲವಾದಿ) ಜನಾಂಗಕ್ಕೆ ಸೇರಿದ ಇನಾಂ ಜಮೀನನ್ನು ಸರ್ಕಾರಿ ಎಂದು ವರ್ಗೀಕರಿಸಿರುವುದರ ವಿರುದ್ಧ ಹಾಗೂ ಸಮುದಾಯದ ಸಾಂಪ್ರದಾಯಿಕ ಹಕ್ಕುಗಳ ರಕ್ಷಣೆಯ ಕುರಿತು."**

***

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು, ಕಸಬಾ ಹೋಬಳಿಯ ಮಹಜೇನಹಳ್ಳಿ ಗ್ರಾಮದಲ್ಲಿ ರಾಜ-ಮಹಾರಾಜರ ಕಾಲದಿಂದಲೂ ಮುಗುಲಾ ಬೇಗಾರ (ಛಲವಾದಿ) ಜನಾಂಗದವರ ಸಮಾಜ ಸೇವೆ ಮತ್ತು ಜೀವನೋಪಾಯಕ್ಕಾಗಿ 10 ಎಕರೆ 02 ಗುಂಟೆ ಜಮೀನನ್ನು "ಇನಾಂ ಜಮೀನು" ಎಂದು ಹಂಚಿಕೆ ಮಾಡಲಾಗಿತ್ತು. ಇದು ಆ ಜನಾಂಗದವರ ಸಾಂಪ್ರದಾಯಿಕ ಹಕ್ಕು ಮತ್ತು ಆಸ್ತಿಯಾಗಿರುತ್ತದೆ ಆದರೆ, ಇತ್ತೀಚಿಗೆ ಮಾನ್ಯ ಜಿಲ್ಲಾಧಿಕಾರಿಗಳು ದಾವಣಗೆರೆ ಇವರ ಆದೇಶ ನಂ. LND CR 558/07-08, ದಿನಾಂಕ:23-02-2008 ರಂತೆ ತಹಶೀಲ್ದಾರ್‌ರವರು ಹರಿಹರ ಇವರ ಆದೇಶ ನಂ. 177/07-08, ದಿನಾಂಕ:15-03-2008 ರ ಆದೇಶದ ಪ್ರಕಾರ ದಾಖಲು ಅನ್ವಯ, ಈ ಒಟ್ಟು ವಿಸ್ತೀರ್ಣದಲ್ಲಿ 01 ಎಕರೆ 30 ಗುಂಟೆ ಜಮೀನನ್ನು "ಸರ್ಕಾರಿ" ಎಂದು ನಮೂದಿಸಿ ಆದೇಶ ಹೊರಡಿಸಿರುವುದು ಮತ್ತು ಉಳಿದ 08 ಎಕರೆ 12 ಗುಂಟೆಯನ್ನು ಮಾತ್ರ 'ಮುಗುಲಾ ಬೇಗಾರ" ಎಂದು ಉಳಿಸಿರುವುದು ಈ ಸಮುದಾಯದಲ್ಲಿ ಆತಂಕ ಮೂಡಿಸಿದೆ.

ಮಾನ್ಯ ಸಭಾಪತಿಯವರೇ, ಶೋಷಿತ ಸಮುದಾಯಕ್ಕೆ ಸೇರಿದ ಈ ಇನಾಂ ಜಮೀನನ್ನು ಸರ್ಕಾರಿ ಜಮೀನು ಎಂದು ಯಾವ ನಿಯಮದಡಿ ವರ್ಗೀಕರಿಸಲಾಗಿದೆ ಮತ್ತು ಈ ವರ್ಗಾವಣೆಯ ಹಿಂದೆ ಇರುವ ನೈಜ ಉದ್ದೇಶಗಳೇನು ಎಂಬುದು ಸ್ಪಷ್ಟವಾಗಿಲ್ಲ. ಈ ಬದಲಾವಣೆಯು ಮುಗುಲಾ ಬೇಗಾರ (ಛಲವಾದಿ) ಸಮಾಜದ ಯಾವ ಕುಟುಂಬಗಳ ಹಕ್ಕುಗಳ ಮೇಲೆ ಪರಿಣಾಮ ಬೀರಿದೆ ಮತ್ತು ಸದರಿ 08 ಎಕರೆ 12 ಗುಂಟೆ ಜಮೀನನ್ನು ಪ್ರಸ್ತುತ ಸಮಾಜದ ಯಾವ ನಿರ್ದಿಷ್ಟ ಕುಟುಂಬ ವರ್ಗಗಳಿಗೆ ಮಂಜೂರು ಮಾಡಲಾಗಿದೆ ಎಂಬ ಬಗ್ಗೆ ಸರ್ಕಾರವು ಸಂಪೂರ್ಣ ಮಾಹಿತಿಯನ್ನು ನೀಡಬೇಕಿದೆ. ಅಲ್ಲದೆ, ಈ ಜಮೀನನ್ನು ಕಾಲಾಂತರದಲ್ಲಿ ಯಾವುದಾದರೂ ಸಂಸ್ಥೆಗಳಿಗೆ ಅಥವಾ ಇತರ ಉದ್ದೇಶಗಳಿಗೆ ಮಂಜೂರು ಮಾಡಲಾಗಿದೆಯೇ? ಮಂಜೂರು ಮಾಡಿದ್ದಲ್ಲಿ ಆ ಆದೇಶಗಳ ವಿವರ ಹಾಗೂ ಪ್ರಸ್ತುತ ಆ ಜಮೀನು ಯಾರ ವಶದಲ್ಲಿದೆ ಎಂಬ ಬಗ್ಗೆ ಸಮಗ್ರ ವಿವರಗಳನ್ನು ಸರ್ಕಾರ ಒದಗಿಸಬೇಕು. ಇನಾಂ ಜಮೀನಿನ ಮೂಲ ಸ್ವರೂಪವನ್ನು ಬದಲಿಸುವ ಮೂಲಕ ಆ ಸಮುದಾಯಕ್ಕೆ ಆಗುತ್ತಿರುವ

ಅನ್ಯಾಯವನ್ನು ಸರಿಪಡಿಸಲು ಕಂದಾಯ ಸಚಿವರು ಕೂಡಲೇ ಈ ಕುರಿತು ತನಿಖೆ ನಡೆಸಿ, ಸವಿಸ್ತಾರವಾದ ಉತ್ತರ ನೀಡಬೇಕೆಂದು ನಾನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಫ್.ಹೆಚ್.ಜಕ್ಕಪ್ಪನವರ್ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಊ) ವಿಷಯ:- "ಕರ್ನಾಟಕ ಲೋಕಸೇವಾ ಆಯೋಗವು (KPSC) 384 ಕೆ.ಎ.ಎಸ್. (ಗ್ರೂಪ್ 'ಎ' ಮತ್ತು 'ಬಿ') ಹುದ್ದೆಗಳ ಮುಖ್ಯ ಪರೀಕ್ಷೆ ನಡೆಸಿ 9 ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸದಿರುವ ಬಗ್ಗೆ ಹಾಗೂ ಅಭ್ಯರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕೂಡಲೇ ಕ್ರಮ ಕೈಗೊಳ್ಳುವ ಕುರಿತು."**

***

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ "ಕೆ.ಎ.ಎಸ್. ರಿಸಲ್ಟ್ ಯಾವಾಗ? 9 ತಿಂಗಳಾದರೂ ಫಲಿತಾಂಶ ಪ್ರಕಟಿಸದ ಕೆ.ಪಿ.ಎಸ್.ಸಿ! ಅಭ್ಯರ್ಥಿಗಳ ತ್ರಿಶಂಕು ಸ್ಥಿತಿ. ಹೊಸ ತಂತ್ರಜ್ಞಾನ ಬಳಸಿದರೂ ತಪ್ಪದ ವನವಾಸ! 2 ವರ್ಷದಿಂದ ಮುಗಿಯದ ಪ್ರಕ್ರಿಯೆ" ಎಂಬ ಶಿರೋನಾಮೆಯಡಿ ಪ್ರಕಟವಾಗಿರುವ ವರದಿಯನ್ನು ಪ್ರಸ್ತಾಪಿಸಲು ಬಯಸುತ್ತೇನೆ.

ಮೌಲ್ಯಮಾಪನದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಳ್ಳುತ್ತಿದ್ದೇವೆ ಎಂದು ಹೇಳುವ ಕರ್ನಾಟಕ ಲೋಕಸೇವಾ ಆಯೋಗವು 384 ಕೆ.ಎ.ಎಸ್. ಹುದ್ದೆಗಳ ಭರ್ತಿಗೆ ಮುಖ್ಯ ಪರೀಕ್ಷೆ ನಡೆಸಿ 9 ತಿಂಗಳಾದರೂ ಫಲಿತಾಂಶ ಪ್ರಕಟಿಸಿಲ್ಲ. ಪ್ರಿಲಿಮಿನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಾದ ಪ್ರಮಾದಗಳಿಂದ ಮೊದಲೇ ನೇಮಕಾತಿ ವಿಳಂಬವಾಗಿದ್ದು, ಈಗ ಮುಖ್ಯ ಪರೀಕ್ಷೆ ಫಲಿತಾಂಶ ಪ್ರಕಟಿಸುವುದು ತಡವಾಗುತ್ತಿರುವುದು ಅಭ್ಯರ್ಥಿಗಳಲ್ಲಿ ಬೇಸರ ಮೂಡಿಸಿದೆ. ಹಲವು ಅಭ್ಯರ್ಥಿಗಳು ಬೇರೆ ಅವಕಾಶಗಳನ್ನು ಒಪ್ಪಿಕೊಳ್ಳಬೇಕೋ ಅಥವಾ ಬೇಡವೋ ಎಂಬ ಗೊಂದಲದಲ್ಲಿ ಮುಳುಗಿದ್ದಾರೆ. ಇದೇ ಮೊದಲ ಬಾರಿಗೆ ಕೆಎಎಸ್ ಮುಖ್ಯ ಪರೀಕ್ಷೆಯ ಮೌಲ್ಯಮಾಪನದಲ್ಲಿ ಗೌಪ್ಯತೆ ಕಾಯ್ದುಕೊಳ್ಳಲು ಹೊಸ ತಂತ್ರಜ್ಞಾನ ಇಂಟ್ರಾನೆಟ್ ಬಳಸಲಾಗುತ್ತಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗ ಹೇಳಿತ್ತು. ಆದರೆ, ಒಂಬತ್ತು ತಿಂಗಳು ಕಳೆದರೂ ಇನ್ನೂ ಫಲಿತಾಂಶ ಪ್ರಕಟಿಸದಿರುವುದು ಆಯೋಗದ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಆಯೋಗ ಹೇಳಿದಂತೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡಿದ್ದರೆ ಇನ್ನೂ ಬೇಗ ಫಲಿತಾಂಶ ನೀಡಬಹುದಿತ್ತು. ಆದರೆ, ಫಲಿತಾಂಶ ಪ್ರಕಟಣೆಗೆ ಏಕೆ ತಡ ಮಾಡುತ್ತಿದೆ ಎಂಬುದು ತಿಳಿಯುತ್ತಿಲ್ಲ. ಅಭ್ಯರ್ಥಿಗಳಿಗೆ ಕನಿಷ್ಠ ಪಕ್ಷ ಯಾವುದೇ ಮಾಹಿತಿಯನ್ನೂ ನೀಡುತ್ತಿಲ್ಲ.

2023-24ನೇ ಸಾಲಿನಲ್ಲಿ 384 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ಕೆ.ಎ.ಎಸ್. ನೇಮಕಾತಿಗಾಗಿ ಕೆ.ಪಿ.ಎಸ್.ಸಿ.,ಯು 2024 ಫೆಬ್ರವರಿ 26 ರಂದು ಅಧಿಸೂಚನೆ ಹೊರಡಿಸಿತ್ತು. 2024ರ ಆಗಸ್ಟ್‌ನಲ್ಲಿ ನಡೆದ ಪ್ರಾಥಮಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಅನುವಾದದಲ್ಲಿ ಭಾರಿ ಪ್ರಮಾದಗಳಾಗಿದ್ದರಿಂದ ಪ್ರಿಲಿಮಿನರಿ ಪರೀಕ್ಷೆಯನ್ನು ರದ್ದುಗೊಳಿಸಿ, 2024ರ ಡಿಸೆಂಬರ್ 29 ರಂದು ಮರು ಪರೀಕ್ಷೆ ನಡೆದಿತ್ತು. 2025ರ ಮೇ ತಿಂಗಳಲ್ಲಿ 1:15 ರ ಅನುಪಾತರಲ್ಲಿ ಮುಖ್ಯ ಪರೀಕ್ಷೆಗಳು ನಡೆದಿದ್ದು, ಈವರೆಗೆ ಫಲಿತಾಂಶ ಪ್ರಕಟಿಸಿಲ್ಲ. ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾದಿರುವ ಅಭ್ಯರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೂಡಲೆ ಫಲಿತಾಂಶ ಪ್ರಕಟಿಸುವಂತೆ ಕೆ.ಪಿ.ಎಸ್.ಸಿ ಗೆ ನಿರ್ದೇಶನ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿ ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಖ) ವಿಷಯ:– "ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಸ್ಥೆಗಳು ನೀಡುತ್ತಿರುವ 'ಗೌರವ ಡಾಕ್ಟರೇಟ್' ಪದವಿಗಳ ದುರುಪಯೋಗವನ್ನು ತಡೆಯಲು ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸುವ ಹಾಗೂ ಕಾನೂನುಬದ್ಧ ನಿಯಂತ್ರಣ ಹೇರುವ ಕುರಿತು."**

***

**ಶ್ರೀ ರಮೇಶ್ ಬಾಬು (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯಗಳು ನೀಡುತ್ತಿರುವ ಗೌರವ ಡಾಕ್ಟರೇಟ್ (Honorary Doctorate) ಪದವಿಗಳ ದುರುಪಯೋಗವು ಗಂಭೀರ ಚರ್ಚೆಗೆ ಕಾರಣವಾಗುತ್ತಿದೆ. ಮೂಲತಃ ಸಮಾಜ, ಶಿಕ್ಷಣ, ವಿಜ್ಞಾನ, ಸಾಹಿತ್ಯ, ಕಲೆ ಅಥವಾ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ ಅಪರೂಪದ ವ್ಯಕ್ತಿಗಳನ್ನು ಗೌರವಿಸುವ ಉದ್ದೇಶದಿಂದ ಈ ಪದವಿಯನ್ನು ನೀಡಲಾಗುತ್ತಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಉದ್ದೇಶದಿಂದ ದೂರ ಸರಿದು, ಕೆಲವೊಮ್ಮೆ ರಾಜಕೀಯ ಪ್ರಭಾವ, ಹಣಕಾಸಿನ ಒತ್ತಡ, ವೈಯಕ್ತಿಕ ಪರಿಚಯ ಅಥವಾ ಪ್ರಚಾರಾತ್ಮಕ ಲಾಭಕ್ಕಾಗಿ ಈ ಪದವಿಗಳನ್ನು ನೀಡಲಾಗುತ್ತಿದೆ. ಗೌರವ ಡಾಕ್ಟರೇಟ್ ಪದವಿಗಳ ಅನಿಯಂತ್ರಿತ ವಿತರಣೆಯಿಂದಾಗಿ, ಸಂಶೋಧನೆಯ ಮೂಲಕ ವರ್ಷಗಳ ಕಾಲ ಶ್ರಮಿಸಿ ಡಾಕ್ಟರೇಟ್ ಪಡೆದಿರುವ ವಿದ್ವಾಂಸರ ಗೌರವಕ್ಕೆ ಧಕ್ಕೆಯಾಗುತ್ತಿದೆ. ಇದರಿಂದ ವಿಶ್ವವಿದ್ಯಾಲಯಗಳ ಅಕಾಡೆಮಿಕ್ ವಿಶ್ವಾಸಾರ್ಹತೆ ಕುಸಿಯುವ ಅಪಾಯವೂ ಇದೆ. ಜೊತೆಗೆ "ಡಾಕ್ಟರ್' ಎಂಬ ಪದದ ಮಹತ್ವ ಮತ್ತು ಮೌಲ್ಯವೂ ಸಮಾಜದ ದೃಷ್ಟಿಯಲ್ಲಿ ಕಡಿಮೆಯಾಗುತ್ತಿದೆ.

ಇತ್ತೀಚೆಗೆ ಸಾಹಿತಿ ಬರಗೂರು ರಾಮಚಂದ್ರಪ್ಪನವರು ಕಾರ್ಯಕ್ರಮ ಒಂದರಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಗೌರವ ಡಾಕ್ಟರೇಟ್ ಪದವಿಗೆ ಕಡಿವಾಣ ಹಾಕಲು ಅಗ್ರಹ ಮಾಡಿರುತ್ತಾರೆ. ಕೆಲವು ವಿಶ್ವವಿದ್ಯಾಲಯಗಳು ಡಾಕ್ಟರೇಟ್ ಪಡೆದ ವ್ಯಕ್ತಿಗಳಿಗೆ ಮತ್ತೆ ಮತ್ತೆ ಡಾಕ್ಟರೇಟ್ ಪದವಿಗಳನ್ನು ನೀಡುತ್ತಿರುವುದು ಸಮಂಜಸವಲ್ಲ. ಒಬ್ಬರಿಗೆ ಒಮ್ಮೆ ಡಾಕ್ಟರೇಟ್ ಪದವಿ ನೀಡಿದ ನಂತರ ಮತ್ತೊಮ್ಮೆ ಅದೇ ವ್ಯಕ್ತಿಗೆ ಡಾಕ್ಟರೇಟ್ ಪದವಿ ನೀಡುವ ಅವಶ್ಯಕತೆ ಇರುವುದಿಲ್ಲ. ಅದೇ ರೀತಿ ಕೆಲವು ಖಾಸಗಿ ಸಂಸ್ಥೆಗಳು ಹಣ ಪಡೆದು ಡಾಕ್ಟರೇಟ್ ಪದವಿಗಳನ್ನು ನೀಡುತ್ತಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಇದನ್ನು ನಿಯಂತ್ರಣಕ್ಕೆ ಒಳಪಡಿಸುವ ಜವಾಬ್ದಾರಿ ರಾಜ್ಯ ಸರ್ಕಾರಕ್ಕೆ ಇರುತ್ತದೆ. ಉನ್ನತ ಶಿಕ್ಷಣ ಇಲಾಖೆಯು ನಿಯಮಾವಳಿಯನ್ನು ರೂಪಿಸಿ ವಿಶ್ವವಿದ್ಯಾಲಯಗಳ ಮೇಲೆ ಮತ್ತು ಖಾಸಗಿ ಸಂಸ್ಥೆಗಳ ಮೇಲೆ ನಿಯಂತ್ರಣವನ್ನು ಹೇರಬೇಕು. ಹಣ ಅಥವಾ ಯಾವುದೇ ಪ್ರಭಾವಕ್ಕೆ ಒಳಗಾಗಿ ಗೌರವ ಡಾಕ್ಟರೇಟ್ ಪದವಿ ನೀಡಿದರೆ ಅಂತವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಕಾಯಿದೆಯನ್ನು ರೂಪಿಸಬೇಕು ಗೌರವ ಡಾಕ್ಟರೇಟ್ ನೀಡಲು ಸ್ಪಷ್ಟ ಮಾರ್ಗಸೂಚಿಗಳು, ಅರ್ಹತಾ ಮಾನದಂಡಗಳು, ಪಾರದರ್ಶಕ ಆಯ್ಕೆ ಪ್ರಕ್ರಿಯೆ ಹಾಗೂ ತಜ್ಞ ಸಮಿತಿಯ ಶಿಫಾರಸ್ಸು ಕಡ್ಡಾಯವಾಗಬೇಕು. ವರ್ಷಕ್ಕೆ ನೀಡಬಹುದಾದ ಪದವಿಗಳ ಸಂಖ್ಯೆಗೆ

ಮಿತಿಯನ್ನು ನಿಗದಿಪಡಿಸುವುದೂ ಅಗತ್ಯವಾಗಿದೆ. ಗೌರವ ಡಾಕ್ಟರೇಟ್ ಪದವಿಗಳು ಗೌರವದ ಸಂಕೇತವಾಗಿಯೇ ಉಳಿಯಬೇಕಾದರೆ, ಅವುಗಳ ಮೇಲೆ ರಾಜ್ಯ ಸರ್ಕಾರದ ಪರಿಣಾಮಕಾರಿ ನಿಯಂತ್ರಣ ಅನಿವಾರ್ಯವಾಗಿದ್ದು ರಾಜ್ಯ ಸರ್ಕಾರವು ಇವುಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಾಗಿ ಈ ಸದನದ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಬಾಬು ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(30) 27.01.2026 1.50 ಹೆಚ್‌ವಿ.ಬಿಎನ್‌ಎಸ್**

ಎ) **ವಿಷಯ: ಜಿಲ್ಲೆಯ ಜಲಮೂಲಗಳಿಗೆ ಕಸಾಯಿಖಾನೆ ಹಾಗೂ ಆಸ್ಪತ್ರೆಯ ಅಪಾಯಕಾರಿ ತ್ಯಾಜ್ಯ ಸುರಿಯುತ್ತಿರುವುದರಿಂದ ಉಂಟಾಗಿರುವ ಸಾರ್ವಜನಿಕ ಆರೋಗ್ಯದ ಗಂಭೀರ ಸ್ಥಿತಿಯ ಕುರಿತು."**

---

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ಸ್ವಚ್ಛ ಭಾರತ" ಅಭಿಯಾನದ ದಶಕದ ನಂತರವೂ ರಾಜ್ಯದ ಪರಿಸರ ಸ್ಥಿತಿ ಶೋಚನೀಯವಾಗಿದೆ. ನಗರಗಳಿಗೆ ಸೀಮಿತವಾಗಿದ್ದ ಕಸದ ಗುಡ್ಡಗಳು ಇಂದು ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶಗಳಾದ ಜೋಗ ಮತ್ತು ಆಗುಂಬೆಗಳಂತಹ ತಾಣಗಳನ್ನು ಆಕ್ರಮಿಸಿವೆ. ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಿಸುತ್ತಿದ್ದರೂ ಕೇವಲ ಶಿವಮೊಗ್ಗ ಜಿಲ್ಲೆಯೊಂದರಲೇ ತುಂಗಾ ಮತ್ತು ಭದ್ರಾ ನದಿಗಳು ಜನರ ಪಾಲಿನ ಡಸ್ಟ್‌ಬಿನ್‌ಗಳಾಗಿ ಮಾರ್ಪಟ್ಟಿರುವ ಬಗ್ಗೆ ದಿನಾಂಕ:20.01.2026ರ "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ "ತ್ಯಾಜ್ಯ ತೊಟ್ಟಿಯಾದ ಸಿಹಿಮೊಗೆ" ಎಂಬ ಶಿರೋನಾಮೆಯಡಿ ವರದಿ ಪ್ರಕಟವಾಗಿರುತ್ತದೆ.

ಪ್ರಮುಖವಾಗಿ ಕಸಾಯಿಖಾನೆಗಳ ಮಾಂಸದ ತ್ಯಾಜ್ಯ ಮತ್ತು ಆಸ್ಪತ್ರೆಯ ಅಪಾಯಕಾರಿ ತ್ಯಾಜ್ಯಗಳನ್ನು ನೇರವಾಗಿ ನದಿ ಹಾಗೂ ಚರಂಡಿಗಳಿಗೆ ಸುರಿಯಲಾಗುತ್ತಿದೆ. ಇದು ಜನ ಜಾನುವಾರುಗಳ ಆರೋಗ್ಯದ ಮೇಲೆ ಗಂಭೀರವಾದ ಪರಿಣಾಮ ಬೀರುತ್ತಿದೆ. ಅದರ ಜೊತೆಗೆ ಜಿಲ್ಲೆಯ ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ವೈಜ್ಞಾನಿಕ ಘಟಕಗಳಿಲ್ಲ, ಮನೆ ಹಂತದಲ್ಲಿ ಕಸ ವಿಂಗಡಣೆ ಕೇವಲ ಘೋಷಣೆಯಾಗಿ ಉಳಿದಿದೆ. ಪ್ರವಾಸಿಗರು ಕಾಡು ಮತ್ತು ಜಲಪಾತಗಳ ಬಳಿ ಪ್ಲಾಸ್ಟಿಕ್ ಹಾಗೂ ಮದ್ಯದ ಬಾಟಲಿಗಳನ್ನು ಎಸೆದು ವಿಕೃತಿ ಮೆರೆಯುತ್ತಿದ್ದಾರೆ.

ಈ ಎಲ್ಲ ಅಂಶಗಳನ್ನು ಮನಗಂಡು ಸರ್ಕಾರವು ಕೇವಲ ಕಸದ ವಾಹನಗಳನ್ನು ಮಂಜೂರು ಮಾಡಿದರೆ ಸಾಲದು, ಕಸ ಸುರಿಯುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಸಿ.ಸಿ., ಟಿ.ವಿ ಕಣ್ಗಾವಲು ಹೆಚ್ಚಿಸಬೇಕು ಮತ್ತು ಗ್ರಾಮೀಣ ಭಾಗದಲ್ಲಿ ತ್ಯಾಜ್ಯ ನಿರ್ವಹಣೆಗೆ ವಿಶೇಷ ಅನುದಾನ ನೀಡಬೇಕೆಂದು ಈ ಮೂಲಕ ಮಾನ್ಯ ಪೌರಾಡಳಿತ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಏ) ವಿಷಯ: "ಪಶ್ಚಿಮ ಘಟ್ಟಗಳ ಭೂಕುಸಿತದ ಆತಂಕ ಮತ್ತು ಐ.ಐ.ಟಿ. ಧಾರವಾಡದ ವರದಿಯ ಹಿನ್ನೆಲೆಯಲ್ಲಿ ನದಿ ಜೋಡಣೆ ಯೋಜನೆಗಳ ಮರುಪರಿಶೀಲನೆಯ ಕುರಿತು."**

----

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್ ಕೆ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಪಶ್ಚಿಮ ಘಟ್ಟಗಳು ಜೀವವೈವಿಧ್ಯತೆಯ ಪ್ರಮುಖ ತಾಣಗಳಾಗಿವೆ. ಇಲ್ಲಿನ ಭೂ ಬಳಕೆಯ ಸ್ವರೂಪವು ತೀವ್ರಗತಿಯಲ್ಲಿ ನಿರಂತರವಾಗಿ ಬದಲಾಗುತ್ತಿವೆ. ಈ ಪ್ರದೇಶದಲ್ಲಿ ಭೂ ಕುಸಿತದ ಪ್ರಕರಣಗಳು ಹೆಚ್ಚುತ್ತಿದ್ದು, 2024ರಲ್ಲಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ 40ಕ್ಕೂ ಹೆಚ್ಚು ಭೂ ಕುಸಿತಗಳು ಈಗಾಗಲೇ ಸಂಭವಿಸಿವೆ. ಪಶ್ಚಿಮ ಘಟ್ಟಗಳಲ್ಲಿ ಭೂ ಕುಸಿತದ ಪ್ರಕರಣಗಳು ಮರುಕಳಿಸುತ್ತಿರುವುದರಿಂದ ಅಲ್ಲಿನ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗುತ್ತಿದ್ದು, ಸಾಮಾಜಿಕ–ಆರ್ಥಿಕ ಬಿಕ್ಕಟ್ಟುಗಳನ್ನೂ ಸೃಷ್ಟಿಸುತ್ತಿವೆ. ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅವೈಜ್ಞಾನಿಕವಾದ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದು ಭೂ ಕುಸಿತದ ಸಾಧ್ಯತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆಂದು ಹಿಂದಿನಿಂದಲೂ ಹಲವು ತಜ್ಞರು ಹೇಳುತ್ತಲೇ ಬಂದಿದ್ದಾರೆ.

ಐ.ಐ.ಟಿ., ಧಾರವಾಡದಿಂದ ಭೂ ಕುಸಿತಕ್ಕೆ ಸಂಬಂಧಿಸಿದ ಪ್ರಮುಖ ಅಧ್ಯಯನ ವರದಿಯೊಂದು "ಜಿಯೋಹ ಝಾರ್ಡಸ್ ಮೆಕ್ಯಾನಿಕ್ಸ್" ಜರ್ನಲ್‌ನಲ್ಲಿ ಪ್ರಕಟವಾಗಿದ್ದು, ಆ ವರದಿಯಲ್ಲಿ ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಶೇಕಡಾ 60ಕ್ಕೂ ಹೆಚ್ಚು ಭಾಗವು ಸಂಭವನೀಯ ಭೂ ಕುಸಿತದ ಪ್ರದೇಶವಾಗಿದ್ದು, ರಾಜ್ಯದಲ್ಲಿ ಪಶ್ಚಿಮ ಘಟ್ಟವು ಹರಡಿರುವ ಏಳು ಜಿಲ್ಲೆಗಳಲ್ಲಿ ಭೂ ಕುಸಿತದ ಸಾಧ್ಯತೆಗಳು ಹೆಚ್ಚಿವೆಯೆಂದು ಉಲ್ಲೇಖಿಸಲಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಸಂಭವನೀಯ ಗುಡ್ಡ ಕುಸಿತದ ಹಾನಿ ತಡೆಯುವುದು ಈ ಅಧ್ಯಯನ ವರದಿಯ ಆಶಯವಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಬೇಡ್ತಿ–ವರದಾ ನದಿ ಜೋಡಣೆ ಯೋಜನೆ ಜಾರಿಗೆ ಸರ್ಕಾರ ಮುಂದಾಗಿದ್ದು, ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಯ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ವಯ್‌ನಾಡಿನಲ್ಲಿ ಆದ ಗುಡ್ಡ ಕುಸಿತ, ಶಿರೂರು ಗುಡ್ಡ ಕುಸಿತದಂಥ ಪ್ರಕರಣಗಳು ಮತ್ತು ತಜ್ಞರ ಅಧ್ಯಯನ ವರದಿಗಳು ಭೂ ಕುಸಿತದ ಘೋರ ಪರಿಣಾಮಗಳನ್ನು ಜನರ ಮುಂದಿಟ್ಟಿದ್ದು, ಯೋಜನೆಯನ್ನು ಮತ್ತೊಮ್ಮೆ ಪರಿಶೀಲಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಐ) ವಿಷಯ: ರಾಜ್ಯದ ನಾಲ್ಕು ಸಾರಿಗೆ ನಿಗಮಗಳ 1.15 ಲಕ್ಷ ನೌಕರರ ವೇತನ ಪರಿಷ್ಕರಣೆ ವಿಳಂಬ ಮತ್ತು 38 ತಿಂಗಳ ಬಾಕಿ ಪಾವತಿಸದ ಹಿನ್ನೆಲೆಯಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿನ ಕುರಿತು."**

----

**ಶ್ರೀ ಜಗದೇವ ಗುತ್ತೇದಾರ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ಶಕ್ತಿದಾತರೇ ಅಶಕ್ತರು!" "ವೇತನ ಹಿಂಬಾಕಿಗಾಗಿ 1.15 ಲಕ್ಷ ಸಾರಿಗೆ ಸಿಬ್ಬಂದಿ ಹೆಣಗಾಟ", "ಸರ್ಕಾರ ಗಮನಹರಿಸದಿದ್ದರೆ ಸಿಡಿದೇಳಲು ನೌಕರರು ಸಜ್ಜು", "ನೋಟೀಸ್ ನೀಡದೆ ಮುಷ್ಕರ ಎಂದು ಯೂನಿಯನ್ ಎಚ್ಚರಿಕೆ" ಎಂದು "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದೆ. ಕರ್ನಾಟಕ ರಾಜ್ಯ ಸಾರಿಗೆ ನಿಗಮಗಳಲ್ಲಿ ದುಡಿಯುತ್ತಿರುವ ಸುಮಾರು 1.15 ಲಕ್ಷ ಅಧಿಕಾರಿ, ನೌಕರರಿಗೆ ಸಕಾಲದಲ್ಲಿ ವೇತನ ಪರಿಷ್ಕರಣೆಯಾಗುತ್ತಲೇ ಇಲ್ಲ. ಅಲ್ಲದೇ, 38 ತಿಂಗಳ ವೇತನ ಹಿಂಬಾಕಿಯೂ ಸಿಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಗೆ ಶ್ರಮಿಸುತ್ತಿರುವ ನೌಕರರು ವೇತನವಿಲ್ಲದೆ ಅಶಕ್ತರಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಸಾರಿಗೆ ನಿಗಮಗಳು ಸರ್ಕಾರಿ ಸ್ವಾಮ್ಯದ ಸ್ವಾಯುತ್ತ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳ ನಿರ್ವಹಣೆ, ಸಿಬ್ಬಂದಿ ವೇತನ ಪಾವತಿ ಹಾಗೂ ಎಲ್ಲ ಆರ್ಥಿಕ ಸೌಲಭ್ಯಗಳನ್ನು ತಮ್ಮ ಆಂತರಿಕ ಮೂಲದಿಂದಲೇ ಭರಿಸಬೇಕಾಗಿದೆ. ಆದರೆ, ಕೆ.ಎಸ್.ಆರ್.ಟಿ.ಸಿ., ಬಿ.ಎಂ.ಟಿ.ಸಿ., ವಾಯುವ್ಯ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಂತಹ ಸಾರಿಗೆ ನಿಗಮಗಳು ಹಲವು ವರ್ಷಗಳಿಂದ ನಷ್ಟದಲ್ಲಿದ್ದು, ಸರ್ಕಾರದ ನೆರವಿನ ಹೊರತಾಗಿಯೂ ಚೇತರಿಸಿಕೊಳ್ಳುತ್ತಿಲ್ಲ. ಪರಿಣಾಮ, ಸರ್ಕಾರದ ಇತರೆ ಇಲಾಖೆಗಳ ನೌಕರರಿಗೆ ಸಿಗುವಂತೆ ಸಕಾಲದಲ್ಲಿ ವೇತನ ಹಾಗೂ ಇತರೆ ಸೌಲಭ್ಯಗಳೂ ದೊರಕುತ್ತಿಲ್ಲ. ಸುಮಾರು 1,800 ಕೋಟಿ ರೂಪಾಯಿಗಳ ವೇತನ ಹಿಂಬಾಕಿಯಿದೆ. ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ, ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ನಾಲ್ಕು ವರ್ಷಗಳಿಗೊಮ್ಮೆ ವೇತನ ಪರಿಷ್ಕರಣೆ ಮಾಡಬೇಕಿದೆ. ಅದರಂತೆ 2016ರಲ್ಲಿ ವೇತನ ಪರಿಷ್ಕರಣೆಯಾಗಿದ್ದು ನಂತರ 2020ರಲ್ಲಿ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು.

ಕೈಗಾರಿಕಾ ಒಪ್ಪಂದದನ್ವಯ ಸಾರಿಗೆ ನಿಗಮಗಳ ಅಧಿಕಾರಿ, ನೌಕರರಿಗೆ ದಿನಾಂಕ:01.01.2024ರಿಂದ ಜಾರಿಗೆ ಬರುವಂತೆ ವೇತನ ಹೆಚ್ಚಳ ಮಾಡಬೇಕಿತ್ತು. ಆದರೆ, ಎರಡು ವರ್ಷ ಕಳೆದರೂ ಸರ್ಕಾರ ವೇತನ ಪರಿಷ್ಕರಣೆ ಮಾಡಿಲ್ಲ. ಈ ಹಿಂದೆ ನಾನಾ ಬೇಡಿಕೆಗಳನ್ನು ಮುಂದಿಟ್ಟು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನೌಕರರು ಸಿದ್ದಗೊಂಡಿದ್ದರು.

ಆಗ ಹೈಕೋರ್ಟ್ ಮಧ್ಯ ಪ್ರವೇಶಿಸಿ ಮುಷ್ಕರ ನಡೆಸದಂತೆ ಮಧ್ಯಂತರ ತಡೆ ನೀಡಿತ್ತು. ಹೀಗಾಗಿ ಅವರು ಮುಷ್ಕರ ಕೈಬಿಟ್ಟಿದ್ದರು. ಇದಾದ ನಂತರವೂ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರೊಂದಿಗೆ ಸಭೆಗಳಾಗಿವೆ. ಆದರೆ, ವೇತನ ಪರಿಷ್ಕರಣೆ ಹಿಂಬಾಕಿ ಪಾವತಿ ಕುರಿತು ಅಂತಿಮ ತೀರ್ಮಾನವಾಗಿಲ್ಲ. ಅವರು ಈಗಾಗಲೇ 29ನೇ ತಾರೀಖಿನಂದು ಸ್ಟ್ರೈಕ್ ಮಾಡಿ "ಬೆಂಗಳೂರು ಚಲೋ" ಚಳುವಳಿಯನ್ನು ಹಮ್ಮಿಕೊಂಡಿದ್ದಾರೆ. ಆದ್ದರಿಂದ ಕೂಡಲೇ ಸಾರಿಗೆ ಸಿಬ್ಬಂದಿಗಳ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕೆನ್ನುವ ವಿಷಯವನ್ನು ಪ್ರಸ್ತಾಪಿಸುತ್ತಾ, ಸರ್ಕಾರ ಕೂಡಲೇ ಅವರಿಗೆ ನ್ಯಾಯವನ್ನು ಒದಗಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ರಾಮಲಿಂಗಾರೆಡ್ಡಿ(ಸಾರಿಗೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಪ್ರತಿ ತಿಂಗಳು ಒಂದನೆಯ ತಾರೀಖಿಗೆ ಸಂಬಳವನ್ನು ನೀಡಲಾಗುತ್ತಿದೆ. ಇದರಲ್ಲಿ ಏನೂ ಸಮಸ್ಯೆ ಇಲ್ಲ. ಹಿಂದೆ ಒಂದು ತಿಂಗಳ ಸಂಬಳವನ್ನು ಎರಡು ಬಾರಿ ನೀಡುತ್ತಿದ್ದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆ ರೀತಿಯಾಗಿರುವ ಯಾವುದೇ ಸಮಸ್ಯೆ ಇಲ್ಲ. ಈಗ ಇಲ್ಲಿರುವ ಸಮಸ್ಯೆ ಏನೆಂದರೆ, 2023ನೇ ಇಸವಿಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಬಾಕಿ ಒಟ್ಟು 4,999 ಕೋಟಿ ರೂಪಾಯಿಗಳಷ್ಟು ಇತ್ತು. ಅದರಲ್ಲಿ ಕೆ.ಎಸ್.ಆರ್.ಟಿ.ಸಿ.,ಗೆ 1,211 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಬಿ.ಎಂ.ಟಿ.ಸಿ.,ಗೆ 1,381 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ವಾಯುವ್ಯ ಕರ್ನಾಟಕ ಸಾರಿಗೆಗೆ 1,253 ಕೋಟಿ ರೂಪಾಯಿಗಳು ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ವಿಭಾಗಕ್ಕೆ ಸುಮಾರು 251 ಕೋಟಿ ರೂಪಾಯಿಗಳಷ್ಟು ಬಾಕಿ ಇತ್ತು. ಒಟ್ಟಾರೆಯಾಗಿ ಸುಮಾರು 4,999 ಕೋಟಿ ರೂಪಾಯಿಗಳಷ್ಟು ಸಾಲ ಇತ್ತು. ಇದರಿಂದಾಗಿ ಸ್ವಲ್ಪ ಸಮಸ್ಯೆಗಳುಂಟಾಗಿತ್ತು. ಅದರಲ್ಲಿ ಭವಿಷ್ಯ ನಿಧಿ, ಇಂಧನ ಕಂಪನಿಗಳಿಗೆ ನೀಡಬೇಕಾಗಿದ್ದ ಬಾಕಿ ಹೀಗೆ ಸಾಕಷ್ಟು ಬಾಕಿ ಇತ್ತು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡ ಮೇಲೆ ಸುಮಾರು 2,000 ಕೋಟಿ ರೂಪಾಯಿಗಳನ್ನು ಸರ್ಕಾರವೇ ತೀರಿಸಿಕೊಳ್ಳುವಂತೆ ಹೇಳಿ ಹಣವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಮೋಟರ್ ವೆಹಿಕಲ್ ಟ್ಯಾಕ್ಸ್ ಎಲ್ಲವನ್ನು ಸೇರಿಸಿ ಸುಮಾರು 3.5 ಕೋಟಿ ರೂಪಾಯಿಗಳನ್ನು ಸಾರಿಗೆ ಸಂಸ್ಥೆಗಳ ಪುನಶ್ಚೇತನಕ್ಕಾಗಿ ಸರ್ಕಾರ ಕೊಟ್ಟಿದೆ.

ಸನ್ಮಾನ್ಯ ಸಭಾಪತಿಯವರೇ, ಸುಮಾರು ನಾಲ್ಕು ವರ್ಷಗಳಿಗೊಮ್ಮೆ ಯೂನಿಯನ್ ಮತ್ತು ನಮ್ಮ ನಡುವೆ ಒಪ್ಪಂದವಾಗುತ್ತದೆ. ಹಿಂದೆ 2016ನೇ ಇಸವಿಯಲ್ಲಿ ನಾನು ಇದೇ ಇಲಾಖೆಯ ಮಂತ್ರಿಯಾಗಿದ್ದಾಗ, ಶೇಕಡಾ 12.5ರಷ್ಟು ಹೆಚ್ಚುವರಿ ಸಂಬಳವನ್ನು ಕೊಟ್ಟು ವೇತನ ಪರಿಷ್ಕರಣೆ ಮಾಡಲಾಗಿತ್ತು. 2020ನೇ ಇಸವಿಯಲ್ಲಿ ಪುನಃ ವೇತನ ಪರಿಷ್ಕರಣೆಯಾಗಬೇಕಾಗಿತ್ತು. ಕೋವಿಡ್-19 ಹಿನ್ನೆಲೆಯಲ್ಲಿ 2020, 2021 ಮತ್ತು 2022ನೇ

ಇಸವಿಯಲ್ಲಿ ವೇತನ ಪರಿಷ್ಕರಣೆ ಮಾಡಿಲ್ಲ. 2023ನೇ ಇಸವಿಯಲ್ಲಿ ಅಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡು ದಿನಾಂಕ:01.03.2023ರಿಂದ ಅನ್ವಯವಾಗುವಂತೆ ಆದೇಶ ನೀಡಿ, ಜಾರಿಗೊಳಸಲಾಗಿದೆ. ಇದನ್ನು ಪೂರ್ವಾನ್ವಯವಾಗುವಂತೆ ದಿನಾಂಕ:01.01.2020ರಿಂದ ಜಾರಿಗೊಳಸಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ. ಆದರೆ, ಅದನ್ನು ದಿನಾಂಕ:01.03.2023ರ ನಂತರ ಅನ್ವಯವಾಗುವಂತೆ ಜಾರಿಗೊಳಸಿರುವುದರಿಂದ ನಮಗೆ 2020ರಿಂದ ಪೂರ್ವಾನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಿ ಕೊಡಬೇಕೆನ್ನುವುದು ಯೂನಿಯನ್‌ರವರ ವಾದವಾಗಿದೆ. ಇದರ ಬಗ್ಗೆ 3-4 ಬಾರಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಲಾಗಿದೆ. ಮೊನ್ನೆಯೂ ಚರ್ಚೆ ಮಾಡಿದ್ದೇನೆ. ಈ ತಿಂಗಳ 29ನೇ ತಾರೀಖಿನಂದು ಬೆಂಗಳೂರು ಚಲೋ ಚಳುವಳಯನ್ನು ಹಮ್ಮಿಕೊಂಡಿದ್ದಾರೆ. ನಾನು ಯೂನಿಯನ್ ಮುಖಂಡರುಗಳ ಜೊತೆಗೆ ಮಾತನಾಡಿದ್ದೇನೆ. ದಿನಾಂಕ:01.03.2023ರ ನಂತರ ಅನ್ವಯವಾಗುವಂತೆ ವೇತನ ಪರಿಷ್ಕರಣೆಯನ್ನು ಜಾರಿಗೊಳಸಿದರೂ ಸಹ ಅಂದಿನ ಸರ್ಕಾರ ಆಯವ್ಯಯದಲ್ಲಿ ಹಣವನ್ನು ಮೀಸಲಿಟ್ಟಿರಲಿಲ್ಲ. ಇದನ್ನು ಪೂರ್ವಾನ್ವಯವಾಗುವಂತೆ ಜಾರಿಗೊಳಸಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಆ ಕಾರಣದಿಂದಾಗಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ.

ಒ) **ವಿಷಯ: ರಾಜ್ಯದಲ್ಲಿ ಖಾಲಿ ಇರುವ ಸುಮಾರು ಎರಡು ಲಕ್ಷ ಸರ್ಕಾರಿ ಹುದ್ದೆಗಳ ನೇಮಕಾತಿ ವಿಳಂಬ ಮತ್ತು ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಹಿನ್ನಡೆಯ ಕುರಿತು**

–

---

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಲಕ್ಷಾಂತರ ಯುವಕ/ಯುವತಿಯವರು ವಿಶೇಷವಾಗಿ ಗ್ರಾಮೀಣ ಭಾಗದ ಯುವಕರು ಸರ್ಕಾರಿ ನೌಕರಿಯನ್ನು ಪಡೆದುಕೊಳ್ಳಬೇಕೆಂಬ ಹಂಬಲದೊಂದಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸ್ವಂತ ಗ್ರಾಮ ಹಾಗೂ ಕುಟುಂಬಗಳನ್ನು ತೊರೆದು ಸುಮಾರು 5–6 ವರ್ಷಗಳಿಂದ ದೂರದ ಬೆಂಗಳೂರು, ಧಾರವಾಡ ಹಾಗೂ ಕಲ್ಯಾಣ ಕರ್ನಾಟಕ ಜಿಲ್ಲೆಗಳಿಂದ ನಗರ ಪ್ರದೇಶಗಳಿಗೆ ಬಂದು ಅಲ್ಲಿ ಬಾಡಿಗೆ ಮನೆ/ಪಿಜಿ/ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡು ಪಾರ್ಟ್ ಟೈಮ್ ಕೆಲಸಗಳ ಜೊತೆಗೆ ಕಷ್ಟಪಟ್ಟು ಹಗಲಿರುಳು ವಿದ್ಯಾಭ್ಯಾಸ ಮಾಡಿ ಸರ್ಕಾರಿ ನೌಕರಿ ಪಡೆದುಕೊಳ್ಳಬೇಕೆಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಕಾಲ–ಕಾಲಕ್ಕೆ ಸಂಬಂಧಪಟ್ಟ ವಿವಿಧ ಇಲಾಖೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸದೇ ಇರುವುದರಿಂದ ಲಕ್ಷಾಂತರ ಯುವಕರು ಬದುಕಿನ ಬಗ್ಗೆ ಭರವಸೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರ ಇತ್ತೀಚೆಗೆ ವಯೋಮಾನ ಸಡಿಲಿಕೆ ಮಾಡಿದೆ. ಆದರೆ, ಸರ್ಕಾರ ಹುದ್ದೆಗಳ ನೇಮಕಾತಿಯೇ ನಡೆಸದೇ ಹೋದರೆ ವಯೋಮಾನ ಸಡಿಲಿಕೆ ಮಾಡಿದರೆ ಏನು ಪ್ರಯೋಜನ ಎಂಬಂತಾಗಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಸುಮಾರು ೨೦,೦೦೦ಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇರುವುದರಿಂದ ಈ ಭಾಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದರಿಂದಾಗಿ ನಮ್ಮ ಕಲ್ಯಾಣ ಕರ್ನಾಟಕ ಭಾಗವು ಪ್ರಾರಂಭದಿಂದಲೂ ರಾಜ್ಯದಲ್ಲಿಯೇ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಜಿಲ್ಲೆ ಎಂಬ ಕುಖ್ಯಾತಿಗೆ ಕಾರಣವಾಗಿದೆ ಎಂಬುದು ವಿಷಾದನೀಯ ಸಂಗತಿಯಾಗಿದೆ ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ಸರಿಸುಮಾರು ೫,೦೦೦ಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿ ಮಾಡಿಕೊಳ್ಳುತ್ತೇವೆಂಬ ಭರವಸೆ ನೀಡಿದ್ದರೂ ಇನ್ನೂ ಸಹ ಹುದ್ದೆಗಳನ್ನು ತುಂಬಿಕೊಂಡಿರುವುದಿಲ್ಲ. ಇದರಿಂದ ಶೈಕ್ಷಣಿಕವಾಗಿ ಹಿನ್ನಡೆಯಾಗಿರುತ್ತದೆ.

ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂವಿಧಾನದ ಅನುಚ್ಛೇಧ 371 (ಜೆ)ಯಡಿಯಲ್ಲಿ ರೂಲ್ 10/ 2 ಪ್ರಕಾರ ಯಾವುದೇ ಆರ್ಥಿಕ ನಿರ್ಬಂಧ ಇರುವುದಿಲ್ಲ. ಆದರೂ ಸಹ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುತ್ತಿಲ್ಲ, ಕಾರಣವೇನು?

ಆದ್ದರಿಂದ ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಲಕ್ಷಾಂತರ ಯುವಕ/ಯುವತಿಯರು/ಉದ್ಯೋಗ ಆಕಾಂಕ್ಷಿಗಳು ರಾಜ್ಯದ ಬೀದಿಗಿಳದು ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ.

ಯುವಕರ ಉಜ್ವಲ ಭವಿಷ್ಯಕ್ಕೆ ಯುವಕರ ಔದ್ಯೋಗಿಕ ಕನಸುಗಳು ಕಮರುವ ಮುನ್ನ ರಾಜ್ಯದಲ್ಲಿನ ಖಾಲಿ ಇರುವ ವಿವಿಧ ಇಲಾಖೆಗಳ ಸುಮಾರು ಎರಡು ಲಕ್ಷಕ್ಕಿಂತ ಅಧಿಕ ಸರ್ಕಾರಿ ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುತ್ತದೆ.

(ಮುಂದುವರಿದಿದೆ)

(31) 27.1.2026 2.00 ಪಿಕೆ : ಬಿಎನ್‌ಎಸ್. (ಸಭಾಪತಿಗಳ ಉಪಸ್ಥಿತಿ)

ಒ) **ವಿಷಯ: ರಾಜ್ಯದಲ್ಲಿ ಖಾಲಿ ಇರುವ ಸುಮಾರು ಎರಡು ಲಕ್ಷ ಸರ್ಕಾರಿ ಹುದ್ದೆಗಳ ನೇಮಕಾತಿ ವಿಳಂಬ ಮತ್ತು ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ ಹಿನ್ನಡೆಯ ಕುರಿತು**

............

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, 2025ನೇ ಸಾಲಿನಲ್ಲಿ ರಾಜ್ಯದ 10 ಇಲಾಖೆಯ ಹಾಗೂ ವಿವಿಧ ನಿಗಮಗಳಲ್ಲಿ ತೆರವಾಗಿರುವ ಹುದ್ದೆಗಳನ್ನು ತುಂಬಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪರೀಕ್ಷೆ ನಡೆಸಲು ಅರ್ಜಿಗಳನ್ನು ಆಹ್ವಾನಿಸಿತ್ತು. ನೇಮಕಾತಿ ಅಧಿಸೂಚನೆ ಹೊರಡಿಸಿದ ಒಟ್ಟು 976 ವಿವಿಧ ಹುದ್ದೆಗಳಿಗೆ ಅರ್ಜಿ ಸ್ವೀಕರಿಸಲಾಗಿದೆ. ಇದರಿಂದ ರೂ. 44 ಕೋಟಿ ಶುಲ್ಕ ಸಂಗ್ರಹವಾಗಿದೆ ಎಂದು ಪತ್ರಿಕಾ ವರದಿಯಲ್ಲಿ ತಿಳಿಸಲಾಗಿದೆ.

ಪರೀಕ್ಷಾ ಪ್ರಾಧಿಕಾರದ ಪ್ರಕಾರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಹಾಯಕ ಸಂಚಾರ ನಿರೀಕ್ಷಕರ 9 ಹುದ್ದೆಗೆ 5,117 ಅರ್ಜಿ ಹಾಕಿದ್ದಾರೆ. ಅದೇ ರೀತಿ ರಾಜೀವ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಿರಿಯ ಸಹಾಯಕರ 25 ಹುದ್ದೆಗೆ 55,923 ಅರ್ಜಿ ಹಾಕಿದ್ದಾರೆ. 12 ಸಹಾಯಕರ ಹುದ್ದೆಗೆ 34,661 ಜನರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅದರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಹಾಯಕರ 20 ಹುದ್ದೆಗೆ 92,672 ಜನರು ಅರ್ಜಿ ಸಲ್ಲಿಸಿದ್ದಾರೆ.

ಈ ಎಲ್ಲ ಅಂಕಿ ಅಂಶಗಳನ್ನು ನೋಡಿದಾಗ ನಮಗೆ ತಿಳಿಯುವುದೇನೆಂದರೆ, ನಮ್ಮ ರಾಜ್ಯದಲ್ಲಿ ಎಷ್ಟೊಂದು ನಿರುದ್ಯೋಗ ಸಮಸ್ಯೆ ಇರುವುದು ಎಂದು. ಒಂದು ಹುದ್ದೆಗೆ 865 ಅರ್ಜಿಗಳು ಸ್ವೀಕೃತಗೊಂಡಿರುವುವು. ರಾಜ್ಯದಲ್ಲಿ ಕಳೆದ 8 – 10 ವರ್ಷಗಳಿಂದ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿಗಳು ಅನೇಕ ಕಾರಣಗಳಿಂದ ಸಂಪೂರ್ಣವಾಗಿ ನಿಂತು ಹೋಗಿರುವವು. ಈ ಕಾರಣಕ್ಕಾಗಿಯೇ ನಿರುದ್ಯೋಗಿ ಯುವ ಪದವೀಧರರು ಇತ್ತೀಚೆಗೆ ಧಾರವಾಡದಲ್ಲಿ ಎರಡು ಬಾರಿ ಹಾಗೂ ಬಿಜಾಪುರದಲ್ಲಿ ಒಂದು ಬಾರಿ ಸರ್ಕಾರದ ವಿರುದ್ಧ ದೊಡ್ಡ ಪ್ರತಿಭಟನೆ ಹಮ್ಮಿಕೊಂಡಿರುವುದು ಸರ್ಕಾರಕ್ಕೆ ತಿಳಿದ ಸಂಗತಿ.

ಈ ಹಿನ್ನೆಲೆಯಲ್ಲಿ ಸರಕಾರ ಎಸ್.ಸಿ. ಒಳಮೀಸಲಾತಿ ಮತ್ತು ಇತರ ಸಮಸ್ಯೆಗಳ ಕುರಿತು ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಆದಷ್ಟು ಬೇಗನೆ ಇತ್ಯರ್ಥಪಡಿಸುವಲ್ಲಿ ವಿಶೇಷ ಆಸಕ್ತಿ ವಹಿಸಿ ಪರಿಹರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುವೆನು. ಇದಕ್ಕೆ ಸಂಬಂಧಿಸಿದಂತೆ ನೇಮಕಾತಿ ಹಾಗೂ ಮೀಸಲಾತಿ ಕುರಿತು ಇದೇ ದಿನಾಂಕ 20-01-2026 ರಂದು ಮುಖ್ಯ ನ್ಯಾಯಮೂರ್ತಿ ಶ್ರೀ ವಿಭು ಭಕ್ರು ಮತ್ತು ನ್ಯಾಯಮೂರ್ತಿ ಶ್ರೀ ಎಸ್.ಎಮ್. ಪೋಣಚ್ಚ ನೇತೃತ್ವದ ವಿಭಾಗೀಯ ನ್ಯಾಯ ಪೀಠ ವಿಚಾರಣೆ ನಡೆಸಿ ತೀರ್ಪು ನೀಡಿದ ಬಗ್ಗೆ ಸೂಕ್ತ ಕ್ರಮ ಕೈಗೊಂಡು ನೇಮಕಾತಿಗಳನ್ನು ಪ್ರಾರಂಭಿಸಲು ವಿನಂತಿಸಿಕೊಳ್ಳುವೆನು.

ಇದು ಅಲ್ಲದೇ ರಾಜ್ಯದ 43 ಇಲಾಖೆಗಳಲ್ಲಿ ಖಾಲಿ ಇರುವ ಸುಮಾರು 2 ಲಕ್ಷ 84 ಸಾವಿರ ಹುದ್ದೆಗಳಲ್ಲಿ 23,000 ಹುದ್ದೆಗಳನ್ನು ಮಾತ್ರ ತುಂಬುವ ಉದ್ದೇಶದ ಬದಲಾಗಿ ಕನಿಷ್ಠ 1 ಲಕ್ಷ ಹುದ್ದೆಗಳನ್ನಾದರೂ ತುಂಬುವ ಹಾಗೆ ಮುಂಬರುವ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ರಾಜ್ಯದ ನಿರುದ್ಯೋಗಿ ಯುವ ಪದವೀಧರರ ಪರವಾಗಿ ಒತ್ತಾಯಿಸುವೆನು.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

ಓ) ವಿಷಯ: **ಬಾಗಲಕೋಟೆ ಜಿಲ್ಲೆಯ ಐಹೊಳೆ ಗ್ರಾಮ ಸ್ಥಳಾಂತರ, ಬಾದಾಮಿ ಅಗಸ್ತ್ಯತೀರ್ಥ ಅಭಿವೃದ್ಧಿ ಹಾಗೂ ಕೂಡಲಸಂಗಮದ ಅಂತರಾಷ್ಟ್ರೀಯ ಬಸವ ಕೇಂದ್ರದ ಕಾರ್ಯ ಪೂರ್ಣಗೊಳಿಸುವ ಕುರಿತು.**

---

**ಶ್ರೀ ಪಿ.ಹೆಚ್.ಪೂಜಾರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ದಿನಾಂಕ: 27–01–2026, ಮಂಗಳವಾರದಂದು ಕನ್ನಡ ದಿನ ಪತ್ರಿಕೆಯಲ್ಲಿ "ಪ್ರವಾಸೋದ್ಯಮಕ್ಕೆ ಸಿಗದ ಕಾಯಕಲ್ಪ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

ವಿಶ್ವದ ಪ್ರಸಿದ್ಧ ಪ್ರವಾಸಿ ತಾಣಗಳು ಹೊಂದಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಕಷ್ಟು ಅವಕಾಶಗಳಿದ್ದರೂ, ನಿಶ್ಚಿತ ಗುರಿಯೊಂದಿಗೆ ಅಭಿವೃದ್ಧಿ ಸಾಗದ್ದರಿಂದ ಪ್ರವಾಸೋದ್ಯಮ ಬೆಳವಣಿಗೆ ಕಾಣದಿರುವುದು ಅತ್ಯಂತ ದುರ್ದೈವ ಮತ್ತು ನೋವಿನ ಸಂಗತಿಯಾಗಿದೆ.

ಜಿಲ್ಲೆಯಲ್ಲಿ ಚಾಲುಕ್ಯರ ಶಿಲ್ಪಕಲೆಯ ತೊಟ್ಟಿಲಾದ ಐಹೊಳೆ ಗ್ರಾಮದ ಸ್ಥಳಾಂತರ ವಿಷಯ ಹಲವಾರು ವರ್ಷಗಳಿಂದ ಕೇಳ ಬರುತ್ತಲೇ ಇದೆ. ಇಡೀ ಗ್ರಾಮದ ಬದಲಾಗಿ ಸ್ಮಾರಕಗಳಿಗೆ ಹೊಂದಿಕೊಂಡಿರುವ 134 ಮನೆಗಳನ್ನು ಸ್ಥಳಾಂತರಿಸಲು ರೂ.2.90 ಕೋಟಿ ನೀಡಿ 13 ಎಕರೆ ಭೂಮಿ ಖರೀದಿಸಲಾಗಿದೆ. ಅಲ್ಲಿ ನಿವೇಶನಗಳನ್ನು ರಚಿಸಿ ಮೂಲಸೌಲಭ್ಯ ಒದಗಿಸಲು ರೂ. 12 ಕೋಟಿಗಳ ಮೊತ್ತದ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ವರಿದಿಯಾಗಿದೆ. ಈ ಬಾರಿಯ ಬಜೆಟ್‌ನಲ್ಲಿ ಇದಕ್ಕೆ ಹೆಚ್ಚಿನ ನೆರವು ವಿಶ್ವಾಸ ಇಟ್ಟುಕೊಂಡಿದ್ದಾರೆ. ಇಡೀ ಗ್ರಾಮವನ್ನೇ ಸ್ಥಳಾಂತರ ಮಾಡಿದರೆ, ಪಟ್ಟದಕಲ್ಲಿನ ಹಾಗೇ ಒಂದೇ ಸಮುಚ್ಚಯದಲ್ಲಿ 70ಕ್ಕೂ ಹೆಚ್ಚು ಸ್ಮಾರಕಗಳನ್ನು ನೋಡಬಹುದಾಗಿದೆ. ಇದರಿಂದ ಐಹೊಳೆಯು ಹೊಸ ಹೊಳಪನ್ನೇ ಪಡೆಯಲಿದೆ ಎಂದು ತಿಳಿಸಲಾಗಿದೆ. ಅನುದಾನ ಹೆಚ್ಚಿಗೆ ನೀಡಬೇಕಾಗುತ್ತದೆ ಎಂಬ ಒಂದೇ ಕಾರಣಕ್ಕೆ ಸ್ಥಳಾಂತರ ವಿಷಯ ಮುಂದೂಡಿಕೆಯಾಗುತ್ತಲೇ ಇದೆ.

ಬಾದಾಮಿ ಅಗಸ್ತ್ಯತೀರ್ಥ ದಂಡೆಯ 95 ಮನೆಗಳ ತೆರವು ಕಾರ್ಯಾಚಾರಣೆ 2 ದಶಕಗಳಿಂದ ನೆನೆಗುದಿಗೆ ಬಿದ್ದಿದೆ. ಅಲ್ಲದೇ ಮೇಣಬಸದಿ ವೀಕ್ಷಿಸಲು ಬರುವ ಪ್ರವಾಸಿಗರಿಗೆ ಸರಿಯಾದ ಪಾರ್ಕಿಂಗ್ ವ್ಯವಸ್ಥೆ ಇನ್ನೂ ಮಾಡಲಾಗಿಲ್ಲ. ಇದರ ಜೊತೆಗೆ ಕೂಡಲಸಂಗಮ ಅಭಿವೃದ್ಧಿ ದಿಶೆಯಲ್ಲಿ 15 ಕೋಟಿ ರೂ. ವೆಚ್ಚದಲ್ಲಿ ಅಕ್ಷರದಾಮ ಮಾದರಿಯಲ್ಲಿ ಅಂತರಾಷ್ಟ್ರೀಯ ಬಸವ ಕೇಂದ್ರ ನಿರ್ಮಾಣವಾಗಿದ್ದರೂ ಇನ್ನೂ ಅಪೂರ್ಣವಾಗಿರುವುದರಿಂದ ಉದ್ಘಾಟನೆ ಕಂಡಿರುವುದಿಲ್ಲ.

ಈ ನಿಟ್ಟನಲ್ಲಿ ಸ್ಮಾರಕಗಳಿಗೆ ರಸ್ತೆ ಸಂಪರ್ಕ ವಸತಿ ಸೌಕರ್ಯ, ಸಾರಿಗೆ ಸಂಪರ್ಕ ಹಾಗೂ ಪಾರ್ಕಿಂಗ್ ಮತ್ತಿತರ ಮೂಲಸೌಲಭ್ಯ ಇಲ್ಲದ ಕಾರಣ ಪ್ರವಾಸಿಗರು ಪರದಾಡುವಂತಾಗಿದೆ. ಇವೆಲ್ಲ ವಿಷಯಗಳನ್ನು ಸರ್ಕಾರ

ಮನಗಂಡು ಪ್ರವಾಸೋದ್ಯಮಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಹಾಗೂ ಅಭಿವೃದ್ಧಿ ಪಡಿಸಲು ಸರ್ಕಾರ ಸೂಕ್ತ ಕ್ರಮಕೈಗೊಳ್ಳಬೇಕೆಂದು ಈ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಔ) ವಿಷಯ: ಕನಕಗಿರಿ ತಾಲೂಕಿನ ಕಲಕೇರಿ ಗ್ರಾಮದ ದಲಿತ ಕಾಲೋನಿಯಲ್ಲಿ ಹುಳುಗಳಿಂದ ಕೂಡಿದ ಕಲುಷಿತ ನೀರು ಸರಬರಾಜು ಮತ್ತು ಸಾಂಕ್ರಾಮಿಕ ರೋಗ ಹರಡುವ ಭೀತಿಯ ಕುರಿತು.**

----

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ದಿನಾಂಕ: 27-1-2026 ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ. ಕಲಕೇರಿ ಗ್ರಾಮಕ್ಕೆ ಪೂರೈಕೆ ಆದ ನೀರಿನಲ್ಲಿ ಹುಳುಗಳು ಕಾಣಿಸಿಕೊಂಡಿವೆ.

ಕನಕಗಿರಿ ತಾಲೂಕಿನ ಕಲಕೇರಿ ಗ್ರಾಮದ 2ನೇ ವಾರ್ಡ್ ವ್ಯಾಪ್ತಿಯ ದಲಿತರ ಕಾಲೋನಿಯಲ್ಲಿ ಕಳೆದ ಕೆಲ ದಿನಗಳಿಂದ ಹುಳುಗಳಿಂದ ಕೂಡಿದ ಕಲುಷಿತ ಕುಡಿಯುವ ನೀರು ಸರಬರಾಜಾಗುತ್ತಿದ್ದು, 2ನೇ ವಾರ್ಡ್ ವಾರ್ಡ್ ನಿವಾಸಿಗಳು ಸಾಂಕ್ರಾಮಿಕ ರೋಗ ಭೀತಿ ಎದುರಿಸುತ್ತಿದ್ದಾರೆ.

ಅಲ್ಲಿನ ನಿವಾಸಿಗಳು ಹಾಗೂ ಜಾನುವಾರುಗಳು ಕುಡಿಯಲು ಇದೇ ನೀರನ್ನು ಬಳಸುತ್ತಿದ್ದಾರೆ. ಆದರೆ, 12 ದಿನವಾದರೂ ಗ್ರಾಮ ಪಂಚಾಯಿತಿಯವರು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅನಾರೋಗ್ಯಕ್ಕೆ ತುತ್ತಾದರೆ ಯಾರು ಹೊಣೆ ಎನ್ನುವ ಪ್ರಶ್ನೆ ನಿವಾಸಿಗಳಿಗೆ ಕಾಡುತ್ತಿದೆ.

ಗ್ರಾಮದ ನೀರಗಂಟಿಯೂ ಬೇಜವಾಬ್ದಾರಿತನದಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ನೀರಿನ ತೊಟ್ಟಿಗಳನ್ನು ತೊಳೆಯುವುದಿಲ್ಲ. ಗ್ರಾಮದಲ್ಲಿನ ಚರಂಡಿಗಳನ್ನು ಸ್ವಚ್ಛ ಮಾಡಿ ಬಹಳ ದಿನಗಳಾಗಿವೆ. ಎಲ್ಲಾದರೂ ಪೈಪ್‌ಲೈನ್ ಒಡೆದು ನೀರು ಕಲುಷಿತಗೊಳ್ಳುತ್ತಿದೆಯೋ ಎನ್ನುವುದನ್ನು ಗ್ರಾಮ ಪಂಚಾಯಿತಿಯವರು ನೋಡುತ್ತಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಮದಲ್ಲಿ ಶುದ್ಧ ಕುಡಿವ ನೀರಿನ ಘಟಕ ಇದ್ದರೂ ಇಲ್ಲದಂತಾಗಿದೆ. ಗ್ರಾಮ ಪಂಚಾಯಿತಿ ಸರಬರಾಜು ಮಾಡುವ ಇದೇ ನೀರು ಬಳಕೆ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಈ ಬಗ್ಗೆ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**೫೦) ವಿಷಯ: ಸೊರಬದ ಸರ್ಕಾರಿ ಮಾದರಿ ಶಾಲೆಯಲ್ಲಿ ಶೌಚಾಲಯವಿಲ್ಲದೆ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರ ಮಾನ ಹರಾಜಾಗುತ್ತಿರುವ ದುಸ್ಥಿತಿಯ ಕುರಿತು.**

**ಶ್ರೀಮತಿ ಭಾರತಿಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹಳೇಸೊರಬ ಗ್ರಾಮದ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಮತ್ತು ಶಿಕ್ಷಕರುಗಳಿಗೆ ಶೌಚಾಲಯವೇ ಇಲ್ಲವಾಗಿದೆ. ಬದಲಾಗಿ ಬಹಿರ್ದೆಸೆ ತೀರಿಸಿಕೊಳ್ಳಲು ತಗಡಿನ ಶೆಡ್ ಅವಲಂಭಿಸಬೇಕಾಗಿದೆ. ಈ ಮೂಲಕ ಪ್ರತಿ ದಿನ ಮಕ್ಕಳ ಮತ್ತು ಶಿಕ್ಷಕರ ಮಾನ ಹರಾಜಾಗುತ್ತಿದೆ.

ಪುರಸಭೆ ವ್ಯಾಪ್ತಿಗೆ ಒಳಪಡುವ ಪಟ್ಟಣಕ್ಕೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ 240 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮುಖ್ಯೋಪಾಧ್ಯಾಯರು ಸೇರಿ 19 ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ 7 ಜನ ಶಿಕ್ಷಕಿಯರಿದ್ದಾರೆ. ಇವರಿಗೆ ಬಹಿರ್ದೆಸೆ ತೀರಿಸಿಕೊಳ್ಳಲು ಶೌಚಾಲಯವೇ ಇಲ್ಲವಾಗಿದೆ. ಬದಲಾಗಿ ಚೌಕಾಕಾರದ ತಗಡಿನ ಶೆಡ್ ನಿರ್ಮಿಸಲಾಗಿದೆ. ತಗಡಿನ ಶೆಡ್‌ಗೆ ಮುಖ್ಯವಾಗಿ ಮೇಲ್ಛಾವಣಿ ಇಲ್ಲ ಬಾಗಿಲು ಕೂಡ ಇಲ್ಲ.

ಯಾರಾದರೂ ನೋಡಿಯಾರು ಎನ್ನುವ ಆತಂಕದೊಂದಿಗೆ ಮಕ್ಕಳು ಮತ್ತು ಶಿಕ್ಷಕರು ಶೌಚಕ್ಕೆ ತೆರಳುವ ದುಸ್ಥಿತಿಯಲ್ಲಿದ್ದಾರೆ. ಅದರಲ್ಲೂ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರು ಮುಜುಗರಕ್ಕೀಡಾಗುತ್ತಿದ್ದಾರೆ. ಶಾಲೆಯ ಅಜುಬಾಜಿನಲ್ಲಿ ಬಹು ಅಂತಸ್ತಿನ ಮಹಡಿ ಮನೆಗಳಿದ್ದು, ಮಹಡಿಯಿಂದ ವೀಕ್ಷಿಸಿದರೆ ಮೇಲ್ಛಾವಣಿ ಇಲ್ಲದ ತಗಡಿನ ಶೌಚಾಲಯದಲ್ಲಿ ನಡೆಯುವ ಪ್ರಕ್ರಿಯೆಗಳು ಕಾಣುತ್ತದೆ. ಈ ಕಾರಣದಿಂದ ಮೇಲ್ಛಾವಣಿ ಇಲ್ಲದ ತಗಡಿನ ಶೌಚಾಲಯ ಬಳಸಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಿದ್ದೂ ಕೂಡ ಅನಿವಾರ್ಯ ಸಂದರ್ಭದಲ್ಲಿ ಶೌಚಾಲಯವನ್ನು ಬಳಸಲೇಬೇಕಾಗಿದೆ.

ತಾಲೂಕಿನ ಶಾಸಕರೇ ಶಿಕ್ಷಣ ಸಚಿವರಾಗಿದ್ದರೂ ಸಹ ತಗಡಿನ ಶೆಡ್ ನಿರ್ಮಿಸಿರುವುದು ಖಂಡನೀಯ. ಸರ್ಕಾರಕ್ಕೆ ಒತ್ತಡ ಹಾಕಿ ತಕ್ಷಣ ಅನುದಾನದ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕಿರುವುದು ಜವಾಬ್ದಾರಿ. ಈಗಲಾದರೂ ಸುಸಜ್ಜಿತ ಶೌಚಾಲಯಕ್ಕೆ ಮುಂದಾಗಬೇಕಾಗಿದೆ ಎಂದು ಪೋಷಕ ವರ್ಗದವರು ಮನವಿ ಮಾಡುತ್ತಿದ್ದಾರೆ.

ಈ ಬಗ್ಗೆ ಪುರಸಭೆ ಅಧಿಕಾರಿಗಳಿಗೆ ಮತ್ತು ಶಿಕ್ಷಣ ಸಚಿವರ ಗಮನಕ್ಕೆ ತಂದು ಹಲವು ಬಾರಿ ಮನವಿ ಮಾಡಲಾಗಿದೆ. ಆದರೆ ಯಾವುದೇ ಅನುದಾನದ ಹಣ ಬಿಡುಗಡೆಯಾಗಿಲ್ಲ. ಬದಲಾಗಿ ಅಧಿಕಾರಿಗಳು ಪುರಸಭೆಯಲ್ಲಿ ಬಳಕೆಯಾಗದ ಹಣ ನೀಡುವುದಾಗಿ ಗುತ್ತಿಗೆದಾರರಿಗೆ ಭರವಸೆ ನೀಡಿದ್ದಾರೆ ಎಂದು ತಿಳಿದು ಬಂದಿದೆ. ಇದರನ್ವಯ ಕಾಮಗಾರಿ ಪ್ರಾರಂಭಿಸಿ, ಫೌಂಡೇಷನ್ ಮುಗಿದು 6 ತಿಂಗಳು ಕಳೆದಿದೆ. ಶೌಚಾಲಯದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲದ ಕಾರಣ ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೇ ಕಾಮಗಾರಿ ಸ್ಥಗಿತಗೊಂಡಿದೆ.

ಆದ್ದರಿಂದ ಈ ಕೂಡಲೇ ಸರ್ಕಾರ ನಿರಾಸಕ್ತಿ ತೋರದೆ ಸೂಕ್ತ ಕ್ರಮಗಳನ್ನು ಕೈಗೂಳ್ಳಬೇಕೆಂದು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ):–** ಮಾನ್ಯ ಸಭಾಪತಿಗಳೆ, ಮೊದಲು ಅಲ್ಲೇನು ಫೌಂಡೇಷನ್ ಹಾಕಿದ್ದರೋ ಅದು ಬೇರೆಯವರ ಜಾಗ ಎಂದು ಆಕ್ಷೇಪಣೆ ಬಂತು. ಈಗ ಸ್ಲ್ಯಾಬ್ ಹಾಕುವುದು ಬಾಕಿ ಇದೆ. ನಾನು ಕೆ.ಡಿ.ಪಿ. ಸಭೆಯಲ್ಲೂ ಮಾತನಾಡಿದ್ದೇನೆ. ಮಾತನಾಡಿದ ದಿವಸವೇ ದುಡ್ಡನ್ನು ಮಂಜೂರು ಮಾಡಲಾಗಿದೆ.

(ಮುಂದು)

(32) 27–1–2026 2.10 ಡಿಎಸ್–ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಧು ಬಂಗಾರಪ್ಪ (ಮುಂದು):–**

ಗೋಡೆಯನ್ನು ಕಟ್ಟಾಯಿತು. ಇನ್ನು ಸ್ಲಾಬ್ ಹಾಕಿದರೆ ಒಂದೂವರೆ–ಎರಡು ತಿಂಗಳಿನೊಳಗೆ ಅದನ್ನು ಉಪಯೋಗಿಸಬಹುದು. ಏಕೆಂದರೆ ತುರ್ತಾಗಿ, ಅನಿವಾರ್ಯವಾಗಿ ಮಾಡಬೇಕಾಗಿತ್ತು. ಅದೊಂದನ್ನು ಬಿಟ್ಟರೆ, ಈ ವ್ಯವಸ್ಥೆಯಲ್ಲಿ ಶೆಡ್‌ನಲ್ಲಿ ಶೌಚಾಲಯವನ್ನು ನಿರ್ಮಿಸಬೇಕೆನ್ನುವ ಆಸಕ್ತಿ ನಮಗಿಲ್ಲ. ನಮ್ಮ ಹತ್ತಿರ ಹಣವು ಇದೆ, ಕಟ್ಟಡವು ಕಟ್ಟಿ ಆಗಿದೆ. ಇನ್ನು ಒಂದು ಸ್ಲಾಬ್ ಹಾಕಿದರೆ ಮುಗಿಯಿತು. ಸ್ಲಾಬ್‌ಗೆ, ಕ್ಯೂರಿಂಗ್‌ಗೆ ಸಮಯ ಬೇಕಾಗುತ್ತದೆ. ಅದನ್ನು ಪೂರ್ಣಗೊಳಿಸುವ ಮಾಹಿತಿಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಶೌಚಾಲಯವನ್ನು ಉಪಯೋಗಿಸುವ ವ್ಯವಸ್ಥೆಯನ್ನು ಮಾಡುತ್ತೇನೆ. ಮಾನ್ಯ ಸದಸ್ಯರು ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಅದೆಲ್ಲಾ ಸುಳ್ಳು. ಕೆಲಸ ಪೂರ್ಣಗೊಂಡು, ಸ್ಲಾಬ್ ಹಾಕುವ ಕಾರ್ಯ ಒಂದು ಬಾಕಿ ಇದೆ, ಅದಾದ ತಕ್ಷಣ ಆದಷ್ಟು ಬೇಗ ನಾನು ಅದನ್ನು ಮುಗಿಸಿ ಕೊಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹದಿನೈದು ದಿನಗಳ ಹಿಂದಿನವರೆಗೂ ಗೋಡೆ ಕಟ್ಟಿರಲಿಲ್ಲ.

**ಸಭಾಪತಿಯವರು:–** ಶ್ರೀಮತಿ ಭಾರತಿ ಶೆಟ್ಟಿಯವರೇ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವ ಹಾಗಿಲ್ಲ.

**ಅಃ) ವಿಷಯ: ರಾಜ್ಯದ ಗ್ರಾಮೀಣ ಭಾಗದ ಆಸ್ತಿ ನೋಂದಣಿಗೆ ವಿಘ್ನ ತಂದಿರುವ 'ಇ–ಸ್ವತ್ತು 2.0' ತಂತ್ರಾಂಶದ ತಾಂತ್ರಿಕ ದೋಷ ಹಾಗೂ ಬಾಕಿ ಇರುವ 36,000ಕ್ಕೂ ಅಧಿಕ ಅರ್ಜಿಗಳ ವಿಲೇವಾರಿ ಕುರಿತು**

-------

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮಗೆ ಹೃದಯ ತುಂಬಿದ ವಂದನೆಗಳನ್ನು ಸಲ್ಲಿಸುತ್ತೇನೆ. 'ಉದಯವಾಣಿ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಜಾರಿಯಾದ ತಿಂಗಳಲ್ಲೇ ಕೈ ಕೊಟ್ಟ ಇ–ಸ್ವತ್ತು 2.0' ಎಂಬ ಶೀರ್ಷಿಕೆಯಡಿ ಪ್ರಕಟವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

ರಾಜ್ಯದ ಗ್ರಾಮೀಣ ಭಾಗದ ಜನರು ತಮ್ಮ ಆಸ್ತಿ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಪಡೆದುಕೊಳ್ಳಲು ಅನುಕೂಲವಾಗುವಂತೆ ಸರ್ಕಾರ ಡಿಸೆಂಬರ್ 01 ರಿಂದ ಇ– ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ ನೀಡಿರುತ್ತದೆ. ಆದರೆ ಈ ಯೋಜನೆ ಅನುಷ್ಠಾನಗೊಂಡ ತಿಂಗಳೊಳಗೆ ತಾಂತ್ರಿಕ ದೋಷ ಕಂಡು ಬಂದು ಗ್ರಾಮೀಣ ಪ್ರದೇಶದ ಜನರು ತಮ್ಮ ಆಸ್ತಿ ದಾಖಲೆಗಳನ್ನು ಪಡೆಯಲಾಗುತ್ತಿಲ್ಲ. ಈಗಾಗಲೇ ಅರ್ಜಿ ಹಾಕಿರುವ 36,000ಕ್ಕೂ ಅಧಿಕ ಮಂದಿಗೆ ಇನ್ನೂ ಇ– ಖಾತೆ ಪಡೆಯಲು ಸಾಧ್ಯವಾಗಿಲ್ಲ.

ಇದರಿಂದಾಗಿ ಸಾರ್ವಜನಿಕರು ಅರ್ಜಿಯ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗದೆ ಗೊಂದಲಕ್ಕೀಡಾಗಿದ್ದಾರೆ. ಸ್ವೀಕೃತಗೊಂಡ ಅರ್ಜಿಗಳಲ್ಲಿ 4,608 ಅರ್ಜಿಗಳು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಲಾಗಿನ್‌ನಲ್ಲಿ, 8,695 ಅರ್ಜಿಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿ, 6,882 ಅರ್ಜಿಗಳು ಗ್ರಾಮ ಪಂಚಾಯಿತಿ ಅಧ್ಯಕ್ಷರ ಲಾಗಿನ್‌ನಲ್ಲಿ ಇವೆ, 4,322 ಅರ್ಜಿಗಳು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಲಾಗಿನ್‌ನಲ್ಲಿ ಅನುಮೋದನೆಯಾಗದೆ ಬಾಕಿ ಇರುತ್ತವೆ. ಇದುವರೆಗೂ ಕೇವಲ 6,800 ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಲಾಗಿದೆ.

ಇದರಿಂದಾಗಿ ಸಾರ್ವಜನಿಕರು ತೊಂದರೆಯನ್ನು ಅನುಭವಿಸುವುದರ ಜೊತೆಗೆ ಸರ್ಕಾರಕ್ಕೂ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿರುತ್ತದೆ. ಈ ಗಂಭೀರ ಸಮಸ್ಯೆಗಳಿಂದಾಗಿ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಆಸ್ತಿ ನೋಂದಣಿ, ಸೇಲ್ ಡೀಡ್, ಅಡಮಾನ ಪ್ರಕ್ರಿಯೆಗಳು ಸ್ಥಗಿತಗೊಂಡಿವೆ.

ಆದ್ದರಿಂದ ಈ ಎಲ್ಲಾ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ 'ಇ–ಸ್ವತ್ತು 2.0' ದಲ್ಲಿ ಕಂಡುಬಂದಿರುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ. ಧನ್ಯವಾದಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಕ) ವಿಷಯ: ರಾಜ್ಯಪಾಲರ ಅಂಕಿತಕ್ಕೂ ಮುನ್ನವೇ 'ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕ–**2025'**ರ ಅಡಿಯಲ್ಲಿ ನೋಟಿಸ್ ನೀಡಿರುವ ಪೊಲೀಸರ ಕ್ರಮ ಮತ್ತು ಸಂವಿಧಾನದ ವಿಧಿ** 20(1) **ಹಾಗೂ** 200**ರ ಉಲ್ಲಂಘನೆಯ ಕುರಿತು.**"

------

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅಂಕಿತಕ್ಕೆ ಬಾಕಿ ಇರುವ "ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ, 2025" ರ ಅಡಿಯಲ್ಲಿ ಚಿಕ್ಕಮಗಳೂರು ಪೊಲೀಸ್ ನಿರೀಕ್ಷಕರು ನಮ್ಮ ಬಿಜೆಪಿ ನಾಯಕ ಶ್ರೀ ವಿಕಾಸ ಪುತ್ತೂರು ಇವರಿಗೆ ದಿನಾಂಕ 24.01.2026 ರಂದು ನೋಟಿಸ್ ನೀಡಿರುವುದು ಅತ್ಯಂತ ಖಂಡನೀಯ.

ಮಾನ್ಯ ಸಭಾಪತಿಗಳೇ, ಈ ವಿಷಯ ಕೇವಲ ರಾಜಕೀಯವಲ್ಲ, ಇದು ಈ ಸದನದ ಘನತೆ ಮತ್ತು ಸಂವಿಧಾನದ ಪ್ರಶ್ನೆ, ಸಂವಿಧಾನದ 200ನೇ ವಿಧಿಯ ಉಲ್ಲಂಘನೆಯಾಗಿದೆ. ಈ ಸದನವು ಒಂದು ವಿಧೇಯಕವನ್ನು ಪಾಸ್ ಮಾಡಬಹುದು, ಆದರೆ ಅದು ಕಾನೂನಾಗುವುದು ಮಾನ್ಯ ರಾಜ್ಯಪಾಲರ ಅಂಕಿತ ಬಿದ್ದ ಮೇಲೆ ಮಾತ್ರ. ರಾಜ್ಯಪಾಲರ ಕಚೇರಿಯಲ್ಲಿ ಬಾಕಿ ಇರುವ ಕಡತವನ್ನು ಪೊಲೀಸರು "ಕಾನೂನು" ಎಂದು ಪರಿಗಣಿಸಿ ನೋಟಿಸ್ ನೀಡಿರುವುದು ರಾಜ್ಯಪಾಲರ ಅಧಿಕಾರಕ್ಕೆ ಮಾಡಿದ ಅಪಮಾನವಾಗಿದೆ. Article 20(1) ರ ಉಲ್ಲಂಘನೆ ಅಸ್ತಿತ್ವದಲ್ಲಿ ಇಲ್ಲದ ಕಾನೂನಿನ ಅಡಿಯಲ್ಲಿ ಯಾರಿಗೂ ಶಿಕ್ಷೆ ವಿಧಿಸುವಂತಿಲ್ಲ ಅಥವಾ ನೋಟಿಸ್ ನೀಡುವಂತಿಲ್ಲ ಎಂದು ನಮ್ಮ ಸಂವಿಧಾನ ಹೇಳುತ್ತದೆ. Gazette Notification ಆಗಿಲ್ಲ, ಗೆಜೆಟ್‌ನಲ್ಲಿ ಪ್ರಕಟವಾಗದ ಯಾವುದೇ ವಿಷಯವು ಸಾರ್ವಜನಿಕವಾಗಿ ಜಾರಿಗೆ ಬಂದಿಲ್ಲ ಎಂದು ಅರ್ಥ. ಚಿಕ್ಕಮಗಳೂರು ಪೊಲೀಸರ ಈ ಕ್ರಮವು ನೇರವಾಗಿ ಸಂವಿಧಾನದ ಮೂಲಭೂತ ಹಕ್ಕುಗಳ ಮೇಲೆ ನಡೆದ ದಾಳಿಯಾಗಿದೆ ಹಾಗೂ ಪೊಲೀಸರು ಇಲ್ಲಿ ನ್ಯಾಯಾಧೀಶರಂತೆ ವರ್ತಿಸಿದ್ದಾರೆ.

ನಮ್ಮ ಹಿಂದೂ ರಾಷ್ಟ್ರಭಕ್ತ ನಾಯಕರನ್ನು ಹಾಗೂ ಸಾಮಾಜಿಕ ಹೋರಾಟಗಾರರನ್ನು, ನಮ್ಮ ವಿರೋಧ ಪಕ್ಷಗಳ ನಾಯಕರನ್ನು ಉದ್ದೇಶಪೂರ್ವಕವಾಗಿ ಟಾರ್ಗೆಟ್ ಮಾಡಿ ಅವರ ಭಾಷಣವನ್ನು ಮೊಟಕುಗೊಳಸುವ, ಅವರ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಬಹುದೊಡ್ಡ ಸಂಚು ಇದಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಗೃಹ ಸಚಿವರು ತಕ್ಷಣ ಉತ್ತರಿಸಬೇಕು ಮತ್ತು ಆ ನೋಟಿಸ್‌ನ್ನು ವಾಪಸ್ ಪಡೆಯಬೇಕು ಎಂದು ನಾನು ಸದನದ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ,……

**ಸಭಾಪತಿಯವರು:–** ಶೂನ್ಯ ವೇಳೆಯಲ್ಲಿ ಮಾತನಾಡುವ ಹಾಗಿಲ್ಲ, ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸದನಕ್ಕೆ ಅಪಮಾನವಾಗಿದೆ. ತಮ್ಮ ಪೀಠಕ್ಕೆ ಅಪಮಾನವಾಗಿದೆ.

**ಸಭಾಪತಿಯವರು:–** ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರು ಯಾವುದು ಕಡತಕ್ಕೆ ಹೋಗಬಾರದು ಎಂದು ಆದೇಶಿಸಿರುವುದರಿಂದ ಈ ಹಂತದಲ್ಲಿ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಉತ್ತರ?

**ಸಭಾಪತಿಯವರು:–** ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಇವತ್ತು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ 10 ಜನರಿಗೆ ಅವಕಾಶ ಕೊಡಬೇಕು. ಆದರೆ ಇವತ್ತು ನಾನು 19 ಜನರಿಗೆ ಅವಕಾಶ ಕೊಟ್ಟಿದ್ದೇನೆ. ನೀವು ಅರ್ಥ ಮಾಡಿಕೊಳ್ಳಿ. ಇವತ್ತು ಅವರು ಉತ್ತರ ಕೊಡಿಸುತ್ತೇವೆಂದು ಹೇಳಿದ್ದಾರೆ. ಅವರು ಉತ್ತರಗಳನ್ನು ಸದನಕ್ಕೆ ಕೊಡುತ್ತಾರೆ. ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ, ಕುಳಿತುಕೊಳ್ಳಿ. ಎಲ್ಲದಕ್ಕೂ ನೀವು ಹಠ ಮಾಡಿದರೆ ಹೇಗೆ?

**ಖ) ವಿಷಯ: ಕಾಡ್ಗಿಚ್ಚು ನಿಯಂತ್ರಣಕ್ಕೆ ಆಧುನಿಕ ಉಪಕ್ರಮಗಳನ್ನು ಹಾಗೂ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.**

------

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. "ಹೆಚ್ಚಿದ ಬೇಸಿಗೆ ಬಿಸಿ; ಚಾರ್ಮಾಡಿ, ಕುದುರೆಮುಖ ಹಾಗೂ ಇನ್ನಿತರ ಅರಣ್ಯಗಳಿಗೆ ಕಾಡ್ಗಿಚ್ಚಿನ ಕಂಟಕ" ಎನ್ನುವ ಪತ್ರಿಕಾ ವರದಿ ಪರಿಸರ ಪ್ರೇಮಿಗಳೂ ಸೇರಿದಂತೆ ಸಾರ್ವಜನಿಕರ ಆತಂಕಗಳನ್ನು ಯಥಾವತ್ತಾಗಿ ವರದಿ ಮಾಡಿದೆ.

ಬೇಸಿಗೆ ಪ್ರಾರಂಭವಾದಂತೆ, ಅರಣ್ಯಗಳಲ್ಲಿ ಬೆಂಕಿ ಆಕಸ್ಮಿಕ ದುರಂತಗಳ ಪ್ರಕರಣಗಳು ಹೆಚ್ಚಾಗುತ್ತಿದ್ದು, ಉನ್ನತ ತಂತ್ರಜ್ಞಾನದ ಇಂದಿನ ಆಧುನಿಕ ಯುಗದಲ್ಲೂ ಕಾಡ್ಗಿಚ್ಚಿನ ಆತಂಕ ದೂರ ಮಾಡಲು ಅಸಾಧ್ಯವಾಗಿರುವುದು ನಾಗರೀಕ ಸಮಾಜಕ್ಕೆ ಬಹು ದೊಡ್ಡ ಸವಾಲಾಗಿದೆ.

ಪ್ರಸ್ತುತ ಬೇಸಿಗೆ ಪ್ರಾರಂಭವಾಗುತ್ತಿದ್ದು, ಈಗಾಗಲೇ ಅನೇಕ ಕಡೆಗಳಲ್ಲಿ ಬೆಂಕಿ ಅವಘಡಗಳ ಪ್ರಕರಣಗಳು ವರದಿಯಾಗಿವೆ. ಕಾಡ್ಗಿಚ್ಚಿನಿಂದಾಗಿ ಅರಣ್ಯ ನಾಶದ ಪರಿಣಾಮ ಅರಣ್ಯ ಸಮತೋಲನಕ್ಕೆ ಬರಲು ಹಲವು ವರ್ಷಗಳೇ ಬೇಕಾಗುತ್ತದೆ. ಅಮೂಲ್ಯ ಔಷಧಿಯ ಸಸ್ಯಗಳು, ಅಳಿವಿನಂಚಿನಲ್ಲಿರುವ ಪ್ರಭೇದಗಳು ನಾಶವಾಗುವುದರೊಂದಿಗೆ ವಾತಾವರಣದ ಏರುಪೇರಿಗೂ ಕಾರಣವಾಗುತ್ತದೆ. ಸನ್ಮಾನ್ಯ ಸಭಾಪತಿಯವರೇ, ಒಂದೆಡೆ ಕಾಡ್ಗಿಚ್ಚು ಮತ್ತು ಅದರ ಪರಿಣಾಮಗಳು ಆತಂಕಕಾರಿಯಾಗಿದ್ದರೆ, ಅವುಗಳನ್ನು ನಿಯಂತ್ರಿಸಬೇಕಾದ ಅರಣ್ಯ ಇಲಾಖೆಯಲ್ಲಿ ಹುದ್ದೆಗಳು ಖಾಲಿಯಿರುವುದು ಪರಿಸರ ಪ್ರೇಮಿಗಳ ಆತಂಕವನ್ನು ಇನ್ನೂ ಹೆಚ್ಚಿಸಿದೆ. ರಾಜ್ಯದಲ್ಲಿ ಪ್ರಸ್ತುತ 591 ಡಿ.ಆರ್.ಎಫ್.ಒ, 2621 ಫಾರೆಸ್ಟ್ ಗಾರ್ಡ್, 1707 ಫಾರೆಸ್ಟ್ ವಾಚರ್ಸ್‌ಗಳೂ ಸೇರಿದಂತೆ ಇನ್ನೂ ಹಲವಾರು ಹುದ್ದೆಗಳು ಖಾಲಿಯಿವೆ.

ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ಕಾಡ್ಗಿಚ್ಚು ನಿಯಂತ್ರಣಕ್ಕೆ ಆಧುನಿಕ ಉಪಕ್ರಮಗಳನ್ನು ಕೈಗೊಳ್ಳುವುದರೊಂದಿಗೆ ಕಟ್ಟುನಿಟ್ಟಿನ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಅರಣ್ಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಬೇಕು. ಈ ಮೂಲಕ ಅರಣ್ಯ ರಕ್ಷಣೆಯ ಬದ್ಧತೆಯನ್ನು ಪ್ರದರ್ಶಿಸಿ ಪರಿಸರ ಪ್ರೇಮಿಗಳ ಮತ್ತು ಸಾರ್ವಜನಿಕರ ಆತಂಕವನ್ನು ದೂರ ಮಾಡಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**೬. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು: ಮಂಡಿಸಲಾಯಿತು.**

**7. ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಸದನದ ಕಲಾಪಗಳನ್ನು ನಡೆಸಬೇಕು ಎನ್ನುವ ಕುರಿತು.**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಯಮ 330 ಅನ್ನು ತೆಗೆದುಕೊಳ್ಳೋಣವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ತೆಗೆದುಕೊಳ್ಳಬಹುದು, ಇಲ್ಲದಿದ್ದರೆ ಊಟ ಮಾಡಿ ಬಂದು ತೆಗೆದುಕೊಳ್ಳೋಣ. ಹೇಗಾದರು ಆಗಬಹುದು.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ರಾಜ್ಯಪಾಲರ ಭಾಷಣವನ್ನು ತೆಗೆದುಕೊಳ್ಳಬೇಕಲ್ಲವೇ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದರು. ಅದನ್ನು ನಾನು ನಿಯಮ 330ಕ್ಕೆ ಪರಿವರ್ತನೆ ಮಾಡಿದ್ದೇನೆ. ಸದನ ಪ್ರಾರಂಭವಾಗುತ್ತಿದ್ದಂತೆ ಅವರು ಕೇಳಿದರು. ನಾನು ಪ್ರಶ್ನೋತ್ತರ ವೇಳೆಯಾದ ಮೇಲೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅವರದ್ದು ಮುಗಿದ ನಂತರ ತೆಗೆದುಕೊಳ್ಳೋಣ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅಜೆಂಡಾ ಪ್ರಕಾರ ತೆಗೆದುಕೊಳ್ಳೋಣ.

**ಸಭಾಪತಿಯವರು:–** ನಾನು ಸದನದಲ್ಲಿ ಅವರಿಗೆ ಒಪ್ಪಿಗೆಯನ್ನು ಕೊಟ್ಟಿದ್ದೇನೆ. ಪ್ರಶ್ನೋತ್ತರ ಮುಗಿದ ನಂತರ ನಿಯಮ 330 ಅನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಅವರದ್ದೊಂದು ತೆಗೆದುಕೊಂಡ ನಂತರ ಮುಂದಿನದು ತೆಗೆದುಕೊಳ್ಳೋಣ.

(ಮುಂದು)

**(33) 27/01/2026 2:20 ಎಸ್‌ಪಿಆರ್/ಕೆಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಇದೆ. ಮೊನ್ನೆಯ ದಿನ ನಿಯಮ 330 ರಡಿ ನಮ್ಮ ವಿಷಯವು ಲಿಸ್ಟ್ ಆಗಿದೆ. ನೀವು ಮೊನ್ನೆಯ ದಿನ ಆದೇಶ ಮಾಡಿ ಅವರಿಗೆ ನಿಯಮ 330 ಕ್ಕೆ ಪರಿವರ್ತಿಸುವುದಾಗಿ ಹೇಳಿದ್ದೀರಿ. ಆದ್ಯತೆಯ ಮೇರೆಗೆ ಮೊದಲು ನಮ್ಮದನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಅವರದ್ದನ್ನು ಹೇಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ? ತಾವೇ ಪಟ್ಟಿ ಮಾಡಿದ್ದೀರಿ. ತಮ್ಮ ಕಾರ್ಯದರ್ಶಿಗಳು ಮಾಡಿದ್ದಾರೆ.

**ಸಭಾಪತಿಯವರು:–** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಸದನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಸಭಾಪತಿಗೆ ಅಧಿಕಾರ ಇರುತ್ತದೆ. ಆ ಅಧಿಕಾರದ ಪ್ರಕಾರ ಅವರದ್ದನ್ನು ತೆಗೆದುಕೊಂಡಿದ್ದೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಸಹ ನಾವು ಗೌರವ ಕೊಡುತ್ತೇವೆ. ತಾವು ಕೊಟ್ಟಂತಹ ರೂಲಿಂಗ್‌ಗೆ ಅವರು ಗೌರವ ಕೊಡುವುದಿಲ್ಲ ಎಂದ ಮೇಲೆ ನಾವು ಇಲ್ಲಿ ಏಕೆ ಕೇಳಬೇಕು?

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಜಂಟಿ ಅಧಿವೇಶನದ ವಿಚಾರದಲ್ಲಿ ಕೆಲವು ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ.

**ಸಭಾಪತಿಯವರು:–** ನಾನು ಸದನಕ್ಕೆ ಬಂದ ಕೂಡಲೇ, ನಾನು ಹೇಳಿದ ತೀರ್ಮಾನವನ್ನು ಸದನವು ಒಪ್ಪಿಕೊಂಡಿದೆ. ನಾನು ಯಾವ ವಿಷಯವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೆನೆಯೋ, ಅದನ್ನು ತೆಗೆದುಕೊಳ್ಳುತ್ತೇನೆ, ಆಮೇಲೆ ಬೇರೆ ವಿಚಾರಗಳ ಚರ್ಚೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ನಾನು ಹೇಳಿದ್ದು ನಿಮಗೆ ತಿಳಿಯುತ್ತದೆಯೋ ಅಥವಾ ಇಲ್ಲವೋ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಸಭಾಪತಿಯವರು:–** ನಾನು ಏನನ್ನೂ ಕೇಳುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಾನು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಾಸ್ತವವನ್ನು ಮಂಡಿಸುತ್ತೇನೆ. ಮತ್ತೆ ಅವರದ್ದು ಆದಮೇಲೆ ನಾನು ಭಾಷಣವನ್ನು ಮಾಡುತ್ತೇನೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ವಂದನಾರ್ಪಣೆಯನ್ನು ಮಂಡಿಸಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಾನು ಮೊದಲು ವಂದನಾರ್ಪಣೆಯನ್ನು ಮಂಡಿಸುತ್ತೇನೆ; ಮತ್ತೆ ಭಾಷಣವನ್ನು ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ನಿಯಮ 242–ಸಿ ನೀತಿ ನಿರೂಪಣಾ ಸಮಿತಿಯ ನಿಯಮಗಳ 2 (ಡಿ) ರಲ್ಲಿ "ಸದನವೂ ಕೂಡ, ಸದಸ್ಯರ ನೀತಿ ಬಾಹಿರ ನಡತೆಗೆ ಸಂಬಂಧಿಸಿದ ದೂರುಗಳನ್ನು ಬಂದು ಪ್ರಸ್ತಾವದ ಮೇಲೆ, ವಿಚಾರಣೆ ಮಾಡಿ ವರದಿ ನೀಡುವುದಕ್ಕಾಗಿ ನೀತಿ ನಿರೂಪಣಾ ಸಮಿತಿಗೆ ಒಪ್ಪಿಸಬಹುದು" ಎಂಬುದಾಗಿ ತಿಳಿಸಿದೆ. ಪ್ರಸ್ತಾವನೆಯ ಬಗ್ಗೆ ವರದಿ...,

**ಸಭಾಪತಿಯವರು:–** ನಾನು ಅದರ ಬಗ್ಗೆ ಹೇಳುತ್ತೇನೆ. ಮೊನ್ನೆಯ ದಿನ ನಾನು ಮಾತು ಕೊಟ್ಟಿದ್ದೇನೆ ಹೀಗಾಗಿ ನಿಮಗೆ ಹೇಳುತ್ತೇನೆ. ಸದನದ ಮುಂದೆ ನಾನು ಹೇಳುತ್ತೇನೆ. ನಾನು ಹೇಳುವುದನ್ನು ಒಂದು ನಿಮಿಷ

ಕೇಳಿ. ಸರ್ಕಾರಿ ಮುಖ್ಯ ಸಚೇತಕರೇ, ನಾನು ಸದನಕ್ಕೆ ಬಂದ ನಂತರ ಅವರು ಅದನ್ನು ಪ್ರಸ್ತಾಪ ಮಾಡಿದರು. ವಿರೋಧ ಪಕ್ಷದವರು ನಿಲುವಳಿ ಸೂಚನೆಯನ್ನು ಕೊಟ್ಟಿದರು. ನಾನು ಅದನ್ನು ನಿಯಮ 330 ಕ್ಕೆ ಅದಕ್ಕೆ ಪರಿವರ್ತನೆ ಮಾಡಿದೆನು. ನಾನು ಬಂದ ಕೂಡಲೇ ಅವರು ಮಾತನಾಡುತ್ತೇನೆಂದು ಹೇಳಿದರು. ಅದಕ್ಕೆ ನಾನು ಪ್ರಶ್ನೋತ್ತರ ಕಲಾಪ ಮುಗಿದ ಮೇಲೆ ಮಾತನಾಡುವಂತೆ ನಾನು ತಿಳಿಸಿದೆನು. ಹೀಗಾಗಿ ಈಗ ಅವರು ಮಾತನಾಡುತ್ತೇವೆಂದು...,

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಈಗ ಅವರು ಹೇಗೆ ಮಾತನಾಡುತ್ತಾರೆ. ಪ್ರಶ್ನೋತ್ತರ ಕಲಾಪವು ಮುಗಿಯದೆ ಹೇಗೆ ತೆಗೆದುಕೊಳ್ಳುತ್ತೀರಿ? ಈ ರೀತಿಯಾಗಿ ನಾವು ಯಾವತ್ತೂ ಸಹ ಬದಲಾವಣೆಯನ್ನು ಮಾಡಲಿಲ್ಲ. ಅವರಿಗೆ ಪ್ರಶ್ನೋತ್ತರ ಕಲಪಾದ ಅವಧಿಗೂ ಮುಂಚೆ ಹೇಗೆ ನೀವು ಅವಕಾಶವನ್ನು ನೀಡುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ...,

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ನೀವು ಸಂಪ್ರದಾಯದಂತೆ ಯಾವಾಗಾದರೂ ಸಹ ಪ್ರಶ್ನೋತ್ತರ ಕಲಾಪದ ಮುಂಚೆ ಇದನ್ನು ತೆಗೆದುಕೊಂಡಿದ್ದೀರಿ?

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಿಲುವಳಿ ಸೂಚನೆಯನ್ನು ಕೊಟ್ಟಾಗ ಅದನ್ನು ನಿಯಮ 69 ಕ್ಕೆ ಪರಿವರ್ತನೆ ಮಾಡಬೇಕಾಗಿತ್ತು ಹಾಗೂ ಅದನ್ನು ತೆಗೆದುಕೊಳ್ಳಬೇಕಾಗಿತ್ತು.

**Sri SALEEM AHMED:-** Hon'ble Chairman sir, I agree with you.

**ಸಭಾಪತಿಯವರು:-** ಅದರ ಬದಲಿಗೆ ನಾನು ಏನು ಮಾಡಿದ್ದೇನೆ ಎಂದರೆ, ನಿನ್ನೆಯ ದಿನ ನಾನು ಒಂದು ತೀರ್ಮಾನವನ್ನು ಕೊಟ್ಟೆ ಹಾಗೂ ಅದನ್ನು ನಿಯಮ 330 ರಡಿ ತೆಗೆದುಕೊಳ್ಳುತ್ತೇನೆ ಎಂಬುದಾಗಿ ನಾನು ಹೇಳಿದೆ. ಹೀಗಾಗಿ ನಾನು ಬಂದ ಕೂಡಲೇ ಅವರು ಅದನ್ನು ಪ್ರಸ್ತಾಪ ಮಾಡಿದರು ಹಾಗೂ ನಿಲುವಳಿ ಸೂಚನೆಯನ್ನು ಒಪ್ಪಿಲ್ಲ ಎಂಬುದಾಗಿ ಹೇಳಿದರು. ಹೀಗಾಗಿ ಪ್ರಶ್ನೋತ್ತರ ಕಲಾಪವಾದ ನಂತರ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ. ಹೀಗಾಗಿ ಅದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ತಾವು ಅಜೆಂಡಾದಲ್ಲಿ ಅವರದ್ದನ್ನೂ ಹಾಕಿದ್ದೀರಿ; ಇಲ್ಲವೆಂದು ಹೇಳುತ್ತಿಲ್ಲ. ಆದರೆ, ನಿಮ್ಮನ್ನು ಕೇಳುತ್ತಿರುವುದೇನೆಂದರೆ, ಈ ಸದನದಲ್ಲಿ ಯಾವತ್ತಾದರೂ ಪ್ರಶ್ನೋತ್ತರ ಕಲಾಪವನ್ನು ಬಿಟ್ಟು ಮಾಡಿದ್ದೀರಾ?

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದಿದೆಯಲ್ಲವೇ. ಹೀಗಾಗಿ ಅದನ್ನು...

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಹೇಗೆ ಕೇಳುತ್ತಾರೆ ಎಂದು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದ ನಂತರ, ಅದನ್ನು ತೆಗೆದುಕೊಳ್ಳಬಹುದು, ಏಕೆ ತೆಗೆದುಕೊಳ್ಳಬಾರದು?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅದನ್ನು ಯಾವಾಗಲೂ ತೆಗೆದುಕೊಂಡಿಲ್ಲ.

**ಸಭಾಪತಿಯವರು:–** ಅದನ್ನು ಈಗ ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ನಾನು ಈಗ ಹೇಳುವುದು ಏನೆಂದರೆ...,

**ಸಭಾಪತಿಯವರು:–** ನೋಡಿ, ನೀವು ಸುಮ್ಮನೆ ಪ್ರಶ್ನೆ ಮಾಡುವುದು ಬೇಡ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಮಾನ್ಯ ಐವನ್ ಡಿ'ಸೋಜಾ ರವರು at least ರಾಜ್ಯಪಾಲರ ಭಾಷಣದ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು move ಮಾಡಲಿ.

**ಸಭಾಪತಿಯವರು:–** ಅವರು ಮೂವ್ ಮಾಡುವುದಕ್ಕೆ ಸಮಯ ಸಿಗುತ್ತದೆ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈಗ ಏನು ಮಾಡಬೇಕೆಂದು ಹೇಳಿ. ಅವರು ಮೂವ್ ಮಾಡಲೇ?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಅದನ್ನು ಮೂವ್ ಆದರೂ ಮಾಡಲಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ಬೇಡ, ಬೇಡ, ಇಲ್ಲ ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಮ್ಮದು ಮೊದಲು ಮುಗಿಯಲಿ, ಆಮೇಲೆ ಅವರದ್ದು.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುತ್ತೇನೆ. ನೀವುಗಳೆಲ್ಲರೂ ಏಳುವುದು ಬೇಡ; ಕುಳಿತುಕೊಳ್ಳಿ. ಎಲ್ಲರೂ ಏಕೆ ಏಳುತ್ತೀರಿ? ನಿಮ್ಮಗಳಿಗೆ ತಲೆ ಸರಿಯಾಗಿ ಇದೆಯೋ ಅಥವಾ ಇಲ್ಲವೋ? ನಾನು ಹೇಳುವುದನ್ನು ಕೇಳಿ. ಸರ್ಕಾರಿ ಮುಖ್ಯ ಸಚೇತಕರೇ ನೋಡ್ರೀ, ಚರ್ಚೆ ಬಂದಾಗ ನಾನು ಅವರಿಗೆ ಮಾತು ಕೊಟ್ಟಿದ್ದೇನೆ. ಅವರು ಪ್ರಸ್ತಾಪ ಮಾಡಿದ ನಿಲುವಳಿ ಸೂಚನೆಯನ್ನು ನಿಯಮ – 330 ಕ್ಕೆ ಕನ್ವರ್ಟ್ ಮಾಡಲಾಗಿದೆ. ಇವತ್ತಿನ ದಿವಸ ನಾನು ಸದನಕ್ಕೆ ಬಂದ ಕೂಡಲೇ ಮತ್ತೆ ಚರ್ಚೆ ಮಾಡುವುದಾಗಿ ಅವರು ಹೇಳಿದರು. ಆಗ ನಾನು ಅದನ್ನು ನಿಯಮ – 330 ರಡಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಇಂದಿನ ಪ್ರಶ್ನೋತ್ತರ ಕಲಾಪ ಆದ ನಂತರ ನಿಯಮ – 330 ರಡಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಇದನ್ನು ತೆಗೆದುಕೊಳ್ಳಬಾರದು ಎಂಬ ಕಾಯ್ದೆ ಏನೂ ಇಲ್ಲ. ಹೀಗಾಗಿ ಅದನ್ನು ತೆಗೆದುಕೊಳ್ಳುತ್ತೇನೆ. ಅಲ್ಲಿಗೆ ಆಯಿತು.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ನಾನು ನಿಮಗೆ ಪ್ರಶ್ನೆಯನ್ನು ಮಾಡುತ್ತಿಲ್ಲ. ಆದರೆ, ನಾನು ನಿಮಗೆ ಹೇಳುತ್ತಿರುವುದೇನೆಂದರೆ, ಸದನದಲ್ಲಿ ಯಾವತ್ತು ಪ್ರಶ್ನೋತ್ತರ ಕಲಾಪವನ್ನು ಮೊದಲಿಗೆ ತೆಗೆದುಕೊಳ್ಳಲಾಗುತ್ತದೆ. ಆಮೇಲೆ ಶೂನ್ಯ ವೇಳೆ ಪ್ರಸ್ತಾಪಗಳನ್ನು ಹಾಗೂ ನಂತರದಲ್ಲಿ ಅದನ್ನು ತೆಗೆದುಕೊಳ್ಳಲಾಗುತ್ತದೆ. ಅದನ್ನು ಬಿಟ್ಟು ಅವರುಗಳು ಮುಂಚೆ ಬಂದು ಕೇಳಿದರೆ, ನೀವು ಅವಕಾಶವನ್ನು ಕೊಡಲು ಆಗುತ್ತದೆಯೇ?

**(ಗೊಂದಲ)**

**ಸಭಾಪತಿಯವರು:–** ಅದು ನಿಲುವಳಿ ಸೂಚನೆಯಾಗಿದೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವ ಪ್ರಸ್ತಾವನೆಯನ್ನು ಅವರು ಮೊದಲು ಮೂವ್ ಮಾಡಲಿ. ಆಮೇಲೆ ಅವರಿಗೆ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಅವರುಗಳು ಈ ಮೊದಲು ಸದನದಲ್ಲಿ ಚರ್ಚೆ ಮಾಡಿದಾಗ ಪ್ರಶ್ನೋತ್ತರ ಕಲಾಪ ಮುಗಿದ ಮೇಲೆ ನಿಯಮ – 330 ರಡಿ ಚರ್ಚೆಯನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಮೊದಲು ಇವರು ಮೂವ್ ಮಾಡಲಿ, ಆಮೇಲೆ ಅವರಿಗೆ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ಹೀಗಾಗಿ ಇವರು ಆಮೇಲೆ ಮಾಡಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಾನು ಇದನ್ನು ಮೂವ್ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನೀವು ಅವರ ಮನವಿಯನ್ನು ನಿಯಮ – 330 ಕ್ಕೆ ಪರಿವರ್ತನೆ ಮಾಡಿದ್ದೀರಿ. ಇವತ್ತಿನ ಅಜೆಂಡಾದಲ್ಲಿನ 4 ನೇ ವಿಷಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವುದು ಇದೆ. ಹೀಗಾಗಿ ಇದನ್ನು ಮೊದಲು ತೆಗೆದುಕೊಂಡು, ಆ ನಂತರದಲ್ಲಿ ಅವರಿಗೆ ಅವಕಾಶವನ್ನು ನೀಡಿ. ಇದರಲ್ಲಿ ನಮ್ಮದು seniority ಇದೆ. ಇದನ್ನು ದಿನಾಂಕ 23 ನೇ ತಾರೀಖಿನ ಅಜೆಂಡಾದಲ್ಲಿಯೂ ಸಹ ಪಟ್ಟಿ ಮಾಡಲಾಗಿತ್ತು.

**ಸಭಾಪತಿಯವರು:–** ಇಲ್ಲಿ seniority ಎಂಬುದಾಗಿ ಏನೂ ಇಲ್ಲ. ಪರಿಸ್ಥಿತಿಗನುಗುಣವಾಗಿ ಸಭಾಪತಿಯವರು ನಿರ್ಣಯವನ್ನು ಮಾಡುತ್ತಾರೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಆಯಿತು, ನಮ್ಮ ವಿನಂತಿ ಇದೆ. ದಯಮಾಡಿ ರಾಜ್ಯಪಾಲರ ವಂದನಾ ನಿರ್ಣಯ ಸಲ್ಲಿಸುವ ಪ್ರಸ್ತಾವವನ್ನು ಮೊದಲು ತೆಗೆದುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಇದನ್ನು ನಾನು ಮೊದಲು ಮೂವ್ ಮಾಡುತ್ತೇನೆ; ಭಾಷಣವನ್ನು ಮತ್ತೆ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಪ್ರಸ್ತಾವವನ್ನು ಮೊದಲು ತೆಗೆದುಕೊಳ್ಳಿ.

**ಸಭಾಪತಿಯವರು:–** ಇವರದ್ದು ಆದ ಮೇಲೆ ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಒಂದು ಸೆಕೆಂಡ್..,

**ಸಭಾಪತಿಯವರು:–** ಇವರದ್ದು ಆದ ಮೇಲೆ ನಿಮಗೆ ಅವಕಾಶವನ್ನು ನೀಡುತ್ತೇನೆ. ನೀವು ತಿಳಿದುಕೊಳ್ಳಿ. ಒಂದು ಬಾರಿ ತೀರ್ಮಾನ ಮಾಡಿದ ಮೇಲೆ ಅದನ್ನು ಹಗಲೆಲ್ಲಾ ಬದಲು ಮಾಡುವುದಕ್ಕಾಗುವುದಿಲ್ಲ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನಮ್ಮದು ವಿನಂತಿ ಇದೆ.

**ಸಭಾಪತಿಯವರು:–** ಶ್ರೀ ರಮೇಶ್ ಬಾಬು ರವರೇ ವಿನಾಕಾರಣ ವಾದ ಮಾಡಬೇಡಿ.

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನಮ್ಮದು ವಿನಂತಿ ಇದೆ. ತಾವು ದಿನಾಂಕ: 23/01/2026 ರಂದು ಇದರ ಬಗ್ಗೆ ರೂಲಿಂಗ್ ಅನ್ನು ಕೊಟ್ಟಿದ್ದೀರಿ. ತಾವು ಏನು ಹೇಳುತ್ತಿದ್ದೀರಾ ಅದಕ್ಕೆ ಪೂರಕವಾಗಿ 23 ನೇ ತಾರೀಖಿನಂದು ನಿಯಮ – 330 ಕ್ಕೆ ಸಂಬಂಧಪಟ್ಟಂತೆ ರೂಲಿಂಗ್ ಅನ್ನು ಕೊಟ್ಟಿದ್ದೀರಿ. ಈಗ ನಾಲ್ಕನೆ ವಿಷಯವನ್ನು ಬಿಟ್ಟು, ಅದನ್ನು ಹೇಗೆ ತೆಗೆದುಕೊಳ್ಳುತ್ತೀರಿ?

**ಸಭಾಪತಿಯವರು (ಏರು ಧ್ವನಿಯಲ್ಲಿ):–** ನಾನು ಹೇಳವುದನ್ನು ಕೇಳಿ. ಬರೀ ಹೀಗೇ ಹೇಳುತ್ತಿದ್ದೀರಲ್ಲ. ನನಗೆ ಸಂಪೂರ್ಣ ಅಧಿಕಾರವಿದೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ದಯಮಾಡಿ ನೀವು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಪ್ರಸ್ತಾವವನ್ನು ಮೊದಲು ತೆಗೆದುಕೊಂಡು, ಆ ನಂತರ ಇದನ್ನು ತೆಗೆದುಕೊಳ್ಳಿ.

**ಸಭಾಪತಿಯವರು:–** ಇಲ್ಲ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ನಾನು ಸದನದಲ್ಲಿ ಚರ್ಚೆ ಮಾಡಿದಾಗ ಇದರ ಬಗ್ಗೆ ಸದನದಲ್ಲಿ ಇದನ್ನು ಹೇಳಿದ್ದೇನೆ. ಪ್ರಶ್ನೋತ್ತರ ಕಲಾಪವಾದ ನಂತರ ನಿಯಮ 330 ಅನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದೇನೆ. ಹೀಗಾಗಿ ಇದನ್ನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಏನೂ ತಪ್ಪಿಲ್ಲ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಹೌದು; ತಾವು 23 ನೇ ತಾರೀಖಿನಂದು ನಿಯಮ – 330 ಕ್ಕೆ ಸಂಬಂಧಪಟ್ಟಂತೆ, ಏನು ರೂಲಿಂಗ್ ಅನ್ನು ಕೊಟ್ಟಿದ್ದೀರಿ? ತಾವು ನೀಡಿರುವ ರೂಲಿಂಗ್‌ಗೆ ಅವರು ಗೌರವವನ್ನು ನೀಡಬೇಕು. ಈಗ ಅವರು "ದಭಾದುಭಿ" ಮಾಡಿ ಬಿಟ್ಟು, ಪೀಠಕ್ಕೆ ಅವರು ಹೆದರಿಸಿಬಿಟ್ಟರೆ...,

**ಸಭಾಪತಿಯವರು:–** ನಾನು ನಿಯಮ – 330 ರಡಿ ಚರ್ಚೆಯನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ನಾನು ಸದನಕ್ಕೆ ಬಂದ ಕೂಡಲೇ ಅವರು ಪ್ರಸ್ತಾಪವನ್ನು ಮಾಡಿ, ನಿಲುವಳಿ ಸೂಚನೆಯನ್ನು ನೀಡಿರುವುದಾಗಿ ತಿಳಿಸಿದರು.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನಮ್ಮದು ವಿನಂತಿ ಇದೆ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ.

**ಸಭಾಪತಿಯವರು:–** ವಿನಾಕಾರಣ ನೀವು ಪ್ರಶ್ನೆ ಮಾಡಬೇಡಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನಮ್ಮದು ವಿನಂತಿ ಇದೆ.

**ಸಭಾಪತಿಯವರು:–** ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ತಾವು 23 ನೇ ತಾರೀಖಿನಂದು ರೂಲಿಂಗ್ ಕೊಟ್ಟಿದ್ದು, ಅದು ನಿಯಮ – 330 ಕ್ಕೆ ಕನ್ವರ್ಟ್ ಆಗಿದೆ. ಹೀಗಾಗಿ ನೀವು ಅದರ ಪರಕಾರವೇ ತೆಗೆದುಕೊಳ್ಳಿ. ಖಂಡಿತವಾಗಿಯೂ ಸಹ ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. 23 ನೇ ತಾರೀಖಿನಂದೇ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಪ್ರಸ್ತಾವನೆಯು ಲಿಸ್ಟ್ ಆಗಿದೆ. ಹೀಗಾಗಿ ಇವತ್ತಿನ ದಿವಸ ಅದನ್ನು skip ಮಾಡಿ, ಮುಂದಕ್ಕೆ ಹೋಗುವ ಅವಶ್ಯಕತೆ ಇಲ್ಲ. ಇದು ಕೇವಲ ಎರಡು ನಿಮಿಷಗಳ ಕೆಲಸವಾಗಿದೆ. ಹೀಗಾಗಿ ಮೊದಲು ವಂದನಾ ನಿರ್ಣಯದ ಕಲಾಪವನ್ನು ತೆಗೆದುಕೊಳ್ಳಿ. ಆ ನಂತರದಲ್ಲಿ ಅವರದ್ದನ್ನು ತೆಗೆದುಕೊಳ್ಳಿ, ಇದಕ್ಕೆ ಖಂಡಿತವಾಗಿಯೂ ಸಹ ನಮ್ಮ ಅಭ್ಯಂತರವಿಲ್ಲ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ಇವತ್ತಿನ ಅಜೆಂಡಾ ಏನು ಇದೆ, ಅದರ ಪ್ರಕಾರವೇ ನೀವು ತೆಗೆದುಕೊಳ್ಳಿ.

**ಸಭಾಪತಿಯವರು:–** ನಾನು ಒಂದು ಬಾರಿ ತೀರ್ಮಾನ ಮಾಡಿದರೆ, ಅದಕ್ಕೆ ವ್ಯತಿರಿಕ್ತವಾಗಿ ನಾನು ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ತಾವು ಒಂದು ರೂಲಿಂಗ್ ಅನ್ನು ಕೊಡಿ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾಪಕ್ಕೆ ತಾವು ಅವಕಾಶ ನೀಡುತ್ತೀರೋ ಅಥವಾ ಇಲ್ಲವೋ ಎಂಬುದಕ್ಕೆ ರೂಲಿಂಗ್ ಅನ್ನು ನೀಡಿ.

**ಸಭಾಪತಿಯವರು:–** ನಾನು ಅವಕಾಶವನ್ನು ನೀಡುತ್ತೇನೆ. 100% ಕೊಡುತ್ತೇನೆ; ಕೊಡಲೇ ಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಹಾಗಾದರೆ ನಾನು ಇದನ್ನು ಮೂವ್ ಮಾಡುತ್ತೇನೆ.

**ಸಭಾಪತಿಯವರು:–** ನಾನು ಕನ್ನಡ ಭಾಷೆಯಲ್ಲಿಯೇ ಹೇಳುತ್ತಿದ್ದೇನೆ. ನಿಮಗೆ ತಿಳಿಯುತ್ತದೆಯೋ ಅಥವಾ ಇಲ್ಲವೋ?

**ಶ್ರೀ ಐವನ್ ಡಿಸೋಜಾ:–** ಮಾನ್ಯ ಸಭಾಪತಿಯವರೆ, ನಾನೂ ಸಹ ಕನ್ನಡದಲ್ಲಿಯೇ ಕೇಳುತ್ತಿದ್ದೇನೆ.

**ಸಭಾಪತಿಯವರು:–** ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ; ಹೀಗಾಗಿ ನೀವು ವಿನಾಕಾರಣ ವಾದ ಮಾಡಬೇಡಿ. ಅವರಿಗೆ ಪ್ರಸ್ತಾಪಿಲು ಅವರ ಹೆಸರನ್ನು ಕರೆದಿದ್ದೇನೆ. ಹೀಗಾಗಿ ಅವರು ಮೊದಲು ಮಾತನಾಡಲಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರೇ ನೀವು ಮಾತನಾಡಿ.

## 8. ನಿಯಮ 330 ರ ಮೇರೆಗೆ ಚರ್ಚೆ

**ವಿಷಯ:- ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು**

* * *

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ - 330 ರಡಿ ತಾವು ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಸರ್ಕಾರವು ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ತೊಡಗಿದೆ. ಇದಕ್ಕೆ ಅನೇಕ ಪುರಾವೆಗಳೂ ಕೂಡ ಸಿಕ್ಕಿವೆ. ಈಗಾಗಲೇ ಅಬಕಾರಿ ಇಲಾಖೆಯಲ್ಲಿ ಹಣ ವಸೂಲಿ ಮಾಡತಕ್ಕದ್ದು ಮತ್ತು ಒಂದೊಂದು ಕೆಲಸಕ್ಕೂ ಇಷ್ಟಿಷ್ಟು ಅಂತ ಹೇಳಿ, ಹಣ ವಸೂಲಿ ಮಾಡುತ್ತಿರುವುದು ಅದು ಕೇವಲ ಸಾವಿರ, ಎರಡು ಸಾವಿರ, ಮೂರು ಸಾವಿರದಲ್ಲಿಲ್ಲ. ಇವುಗಳೆಲ್ಲವೂ ಕೋಟಿಗಳಲ್ಲಿ ವ್ಯವಹಾರ ನಡೆಯುತ್ತಿದೆ ಎನ್ನುವುದು ಈಗಾಗಲೇ ಬೆಳಕಿಗೆ ಬಂದಿದೆ. ಎಲ್ಲಾ ಮಾಧ್ಯಮಗಳಲ್ಲಿಯೂ ಸಹ ಚರ್ಚೆಯಾಗುತ್ತಿದೆ. ಇವತ್ತಿನ ದಿವಸ ಪತ್ರಿಕೆಗಳಲ್ಲಿ ಬಹಳಷ್ಟು ವರದಿಯಾಗಿದೆ. ಇದರ ಜೊತೆಗೆ, ಬಾರ್ ಅಂಡ್ ರೆಸ್ಟೋರೆಂಟ್ ಇರಬಹುದು, ವೈನ್ ಸ್ಟೋರ್‌ಗಳಿರಬಹುದು ಇಂತಹವುಗಳನ್ನು ಯಾರು ನಡೆಸುತ್ತಿದ್ದಾರೆ, ಅವರು ಹಣ ಕೊಟ್ಟು, ಕೊಟ್ಟು, ಕೊಟ್ಟು...! ಬೇಸರಗೊಂಡು, ಕುಪಿತರಾಗಿ, ಬೀದಿ ಬೀದಿಗಳಲ್ಲೂ ಮಾತನಾಡುತ್ತಿದ್ದಾರೆ. ಇದು ಮಾತ್ರವಲ್ಲದೇ, ಇಲಾಖೆಯ ಅಧಿಕಾರಿಗಳು ಇಂತಿಂತಹ ಕೆಲಸಕ್ಕೆ ಇಷ್ಟೇ ಹಣ ಕೊಡಬೇಕೆಂದು ಹೇಳಿ, ಮಾತನಾಡಿ, ಹಣ ಸಂಗ್ರಹ ಮಾಡುವಾಗ, ಲೋಕಾಯುಕ್ತ ಸಂಸ್ಥೆಯವರು ರೈಡ್ ಮಾಡಿದಾಗ ಸಿಕ್ಕಿ ಬಿದ್ದಿದ್ದಾರೆ. ಹೀಗೆ ಸಿಕ್ಕಿ ಹಾಕಿಕೊಂಡಾಗ ಇದರ ಜೊತೆಗೆ ಅವರು ಹೇಳಿದ್ದಾರೆ. ಇವತ್ತು ಇದರ ಬಗೆಗಿನ ವಿಡಿಯೋಗಳೂ ಸಹ ಎಲ್ಲಾ ಕಡೆಗಳಲ್ಲಿ ಹರಿದಾಡುತ್ತಿವೆ. 25 ಲಕ್ಷ ರೂಪಾಯಿಗಳನ್ನು ಕೊಡುವಾಗ ಅವರು ಸಿಕ್ಕಿಬಿದ್ದರು. ಇದು ಏಕೆ ಎಂದು ಹೇಳಿದರೆ, ಒಂದೂವರೆ ಕೋಟಿ ರೂಪಾಯಿಗಳಿಗೆ ಒಂದು ಲೈಸೆನ್ಸ್ ಕೊಡಬೇಕೆಂದು ತೀರ್ಮಾನವಾಯಿತು. ಇದು ಲಂಚ ಹೊರತು fees ಅಲ್ಲ. ಸರ್ಕಾರಕ್ಕೆ ಕಟ್ಟಬೇಕಾದದ್ದು ಫೀಸು; ಅದನ್ನು ಬಿಟ್ಟು ಈ ಹಣ. ಇದು ಇನ್ನೊಂದು ತರಹದ fees ಅದುವೇ ಲಂಚ. 25 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಸಿಕ್ಕಿಬಿದ್ದರು. ಇದರಲ್ಲಿ ಮೂರು ಅಧಿಕಾರಿಗಳು ಅರೆಸ್ಟ್ ಆದರು. ಅವರನ್ನು ನ್ಯಾಯಾಲಯಕ್ಕೂ ಹಾಜರುಪಡಿಸದರು. ಈ ಸರ್ಕಾರದ ಭ್ರಷ್ಟಾಚಾರಕ್ಕೆ ಇದು ಸಾಕ್ಷಿಯಾಗಿದೆ. ಈಗ ಇರುವ ವಿಷಯ ಏನೆಂದರೆ, ಒಂದೊಂದು ಕೆಲಸಕ್ಕೂ ಕೂಡ ಇಲ್ಲಿ ಏನಾಗಿದೆ ಎಂದರೆ..., ಇದು ಒಂದು ಸಾರಿ ಆಗಿದ್ದಲ್ಲ. ಈ ಹಿಂದೆಯೂ ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲಿ

ಕಛೇರಿಯಲ್ಲಿ ಜಂಟಿ ಆಯುಕ್ತರು ಹಾಗೂ ನ್ಯಾಯವಾದಿಗಳ ನಡುವೆ ಸಂಭಾಷಣೆ ನಡೆದಿತ್ತು. ಸಿ.ಎಲ್.–7 ಮಂಜೂರಾತಿಗೆ 18 ಲಕ್ಷ ರೂಪಾಯಿಗಳನ್ನು ನೀಡುವ ಬಗ್ಗೆ ಪ್ರಸ್ತಾಪವಾಗಿತ್ತು. ಇದು ಹಳೆಯ ವಿಷಯವಾಗಿದೆ. ಆಡಿಯೋದಲ್ಲಿ ಅಬಕಾರಿ ಸಚಿವರು ಮತ್ತು ಅವರ ಪುತ್ರನಿಗೆ ದೂರವಾಣಿ ಕರೆ ಮಾಡಬೇಕಂತೆ ಎಂದು ಅವತ್ತಿನ ದಿವಸ ಅಧಿಕಾರಿಗಳು ಹೇಳಿದ್ದರು. ಇದು ಬೇರೆ ವಿಷಯ. ಅಬಕಾರಿ ಸಚಿವರಿಗೆ ಪ್ರತಿ ಜಿಲ್ಲೆಯಿಂದ ಐದು ಲಕ್ಷ ಲಂಚವನ್ನು ನೀಡಬೇಕೆಂದು ಮಹಿಳಾ ಅಧಿಕಾರಿಯೊಬ್ಬರು ಹಿರಿಯ ಅಧಿಕಾರಿಯ ಜೊತೆಗೆ ಮಾತನಾಡಿದ್ದ ಆಡಿಯೋ ವೈರಲ್ ಆಗಿತ್ತು. ಇದು ಕೂಡ ಒಂದು ಆಗಿದೆ. ಸಿ.ಎಲ್.–7 ಪರವಾನಿಗೆ ಮಂಜೂರಾತಿ ಲಂಚದ ಬೇಡಿಕೆಯ ಪ್ರಕರಣದಲ್ಲಿ ಮಂಡ್ಯ ಜಿಲ್ಲೆಯ ಅಬಕಾರಿ ಉಪ ಆಯುಕ್ತರಾದ ಶ್ರೀ ಎ.ರವಿಶಂಕರ ಮದ್ದೂರು ವಲಯದ ಅಬಕಾರಿ ನಿರೀಕ್ಷಕ ಶ್ರೀ ಶಿವಶಂಕರ ಆರಾಧ್ಯ ಇವರ ಮಧ್ಯದಲ್ಲಿಯೂ ಕೂಡ ನಡೆದಿದ್ದು ಒಂದು ಪ್ರಕರಣ ವರದಿಯಾಗಿತ್ತು. ಇದೇ 2025 ನೇ ವರ್ಷದ ಆಗಸ್ಟ್ ತಿಂಗಳಿನ 20 ನೇ ತಾರೀಖಿನಂದು ರೇಸ್ ಕೋರ್ಸ್ ರಸ್ತೆಯ ಬೆಂಗಳೂರು ಟರ್ಫ್ ಕ್ಲಬ್ ಆವರಣದಲ್ಲಿ ಸಿ.ಎಲ್.–4 ಸನ್ನದು ಪರಿಷ್ಕೃತ ನೀಲಿ ನಕಾಶೆ ಅನುಮೋದನೆಗೆ ಸಂಬಂಧ ಲೋಪವೆಸಗಿದ ಕಾರಣ ಐವರು ಅಬಕಾರಿ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿತ್ತು.

(ಮುಂದು)

(34)27-01-2026/2-30/bkp-md **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು)**

ಈಗ 569 ಬಾರ್ ಲೈಸೆನ್ಸ್ ಹರಾಜು ಕೆಲಸ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಈಗಾಗಲೇ ಅಕ್ರಮಗಳ ಬಗ್ಗೆ ಮತ್ತು ಲಂಚದ ವಿಚಾರ ಎಲ್ಲಾ ಕಡೆಯಲ್ಲೂ ಇವತ್ತು ಚರ್ಚೆಗೆ ಗ್ರಾಸವಾಗಿದೆ. ಮಾನ್ಯ ಸಭಾಪತಿಯವರೆ, ಇದರಲ್ಲಿ ಮಾನ್ಯ ಸಚಿವರಾಗಿರುವಂತಹ ಶ್ರೀಮಾನ್ ಆರ್.ಬಿ. ತಿಮ್ಮಾಪುರ್ ರವರ ಹೆಸರನ್ನು ನೇರವಾಗಿ ಹೇಳಿದ್ದಾರೆ. ಆದಾದ ನಂತರ ಅವರ ಮಗನ ಕೈಯಿಂದ ಹಣವನ್ನು ವಸೂಲಿ ಮಾಡಿಸುತ್ತಿರುವುದು ಮತ್ತು ನಿಮಗೆ ಏನಾದರೂ ಇದರಲ್ಲಿ concession ಬೇಕೆಂದರೆ ಅವರ ಮಗನ ಕಡೆಯಿಂದ ಒಂದು ಫೋನ್ ಮಾಡಿಸಿಬಿಡಿ ಎಂದು ಅಧಿಕಾರಿಗಳು ಹೇಳಿರುವಂತಹದ್ದು, ಯಾವ ಯಾವ ಮಂತ್ರಿಗೆ ಎಷ್ಟು ಹಣ ಸೇರಬೇಕು, ಅಧಿಕಾರಿಗಳಿಗೆ Table to Table ಗೆ ಎಷ್ಟು ಹಣ ಸೇರಬೇಕೆನ್ನುವುದು ಈಗಾಗಲೇ ಎಲ್ಲಾ ಕಡೆಯಲ್ಲೂ ವರದಿಯಾಗಿದೆ. ಆದಾದ ನಂತರ ಈಗಾಗಲೇ ಈ ರೀತಿಯ ಒಂದು ಪ್ರಕರಣ ಆಗಿದ್ದರೆ ಪರವಾಗಿಲ್ಲ. ಏನೋ ಯಾರೋ ಅಪ್ಪಿ ತಪ್ಪಿ ಅಪಾದನೆ ಮಾಡಿದ್ದಾರೆಂದು ಹೇಳಬಹುದು. ಇದು ಪ್ರತಿನಿತ್ಯಾ volumes ರೀತಿಯಲ್ಲಿ ಲಂಚಾವತಾರ ಬರುತ್ತಿದೆ. ಈ ರೀತಿ ಬರತಕ್ಕಂತಹ ಸಂದರ್ಭದಲ್ಲಿ ಯಾರು ಸಹ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಆದಾದ ನಂತರ ಬಾರ್ ಅಂಡ್ ಲೈಸೆನ್ಸ್ ಅನ್ನು ಯಾರು ಕೇಳಿ ತೆಗೆದುಕೊಂಡಿದ್ದರೋ

ಹೊಸದಾಗಿ ಕೊಡಬೇಕೆಂದು ಹೇಳಿ 25 ಲಕ್ಷ ರೂಪಾಯಿಗಳ ಲಂಚವನ್ನು ಯಾರು ಕೊಟ್ಟರೋ ಅವರು ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕೆಂದಾಗ ಅವರುಗಳು ಕುಪಿತರಾಗಿ ಪತ್ರಿಕೆಗಳಿಗೂ ಹೇಳಿದರು, ಆದಾದನಂತರ ಲೋಕಾಯುಕ್ತದಲ್ಲೂ ದೂರನ್ನು ದಾಖಲು ಮಾಡಿದ್ದಾರೆ. ದೂರು ದಾಖಲಾಗಿ ಈ ವಿಚಾರ viral ಆದ ಮೇಲೆ ಮಾನ್ಯ ಸಚಿವರು ಏನು ಹೇಳುತ್ತಾರೆಂದರೆ ನನ್ನ ಮಗನನ್ನು ಇದರಲ್ಲಿ ಯಾರೋ ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ದುರುಪಯೋಗಎಂದರೇನು? ಇದು ಉಪಯೋಗವೋ ದುರುಪಯೋಗವೋ ಎಂದು ಹೇಳಿ ಹಣ ಕೊಟ್ಟವರು ಅಥವಾ ಹಣವನ್ನು ತೆಗೆದುಕೊಂಡವರು ಹೇಳಬೇಕು. ಇದರಲ್ಲಿ ಮಂತ್ರಿಗಳು ನೇರವಾಗಿ ನನ್ನ ಕೈಯಲ್ಲಿ ಹಣ ಬೇಡ. ನನ್ನ ಮಗನ ಕಡೆ ಕೊಡಿ ಎಂದು ಹೇಳಿದ್ದಾರೆಯೇ? ಇಂತಹ ಅನೇಕ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತವೆ. ಶ್ರೀ ಲಕ್ಷ್ಮೀ ನಾರಾಯಣ ಎನ್ನುವ ಒಬ್ಬ ವ್ಯಕ್ತಿ ಈ ಬಗ್ಗೆ ಬಹಳ ಬೇಸರಗೊಂಡು ಇನ್ನು ಮುಂದೆ ನಾವು ಹಣವನ್ನು ಈ ರೀತಿ ಕೊಡಲಿಕ್ಕೆ ಆಗುವುದಿಲ್ಲ, ಹಣವನ್ನು ನೀವು ಸುಲಿಗೆ ಮಾಡುತ್ತಿದ್ದೀರಿ ಎಂದು ಹೇಳಿ ಲೋಕಾಯುಕ್ತಕ್ಕೆ ಹೋಗಿ ದೂರನ್ನು ಕೊಟ್ಟರು. ಆದಾದ ನಂತರ ನಿನ್ನೆ ಅಥವಾ ಮೊನ್ನೆ ಎಂದು ಕಾಣುತ್ತದೆ. ಮಾನ್ಯ ಗುರುಸ್ವಾಮಿ ಎನ್ನುವಂತಹವರು ಏನು ಇದೆಲ್ಲವನ್ನು ನಡೆಸುತ್ತಾರೆ ಈ Karnataka Wine Merchants' Association ನ ಅಧ್ಯಕ್ಷರಾಗಿರುತ್ತಾರೆ. ಸಂಯುಕ್ತ ಕರ್ನಾಟಕ ಪತ್ರಿಕೆಗೆ ನೇರವಾಗಿ ಅವರು ಸಂದರ್ಶನವನ್ನು ಕೊಟ್ಟಿದ್ದಾರೆ. ಸಂದರ್ಶನದಲ್ಲಿ ನೇರವಾಗಿ ಅವರು ಏನು ಹೇಳುತ್ತಾರೆಂದರೆ ಮೇಲ್ವರ್ಗದಿಂದ ಹಿಡಿದು ಅಂದರೆ ಮಂತ್ರಿಗಳಿಂದ ಹಿಡಿದು Peon ವರೆಗೂ ಕೂಡ ನಾವು ಲಂಚವನ್ನು ಕೊಡದೇ ಇದ್ದರೆ ನಮ್ಮ ವ್ಯಾಪಾರ ನಡೆಯುವುದೇ ಇಲ್ಲವೆಂದು ಹೇಳಿದ್ದಾರೆ. ಪ್ರತಿ ಹಂತದಲ್ಲೂ ನಮ್ಮನ್ನು ಸುಲಿಗೆ ಮಾಡುತ್ತಿದ್ದಾರೆಂದು ಹೇಳಿ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷರಾದ ಶ್ರೀಮಾನ್ ಗುರುಸ್ವಾಮಿಯವರು ಅಪಾದನೆ ಮಾಡಿದ್ದಾರೆ. ಇದನ್ನು ಯಾರೋ ಊಹೆ ಮೇಲೆ ಬರೆದಿರತಕ್ಕದ್ದಲ್ಲ. ಅವರು exclusive ಆಗಿ ಸಂದರ್ಶನವನ್ನು ನೀಡಿ ಹೇಳಿದ್ದಾರೆ. ಇದರಲ್ಲಿ ಅಬಕಾರಿ Deputy Commissioner of Excise and Superintendent ಲಂಚದ ಬಲೆಗೆ ಬಿದ್ದಿದ್ದಾರೆ. ಇಲ್ಲಿ ಇದು ಕೇವಲ ಸ್ಯಾಂಪಲ್ ಆಗಿರುವುದಿಲ್ಲ. ಇಲಾಖೆಯಲ್ಲಿ ಇವರಿಗಿಂತ ಮೇಲಿನ ಮತ್ತು ಕೆಳಗಿನವರೆಗೂ ಇರುವಂತಹ ಸಿಬ್ಬಂದಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಈ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಗುರುಸ್ವಾಮಿಯವರು ಶ್ಲಾಘನೆ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಹೊಸ ಪರವಾನಿಗಿಯನ್ನು ಕೊಟ್ಟಿಲ್ಲ ಎನ್ನುತ್ತಲೇ 5-6 ವರ್ಷಗಳಿಂದ ಬೇಡಿಕೆ ಇದ್ದ ಕಾರಣಕ್ಕೆ CL-7 ನಮೂನೆಯ 2000 Liquor Shops License ಅನ್ನು ಕೊಟ್ಟಿದ್ದಾರೆ. ನೀವು ಏನಾದರೂ Liquor Shops License ಅನ್ನು ಕೊಟ್ಟಿದ್ದೀರಾ ಎಂದು ನಾವು ಇಲ್ಲಿ ಪ್ರಶ್ನೆಯನ್ನು ಕೇಳುತ್ತೇವೆ. ಅದಕ್ಕೆ ಉತ್ತರವಾಗಿ ಇಲ್ಲವೆಂದು ಹೇಳುತ್ತಾರೆ. ಆ ರೀತಿಯ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲವೆಂದು ಹೇಳುತ್ತಾರೆ. ಈಗಾಗಲೇ 2000 ಲಿಕ್ಕರ್ ಶಾಪ್‌ಗಳನ್ನು ಇಲ್ಲಿ unofficial ಆಗಿ ಕೊಟ್ಟಿದ್ದಾರೆಯೇ

ಅಥವಾ official ಆಗಿ ಕೊಟ್ಟಿದ್ದಾರೆಯೇ ಅಥವಾ ಒಂದು ವೇಳೆ ಇಲ್ಲಿ ಕೊಟ್ಟಂತಹ ಉತ್ತರಕ್ಕೆ ತದ್ವಿರುದ್ಧವಾಗಿ ಅದು ಇದ್ದರೆ ಇದಕ್ಕೆ ಕ್ರಮ ಏನು? ಈ ಬಗ್ಗೆಯೂ ಸಹ ಹೇಳಬೇಕು. ಇದಕ್ಕೆ 50 ಲಕ್ಷ ರೂಪಾಯಿಗಳಿಂದ ಒಂದೂವರೆ ಕೋಟಿ ರೂಪಾಯಿವರೆಗೂ something ನಡೆದಿದೆ. ಇದು authentic news. ಏಕೆಂದರೆ, ಇದು ಅವರ ಅಧ್ಯಕ್ಷರೆ ಹೇಳಿರತಕ್ಕಂಹ ಕಾರಣದಿಂದ ನಾವು ಹೇಳುತ್ತಿದ್ದೇವೆ. "ಇದೇನೂ open secret ಆಗಿರುವುದಿಲ್ಲ. ಎಷ್ಟು ಕೋಟಿ ಆಗಿದೆ ಎಂದು ನೀವೇ ಲೆಕ್ಕ ಹಾಕಿ. ಹೊಸ license renewal, ಬೇರೆ ಸ್ಥಳಕ್ಕೆ ಅಂಗಡಿ shifting, name change ಈ ರೀತಿಯಲ್ಲಿ ಎಲ್ಲಾ ಹಂತದಲ್ಲೂ 5 ರಿಂದ 10 ಲಕ್ಷ ರೂಪಾಯಿಗಳ ಲಂಚ ನಿಗದಿಯಾಗಿರುತ್ತದೆ. ತಿಂಗಳ 10ನೇ ತಾರೀಖಿನೊಳಗಾಗಿ ಕೊಡದಿದ್ದರೆ ಕಿರುಕುಳ ಶುರುವಾಗುತ್ತದೆ. 20 ರಿಂದ ಅನಾವಶ್ಯಕ stock checking, 30ಕ್ಕೆ ಇಷ್ಟೇ stock ಗೆ indent ಹಾಕಬೇಕೆಂದು ಅಧಿಕಾರಿಗಳು ದಬ್ಬಾಳಿಕೆ ಮಾಡುತ್ತಾರೆ. ಜೊತೆಗೆ ನಮ್ಮ ಕಡತಗಳು ಅವರ ಕಚೇರಿಯಲ್ಲಿ move ಆಗುವುದೇ ಇಲ್ಲ." ಈ ರೀತಿಯಲ್ಲಿ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ಜೊತೆಗೆ ಈ ಗುರುಸ್ವಾಮಿಯವರು ಯಾರು? ಈ ಗುರುಸ್ವಾಮಿಯವರು ಈ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳಾಗಿರುವಂತಹ ಶ್ರೀಮಾನ್ ಸಿದ್ದರಾಮಯ್ಯನವರ ವರುಣಾ ಕ್ಷೇತ್ರದವರಾಗಿರುತ್ತಾರೆ. ಅವರೇ ಕೊಟ್ಟಿರುವಂತಹ ವಿಚಾರ ಇದಾಗಿದೆ. ಹೌದು, ನಾನು ವರುಣಾ ಕ್ಷೇತ್ರದವನೇ. ಶ್ರೀಮಾನ್ ಸಿದ್ದರಾಮಯ್ಯನವರು ನನಗೆ ತುಂಬಾ ಪರಿಚಿತರು. ನಮಗೆ ನ್ಯಾಯಯುತ ವ್ಯಾಪಾರಕ್ಕೆ ಅನುವು ಮಾಡಿಕೊಡಿ ಎಂದು ಹೇಳಿದರೆ ಅವರು ನಮ್ಮನ್ನು ಗೌರವಿಸಲೇ ಇಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ. ಜೊತೆಗೆ ದುಬಾರಿ ಬೆಲೆಯಿಂದ ಇವತ್ತು ಎಲ್ಲಾ ಕಡೆ ದುಬಾರಿ ಬೆಲೆ ಇದೆ.

**ಶ್ರೀ ಎನ್.ಎಸ್.ಬೋಸುರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇದರ ಪ್ರಸ್ತಾವನೆಗೂ ಒಂದು limit ಇರುತ್ತದೆ ಅಲ್ಲವೇ? ತಾವು ಇದಕ್ಕೆ ಅವಕಾಶ ಕೊಟ್ಟಾಗ ಬರಿ ಪ್ರಸ್ತಾವನೆಯನ್ನು ಸಲ್ಲಿಸಬೇಕಷ್ಟೆ. ಇವರು ಪ್ರಸ್ತಾವನೆ ಜೊತೆಗೆ ಪತ್ರಿಕಾ ವಿವರಗಳನ್ನು ಹೇಳುತ್ತಿದ್ದಾರೆ. ಇದಕ್ಕೆ ಸಮಯ ಎಷ್ಟು ಕೊಡಬೇಕು.

**ಸಭಾಪತಿಯವರು:-** ಈಗ ನಿಯಮ 330 ಕ್ಕೆ ಅರ್ಧ ಗಂಟೆಯವರೆಗೆ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ನೀವು ನಿಲುವಳಿ ಸೂಚನೆಯನ್ನು ಮಂಡಿಸಿದ್ದೀರಿ ಎಂದು ತಿಳಿದುಕೊಂಡು ನಾನು ಈಗ ನಿಯಮ 330 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದು, ಇದನ್ನು ಎಲ್ಲರೂ ಸೇರಿದಂತೆ ಅರ್ಧ ಗಂಟೆಯಲ್ಲಿ ಮುಗಿಸಬೇಕು. ನಾನು ಏನು ನಿಮಗೆ ಹೇಳುತ್ತಿದ್ದೇನೆಂದರೆ ನಾನು ನಿಮ್ಮ ವಿಚಾರವನ್ನು ತಿಳಿದುಕೊಂಡು ಇದನ್ನು ನಿಯಮ 330 ಕ್ಕೆ convert ಮಾಡಿದ್ದೇನೆ. ಈಗ ನೀವು ನಿಯಮ 330 ರಡಿಯಲ್ಲಿ ಚರ್ಚೆ ಮಾಡುತ್ತಿದ್ದೀರಿ. ಅರ್ಧ ಗಂಟೆಯ ಸಮಯದ ಅವಕಾಶವಿದ್ದು, ನಾನು ಇನ್ನು ಹೆಚ್ಚಿಗೆ 5 ನಿಮಿಷಗಳ ಕಾಲಾವಕಾಶವನ್ನು ಕೊಡುತ್ತೇನೆ. ಅಷ್ಟರಲ್ಲಿ ನಾನು ಮುಗಿಸಿ. ನಂತರ ನೀವು ತಕರಾರು ಮಾಡಬೇಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ: –** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಏನು ಹೇಳಿದರು ಎಂದರೆ ಬರಿ ಪ್ರಸ್ತಾವನೆ ಮಾಡಬೇಕೆಂದು ಹೇಳಿದರು. ಹೌದು, ಇದು ಬರಿ ಪ್ರಸ್ತಾವನೆ ಇರಲಿ. ಆದರೆ, ಇದು ಭ್ರಷ್ಟಾಚಾರದ ಪ್ರಸ್ತಾವನೆ ಎಂದು ಇಟ್ಟುಕೊಳ್ಳಿ.

**ಸಭಾಪತಿಯವರು:–** ತಾವು ಎರಡೂವರೆ ಗಂಟೆಗೆ ಚರ್ಚೆಯನ್ನು ಪ್ರಾರಂಭ ಮಾಡಿದ್ದು, ಈಗ ಮೂರು ಗಂಟೆಯಾಗಿದೆ.

**ಶ್ರೀ ಎನ್.ಎಸ್.ಬೋಸುರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಆಯಿತು, ಬಿಡಿ. ನೀವು ಸರ್ಕಾರದ ಪರವಾಗಿ ನಂತರ ಉತ್ತರ ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ: –** ನೀವು ಉತ್ತರ ಕೊಡದೇ ನೀವು ಎಲ್ಲಿಗಾದರೂ ಹೋಗಲಿಕ್ಕೆ ನಾವು ಬಿಟ್ಟು ಬಿಡುತ್ತೇವೆಯೇ? ಪ್ರಶ್ನೆಯನ್ನು ಕೇಳಲಿಕ್ಕೆಯೇ ನಾವು ಇರುವುದಾಗಿದೆ. ಪ್ರತಿಯೊಂದು ಹಳ್ಳಿಗಳಲ್ಲಿಯೂ ಇವತ್ತು ಹೆಂಡ, ಸರಾಯಿ ಸಿಗುತ್ತದೆ.

**ಶ್ರೀಮತಿ ಹೇಮಲತಾ ನಾಯಕ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದು ಕಿರಾಣಿ ಅಂಗಡಿಯಲ್ಲೂ ಸಿಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ: –** ಹೌದು, ಇದು ಕಿರಾಣಿ ಅಂಗಡಿಯಲ್ಲೂ ಸಿಗುತ್ತದೆ. ಈಗ ಇದಕ್ಕೆ ನಿಮ್ಮ ಲೈಸೆನ್ಸ್ ಬೇಕಾಗಿರುವುದಿಲ್ಲ. ಕಿರಾಣಿ ಅಂಗಡಿಗೆ ಹೋದರೂ ಸಹ ಅಲ್ಲಿಯೂ ಕೂಡ ಇದು ಸಿಗುತ್ತಿದೆ.

**ಸಭಾಪತಿಯವರು:–** ಶ್ರೀಮತಿ ಹೇಮಲತಾ ನಾಯಕ್ ರವರು ಏತಕ್ಕೆ ಕಿರಾಣಿ ಅಂಗಡಿಗೆ ಹೋಗಿದ್ದರು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ: –** ಅವರು ಕಿರಾಣಿ ಅಂಗಡಿಗೆ ವ್ಯಾಪಾರಕ್ಕೆ ಹೋಗುತ್ತಾರೆ. ಅಲ್ಲಿ ಯಾರಾದರೂ ಕೊಡುತ್ತಿರುವುದನ್ನು ಅವರು ನೋಡಿರುತ್ತಾರೆ. ಇಂತಹ ಒಂದು ಪರಿಸ್ಥಿತಿ ಬಂದಿದೆ. ಜೊತೆಗೆ ಯಾವ ಒಂದು ಮಟ್ಟಕ್ಕೆ ಈ liquor ವಿಷಯ ಬಂದಿದೆ ಎಂದರೆ ಮೊದಲು first ಎಂದು ಹೇಳುತ್ತಿದ್ದರು. ನಂತರ ಇದನ್ನು seconds ಎಂದು ಹೇಳುತ್ತಿದ್ದರು. Seconds ಅಂದರೆ ಅದಕ್ಕೆ ಈಗ ಬೆಲೆಯಿಲ್ಲ, ಆದ್ದರಿಂದ, ಅದನ್ನು ನಾವು ಈಗ ತೆಗೆದಿದ್ದೇವೆಂದು ಸರ್ಕಾರಗಳು ಹೇಳಿದವು. ಅದನ್ನು ಬರಿ first ದೇ ಮಾಡಬೇಕಾಗಿತ್ತು, seconds ಗೆ ಹೋಗಬಾರದಿತ್ತು. ಆದರೆ, ಇವತ್ತು seconds ಅಲ್ಲ, thirds ಗಳು ಸಿಗುತ್ತೀವೆ. ಅದು ಎಂತಹದ್ದು ಎಂದು ನಿಮಗೆ ಗೊತ್ತಿದೆಯೇ? ಅದು ಮಿಲಿಟರಿಯದ್ದು, ಈ ಬಗ್ಗೆ ಅನುಭವಸ್ಥರು ಅನುಭವದ ಬಗ್ಗೆ ಮಾತನಾಡುತ್ತಾರೆ. ನಾವು ತಿಳಿದುಕೊಂಡು ಮಾತನಾಡುತ್ತೇವೆ. ಅಲ್ಲಿ ಮಿಲಿಟರಿಯದ್ದು ಸಿಗುತ್ತದೆ ಎಂದು ಹೇಳುತ್ತಾರೆ. ಅದನ್ನು

ಮಿಲಿಟರಿ ಸರಕು ಎಂದು ಹೇಳುತ್ತಾರಂತೆ. ಅದು ಸಾರ್ವಜನಿಕ ಸ್ಥಳದಲ್ಲಿ ಎಲ್ಲಿಯೂ ಸಿಗುವುದಿಲ್ಲ. ಅದು ಮಿಲಿಟರಿಯಲ್ಲಿ ಸಿಗುತ್ತದೆ. ಅದು ಈಗ ಕಿರಾಣಿ ಅಂಗಡಿಗಳಲ್ಲಿ ಹೇಗೆ ಸಿಗುತ್ತದೆ? ಅಂದರೆ, ಸರ್ಕಾರವೇ ಇವತ್ತು thirds sale ಮಾಡಲಿಕ್ಕೆ ಈ ರೀತಿಯ ಅವಕಾಶಗಳನ್ನು ಮುದ್ರಿಸಿ ಮಾಡುತ್ತಿದೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ.

(ಮುಂದು.)

**(035) 27.01.2025 02.40 ಎಸ್‌ವಿ-ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಹೀಗೆ ಅಬಕಾರಿ ಡಿ.ಸಿ.ಯೊಬ್ಬರು ರೂ.25 ಲಕ್ಷ ತೆಗೆದುಕೊಳ್ಳುವಾಗ ಸಿಕ್ಕಿಹಾಕಿಕೊಂಡಿದ್ದಾರೆ. ಇದಕ್ಕಿಂತ ಸಾಕ್ಷಿ ಬೇಕೆ ಎಂದು ಗುರುಸ್ವಾಮಿಯವರು ಕೇಳಿದ್ದಾರೆ. ವಿಶೇಷವೇನೆಂದು ಹೇಳುತ್ತೇನೆ. ಮೊನ್ನೆ ಪತ್ರಿಕೆಯವರು ಮಂತ್ರಿಗಳನ್ನು ಕೇಳಿದರು. ಅದಕ್ಕೆ ಮಂತ್ರಿಗಳು "ರೀ ನನ್ನದೊಂದೇ ಇಲಾಖೆಯಲ್ಲ. ಎಲ್ಲಾ ಇಲಾಖೆಗಳಲ್ಲಿಯೂ ಹೀಗೆಯೇ ಭ್ರಷ್ಟಾಚಾರ ನಡೆಯುತ್ತಿದೆ. ನನ್ನನ್ನು ಮಾತ್ರ ಏಕೆ ಹಿಡಿದುಕೊಂಡಿದ್ದೀರಿ" ಎಂದು ಕೇಳಿದರು. ಪದ್ಮಭೂಷಣ ಕೊಡಬೇಕು ಅವರಿಗೆ. ಎಲ್ಲಾ ಇಲಾಖೆಗಳಲ್ಲಿ ನಡೆಯುವುದೇ, ಅವರು ಇಷ್ಟು ಧೈರ್ಯವಾಗಿ ಹೇಳಿದ್ದಾರೆ. ಹಾಗಾದರೆ ಅವರೊಬ್ಬರಿಗೇ ಏಕೆ ಶಿಕ್ಷೆ ಕೊಡಬೇಕು? ಸರ್ಕಾರಕ್ಕೆ ಶಿಕ್ಷೆ ಕೊಡಬೇಕಲ್ಲವೆ? ಅವರು ಕೇಳುವುದು ಸರಿಯಾಗಿದೆ. ಇದು ಅಂಗೈ ಹುಣ್ಣು, ಇದಕ್ಕೆ ಕನ್ನಡಿ ಹುಡುಕಬೇಡಿ. ಅಂಗೈ ನೋಡಿದರೆ ತಿಳಿಯುತ್ತದೆ. ಹೀಗೆ ಅನೇಕ ರೀತಿಯಲ್ಲಿ ಭ್ರಷ್ಟಾಚಾರಗಳು ನಡೆಯುತ್ತಿವೆ.

ಮಾನ್ಯ ಸಭಾಪತಿಯವರೆ, ಭ್ರಷ್ಟಾಚಾರ ಮಾಡಲಿಕ್ಕಾಗಿಯೇ ಮಂತ್ರಿಮಂಡಲವಿದ್ದರೆ ಇದನ್ನು ನೋಡಿಕೊಂಡು ವಿರೋಧ ಪಕ್ಷಗಳು ಸುಮ್ಮನೆ ಕುಳಿತುಕೊಳ್ಳಬೇಕೆ? ಭ್ರಷ್ಟಾಚಾರವನ್ನು ನಾವು ಮೊದಲು ತಡೆಯಬೇಕಾಗಿದೆ. ಆ ಕಾರಣದಿಂದ ಭ್ರಷ್ಟಾಚಾರ ಮಾಡುವವರಿಗೆ ಶಿಕ್ಷೆಯೂ ಆಗಬೇಕಾಗಿದೆ. ಎಷ್ಟು ಇಲಾಖೆಗಳಲ್ಲಿ ಭ್ರಷ್ಟಾಚಾರವಾಗುತ್ತಿದೆ ಎನ್ನುವುದು ಎಲ್ಲಾ ಗೊತ್ತಿದೆ. ಹೇಳಬಹುದು. ಈಗ ನನಗೆ ಅದರ ಅವಶ್ಯಕತೆಯಿಲ್ಲ. ಈಗ ನಮಗೆ ರೆಡ್ ಹ್ಯಾಂಡೆಡ್ ಆಗಿ ಮಾನ್ಯ ಸಚಿವರಾದ ಆರ್.ಬಿ. ತಿಮ್ಮಾಪುರ ಅವರು ಸಿಕ್ಕಿಬಿದ್ದಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಸಿಕ್ಕಿಬಿದ್ದಿದ್ದಾರೆ ಅಂದರೆ ಏನರ್ಥ? ಅವರ ಮೇಲೆ ಎಫ್ಐಆರ್ ಫೈಲ್ ಆಗಿದೆಯೇ? ಯಾರೋ ದೂರವಾಣಿಯಲ್ಲಿ ಮಾತನಾಡಿಕೊಂಡಿರುವುದಕ್ಕೆ ಸಿಕ್ಕಿಬಿದ್ದಿದ್ದಾರೆ ಎಂದರೆ ಅದರ ಅರ್ಥ ಏನು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಎಲ್ಲದಕ್ಕೂ ದಾಖಲೆಯಿದೆ. ಎಲ್ಲಾ ಹೇಳಿದ ಮೇಲೆ ಸಿಕ್ಕಿಬಿದ್ದ ಹಾಗೆಯೇ.

**ಸಭಾಪತಿಯವರು:–** ಅದು ಅಸಂಸದೀಯ ಪದವಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಪುರಾವೆಗಳು ಎಲ್ಲವನ್ನೂ ಹೇಳುತ್ತಿವೆ. ನಾವು ಲೆಕ್ಕಾಚಾರ ಮಾಡಿ ಎಷ್ಟು ಅಂಗಡಿ ಎಂದೆಲ್ಲಾ ವಿವರಗಳನ್ನು ತಿಳಿದುಕೊಂಡಾಗ ನಾಲ್ಕು ಸಾವಿರ ಕೋಟಿ ಎಂದು ತಿಳಿಯಿತು. ಗುರುಸ್ವಾಮಿಯವರು ಹೇಳಿದ್ದಾರೆ. ನಾನೇ ಆರು ಸಾವಿರ ಕೋಟಿಗಳನ್ನು ಸಂಗ್ರಹ ಮಾಡಿ ಸರ್ಕಾರಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹೋಯಿತು? ಮುಖ್ಯಮಂತ್ರಿಗಳ ಪಾಲೆಷ್ಟು? ಇದರ ಬಗ್ಗೆ ಮುಖ್ಯಮಂತ್ರಿಗಳು ತಲೆಯನ್ನೇ ಕೆಡಿಸಿಕೊಳ್ಳಲಿಲ್ಲ ಎಂದರೆ ಅದರಲ್ಲಿ ಅವರ ಪಾತ್ರವಿದೆ ಎಂದು ನಾವು ಹೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಸಂಬಂಧವಿರುವ ವಿಷಯವನ್ನಷ್ಟೇ ಮಾತನಾಡಿ.

**(ಗೊಂದಲ)**

**ಶ್ರೀ ಸಂತೋಷ್ ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಲಿ. ಅವರು ಮಾನ್ಯ ಮುಖ್ಯಮಂತ್ರಿಯವರ ಹೆಸರು ತೆಗೆದಿರುವುದರಿಂದ ನಾನು ಮಾತನಾಡುತ್ತಿದ್ದೇನೆ. ಅವರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕ್ಯಾಷ್ ಎಲ್ಲಿಂದ ಬಂದಿತು? ನಾವು ಕೂಡ ವ್ಯವಹಾರ ಮಾಡುತ್ತೇವೆ. ರೂ.6,000 ಕೋಟಿ ಕ್ಯಾಷ್ ಬ್ಯಾಂಕ್‌ನಿಂದ ಹೇಗೆ ಡ್ರಾ ಮಾಡಲಾಯಿತು?

**(ಗೊಂದಲ)**

**ಶ್ರೀ ಕೇಶವ್ ಪ್ರಸಾದ್:–** ಇದೇನು black and white? ವ್ಯವಹಾರವೇ ಇದು, ಲಂಚಕ್ಕೆ black and white ಎನ್ನುತ್ತಾರೆಯೇ?

**ಸಭಾಪತಿಯವರು:–** ಮಾನ್ಯ ಕೇಶವ ಪ್ರಸಾದ್ ಅವರೇ, ನೀವು ಏಕೆ ಪದೇ ಪದೇ ಎದ್ದು ನಿಂತು ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಇದಕ್ಕೆ ನಾವಲ್ಲ ಕೊಡಬೇಕಾಗಿರುವುದು ಉತ್ತರ. ಸರ್ಕಾರ ಉತ್ತರ ಕೊಡಬೇಕು.

**ಶ್ರೀ ಸಂತೋಷ್ ಲಾಡ್:–** ಸರ್ಕಾರ ಉತ್ತರವನ್ನು ಕೊಡುತ್ತದೆ. Demonitization ಆದ ನಂತರ cash ಎಲ್ಲಿಂದ ಬರುತ್ತದೆ.

**ಶ್ರೀ ಎನ್.ರವಿಕುಮಾರ್:–** ಎಲ್ಲಿಂದ ಬಂತು ಎಂದು ಇದಕ್ಕೆ ನೀವು ಉತ್ತರವನ್ನು ಕೊಡಬೇಕು, ಪತ್ರಿಕೆಯವರಲ್ಲ.

**ಶ್ರೀ ಸಂತೋಷ್ ಲಾಡ್:–** ಮಾರ್ಕೆಟ್‌ನಲ್ಲಿ 2,000 ರೂ. ನೋಟು ಎಲ್ಲಿದೆ?

**(ಗೊಂದಲ)**

**ಸಭಾಪತಿಯವರು:–** ಅವರು ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗಬಾರದು. ನನ್ನ ಅನುಮತಿಯಿಲ್ಲದೆ ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ ಸಂತೋಷ್ ಲಾಡ್:–** ಮಾನ್ಯ ಸಭಾಪತಿಯವರೆ, ಅವರು ಮುಖ್ಯಮಂತ್ರಿಯವರ ಹೆಸರನ್ನು ತೆಗೆದುಕೊಂಡರು. ಅದಕ್ಕೆ.... ಮುಖ್ಯಮಂತ್ರಿಗಳ ಹೆಸರನ್ನು ತೆಗೆಯಿರಿ ಅಷ್ಟೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಿದ್ದಾರೆಂದು ನಾನು ಹೇಳಿರುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮುಖ್ಯಮಂತ್ರಿಯವರಿಗೆ ಪಾಲು ಹೋಗಿದೆ ಎಂದು ನೀವು ಹೇಳಿದಿರಿ. ಮಾನ್ಯ ಸಭಾಪತಿಯವರೆ, ಆ ಪದವನ್ನು ತೆಗೆಸಬೇಕು.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಮುಖ್ಯಮಂತ್ರಿಯವರಿಗೆ ಪಾಲು ಹೋಗಿದೆ ಎಂದು ಹೇಳಿದ್ದಾರೆ. ಅದನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಕುಂಬಳಕಾಯಿ ಕಳ್ಳ ಎಂದರೆ ನೀವು ಏಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ? ಈಗ ನೀವು ಪಾಲು ಹೋಗಿದೆ ಎಂದು ಒಪ್ಪಿಕೊಂಡ ಹಾಗಾಯಿತು. ಮುಖ್ಯಮಂತ್ರಿಗಳ ಪಾಲೆಷ್ಟು ಎಂದು ಕೇಳಿದ್ದಾರೆ. ಅದನ್ನು ನೀವು ಒಪ್ಪಿಕೊಳ್ಳುತ್ತಿದ್ದೀರಿ.

**ಸಭಾಪತಿಯವರು:–** ಎಲ್ಲರೂ ನಡುವೆ ಎದ್ದು ಮಾತನಾಡುವ ಪದ್ಧತಿಯನ್ನು ಮೊದಲು ನಿಲ್ಲಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಆರು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಗುರುಸ್ವಾಮಿಯವರು ಹೇಳಿದ್ದಾರೆ. ಇದರಲ್ಲಿ ಯಾರ ಪಾತ್ರ ಎಷ್ಟು? ಮುಖ್ಯಮಂತ್ರಿಗಳ ಪಾತ್ರವೆಷ್ಟು? ಎಂದು ನಾನು ಪ್ರಶ್ನೆ ಮಾಡಿದ್ದೇನೆ.

**(ಗೊಂದಲ)**

**ಶ್ರೀ ಸಂತೋಷ್ ಲಾಡ್:–** ಇ.ಡಿ.ಯವರನ್ನು ಕರೆಸಿ. ಯಾರ ಮನೆಗೋ ಇ.ಡಿ.ಯವರನ್ನು ಕರೆಸುತ್ತೀರಿ. ರೈತರ ಮನೆಗೆ ಇ.ಡಿ.ಯವರನ್ನು ಕರೆಸುತ್ತೀರಿ. ಈಗ ಕರೆಸಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಸಂತೋಷ್ ಲಾಡ್ ಅವರಿಗೆ ಏನಾದರೂ ಅಬಕಾರಿ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆಯೇ? ಮಾನ್ಯ ಕಾರ್ಮಿಕ ಸಚಿವರೆ, ನಿಮಗೆ ಅಬಕಾರಿ ಖಾತೆಯ ಹೆಚ್ಚುವರಿ ಹೊಣೆಯನ್ನು ವಹಿಸಿರುವಂತೆ ಮಾತನಾಡುತ್ತಿದ್ದಾರೆ. ಕಿಕ್ ಏರಬೇಕಾಗಿರುವುದು ಮಾನ್ಯ ತಿಮ್ಮಾಪುರ ಅವರಿಗೆ, ನಿಮಗೆ ಏಕೆ ಕಿಕ್ ಏರುತ್ತಿದೆ?

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ಮಾನ್ಯ ಸಚಿವರಾದ ಸಂತೋಷ್ ಲಾಡ್ ಅವರಿಗೆ ಮಾತನಾಡುವುದಕ್ಕೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ನನ್ನ ಅನುಮತಿಯನ್ನು ಪಡೆದು ಮಾತನಾಡಿದ್ದಾರೆ. ನಾನು ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಮುಗಿಸುತ್ತೇನೆ. ನೆನಪಿಟ್ಟುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಆಗಲಿ. ನಾವು ನಿಮಗೆ ವಿರೋಧ ಮಾಡುವುದಿಲ್ಲ. ನೀವೆಷ್ಟು ಕೊಟ್ಟರೆ ಅಷ್ಟೇ ಸಾಕು. ಈಗ ಯಾರೇ ಅಧಿಕಾರದಲ್ಲಿದ್ದರೂ ಲಂಚ ಕೇಳುವುದು ಅಧಿಕಾರಿಗಳ ಮೂಲಕವೇ. ಕೆಲವು ಸಾರಿ ಆ ಅಧಿಕಾರಿಗಳು ಲಂಚ ತೆಗೆದುಕೊಳ್ಳುವವರಾಗಿರುತ್ತಾರೆಯೋ ಇಲ್ಲವೋ ಎಂಬುದು ನಮಗೆ ಗೊತ್ತಿರುವುದಿಲ್ಲ. ಲಂಚ ತೆಗೆದುಕೊಳ್ಳುವುದನ್ನು ಅವರ ಮೂಲಕ ಮಾಡಿಸಿ ಅವರನ್ನು ಲಂಚಕೋರರನ್ನಾಗಿ ಮಾಡುತ್ತಾರೆ. ಸಿಕ್ಕಿಬಿದ್ದರೆ ಅಧಿಕಾರಿಗಳು ಸಿಕ್ಕಿಬೀಳುತ್ತಾರೆ. ಸಿಗಲಿಲ್ಲ ಎಂದರೆ ಇಬ್ಬರೂ escape. ಇದು ತಂತ್ರಗಾರಿಕೆ. ಇಲ್ಲಿ ಆಗಿದ್ದೇನು? ರೂ.25 ಲಕ್ಷ ಕೊಟ್ಟಿದ್ದಾಯ್ತು. ಅದನ್ನು ತೆಗೆದುಕೊಂಡ ಮೇಲೆ ಲೋಕಾಯುಕ್ತ ಟ್ರ್ಯಾಪ್ ಆಯಿತು. ಟ್ರ್ಯಾಪ್ ಮಾಡಿದ ಮೇಲೆ ಅವರನ್ನು ಜೈಲಿಗೆ ಕಳುಹಿಸಿದ್ದಾಯ್ತು. ಇಷ್ಟೆಲ್ಲಾ ಆದ ಮೇಲೆ ಇನ್ನೇನು ಪುರಾವೆ ಬೇಕು? ಆದ್ದರಿಂದ ಯಾರು ಏನು ಹೇಳುತ್ತಾರೆಯೋ ಅದನ್ನು ನಂಬಬೇಕಾಗುತ್ತದೆ. ಇದಕ್ಕೆ ಉತ್ತರ ಯಾರು ಕೊಡಬೇಕು? ಸರ್ಕಾರ ಕೊಡಬೇಕು. ಹೌದು, ನಾವು ಪ್ರಶ್ನೆ ಮಾಡುತ್ತೇವೆ. ರೂ.6,000 ಕೋಟಿಗಳಲ್ಲಿ ಯಾರ್ಯಾರ ಪಾಲು ಎಷ್ಟು ಎಂದು ಕೇಳುತ್ತೇವೆ. ನೀವು ಹೇಳಿ. ಅವರು ಯಾರೋ ಸುಳ್ಳು ಹೇಳಿದ್ದಾರೆ. ನನಗೆ ಲಂಚ ಕಡಿಮೆ ಕೊಟ್ಟಿದ್ದಾರೆ. ಅವರು ಜಾಸ್ತಿ ತೆಗೆದುಕೊಂಡಿದ್ದಾರೆ ಎಂದು ಕೋರ್ಟ್ ಮೊರೆ ಹೋಗಿ. ನಾವು ಯಾರಾದರೂ ಬೇಡ ಎಂದಿದ್ದೇವೆಯೇ?

**ಶ್ರೀ ಎನ್. ಎಸ್. ಬೋಸ್‌ರಾಜು:–** ನೀವು ಇ.ಡಿ.ಯವರಿಗೆ ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇ.ಡಿ.ಗೆ ಕೊಟ್ಟರೆ ಕೆಳಗೆ ಬೆಂಕಿ ಬಿದ್ದವರ ಹಾಗೆ ಆಡುತ್ತೀರಿ.

**ಸಭಾಪತಿಯವರು:–** ನೀವು ಇದರ ಬಗ್ಗೆಯಷ್ಟೇ ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇವತ್ತು ಭ್ರಷ್ಟಾಚಾರದಲ್ಲಿ ಮಂತ್ರಿಗಳು ಸಿಕ್ಕಿದ್ದಾರೆ. ಯಾವುದೇ ಸಂಶಯವಿಲ್ಲ. ಅನೇಕ ನಿದರ್ಶನಗಳಿವೆ. ಇವತ್ತು ಮಾತ್ರವಲ್ಲ, ಸುಮಾರು ಎರಡು

ವರ್ಷದಿಂದಲೂ ಐದಾರು ಬಾರಿ ಸದ್ದು ಮಾಡಿದೆ. ಬೆಂಕಿಯಿಲ್ಲದೆ ಹೊಗೆ ಆಡುವುದಿಲ್ಲ ಎನ್ನುವ ಗಾದೆ ಮಾತು ಇತ್ತು. ಆದರೆ ಈಗ ತೊಂದರೆಗೀಡಾದವರೆಲ್ಲ ನೇರವಾಗಿ ಹೊರಗೆ ಬಂದಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ನಿಮ್ಮ ಪಕ್ಷದವರೆಲ್ಲರ ಪರವಾಗಿ ನೀವೇ ಮಾತನಾಡುತ್ತೀರಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇನ್ನೂ ಕೆಲವರು ಮಾತನಾಡುವವರಿದ್ದಾರೆ. ಎಲ್ಲರೂ ಎರಡೆರಡು ನಿಮಿಷ ಮಾತನಾಡಲಿ.

**ಸಭಾಪತಿಯವರು:–** ಹಾಗಾದರೆ ನೀವು ಮುಗಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಈ ಸಚಿವರನ್ನು ಸಂಪುಟದಿಂದ ವಜಾ ಮಾಡಬೇಕು.

**(ಮುಂದು)**

**(36)27-01-2026,2.50,ಕೆಜಿ:ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):–**

ಒಂದು ವೇಳೆ ವಜಾ ಮಾಡಲಿಲ್ಲವೆಂದರೆ, ನಮಗೂ ಅನುಮಾನ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಪಾತ್ರ ಅಥವಾ ಪಾಲು ಅವರದ್ದು ಇದೆ ಎನ್ನುವಂತಹ ಮಾತು ಬರುತ್ತದೆ. (ಗೊಂದಲ) ಅವರು ನಾನು ಏನೇನು ಮಾತನಾಡಬೇಕೆಂದು ಬರೆದುಕೊಡಲಿ.

**(ಗೊಂದಲ)**

**ಶ್ರೀ ಎನ್.ಚಲುವರಾಯಸ್ವಾಮಿ (ಕೃಷಿ ಸಚಿವರು)** ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಮಾನ್ಯ ಮುಖ್ಯಮಂತ್ರಿಯವರ ಹೆಸರನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡಬೇಕೆಂದು ಅವರು ಹೇಳಬೇಕಾಗಿಲ್ಲ.

**(ಗೊಂದಲ)**

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಏನು ಬೇಕಾದರೂ ಮಾತನಾಡಬಹುದೇ? ನಾವು ಅವರು ಮಾತನಾಡಿದ್ದನ್ನು ಕೇಳಿಸಿಕೊಂಡು ಕುಳಿತುಕೊಳ್ಳಬೇಕೇ?

(ಈ ಹಂತದಲ್ಲಿ ಮಾನ್ಯ ಸಭಾನಾಯಕರು, ಮಾನ್ಯ ಸಚಿವರಾದ ಎನ್.ಚಲುವರಾಯಸ್ವಾಮಿಯವರು ಹಾಗೂ ಶ್ರೀ ತಂಗಡಗಿ ಶಿವರಾಜ್ ಸಂಗಪ್ಪನವರು ಒಟ್ಟಿಗೆ ಎದ್ದು ನಿಂತು ಮಾನ್ಯ ವಿರೋಧ ಪಕ್ಷದ ನಾಯಕರೊಂದಿಗೆ ಮಾತನಾಡತೊಡಗಿದರು)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಪದೇ ಪದೇ ಮಾನ್ಯ ಮುಖ್ಯಮಂತ್ರಿಯವರ ಹೆಸರನ್ನು ಹೇಳಬೇಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ತಕ್ಷಣ ಮಾನ್ಯ ಸಚಿವರಾದ ಶ್ರೀ ಆರ್.ಬಿ.ತಿಮ್ಮಾಪುರ ರವರನ್ನು ವಜಾಗೊಳಸಬೇಕು.

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರನ್ನು ವಜಾಗೊಳಸದಿದ್ದರೆ, ನಾವು ಒಪ್ಪಲಿಕ್ಕೆ ಸಾಧ್ಯವೇ ಇಲ್ಲ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾನು ನೇರವಾಗಿ ವಿಷಯಕ್ಕೆ ಬರುವುದಾದರೆ,.

**ಸಭಾಪತಿಯವರು:–** ಆಡಳಿತ ಪಕ್ಷದವರು ಉತ್ತರ ಹೇಳುವಾಗ ತಾವು ಹೇಳಿ. ಆದರೆ, ತಾವುಗಳು ಮಾತನಾಡುವಾಗ ಪದೇ ಪದೇ ಮಾನ್ಯ ಮುಖ್ಯಮಂತ್ರಿಯವರ ಹೆಸರನ್ನು ತೆಗೆದುಕೊಳ್ಳಬೇಡಿ. ತಾವುಗಳು ಏಕೆ ಅವರ ಹೆಸರನ್ನು ತೆಗೆದುಕೊಳ್ಳುತ್ತೀರಿ?

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯ ನಮ್ಮ ರಾಜ್ಯಾದ್ಯಂತ ಎಲ್ಲಾ ಮಾಧ್ಯಮಗಳಲ್ಲಿ ಬಹಳ ದೊಡ್ಡ ಚರ್ಚೆಯಾಗುತ್ತಿದೆ. 'ಶ್ರೀ ಲಕ್ಷ್ಮೀ ನಾರಾಯಣ' ಎಂಬುವವರು ಏನು ಹೇಳಿದ್ದಾರೆ ಎಂಬುದನ್ನು ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. "ನಮ್ಮ ಬೆಂಗಳೂರಿನ ಹುಳಿಮಾವು ಪ್ರದೇಶದಲ್ಲಿ ದೊಡ್ಡ ಪ್ರಮಾಣದ property ಇದೆ. Unalii Brew Park ಎನ್ನುವ ಒಂದು ಹೆಸರಿನ ಯೋಜನೆ ಬಹುತೇಕ ಅಂತಿಮ ಹಂತ ತಲುಪಿತ್ತು. ಅದರ ಭಾಗವಾಗಿ ಆ property ಯಲ್ಲಿ ಆ ಕಟ್ಟಡದಲ್ಲಿ CL–7 ಮತ್ತು Microbrewery license ಪಡೆಯಲು ನಾವು online ಮೂಲಕ ಅರ್ಜಿ ಸಲ್ಲಿಸಿದ್ದೇವೆ". ಅವರು ಮುಂದುವರೆದು ಅರ್ಜಿ ಸಲ್ಲಿಸಿದ ಮೇಲೆ ಏನಾಯಿತು ಎಂದು ಹೇಳಿದ್ದಾರೆ. ಆದರೆ, ಬಹಳ ದಿವಸಗಳು ಕಳೆದರೂ ಸಹ ಅರ್ಜಿ ಯಾವುದೇ ಹಂತಕ್ಕೂ ಸಾಗುತ್ತಿರಲಿಲ್ಲ. ಅರ್ಜಿ ಅಲ್ಲಿಯೇ ಇತ್ತು. ಅವರು ಅರ್ಜಿ ಎಲ್ಲಿ ಕೊಟ್ಟಿದ್ದರೋ ಅಲ್ಲಿಯೇ ಇತ್ತು. ಶ್ರೀ ಲಕ್ಷ್ಮೀ ನಾರಾಯಣ ಮುಂದುವರೆದು, "ಈ ಹಿನ್ನೆಲೆಯಲ್ಲಿ ನಾವು ಅಬಕಾರಿ ಇಲಾಖೆಯ ಕಛೇರಿಗೆ ತೆರಳಿದಾಗ", ಶ್ರೀ ಲಕ್ಷ್ಮೀ ನಾರಾಯಣರವರು ಅಬಕಾರಿ ಇಲಾಖೆಯ ಕಛೇರಿಗೆ ಹೋಗುತ್ತಾರೆ, ಅಲ್ಲಿ ನಡೆಯುತ್ತದೆ. "ಅಲ್ಲಿ ಅಧಿಕಾರಿಗಳು ಲಂಚದ deal ಅನ್ನು ಮುಂದೆ ಇಟ್ಟರು" ಎಂದು ಆರೋಪಿಸಿದ್ದಾರೆ. ಈ ಲಂಚದ deal ಏನು? ಅದು ಎಷ್ಟು ಪ್ರಮಾಣದ್ದು ಎನ್ನುವುದನ್ನು ಶ್ರೀ ಲಕ್ಷ್ಮೀ ನಾರಾಯಣರವರೇ ಹೇಳಿದ್ದಾರೆ. "CL–

7 ಗೆ 80 ಲಕ್ಷ ರೂಪಾಯಿಗಳು, Microbrewery ಗೆ 1.50 ಕೋಟಿ ರೂಪಾಯಿಗಳ ಲಂಚದ ಬೇಡಿಕೆಯನ್ನು ಅಧಿಕಾರಿಗಳು ಮುಂದೆ ಇಟ್ಟರು" ಎಂದು ಹೇಳಿದ್ದಾರೆ. ಇದು ಹುಳಿಮಾವು ಪ್ರದೇಶದಲ್ಲಿ. ಅಧಿಕಾರಿಗಳು ಸ್ಪಷ್ಟವಾಗಿ ಇದೊಂದು package deal ಎಂದು ಹೇಳಿದರು. ನಾವು ಪ್ರತಿ license ಗೆ ಇಷ್ಟು ತೆಗೆದುಕೊಳ್ಳುತ್ತೇವೆ.

ಮಾನ್ಯ ಸಭಾಪತಿಯವರೇ, ಅದು ಎಲ್ಲವೂ record ನಲ್ಲಿದೆ. ಇವರಿಗೆ ಇಷ್ಟು. ನಮಗೆ ಇಷ್ಟು ಎಂದು ಪಾಲು ಹಂಚಿಕೆಯ ಬಗ್ಗೆ ಅಧಿಕಾರಿಗಳು ಮಾತನಾಡಿದ್ದಾರೆ. ನಮಗೆ ಇಷ್ಟು ಕೊಡಬೇಕು, ಅವರಿಗೆ ಇಷ್ಟು ಕೊಡಬೇಕು, ಇಷ್ಟಿಷ್ಟು ಪಾಲು ಎಂದು ಅಧಿಕಾರಿಗಳು ಮಾತನಾಡಿದ್ದಾರೆ. ಈ ಲಂಚದ ಮೊತ್ತದಲ್ಲಿ ಶ್ರೀ ಲಕ್ಷ್ಮೀ ನಾರಾಯಣರವರು ಅಲ್ಲಿಗೆ ಹೋಗಿ deal ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಈ ಲಂಚದ ಮೊತ್ತದಲ್ಲಿ ಅಬಕಾರಿ ಸಚಿವರಿಗೂ ಪಾಲು ಇದೆ ಎಂಬುದನ್ನು ಅಧಿಕಾರಿಗಳು ಹೇಳಿದ್ದಾರೆಂದು ಅವರು ಆರೋಪಿಸಿದ್ದಾರೆ. ಅವರು ಅಲ್ಲಿಗೆ ಸುಮ್ಮನೆ ಇರುವುದಿಲ್ಲ. ನಂತರ ಶ್ರೀ ಲಕ್ಷ್ಮೀ ನಾರಾಯಣರವರು ಲೋಕಯುಕ್ತಕ್ಕೆ ಹೋಗಿ ದೂರನ್ನು ಸಲ್ಲಿಸಿದ್ದಾರೆ. 'ಲೋಕಾಯುಕ್ತಕ್ಕೆ ದೂರು'. 25 ಲಕ್ಷ ರೂಪಾಯಿಗಳ trap ಹಣ. ದೂರನ್ನು ಸಲ್ಲಿಸಿ ವಾಪಸ್ ಬಂದ ಮೇಲೆ ಶ್ರೀ ಲಕ್ಷ್ಮೀ ನಾರಾಯಣರವರು ಇದನ್ನು ಇಲ್ಲಿಗೆ ಬಿಡುವುದು ಬೇಡವೆಂದು ಮುಂದುವರೆಯುತ್ತಾರೆ. ಲಂಚದ ಬೇಡಿಕೆಯಿಂದ ಬೇಸತ್ತ ಶ್ರೀ ಲಕ್ಷ್ಮೀ ನಾರಾಯಣರವರು ನಿನ್ನೆ ದಿವಸ ಲೋಕಾಯುಕ್ತರವರಿಗೆ ಅಧಿಕೃತ ದೂರನ್ನು ಸಲ್ಲಿಸಿದ್ದಾರೆ. ಲೋಕಾಯುಕ್ತರವರ ಸೂಚನೆಯಂತೆ 25 ಲಕ್ಷ ರೂಪಾಯಿಗಳ ಹಣವನ್ನು ಸಿದ್ದಪಡಿಸಿ ಅದನ್ನು ಲಂಚವಾಗಿ ನೀಡುವ ವೇಳೆ trap ಮಾಡಲು ಸಹಕರಿಸಿದ್ದೇನೆಂದು ಅವರು ತಿಳಿಸಿದ್ದಾರೆ. ಅವರು 25 ಲಕ್ಷ ರೂಪಾಯಿಗಳನ್ನು ಕೊಡುವ ಸಂದರ್ಭದಲ್ಲಿ when he was giving, at that time; ಲೋಕಾಯುಕ್ತ ಎಸ್.ಪಿ. ಶ್ರೀ ಶಿವಪ್ರಕಾಶ್ ದೇವರಾಜ್‌ರವರು ಸ್ಪಷ್ಟನೆ ನೀಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಎಸ್.ಪಿ. ಶ್ರೀ ಶಿವಪ್ರಕಾಶ್ ದೇವರಾಜ್‌ರವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಇಂದು ಮಧ್ಯಾಹ್ನ ಸುಮಾರು 12.30ರ ಸುಮಾರಿಗೆ trap case ನಡೆಸಲಾಗಿದೆ ಎಂದು ಹೇಳಿದ್ದಾರೆ. ಭ್ರಷ್ಟಾಚಾರ ಕಾಯಿದೆ ತಡೆ P.C. Act, Section 7 ಅಡಿಯಲ್ಲಿ ಪ್ರಕರಣ ದಾಖಲಾಗಿದೆ. 'ಇದು 25 ಲಕ್ಷ ರೂಪಾಯಿಗಳ ಕೇಸ್'. 'ಮೂವರ ವಿರುದ್ಧ ದೂರು'. 'ಲಂಚ ಸ್ವೀಕರಿಸುವ ವೇಳೆ trap'. ಶ್ರೀ ಲಕ್ಷ್ಮೀ ನಾರಾಯಣ ಎಂಬುವವರು ನೀಡಿದ ದೂರಿನ ಆಧಾರದ ಮೇಲೆ ಮೂರು ಜನ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗಿದೆ. CL-7 license ಗೆ 80 ಲಕ್ಷ ರೂಪಾಯಿಗಳ ಬೇಡಿಕೆ. ಇದರ ಭಾಗವಾಗಿ 25 ಲಕ್ಷ ರೂಪಾಯಿಗಳನ್ನು ಸ್ವೀಕರಿಸುವಾಗ trap ಮಾಡಲಾಗಿದೆ. Trap ವೇಳೆ, ಅಬಕಾರಿ constable ಶ್ರೀ ಲಂಕಪ್ಪ.,

**ಸಭಾಪತಿಯವರು:-** ಶ್ರೀ ಎನ್.ರವಿಕುಮಾರ್‌ರವರೇ, ಆಯಿತು. ಮುಗಿಯಿತು, next.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮುಗಿಸುತ್ತೇನೆ. ಅಬಕಾರಿ constable ಶ್ರೀ ಲಂಕಪ್ಪ ಮತ್ತು Superintendent ಶ್ರೀ ತಮ್ಮಣ್ಣ ಇವರಿಬ್ಬರು ತಪ್ಪಿಸಿಕೊಳ್ಳಲು ಯತ್ನಿಸಿದ್ದರೂ ಸಹ ನಂತರ

ಅವರನ್ನು ಬಂಧಿಸಲಾಗಿದೆ ಎಂದು ಲೋಕಾಯುಕ್ತ ಎಸ್.ಪಿ.ಯವರು ತಿಳಿಸಿದರು. ಸರ್ಕಾರಿ ಶುಲ್ಕ ಕಟ್ಟಿದರೂ ಸಹ ಲಂಚ. ಸಾಮಾನ್ಯವಾಗಿ ಏನು ಇರುತ್ತದೆ ಎಂದರೆ, school ಗೆ ಅಥವಾ college ಗೆ ಹೋದರೆ ಅದರ fees ಕಟ್ಟಿದರೆ ಅಲ್ಲಿಗೆ ಅದು ಮುಗಿದು ಹೋಗುತ್ತದೆ. ಆದರೆ, ಅಲ್ಲಿ donation ಕಟ್ಟುತ್ತೇವೆಯಲ್ಲವೇ ಹಾಗೆ; fees ಕಟ್ಟಿದ್ದೇವೆ, ಅದಕ್ಕೆ license ಎಷ್ಟಿದೆ ಅಷ್ಟು Fees ಕಟ್ಟಿದ್ದೇವೆ. ಅಲ್ಲಿಗೆ ಸಾಕಾಗಲಿಲ್ಲ. ಅಧಿಕಾರಿಗಳು ಲಂಚ ಕೊಡಿ ಎಂದು ಕೇಳುತ್ತಾರಂತೆ. ೮೦ ಲಕ್ಷ ರೂಪಾಯಿಗಳು CL-7 ಗೆ, Microbrewery ಗೆ 1.50 ಕೋಟಿ ರೂಪಾಯಿಗಳ ಲಂಚ ಕೊಡಬೇಕೆಂದು ಅಧಿಕಾರಿಗಳು ಹೇಳುತ್ತಾರೆ.

ಮಾನ್ಯ ಸಭಾಪತಿಯವರೇ, Microbrewery ಗೆ 1.50 ಕೋಟಿ ರೂಪಾಯಿಗಳು ಹಾಗೂ CL-7 ಗೆ ೮೦ ಲಕ್ಷ ರೂಪಾಯಿಗಳು ಎಂದು ಶ್ರೀ ಲಕ್ಷ್ಮೀ ನಾರಾಯಣರವರು ಹೇಳುತ್ತಿದ್ದಾರೆ. ಈ ೮೦ ಲಕ್ಷ ರೂಪಾಯಿಗಳಲ್ಲಿ first installment 25 ಲಕ್ಷ ರೂಪಾಯಿಗಳನ್ನು ಕೊಡುವ ಸಂದರ್ಭದಲ್ಲಿ ಹಿಡಿದುಕೊಂಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಇನ್ನು ಏಕೆ ರಾಜಿನಾಮೆ ಕೊಡುತ್ತಿಲ್ಲವೆಂದು ಕೇಳುತ್ತಿದ್ದೇನೆ. ಮಾನ್ಯ ಸಚಿವರು ರಾಜಿನಾಮೆ ಕೊಡದಂತೆ ಇವರನ್ನು ಏಕೆ ಹಿಡಿದು ಇಟ್ಟುಕೊಳ್ಳಲಾಗಿದೆ? ಅಷ್ಟೇ ಅಲ್ಲ. ಈ ಮಂತ್ರಿಯವರನ್ನು transfer ಮಾಡಿ ಎಂದು ಮದ್ಯ ಮರಾಟಗಾರರ ಸಂಘ ಹೇಳುತ್ತಿದೆ, Organization ಹೇಳುತ್ತಿದೆ. ಈ ಮಂತ್ರಿಯವರನ್ನು transfer ಮಾಡಿ ಎಂದು ಹೇಳುತ್ತಿದೆ. ಈ ಸಚಿವರು ನಮಗೆ ಬೇಡ. ಮಾನ್ಯ ಸಚಿವರ ಮಗ ಸಹ ನಮ್ಮ ಬಳಿ ಲಂಚ ಕೇಳುತ್ತಿದ್ದಾರೆ. ನಾವು ಸಚಿವರಿಗೆ ಇಷ್ಟು ಕೊಡಬೇಕು. ಅಧಿಕಾರಿಗಳಿಗೆ ಇಷ್ಟು ಕೊಡಬೇಕು. D.C. ಗಳಿಗೆ ಕೊಡಬೇಕು. Assistant Officer ರವರಿಗೆ ಕೊಡಬೇಕು. ಆಮೇಲೆ ಅಷ್ಟೇ ಅಲ್ಲ. Monthly collection...

ಮಾನ್ಯ ಸಭಾಪತಿಯವರೇ, ಬಹಳ ವಿಚಿತ್ರ ನೋಡಿ ಹೇಗಿದೆ ಎಂದರೆ, ರಾಜ್ಯದಲ್ಲಿ 3,988 wine shops, 279 clubs, 78 star hotel ಗಳು, 2,382 hotels, 68 military canteen ಮಳಿಗೆಗಳು, 3,634 bar and restaurant ಗಳು ಈ ಎಲ್ಲವುಗಳಿಗೆ ಬೆಂಗಳೂರಿನ ಭಾಗದ ಪ್ರತಿ ಮದ್ಯದ ಅಂಗಡಿಗೆ ತಿಂಗಳಿಗೆ ರೂ.18,000 ರಿಂದ ರೂ.20,000 ಗಳ ಲಂಚ. ಒಂದು ತಿಂಗಳಿಗೆ ಒಂದೊಂದು ಅಂಗಡಿಯಿಂದ ರೂ.18,000 ರಿಂದ ರೂ.20,000 ಗಳ ಲಂಚ. ಮೈಸೂರು ಮತ್ತು ಬೆಳಗಾವಿ ಈ ಭಾಗದಲ್ಲಿ ರೂ.12,000 ರಿಂದ ರೂ.15,000 ಗಳ ಲಂಚ. ಕಲಬುರಗಿ ಮತ್ತು ಹೊಸಪೇಟೆ ಈ ಭಾಗದಲ್ಲಿ ರೂ.10,000 ರಿಂದ ರೂ.12,000 ಲಂಚ. ಮಂಗಳೂರು ಈ ಭಾಗದಲ್ಲಿ ಅಂದಾಜು 10,000 ಲಂಚ. Monthly money ದಂಧೆ ನಡೆಯುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಚೆನ್ನಾಗಿ ವ್ಯಾಪಾರ ನಡೆಯುವ ಮದ್ಯದ ಅಂಗಡಿಯಿಂದ ಇನ್ನಷ್ಟು monthly money ನೀಡುವಂತೆ ಬೇಡಿಕೆ ಇಡಲಾಗುತ್ತಿದೆ.

ಮಾನ್ಯ ಸಭಾಪತಿಯವರೇ, ಇದು ಮಂತ್ರಿಯವರ ಆಶ್ರಯ ಇಲ್ಲದೇ ನಡೆಯುವುದಕ್ಕೆ ಸಾಧ್ಯ ಇದೆಯೇ? ಮಾನ್ಯ ಸಚಿವರು ಅಧಿಕಾರಿಗಳು ತೆಗೆದುಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇಲ್ಲಿ ಕೇವಲ ಅಧಿಕಾರಿಗಳು

ತೆಗೆದುಕೊಂಡಿದ್ದರೆ, ಆ ಅಧಿಕಾರಿಗಳು ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿದೆಯೇ? ಎಲ್ಲಿಯವರೆಗೆ ಸಚಿವರ ಬೆಂಬಲ ಇರುವುದಿಲ್ಲ, ಎಲ್ಲಿಯವರೆಗೆ ಸರ್ಕಾರದ ಬೆಂಬಲ ಇರುವುದಿಲ್ಲ ಅಲ್ಲಿಯವರೆಗೆ ಭ್ರಷ್ಟಾಚಾರ ನಿಲ್ಲುವುದಿಲ್ಲ. ಆ monthly money ಶುಲ್ಕ ಅಷ್ಟೇ ಅಲ್ಲದೆಯೇ, ಒಂದು CL-7 license ೮೦ ಲಕ್ಷ ರೂಪಾಯಿಗಳು, Microbrewery ಗೆ 1.50 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ?

(ಮುಂದು)

**(037) 27.01.2026/3.00/ಎಂವಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ಮುಂದು):-**

ಈಗ ಒಂದು ಲೈಸನ್ಸ್‌ಗೆ ೮೦ ಲಕ್ಷ ರೂಪಾಯಿಗಳು. ಆಮೇಲೆ microbrewery ಗೆ ಒಂದೂವರೆ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಅದು ಆಡಿಯೋ ರೆಕಾರ್ಡ್‌ನಲ್ಲಿದೆ. ನಾವು ಎಲ್ಲಾ ಟಿ.ವಿ.ಗಳಲ್ಲಿ ನೋಡಿದ್ದೇವೆ. ಅಂದರೆ, ನಾವು ಮಾನ್ಯ ಮಂತ್ರಿಗಳಿಗೆ ಕೊಡಬೇಕು. ಮತ್ತೆ ಅಧಿಕಾರಿಗಳಿಗೆ ಕೊಡಬೇಕು ಎಂದು ಹೇಳಿರುವುದು ಜಗಜ್ಜಾಹೀರಾಗಿದೆ. ಹಿಂದೆ ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪನವರು ರಾಜೀನಾಮೆ ಕೊಟ್ಟಿದ್ದರು. ಆಮೇಲೆ ಅದರ ಬಗ್ಗೆ ತನಿಖೆ ನಡೆಯಿತು. ತನಿಖೆ ನಡೆದ ಮೇಲೆ ಇದರಲ್ಲಿ ಭ್ರಷ್ಟಾಚಾರ ನಡೆದಿಲ್ಲವೆಂದು ವರದಿ ಬಂತು. ಈಗಲೂ ಸಹ ಅದೇ ರೀತಿ ಮಾಡಲಿ. ಮಾನ್ಯ ಸಚಿವರು ನೈತಿಕ ಹೊಣೆ ಹೊತ್ತು ಮೊದಲು ರಾಜೀನಾಮೆಯನ್ನು ಕೊಡಲಿ. ಮಾನ್ಯ ಮಂತ್ರಿಗಳಾದ  ಶ್ರೀ ಆರ್.ಬಿ.ತಿಮ್ಮಾಪೂರರವರ ಕಡೆಯಿಂದ ರಾಜೀನಾಮೆಯನ್ನು ಕೊಡಿಸಲಿ. ಅಂದು ಪ್ರತಿಪಕ್ಷದ ನಾಯಕರಾಗಿದ್ದಂತಹ ಶ್ರೀ ಸಿದ್ದರಾಮಯ್ಯನವರು ಮೊದಲು ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪನವರ ಕಡೆಯಿಂದ ರಾಜೀನಾಮೆಯನ್ನು ತೆಗೆದುಕೊಳ್ಳಿ ಎಂದು ಒತ್ತಾಯಿಸಿ ರಾಜೀನಾಮೆಯನ್ನು ತೆಗೆದುಕೊಳ್ಳುವಂತೆ ಮಾಡಿದ್ದರು. ಆ ರೀತಿ ರಾಜೀನಾಮೆಯನ್ನು ತೆಗೆದುಕೊಂಡಿರತಕ್ಕಂತಹ ಅವತ್ತಿನ ಪ್ರತಿಪಕ್ಷ, ಇವತ್ತಿನ ಆಡಳಿತ ಪಕ್ಷ ನೈತಿಕ ಹೊಣೆ ಹೊತ್ತು ಏಕೆ ಮಾನ್ಯ ಮಂತ್ರಿಗಳಾದ ಶ್ರೀ ಆರ್.ಬಿ.ತಿಮ್ಮಾಪೂರರವರ  ರಾಜೀನಾಮೆಯನ್ನು ತೆಗೆದುಕೊಳ್ಳುತ್ತಿಲ್ಲ? ಅವರ ಮಗನಿಗೆ ಲಂಚ ಕೊಡಬೇಕು. ಮತ್ತೆ monthly ಕೊಡಬೇಕು. ಇದು ಎಷ್ಟು deep rooted ಎಂದು ಹೇಳಿದರೆ, ಈಗ ವರ್ಗಾವಣೆ ದಂಧೆ. ಈ ವರ್ಗಾವಣೆ ಮತ್ತು ಪದೋನ್ನತಿ ಸಂಬಂಧ ಅಧಿಕಾರಿಗಳಿಂದ ಮನಬಂದಂತೆ ಲಂಚ ವಸೂಲಿಗೆ ಇಳಿದಿರುವ ಸಚಿವರು. ವರ್ಗಾವಣೆಗಾಗಿ ಸಚಿವರಿಗೆ ಲಂಚ ನೀಡಬೇಕಾದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಸನ್ನದುದಾರರಿಂದ ಪ್ರತಿ ತಿಂಗಳು monthly money ಹೆಸರಿನಲ್ಲಿ ಅಧಿಕಾರಿಗಳು ಲಂಚ ವಸೂಲಿ ಮಾಡುತ್ತಿದ್ದಾರೆ. ಈಗ ಅಧಿಕಾರಿಗಳು ತಮ್ಮ ವರ್ಗಾವಣೆ ಮಾಡಿಸಿಕೊಳ್ಳುವುದಕ್ಕೂ ಕೂಡ ಲಂಚ ಕೊಡಬೇಕಾಗಿದೆ. ಇದು ಎಲ್ಲಾ ಬಟಾಬಯಲು. ಆದುದರಿಂದ, ಏನು ಈ ಒಂದು open corruption ನಡೆಯುತ್ತಿದೆ, ಆಡಿಯೋ ರೆಕಾರ್ಡ್ ಏನಿದೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮದ್ಯ ಮಾರಾಟಗಾರರ ಸಂಘ ಮನವಿಯನ್ನು ಕೊಟ್ಟಿದೆ. ಅಂದರೆ, ಈ

ಮಂತ್ರಿಗಳು ಬೇಡ, ಅವರನ್ನು ಮೊದಲು transfer ಮಾಡಿ ಎಂದು. ಅಂದರೆ, ನಾವು ಲಂಚವನ್ನು ಕೊಟ್ಟು ಕೊಟ್ಟು ಮತ್ತು ಈಗ monthly money ಯನ್ನು ಕೊಟ್ಟು ಕೊಟ್ಟು ಸುಸ್ತಾಗಿ, ಸಾಕಾಗಿ ಹೋಗಿದ್ದೇವೆ ಎಂದು ಹೇಳಿ ದೂರನ್ನು ನೀಡಿದ್ದಾರೆ. ನಮ್ಮ ಬಳಿ ಅದರ ದೂರಿನ ಪ್ರತಿ ಸಹ ಇದೆ. ಆದುದರಿಂದ, ನಮ್ಮದು ಎರಡು ಬೇಡಿಕೆ ಇದೆ. ಒಂದನೆಯದು sitting Judge ನೇತೃತ್ವದಲ್ಲಿ ಈ ಒಂದು ದೊಡ್ಡ corruption racket ನ ತನಿಖೆಯಾಗಬೇಕು. ನಮ್ಮ ಎರಡನೆಯ ಬೇಡಿಕೆ ಏನೆಂದರೆ, ಈ ಕೂಡಲೇ ನೈತಿಕ ಹೊಣೆ ಹೊತ್ತು ಶ್ರೀ ಆರ್.ಬಿ.ತಿಮ್ಮಾಪೂರ ರವರು ರಾಜೀನಾಮೆಯನ್ನು ಕೊಡಬೇಕೆಂದು ನಾವು ಆಗ್ರಹಪಡಿಸುತ್ತೇವೆ. ಇದು ಅಷ್ಟೆ ಅಲ್ಲ. ಈ ವಿಷಯ ಕುರಿತಂತೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿಷಯಕ್ಕೆ ಸ್ವಲ್ಪ ಹೆಚ್ಚಿನ ಸಮಯವನ್ನು ಕೊಡಬೇಕು. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ಸದನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಈ ವಿಷಯ ಬಹಿರಂಗವಾಗಿದೆ. ಈ ಸದನದಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳಿಂದ ನಮಗೆ ಉತ್ತರ ಬೇಕಾಗಿದೆ. ಮಾನ್ಯ ಮಂತ್ರಿಗಳು ಆ ಸ್ಥಾನದಲ್ಲಿ ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ. ಮಾನ್ಯ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಆಗ್ರಹಪಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಇದಕ್ಕೆ ಮಧ್ಯಾಹ್ನ ಉತ್ತರ ನೀಡಿ. ಈಗ ಸದನವನ್ನು 4.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 3 ಗಂಟೆ 4 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟು, ಪುನಃ ಸಂಜೆ 4 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

(38) 27.01.2026 4.30 ಟಿಸಿಹೆಚ್–ವಿಕೆ (ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**ವಿಷಯ:– ಅಬಕಾರಿ ಇಲಾಖೆಯಲ್ಲಿ ಸಿಎಲ್–2, ಸಿಎಲ್–7 ಮತ್ತು ಸಿಎಲ್–9 ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ನಿಯಮ 330ರ ಮೇರೆಗೆ ಮುಂದುವರೆದ ಚರ್ಚೆ**

* * *

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ನಿಯಮ 330 ರಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನೊಬ್ಬ ಮತ್ತು ಶ್ರೀ ಎನ್. ರವಿಕುಮಾರ್ ರವರು ಮಾತನಾಡಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ನಾನು ಈಗಾಗಲೇ ನಿಮಗೆ ಸುಮಾರು 40 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಪುನಃ ಅದರ ಮೇಲೆ ಮಾತನಾಡಲು ಯಾರಿಗೂ ಅವಕಾಶ ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಾದ ನಂತರ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಮತ್ತು ಮಾನ್ಯ ಎಸ್.ಎಲ್.ಭೋಜೇಗೌಡ ರವರು ಮಾತನಾಡಬೇಕಿತ್ತು.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು signatory.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ನಿಯಮ 330 ರಡಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಐವನ್ ಡಿ'ಸೋಜಾರವರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಸಲ್ಲಿಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಚರ್ಚೆಯಾಗಬೇಕಾಗಿತ್ತು. ತಾವು ನಿಯಮ ೩೩೦ ಕ್ಕೆ convert ಮಾಡಿದ್ದರಿಂದ ನಾವು ಚರ್ಚೆಗೆ ಒಪ್ಪಿಗೆ ಕೊಟ್ಟಿದ್ದೆವು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅತಿ ಮಾಡಬೇಡಿ. ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ನಾನು ಅದನ್ನು ನಿಯಮ ೩೩೦ ಕ್ಕೆ convert ಮಾಡಿ ನಿಮಗೆ ಮಾತನಾಡಲು ಸುಮಾರು ೪೦ ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದೇನೆ. ನೀವು ಮಾತನಾಡಿದರು ಒಂದೇ ಎಲ್ಲರೂ ಮಾತನಾಡಿದರೂ ಒಂದೇ. ಅದಕ್ಕೆ ಸರ್ಕಾರ ಉತ್ತರ ಹೇಳುತ್ತಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾರೂ ಮಾತನಾಡುವುದು ಬೇಡ ಅವರು ರಾಜೀನಾಮೆ ಕೊಡಲಿ.

**(ಗೊಂದಲ)**

**ಸಭಾಪತಿಯವರು:–** ನಿಯಮ ೩೩೦ ರ ಅಡಿಯಲ್ಲಿ ಈಗಾಗಲೇ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲದಿದ್ದರೆ ಮಾತನಾಡುವ ಅವಶ್ಯಕತೆ ಏನು? ಭ್ರಷ್ಟಾಚಾರವನ್ನು ಸಮರ್ಥನೆ ಮಾಡುವುದಕ್ಕೇನು ಈ ಸದನ ಇರುವುದು.

**(ಗೊಂದಲ)**

**ಸಭಾಪತಿಯವರು:–** ಆಯಿತು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರವನ್ನು ಯಾರೂ ಸಮರ್ಥನೆ ಮಾಡಬಾರದು.

**(ಗೊಂದಲ)**

**ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಚರ್ಚೆ ಮುಗಿಯಲಿ. ಸರ್ಕಾರ ಆಮೇಲೆ ಉತ್ತರ ಕೊಡುತ್ತದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವುದಾದರೆ ಕೊಡಲಿ. ನಮ್ಮದು ಆಕ್ಷೇಪಣೆ ಇಲ್ಲ. **(ಗೊಂದಲ)** ಆದರೆ ಕೆಲವು ಸದಸ್ಯರು ಮಾತನಾಡತಕ್ಕಂಥವರಿಗೆ ಎರಡೆರಡು **(ಗೊಂದಲ)** ಐದೈದು ನಿಮಿಷವಾದರು ಅವರು ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ನಾನು ಅದನ್ನು ನಿಯಮ 330ಕ್ಕೆ convert ಮಾಡಿದ್ದೆನು. ಅರ್ಧ ಗಂಟೆ ಕಾಲ ಮಾತನಾಡಲು ಹೇಳಿದ್ದು, ಸುಮಾರು 40 ನಿಮಿಷಗಳ ಕಾಲ ಮಾತನಾಡವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿಬ್ಬರು ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಅದರ ಬಗ್ಗೆ ಎಲ್ಲರೂ ಮಾತನಾಡಬೇಕು ಎಂದರೆ ಹೇಗೆ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಒಬ್ಬರೇ ಮಾತನಾಡಿದ್ದು. **(ಗೊಂದಲ)** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರಿಗೆ ದಯಮಾಡಿ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ಇಲ್ಲ, ನಾನು ಮಾತನಾಡಲು ಅವಕಾಶ ಕೊಡುವುದಿಲ್ಲ.

**(ಗೊಂದಲ)**

**೯. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮಂಡನೆ**

**ಶ್ರೀ ಐವನ್ ಡಿ.ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, "೨೦೨೬ನೇ ಜನವರಿ ೨೨ ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಶಾಸಕರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಶಾಸಕರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ."

**(ಗೊಂದಲ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಪ್ರಸ್ತಾವ ಮಾಡಿರುವುದನ್ನು ನಾನು ಅನುಮೋದನೆ ಮಾಡುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ಸದಸ್ಯರಾದ ಸಿ.ಟಿ.ರವಿ ಮತ್ತು ಮಾನ್ಯ ಎಸ್.ಎಲ್.ಭೋಜೇಗೌಡ ರವರು ಮಾತನಾಡಲು ಅವಕಾಶ ಕೊಡಿ. **(ಗೊಂದಲ)** ಇಷ್ಟು ಮಾನ್ಯ ಸದಸ್ಯರುಗಳು ಸಹಿ ಮಾಡಿದ್ದಾರೆ. ನೀವು ಅವರಿಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯಮಾಡಿ ತಾವು ಅವಕಾಶ ಕೊಡಿ. . .

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ. ಮಾನ್ಯ ಎಸ್.ಎಲ್.ಭೋಜೇಗೌಡ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು ದಿನಾಂಕ 23.01.2026 ರಂದು 18 ಜನ ಮಾನ್ಯ ಸದಸ್ಯರುಗಳು ಸಹಿ ಮಾಡಿ ನಿಲುವಳಿ ಸೂಚನೆ ಮೇಲೆ ಮಾತನಾಡಲು ಲೆಟರ್ ಕೊಟ್ಟಿದ್ದೆವು.

**ಸಭಾಪತಿಯವರು:–** ಶ್ರೀ ಎಸ್.ಎಲ್.ಭೋಜೇಗೌಡರವರೇ, ಪತ್ರದಲ್ಲಿ ಸಹಿ ಮಾಡಿದವರಿಗೆಲ್ಲಾ ಮಾತನಾಡಲು ಅವಕಾಶ ಕೊಡಬೇಕೆಂದು ಕಾಯ್ದೆ ಇದೆಯೇ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಾವು ನಮ್ಮ ಮಾತನ್ನು ಸ್ವಲ್ಪ ಕೇಳಿದ ನಂತರ ತಮ್ಮ ತೀರ್ಮಾನ ಹೇಳಿ. ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಒಂದು ನಿಮಿಷ ಕೇಳಬೇಕು. ನಾವು ದಿನಾಂಕ 23.01.2026 ರಂದು ನಿಲುವಳಿ ಸೂಚನೆ ಮೇಲೆ ಮಾತನಾಡುತ್ತೇವೆಂದು 18 ಜನ ಮಾನ್ಯ ಸದಸ್ಯರುಗಳೆಲ್ಲಾ ಸಹಿ ಮಾಡಿ ಕೊಟ್ಟಿದ್ದೆವು. ತಾವು ಅದನ್ನು ನಿಯಯ 330ಕ್ಕೆ convert ಮಾಡಿಕೊಟ್ಟಿದ್ದೀರಿ. ಅವಕಾಶ ಕೊಟ್ಟಿದ್ದೀರಿ ಸಂತೋಷ ಬಹಳ ಒಳ್ಳೆಯದು. ಅವಕಾಶ ಕೊಟ್ಟಿರುವುದಕ್ಕೆ ಮತ್ತೊಮ್ಮೆ ಅವರ ಪರವಾಗಿ ಎಲ್ಲರ ಪರವಾಗಿ ಧನ್ಯವಾದಗಳು. ಈ ವಿಚಾರದಲ್ಲಿ ಅವರ ಮಾತು ನನಗೆ ಗೊತ್ತಿಲ್ಲ. ನಾನು ಇರಲಿಲ್ಲ. ನೀವು18 ಜನ ಮಾನ್ಯ ಸದಸ್ಯರುಗಳು ಸಹಿ ಮಾಡಿಕೊಟ್ಟಿದ್ದೀರಿ, ಒಟ್ಟು 18 ಜನ ಸದಸ್ಯರಿಗೆ ನಾನು ಇಷ್ಟು time divide ಮಾಡಿ ಕೊಡುತ್ತೇನೆ, ಆ ಸಮಯದೊಳಗೆ ನೀವು ಪೂರ್ತಿ ಮುಗಿಸಬೇಕೆಂದು ಮೊದಲೇ warning ಆದರೂ ಕೊಡಬೇಕಾಗಿತ್ತು. ನೀವು ಎಲ್ಲಿ ಕೊಟ್ಟಿದ್ದೀರಿ? ನೀವು ಕೊಟ್ಟು ನಮಗೆ ಯಾರ್ಯಾರು ಈ ಸಮಯದೊಳಗೆ ಎಷ್ಟು ಜನ ಮಾತನಾಡುತ್ತೀರಿ ಎಂದು ಕೇಳಬೇಕಾಗಿತ್ತು. ಅದು ಕೇಳಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಹಾಗಾದರೆ 18 ಜನ ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆ ಮೇಲೆ ಮಾತನಾಡಲು ಸಹಿ ಮಾಡಿ ಕೊಟ್ಟಿರುವುದಕ್ಕೆ ಸ್ವಲ್ಪವಾದರು ಬೇಡವೇ? ನಿಲುವಳಿ ಸೂಚನೆ ಮೇಲೆ ಮಾತನಾಡುವುದಕ್ಕೆ ಕಾನೂನಿನಲ್ಲಿ ಅವಕಾಶವ ಇಲ್ಲವೇ?

**ಸಭಾಪತಿಯವರು:–** ಉಳಿದ ಸದಸ್ಯರುಗಳು ಅವರು ಮಾತನಾಡುವಾಗ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆದ್ದರಿಂದ ದಯಮಾಡಿ ನಮಗೆ ಅವಕಾಶ ಮಾಡಿಕೊಡಿ. ಇಲ್ಲಿ ಯಾರ್ಯಾರು ಸಹಿ ಮಾಡಿದ್ದಾರೋ ಅವರಿಗೆಲ್ಲಾ ಅವಕಾಶ ಮಾಡಿಕೊಟ್ಟ ನಂತರ ಮಾನ್ಯ ಸಚಿವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಅವಕಾಶ ಕೊಟ್ಟರೆ ನಾವು ಮಾತನಾಡುತ್ತೇವೆ.

**ಸಭಾಪತಿಯವರು:–** ನಾನು ಅದನ್ನು ನಿಯಮ ೩೩೦ ಕ್ಕೆ convert ಮಾಡಿದ್ದೇನೆಂದು ಹೇಳಿದ್ದೇನೆ. ನಿಯಮ ೩೩೦ ಏನಿದೆಯೆಂದು ಓದಿ ಹೇಳಿ. ನಾನು ನೋಡಿ ಸಭಾನಾಯಕರೇ, ಅರ್ಧ ಗಂಟೆಯಲ್ಲಿ ಮುಗಿಸಬೇಕು. ನೀವು ಮಾತನಾಡುತ್ತೀರೋ ಅಥವಾ ಯಾರು ಮಾತನಾಡುತ್ತೀರೋ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದರೆ. ನಿಯಮ ೩೩೦ ರಲ್ಲಿ ಅರ್ಧ ಗಂಟೆ ಮಾತ್ರ ಸಮಯ ಇರುವುದು. ನಾನು ಸುಮಾರು ೪೦ ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದೇನೆ. ಅದಾದನಂತರ ಸರ್ಕಾರದಿಂದ ಉತ್ತರ ಕೊಡುತ್ತಾರೆಂದು ಹೇಳಿದ್ದೇನೆ. ಸರ್ಕಾರ ಉತ್ತರ ಕೊಡುತ್ತದೆ. ಈಗ ನಾನು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಮೇಲೆ ವಂದನಾರ್ಪಣಾ ಪ್ರಸ್ತಾವ ಸಲ್ಲಿಸುವುದಕ್ಕೆ ಅವರ ಹೆಸರು ಕರೆದಿದ್ದೇನೆ. ಕೊನೆಪಕ್ಷ ಅದು ಶುರುವಾಗಲಿ. ಆಮೇಲೆ ಸರ್ಕಾರ ಉತ್ತರ ಕೊಟ್ಟ ನಂತರ ನೀವು ಏನು ಹೇಳುತ್ತೀರೋ ಹೇಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ ಸರಿಯಿದೆ. ಆದರೆ ತಮ್ಮ ಅಧ್ಯಕ್ಷತೆಯಲ್ಲಿ ನಾನು ಇತ್ತೀಚೆಗೆ ಬಂದಂತಹ ಸಂದರ್ಭದಲ್ಲೂ ಕೂಡ ನಿಯಮ ೩೩೦ ರಡಿಯಲ್ಲಿ ಸುಮಾರು ೮ ಗಂಟೆಗಳ ಕಾಲ ಚರ್ಚೆ ಮಾಡಲಾಗಿದೆ. ೮ hours debate ಆಗಿರುವುದು ಉಂಟು.

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ತಾವು situation ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ನಿಯಮ ಇವತ್ತು ಏನೂ ಹೊಸದಲ್ಲ. Rule ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಹಾಗಾದರೆ ಸುಮಾರು ೫ ಗಂಟೆ, ೬ ಗಂಟೆ ಮತ್ತು ೮ ಗಂಟೆ ಕಾಲ ಚರ್ಚೆ ಆಗಿಲ್ಲವೇ?

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ಈಗ ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಮಾತನಾಡುತ್ತೀರೋ, ಇಲ್ಲವೋ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅದು ಇನ್ನೊಂದು ವಿಚಾರ ಇದೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ಇನ್ನೊಂದು ವಿಚಾರ ಅಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇಲ್ಲೇ ಕುಳತಿದ್ದಾರೆ. ಅವರು Constitution ವಿರೋಧ ಆಗಿದೆ ಎಂದು ಹೇಳದ್ದಾರೆ. **(ಗೊಂದಲ)** ಇನ್ನೊಂದು ವಿಚಾರ ಇದೆ.

**(ಗೊಂದಲ)**

**ಸಭಾಪತಿಯವರು:–** ಅದು ಆಮೇಲೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅದು ತೀರ್ಮಾನವಾಗಬೇಕು. **(ಗೊಂದಲ)** ಅದು ತೀರ್ಮಾನವಾದ ನಂತರ ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಮೇಲೆ ಚರ್ಚೆ. Lay ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಮಾನ್ಯ ಸಭಾನಾಯಕರೇ ಹೇಳದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹೇಳದ್ದರೆ ಕಡತ ತೆಗೆಸಿ ತೋರಿಸಿ. ಸುಮ್ಮನೆ ಯಾರೋ ಮಾತನಾಡುತ್ತಾರೆಂದು ಅವರು ಅದನ್ನೇ ಮಾತನಾಡಬಾರದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು ತೆಗೆದು ನೋಡಬಹುದು. ಅವರು Constitution ವಿರೋಧ ಆಗಿದೆಯೆಂದು ಹೇಳದ್ದಾರೆ. ಅದು ಅವರ ಮಾತು.

**(ಗೊಂದಲ)**

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಬೋಜೇಗೌಡ ರವರು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಅವರು ದಾರಿ ತಪ್ಪಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಅವರ ಮಾತು ಇದೆ.

**ಸಭಾಪತಿಯವರು:–** ನಾನು ಕಡತ ತರಿಸಿಕೊಂಡು ನೋಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರ ಮತ್ತೆ ಅದು ಡಿಬೇಟ್ ಆಗಬೇಕು. ದಯಮಾಡಿ ಈ ವಿಚಾರದಲ್ಲ ಅರ್ಧಗಂಟೆ ಚರ್ಚೆ ಮಾಡಬೇಕು ಎನ್ನತಕ್ಕಂಥ ವಿಚಾರದಲ್ಲ ನಮ್ಮದು ಎರಡು ಮಾತಿಲ್ಲ. ಆದರೆ ಇಂತಹ ಅನೇಕ ಸಂದರ್ಭಗಳಲ್ಲ debate ಆಗಿರುವುದು ಉಂಟು. ಆದರೆ ಇವತ್ತು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ನೀವೇ ಸದನದಲ್ಲಿ ಬೆಳಗ್ಗೆ 1 ಗಂಟೆ ಸಮಯ waste ಮಾಡಿದ್ದೀರಿ ಎಂದು ಹೇಳಿದಿರಿ. Time ಇರುವಾಗ ಮಾಡಿ ಮತ್ತು ಕಾನೂನು ಪ್ರಕಾರ ಮಾಡಿ ಎಂದು ಹೇಳುತ್ತೀರಿ. ಮತ್ತೆ ಈ ರೀತಿ ಉಲ್ಟಾ ಹೊಡೆಯುತ್ತೀರಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅಂದರೆ ಈಗ ನಾವು ಸಮಯ ಹಾಳು ಮಾಡುತ್ತಿದ್ದೇವೆಂದು ಅರ್ಥವೇ? ಇದು ಬಹಳ ಗಂಭೀರವಾಗಿರತಕ್ಕಂಥ ವಿಚಾರ.

**(ಗೊಂದಲ)**

**ಸಭಾಪತಿಯವರು:–** ಇಲ್ಲ. ಆಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಭ್ರಷ್ಟಾಚಾರದ ವ್ಯವಸ್ಥೆಯಲ್ಲಿ ಮುಳುಗಿರತಕ್ಕಂಥದ್ದನ್ನು, ಅಧಿಕಾರಿ ವರ್ಗದವರು ಹೇಳತಕ್ಕಂಥ ವಿಚಾರವನ್ನು ಈ ಸದನದೊಳಗೆ ಚರ್ಚೆ ಮಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ. ಚರ್ಚೆ ಆಗಲೇಬೇಕು. ವಿರೋಧ ಪಕ್ಷ ಇರುವುದೇ ಅದಕ್ಕೋಸ್ಕರ. **(ಗೊಂದಲ)** ಆಯಿತು ನಾವು ಚರ್ಚೆ ಮಾಡುವುದಿಲ್ಲ, ಅವರಿಂದ ರಾಜೀನಾಮೆ ಕೊಡಿಸುತ್ತೀರಾ?

**(ಗೊಂದಲ)**

**ಸಭಾಪತಿಯವರು:–** ಈಗ ಒಂದು ನಿಮಿಷ ಕೇಳಿ. **(ಗೊಂದಲ)** ಏನು ಹುಡುಗಾಟ ಮಾಡುತ್ತೀರೇನು. ಆಯಿತು ನೀವು ಏನು ಮಾಡುತ್ತೀರೋ ಮಾಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು ದಿನಾಂಕ 22.01.2026ರಂದು ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿದರು.(ಗೊಂ**ದಲ)** ಈ ಸದನದ ಜಂಟಿ ಅಧಿವೇಶನದಲ್ಲಿ ವಿಧಾನಸಭೆಯ ಸದಸ್ಯರ ಜೊತೆಗೆ ನಾವು ಕೂಡ ಜಂಟಿ ಸದನದಲ್ಲಿ ಉಪಸ್ಥಿತರಿದ್ದೆವು. **(ಗೊಂದಲ)** . . .

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾವು ವಜಾ ಮಾಡಿದ್ದೇವೆಂದು ಒಂದು ಸಾಲು ಉತ್ತರ ಕೊಡಿಸಿ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ನಿಮ್ಮದು ಅತಿ ಆಯಿತು. ಇಲ್ಲ, ಅವಕಾಶ ಕೊಡುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ. **(ಗೊಂದಲ)** ನಾನು ನೋಡಿದ್ದೇನೆ, ಅವರು ಯಾರು ಇರಲಿಲ್ಲ. **(ಗೊಂದಲ)** ಶ್ರೀಮತಿ ಭಾರತಿ ಶೆಟ್ಟಿಯವರು ಇದ್ದರು. **(ಗೊಂದಲ)** ನೋಡಿ, ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕೆಂದು ಕಾಯ್ದೆ ಇಲ್ಲ. **(ಗೊಂದಲ)** Situation ಹೇಗೆ ಬರುತ್ತದೋ ಅದರ ಪ್ರಕಾರ ಮಾಡುತ್ತಿದ್ದೇನೆ. **(ಗೊಂದಲ)** ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಕೊಡಬೇಕೆಂದು ಕಾಯ್ದೆ ಇಲ್ಲ. ಇವತ್ತು ನೀವು ಮಾತನಾಡಿದ್ದೀರಿ. ಸರ್ಕಾರದಿಂದ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ಸರ್ಕಾರ ಉತ್ತರ ಕೊಡುವಾಗ ಅವರು clarification ಕೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ವಾಪಸ್ಸು ಬಂದಾಗ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಐದೈದು ನಿಮಿಷ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯರು:–** ಇಲ್ಲ, ನಾನು close ಮಾಡಿದ್ದೇನೆ. **(ಗೊಂದಲ) ಯಾರು ಮಾತನಾಡಿದರೂ ಯಾವೂದೂ ಕಡತಕ್ಕೆ ಹೋಗಬಾರದು. (ಗೊಂದಲ)** ಯಾರಿಗೂ ಅವಕಾಶ ಕೊಡುವುದಿಲ್ಲ. **(ಗೊಂದಲ)** ಯಾವುದೂ ಕಡತಕ್ಕೆ ಹೋಗುವುದಿಲ್ಲ. ಮಾನ್ಯ ಐವನ್ ಡಿ'ಸೋಜಾ ರವರೇ ತಾವು ಮಾತನಾಡಿ.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಲ್ಲಿ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ.)**

**(ಗೊಂದಲ)**

**10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ.**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ನಾನು ಮಾತನಾಡುವುದಕ್ಕೆ ತೊಂದರೆ ಮಾಡುತ್ತಿದ್ದಾರೆ. ಹಾಗಾಗಿ, ತಾವು House ಅನ್ನು control ಗೆ ತರಬೇಕು. **(ಗೊಂದಲ)** ಈ ಒಂದು ಭಾಷಣವನ್ನು ಮಾಡತಕ್ಕಂಥ ಸಂದರ್ಭದಲ್ಲಿ 46 ಪುಟಗಳ ಭಾಷಣವನ್ನು ಕೇವಲ 54 ಸೆಕೆಂಡ್‌ಗಳಲ್ಲಿ ಗೌರವಾನ್ವಿತ ರಾಜ್ಯಪಾಲರು ಓದಿ ಮುಗಿಸಿದರು. ಮತ್ತೆ ಒಂದು ವಿಚಾರ ಹೇಳಿದರು. **(ಗೊಂದಲ)** ನಮ್ಮ ಸರ್ಕಾರ ಒಟ್ಟಾರೆ ರಾಜ್ಯದ ಆರ್ಥಿಕ, ಸಾಮಾಜಿಕ ಹಾಗೂ ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸಲು ನಮ್ಮ ಸರ್ಕಾರ ಕಂಕಣಬದ್ಧವಾಗಿದೆ ಎಂದು ಹೇಳಿ ಜೈ ಹಿಂದ್ ಎಂದು ತಮ್ಮ ಭಾಷಣವನ್ನು ಮುಗಿಸಿದ್ದಾರೆ. **(ಗೊಂದಲ)** ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣ ನಾವು ಏನು ಹಾಸ್ಯ ಮಾಡುತ್ತಿದ್ದೇವೆಂದರೆ, ಗೌರವಾನ್ವಿತ ರಾಜ್ಯಪಾಲರು ಈ ದೇಶದಲ್ಲಿ ಸಂವಿಧಾನಬದ್ಧವಾಗಿ ಆಯ್ಕೆಯಾಗಿರುತ್ತಾರೆ. ಈ ರಾಜ್ಯದ ಪರವಾಗಿ ಅವರು ಇರಬೇಕೆಂದು ನಾವು ಭಾವಿಸಿದ್ದೇವೆ. ಗೌರವಾನ್ವಿತ ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಬರುವ ಮುಂಚೆಯೇ ಒಂದು ರೀತಿಯ ಸೂಚನೆಯನ್ನು ಕೊಟ್ಟರು. **(ಗೊಂದಲ)** ಏನು ಸೂಚನೆ ಕೊಟ್ಟರೆಂದರೆ, ಸರ್ಕಾರ ಭಾಷಣದ ಕೆಲವು paragraph ಗಳನ್ನು ತೆಗೆಯದಿದ್ದರೆ ನಾನು ಭಾಷಣ ಮಾಡಲು ಬರುವುದಿಲ್ಲ ಎಂಬ ಸಂದೇಶವನ್ನು ಕಳುಹಿಸಿದ್ದರು. **(ಗೊಂದಲ)** ಆದರೆ ಆ ಸಂದೇಶವನ್ನು ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕಾನೂನು ಸಚಿವರು ಪರಿಶೀಲನೆ ಮಾಡಿ ಅದರಲ್ಲಿದ್ದಂತಹ ವಿಚಾರಗಳನ್ನು ತೆಗೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಗೌರವಾನ್ವಿತ ರಾಜ್ಯಪಾಲರು ಅನುಚ್ಛೇದ 176 (1)ರ ಪ್ರಕಾರ ಯಾವ ಸರ್ಕಾರ Head of the Cabinet, ಏನು ಭಾಷಣವನ್ನು ತಯಾರು ಮಾಡಿ ಕೊಡುತ್ತದೋ, ಆ ಭಾಷಣವನ್ನು ಯಥಾವತ್ತಾಗಿ ಓದತಕ್ಕದ್ದು ಎಂದು ಅನುಚ್ಛೇದ 176 (1) ಸ್ಪಷ್ಟವಾಗಿ ಹೇಳುತ್ತದೆ.

**(ಮುಂದು)**

(39)27.1.2026/4.40/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಎದ್ದು ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಹಾಗಾಗಿ ರಾಜ್ಯಪಾಲರು ಇದಕ್ಕೆ ವಿರುದ್ಧವಾಗಿ ನಡೆದಿದ್ದಾರೆ (**ಗೊಂದಲ**) ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಬಂದರು. ಅಧಿವೇಶನವು ರಾಷ್ಟ್ರಗೀತೆ ಮೂಲಕ ಪ್ರಾರಂಭವಾಯಿತು. ರಾಜ್ಯಪಾಲರು ಬಂದು ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದರು ಮತ್ತು ಮೊದಲ ಮತ್ತು ಕೊನೆಯ ಎರಡು paragraph ಗಳನ್ನು ಓದಿ ಭಾಷಣವನ್ನು ಮುಕ್ತಾಯಗೊಳಿಸಿದರು ಮತ್ತು ತಮ್ಮ (**ಗೊಂದಲ**) ಹೋದರು. ಆದರೆ ನನ್ನ ಉದ್ದೇಶವಿರುವುದು ಏನೆಂದರೆ, ತಾವು ನಮಗೆ ಏನು ಜಂಟಿ ಅಧಿವೇಶನಕ್ಕೆ ಕರೆ ಕೊಟ್ಟಿದ್ದೀರಿ ಅದರಲ್ಲಿ ಏನು ಹೇಳಿದೆ ಎಂದರೆ ಭಾಷಣದ ನಂತರ

ರಾಷ್ಟ್ರಗೀತೆಯನ್ನು ಪುನಃ ನುಡಿಸಲಾಗುವುದು. ಅಂದರೆ ರಾಷ್ಟ್ರಗೀತೆಯನ್ನು ಮತ್ತೆ ಪುನಃ (**ಗೊಂದಲ**) ಆದರೆ, ಘನತೆವೆತ್ತ ರಾಜ್ಯಪಾಲರು ಇದು ಏನನ್ನೂ ಓದದೇ ಮೊದಲ ಮತ್ತು ಕೊನೆಯ ಎರಡು ಪ್ಯಾರಾಗಳನ್ನು ಓದಿ ಅಲ್ಲಿಂದ ನೇರವಾಗಿ ಸದನದಿಂದ ನಿರ್ಗಮಿಸಿರುವುದು ಅತ್ಯಂತ ದುರದೃಷ್ಟಕರವೆಂದು ನಾನು ಹೇಳಬಯಸುತ್ತೇನೆ. ರಾಜ್ಯಪಾಲರು ಆಯ್ಕೆಯಾಗಿರುವಂಥದ್ದು ಈ ರಾಜ್ಯದ ಜವಾಬ್ದಾರಿ ತೆಗೆದುಕೊಂಡಿರುವಂಥದ್ದು, he is the head of the Constitution. ಅವರು ಈ ರಾಜ್ಯದ ಸಂವಿಧಾನದ Custodian ಇರುತ್ತಾರೆ, head of the Government ಆಗಿರುತ್ತಾರೆ. ಅವರಿಗೆ ತನ್ನದೇ ಆದ ಜವಾಬ್ದಾರಿ ಇದೆ. ಅಂತಹ ರಾಜ್ಯಪಾಲರು ಬಂದು ನಾನು ಭಾಷಣವನ್ನು ಓದುವುದಿಲ್ಲ ಎಂದು ನಿರ್ಗಮಿಸಿದ್ದಾರೆ. ಆದರೆ ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅವರು ಏನು ಭಾಷಣ ಮಾಡಿದ್ದಾರೆ ಆ ಭಾಷಣ ಸಂವಿಧಾನಕ್ಕೆ ವಿರೋಧ ಅಲ್ಲ. ಏಕೆಂದರೆ, first and the last pages ಅನ್ನು ಓದಿದರೆ ಆ ಭಾಷಣ deemed to be presented before the House. 'Read and record' ಎಂಬ ತತ್ವದ ಅಡಿಯಲ್ಲಿ ಅವರು ಮಾಡಿದ ಭಾಷಣವನ್ನು ನಾವು ಒಪ್ಪಿಕೊಂಡಿದ್ದೇವೆ. ಹಾಗಾಗಿ ಅದು ಕಾನೂನುಬದ್ಧವಾದಂತಹ ಭಾಷಣದ ಈ ಪುಸ್ತಕ ಏನಿದೆಯೋ ಅದನ್ನು ಸದನದ ಮುಂದೆ ಇಟ್ಟ ಕಾರಣಕ್ಕಾಗಿ, this is the property of the House. ಇದು ಸದನದ ಆಸ್ತಿ. ಸದನದ ಆಸ್ತಿಯನ್ನು ನಾವು ಇವತ್ತು ಈ ಸಂದರ್ಭದಲ್ಲಿ ಅವರ ಭಾಷಣಕ್ಕೆ ಯಾವುದೇ ವಿರೋಧವನ್ನು ಮಾಡದೇ ರಾಜ್ಯಪಾಲರು ಮಾಡಿದಂತಹ ಭಾಷಣವನ್ನು ಸ್ವತಂತ್ರಪೂರ್ವಕವಾದ ವಂದನೆಯನ್ನು ಸಮರ್ಪಿಸಲು ನಾವು ನಿಮ್ಮ ಅಪ್ಪಣೆಯನ್ನು ಕೋರಿದ್ದೇವೆ. ಇವತ್ತು ವಿರೋಧಪಕ್ಷದವರು ಬಹಳಷ್ಟು ವಿಚಾರಗಳನ್ನು ಪತ್ರಿಕೆಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದರು. ರಾಜ್ಯದ ಘನತೆವೆತ್ತ ರಾಜ್ಯಪಾಲರಿಗೆ ಇದ್ದಂತಹ ಅಧಿಕಾರವನ್ನು ಅವರು ಚಲಾಯಿಸಿ ಅವರಿಗೆ ರಾಜ್ಯದ ಏಳಿಗೆ ಮತ್ತು ಸರ್ಕಾರದ ಬಗ್ಗೆ ಗೌರವ ಇದೆಯೆಂದು ಯಾವತ್ತು ಹೇಳಿದ್ದಾರೆ, ಅವರ ಕೆಲಸ ಇರುವುದು ಈ ಸರ್ಕಾರದ ಒಳ್ಳೆಯ ಕೆಲಸಗಳನ್ನು ಹೇಳುವ ಮೂಲಕ ನನ್ನ ಸರ್ಕಾರ ಒಟ್ಟಾರೆ ರಾಜ್ಯದ ಆರ್ಥಿಕ, ಸಾಮಾಜಿಕ, ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸುತ್ತದೆ ಎಂದು ಹೇಳಿದರು ಮತ್ತು ನನ್ನ ಸರ್ಕಾರ ಅದಕ್ಕೆ ಕಟಿಬದ್ಧವಾಗಿದೆ ಎಂದು ಹೇಳಿದರೋ ಆಗ ಅದರ ಅರ್ಥ ರಾಜ್ಯ ಸರ್ಕಾರ ಒಳ್ಳೆಯ ರೀತಿಯಲ್ಲಿ ಕೆಲಸ ನಿರ್ವಹಣೆ ಕಾನೂನುಬದ್ಧವಾಗಿ ಮಾಡುತ್ತಿದೆ ಮತ್ತು ಅವರ ಸಂಪೂರ್ಣ ಬೆಂಬಲ ಈ ಸರ್ಕಾರಕ್ಕೆ ಇದೆ ಎಂದು ತೋರಿಸಿಕೊಡುತ್ತಿದೆ.

**(ಈ ಹಂತದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರೂ ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

ಮಾನ್ಯ ಸಭಾಪತಿಯವರೇ, ಈ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಈ ಪುಸ್ತಕದಲ್ಲಿ ಸುಮಾರು ಅನೇಕ ವಿಚಾರಗಳನ್ನು ಹೇಳಿದ್ದಾರೆ. Article 155 of the Indian Constitution ಪ್ರಕಾರ ರಾಷ್ಟ್ರಪತಿಗಳು ಕೇಂದ್ರ ಸರ್ಕಾರದ ಒಂದು (**ಗೊಂದಲ**) ಪ್ರಕಾರ ರಾಜ್ಯಪಾಲರು ಆಯ್ಕೆಯಾಗುತ್ತಾರೆ.

ಆಯ್ಕೆಯಾದಂತಹ ರಾಜ್ಯಪಾಲರು ಈ ರಾಜ್ಯದ ಜವಾಬ್ದಾರಿ ತೆಗೆದುಕೊಂಡ ಮೇಲೆ ಅವರ ಜವಾಬ್ದಾರಿ ಈ ರಾಜ್ಯದ ಬೆಳವಣಿಗೆಯ ಅಭಿವೃದ್ಧಿ ದೃಷ್ಟಿಯಿಂದ ಇರಬೇಕಾಗುತ್ತದೆ. ಮತ್ತು he is the custodian of the Constitution. ಅವರು ಸಂವಿಧಾನದ ರಕ್ಷಕರು. ರಾಜ್ಯ ಸರ್ಕಾರ ಏನಾದರೂ ಎಡವಿದರೆ ಅದಕ್ಕೆ ಸರಿಯಾದ ಸಲಹೆ ಸೂಚನೆ ಕೊಡುವಂತಹ ಅಧಿಕಾರವಿರುವಂತಹ ರಾಜ್ಯಪಾಲರು ಈ ಭಾಷಣವನ್ನು ಓದದೇ ಇರುವುದು ಅತ್ಯಂತ ಬೇಸರದ ವಿಚಾರವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣವನ್ನು ಓದುವುದಕ್ಕೆ ನಿರಾಕರಣೆ ಮಾಡಿರುವಂತಹದ್ದು ಯಾವ ಕಾರಣಕ್ಕಾಗಿ ಎನ್ನುವುದು ಇವತ್ತು ನಮ್ಮ ಮುಂದೆ ಇಲ್ಲ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ನಮ್ಮ ಮುಂದೆ ರಾಜ್ಯಪಾಲರು ಏತಕ್ಕಾಗಿ ಈ ಭಾಷಣವನ್ನು ಓದುವುದಕ್ಕೆ ನಿರಾಕರಿಸಿದರು ಎಂದು ಹೇಳುವುದು ಒಂದು ದೊಡ್ಡ (**ಗೊಂದಲ**) ವಿಚಾರ. ಏತಕ್ಕಾಗಿ refuse ಮಾಡಿದರು? ನಿಮ್ಮ ಹಕ್ಕು ಏನೆಂದರೆ, ಈ ಕ್ಯಾಬಿನೆಟ್ ಯಾವ ಭಾಷಣವನ್ನು (**ಗೊಂದಲ**) ಕೊಡುತ್ತದೆ ಆ ಭಾಷಣವನ್ನು ಯಥಾವತ್ತಾಗಿ ಓದುವಂಥದ್ದು ಮತ್ತು ಈ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತದೆಂದು ಹೇಳುವಂಥದ್ದು ಅವರ ವಿವೇಚನೆಗೆ ಬಿಟ್ಟಿರುವಂಥದ್ದಲ್ಲ. It is the right under Constitution. Article 176 of the Indian Constitution ಏನು ಹೇಳುತ್ತದೆಂದರೆ:

> *"Special address by the Governor*
>
> *(1) At the commencement of the first session after each general election to the Legislative Assembly and at the commencement of the first session of each year, the Governor shall address the Legislative Assembly or, in the case of a State having a Legislative Council, both Houses assembled together and inform the Legislature of the causes of its summons."*

**(ಈ ಹಂತದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರೂ ಎದ್ದು ನಿಂತು ಧಿಕ್ಕಾರ ಕೂಗುತ್ತಿದ್ದರು)**

ಅವರನ್ನು ಕರೆದಂತಹ ಉದ್ದೇಶ, ಅವರ ಮನಸ್ಸಿನಲ್ಲಿದ್ದ ವಿಚಾರಗಳೇನು ಮತ್ತು ಸರ್ಕಾರದ ಉದ್ದೇಶವೇನು ಎಂದು ಹೇಳುವಂತಹ ಅಧಿಕಾರ ಓರ್ವ ರಾಜ್ಯಪಾಲರಿಗಿರುತ್ತದೆ. ರಾಜ್ಯಪಾಲರು Article 176(1) ಪ್ರಕಾರ ಯಾವಾಗ ತಮ್ಮ duties ಮಾಡುವುದಿಲ್ಲ ಎಂದು ಹೇಳುವುದು ನಮ್ಮ ಮುಂದಿರುವ ವಿಚಾರ. ಆದರೆ ಇವತ್ತು ನಾವು ರಾಜ್ಯಪಾಲರು ಭಾಷಣ ಮಾಡಿಲ್ಲ, ಅವರು ಬಂದಿಲ್ಲ ಎಂಬ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, it is a well settled law that if the Governor read the first para of the

speech and the last para of the speech, it is presumed that it is read and recorded and it is also the property of the House.

**(ಈ ಹಂತದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಎಲ್ಲರೂ ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

It is read and record ಎಂದು ಹೇಳುವ ತತ್ವದ ಅಡಿಯಲ್ಲಿ ಅವರು ಭಾಷಣವನ್ನು ಸಂಪೂರ್ಣವಾಗಿ ಓದಿದ್ದಾರೆ ಎಂದು ಹೇಳುವುದು ಈ ಸದನದ ಮುಂದಿರುವಂತಹ ಪ್ರಶ್ನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ . . .

**ಉಪಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ದಯಮಾಡಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಅದರ ಬಗ್ಗೆ ಏನಿದೆ ಅದನ್ನು ಚರ್ಚೆ ಮಾಡೋಣ. ಪ್ಲೀಸ್.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರವನ್ನು ಸಾಬೀತು ಪಡಿಸುವುದಕ್ಕೆ ನಿಲುವಳಿ ಸೂಚನೆ ತಂದಿದ್ದೇವೆ.

**ಉಪ ಸಭಾಪತಿಯವರು:–** ನೋಡೋಣ. ಇದಾಗಲಿ. ಇದಾದ ನಂತರ ಚರ್ಚೆ ಮಾಡಿ ಇದನ್ನು ಏನು ಮಾಡಬೇಕೆನ್ನುವುದನ್ನು ನೀವು ಮತ್ತು ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರನ್ನು ಕರೆದು ಕೂರಿಸಿ ಮಾತನಾಡಿ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯೋಣ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಕರೆಯಿರಿ ನಾವು ಹೇಳುತ್ತೇವೆ.

**ಉಪ ಸಭಾಪತಿಯವರು:–** ನೋಡೋಣ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾರ್ಯಾರು involve ಆಗಿದ್ದಾರೋ ಅವರನ್ನು ಒದ್ದು ಒಳಗೆ ಹಾಕುವ ಇಚ್ಛಾಶಕ್ತಿ ಇದೆಯೇ? ನೀವು ಯಾರನ್ನು ಒದ್ದು ಒಳಗೆ ಹಾಕುತ್ತೀರಿ?

**ಉಪ ಸಭಾಪತಿಯವರು:–** ಆಯಿತು, ನಿಮ್ಮ ಡಿಮ್ಯಾಂಡ್‌ಗಳು ನಮಗೆ ಅರ್ಥವಾಗುತ್ತಿದೆ. ಮಾನ್ಯ ಕಾನೂನು ಮಂತ್ರಿಗಳು ಇದಕ್ಕೆ ಏನು ಹೇಳುತ್ತಾರೆಯೋ ಹೇಳಲಿ. ತದನಂತರ ನೋಡೋಣ.

**ಶ್ರೀ ಸಿ.ಟಿ. ರವಿ:–** ಸಾರ್ವಜನಿಕವಾಗಿ ಇಷ್ಟು ಚರ್ಚೆಯಾಗುತ್ತಿರುವುದಕ್ಕೂ ಭಂಡತನ ತೋರಿಸಿದರೆ ನಮ್ಮ ನಿಮ್ಮನ್ನೆಲ್ಲಾ ಸೇರಿಸಿ . . .

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ಕಾನೂನು ಮಂತ್ರಿಗಳ ಹತ್ತಿರ ಸಲಹೆ ಕೇಳೋಣ. ಅವರು ಏನು ಹೇಳುತ್ತಾರೋ ನೋಡೋಣ. ಸಮಂಜಸವಾಗಿದ್ದರೆ ಸರಿ, ಆಗ ಮುಂದಿನ ದಾರಿ ನೋಡೋಣವಂತೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದು ಆರು ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿದ್ದಾರೆ, ಅವರಿಗೆ ಹೇಳಿ.

**ಉಪ ಸಭಾಪತಿಯವರು:–** ತಾವು ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ''ಬಾರ್‌ಗಳಿಗೆ ಮಂಥ್ಲಿ ಫಿಕ್ಸ್'' ಇದು ಮಾಧ್ಯಮಗಳಲ್ಲಿ ಬಂದಿರುವ ವರದಿಯಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ನೋಡಿ ಪೀಠಕ್ಕೆ ಆದೇಶ ಮಾಡಬೇಡಿ, ನನಗೆ ಗೊತ್ತಿದೆ ನೀವು ಕುಳಿತುಕೊಳ್ಳಿ.

(ಮುಂದು)

(40) 27-01-2026 4-50 KH/BNS (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**11. ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ಚರ್ಚಿಸಲು ಅವಕಾಶ ನೀಡಬೇಕೆನ್ನುವ ಕುರಿತು.**

.........

**ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿಷಯ ಬಹಳ ಸಂಕ್ಷಿಪ್ತವಾಗಿದೆ. ನಾವು ಬೆಳಗ್ಗೆಯಿಂದ ಕೇಳಿದ್ದೇವೆ. ಚರ್ಚೆ ಕೂಡ ಆಗಿದೆ. ನಾವು ಮಾತನಾಡುವುದಕ್ಕೆ ತಮ್ಮ ಪೀಠ ಅವಕಾಶ ಕೊಟ್ಟಿದೆ. ನಾವು ರಾಜ್ಯದಲ್ಲಿ ಭ್ರಷ್ಟಾಚಾರ ಮೇರೆ ಮೀರುತ್ತಿದೆ ಎಂದು ಪ್ರಸ್ತಾಪ ಮಾಡಿದ್ದೇವೆ. ನಾವು ಬೇರೆ ಬೇರೆ ವಿಚಾರಗಳ ಬಗ್ಗೆ ಮಾತನಾಡುವುದು ಬೇಕಾಗಿಲ್ಲ. ಇವತ್ತು ಅಬಕಾರಿ ಇಲಾಖೆಯಲ್ಲಿ ಏನು ನಡೆದಿದೆ ಎನ್ನುವುದು ಜಗಜ್ಜಾಹೀರಾಗಿದೆ. ಇದು ಮೀಡಿಯಾ ಮಾತ್ರವಲ್ಲ. ಸೋಷಿಯಲ್ ಮೀಡಿಯಾ ಮಾತ್ರವಲ್ಲ, ಇದರಿಂದ ಜನ ಬೇಸತ್ತು ಹೋಗಿದ್ದಾರೆ. ಈಗ License holders' Association ನ ಅಧ್ಯಕ್ಷರು 6 ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ ಎಂದು ಹೇಳಿದ ಮೇಲೆ ನಾವು ಯಾರನ್ನು ರಕ್ಷಣೆ ಮಾಡುವುದಕ್ಕೆ ಚರ್ಚೆ

ಮಾಡಬೇಕು. ಆ ಕಾರಣದಿಂದ ಈಗ ಎಲ್ಲರ ಒಟ್ಟು ಅಭಿಪ್ರಾಯ ಇರುವಂತಹದ್ದೇನೆಂದರೆ, ಮಾನ್ಯ ಸಚಿವರನ್ನು ಸಚಿವ ಸಂಪುಟದಿಂದ ಕೈಬಿಡಬೇಕೆಂಬುದು ಎಲ್ಲರ ಒಕ್ಕೊರಲಿನ ಒತ್ತಾಯ. ಆದ್ದರಿಂದ, ಅದನ್ನು ಮಾಡಬೇಕೆಂದು ಹೇಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ತಾವು ಈಗ ಇದರ ಬಗ್ಗೆ ಮಾತನಾಡಿದ್ದೀರಿ? ಮಾನ್ಯ ಕಾನೂನು ಮಂತ್ರಿಗಳು ಏನೋ ಹೇಳಬೇಕೆಂದಿದ್ದಾರೆ. ಅದು ಏನೆಂದು ಕೇಳೋಣ. ಏಕೆಂದರೆ, ಕಾನೂನುಗಳನ್ನು ಸ್ವಲ್ಪ ತಿಳಿದುಕೊಂಡಿರುವವರಿಂದ ಏನು ಸಲಹೆಗಳು ಬರುತ್ತದೆ ಎಂದು ಕೇಳೋಣ. ತದನಂತರ ಏನು ಮಾಡಬೇಕೆಂದು ಯೋಚನೆ ಮಾಡೋಣ.

(ಗೊಂದಲ)

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಲ್ಲ. ದಯಮಾಡಿ . . .

**ಉಪ ಸಭಾಪತಿಯವರು:–** ಮಾನ್ಯ ಕಾನೂನು ಮಂತ್ರಿಗಳು . . . ಮಾನ್ಯ ರಮೇಶ್ ಬಾಬು ರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಇಲ್ಲ. ಆ ರೀತಿ ಆಗುವುದಿಲ್ಲ. ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭವಾಗಿದೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿಸೋಜಾ ರವರೇ, ನಾನು ಕಾನೂನು ಮಂತ್ರಿಗಳನ್ನು ಕರೆದಿದ್ದೇನೆ. ತಾವು ಕಾನೂನು ಮಂತ್ರಿಗಳೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಹೇಳಿ ನಾನು ಕಾನೂನು ಮಂತ್ರಿಗಳನ್ನು ಕರೆದ ಮೇಲೆ ಇವರು ಮಾತನಾಡುವಂತಹದ್ದು ಏನು? ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ಈಗ ಕಾನೂನು ಮಂತ್ರಿಗಳನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅದಕ್ಕಾಗಿ ಪತ್ರಿಕೆಗಳಲ್ಲಿ ಬಂದಿರುವಂತಹದ್ದರ ಬಗ್ಗೆ ಮತ್ತು ಹೊರಗೆ ಚರ್ಚೆಯಾಗಿರುವಂತಹದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿದ ಹಾಗೆ ಕೆಲವು ಪ್ರಮಾಣದಲ್ಲಿ ಚರ್ಚೆ ಕೂಡ ಆಗಿದೆ. ಅಂತಿಮವಾಗಿ ಅವರು ತಮ್ಮ ಒತ್ತಾಯವನ್ನು ಮಾಡುತ್ತಿದ್ದಾರೆ. ಅವರು ಒತ್ತಾಯ ಮಾಡುವುದಕ್ಕೆ ನಮ್ಮದೇನು ಅಭ್ಯಂತರ ಇಲ್ಲ. ಆದರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದು ಪೂರ್ಣವಾದ ಮೇಲೆ ಅವರು ಚರ್ಚೆ ಮಾಡಬಹುದಾಗಿತ್ತು.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೇ, ಒಂದು ನಿಮಿಷ, let him conclude.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದು ಅವರ ಪ್ರಕಾರ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಉತ್ತರ ಕೇಳುವಂತಹದ್ದು ಒಂದು ರೀತಿಯಲ್ಲಿ ಸಮರ್ಪಕವಾಗಿರುವಂತಹದ್ದು ಆಗಿದೆ. ಅವರು ಪತ್ರಿಕೆಗಳಲ್ಲಿ ಬಂದಿದೆ, ಮತ್ತೊಂದರಲ್ಲಿ ಬಂದಿದೆ ಎಂದು ಹೇಳಿದರು. ಮಾನ್ಯ ಆರ್.ಬಿ.ತಿಮ್ಮಾಪೂರರವರು ರವರು ಇಲ್ಲಿಯೇ ಇದ್ದಾರೆ. ನಾವು ಅವರ ಉತ್ತರವನ್ನು ಬಯಸುವುದು, it is a natural justice. ಅವರು ಉತ್ತರ ಹೇಳಲಿ. ಅದರಿಂದ ತಾವು convince ಆದರೆ, ತಾವು ಹೇಳಿದ್ದು ತಪ್ಪು ಇದ್ದರೆ ಅಥವಾ ತಮಗೆ ಬೇರೆ ಬೇರೆ ಕಡೆ ಸಿಕ್ಕಿರುವಂತಹ ಮಾಹಿತಿಗಳು ಸರಿ ಇಲ್ಲವೆಂದರೆ, ಆಗ ತಾವು ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳಬಹುದು. ಆದ್ದರಿಂದ, ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೋರುವುದೇನೆಂದರೆ, ಮಾನ್ಯ ಆರ್.ಬಿ.ತಿಮ್ಮಾಪೂರ್ ರವರ ಮೇಲೆ ಅವರು ಏನು ಅಪಾದನೆಗಳನ್ನು ಮಾಡಿದ್ದಾರೆ, ಅವರು ಇಂತಹ ವಿಷಯಗಳು ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ. ನಂತರ ತಾವು ಏನು ಹೇಳುತ್ತೀರಿ ಆ ರೀತಿ ಮಾಡೋಣ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಒಂದೇ ಲೈನ್‌ನಲ್ಲಿ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಆರ್.ಬಿ.ತಿಮ್ಮಾಪೂರ್ ರವರು ಸದನದಲ್ಲಿ ಇದ್ದಾರೆ. ಮಾನ್ಯ ಕಾನೂನು ಸಚಿವರು ಕೂಡ ಸದನದಲ್ಲಿ ಇದ್ದಾರೆ. ನಾವೇನು ವಿಷಯವನ್ನು ಮಂಡನೆ ಮಾಡಿದ್ದೇವೆ, ನಾವೇನು ವಿಷಯವನ್ನು ಸದನಕ್ಕೆ ತಿಳಿಸಿದ್ದೇವೆ, ಆ ಸಂದರ್ಭದಲ್ಲಿ ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರು ಸದನದಲ್ಲಿ

ಇರಲಿಲ್ಲ. ಹಾಗಾಗಿ ನಮ್ಮ ಕಡೆಯಿಂದ ಇಬ್ಬರು–ಮೂವರು ಮಾತನಾಡಲಿ. ಆಮೇಲೆ ಅವರು ಉತ್ತರವನ್ನು ಕೊಡಲಿ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಅರ್ಧ ಗಂಟೆ ಚರ್ಚೆ ಮಾಡುವುದು, ಈಗಾಗಲೇ 40 ನಿಮಿಷಗಳ ಕಾಲ ಚರ್ಚೆ ಆಗಿದೆ. ಆದ್ದರಿಂದ, ಅದಕ್ಕೆ ಮತ್ತೆ ಅವಕಾಶ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಹೇಳಿದ್ದಾರೆ. ಅದನ್ನು ಅಲ್ಲಿಗೆ ಮುಕ್ತಾಯ ಮಾಡಬೇಕೆಂದು ಸ್ಪಷ್ಟವಾಗಿ ರೂಲಿಂಗ್ ಕೊಟ್ಟಿದ್ದಾರೆ. ತಾವು ವೆರಿಫೈ ಮಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ದಯಮಾಡಿ ನನ್ನ ರಿಕ್ವೆಸ್ಟ್ ಇದೆ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಆಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ಮಾನ್ಯ ಕಾನೂನು ಮಂತ್ರಿಗಳು ಬಂದಿದ್ದಾರೆ. ಮಾನ್ಯ ಕಾನೂನು ಮಂತ್ರಿಗಳು ಹೇಳಿರುವಂತಹದ್ದು ಇದೆ. ಮಾನ್ಯ ವಿರೋಧ ಪಕ್ಷದವರ ಅಹವಾಲು ಏನಿದೆ ಎಂದರೆ, ನಮ್ಮಲ್ಲಿ ಇಬ್ಬರು ಮಾತನಾಡುವವರು ಇದ್ದಾರೆ. ಅವರಿಗೆ ಅವಕಾಶ ಕೊಟ್ಟ ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ ಎನ್ನುವುದು ಇದೆ. ಅದಕ್ಕೆ ನಾವು ಅವಕಾಶವನ್ನು ಕೊಡಬೇಕು. ಏಕೆಂದರೆ, ಈಗಾಗಲೇ ಪೀಠ ಅವರನ್ನು ಕರೆದಿದೆ. ಅವರು ಕೂಡ ಮಾತನಾಡಿದ್ದಾರೆ. ನಮ್ಮಲ್ಲಿ ಹೊಂದಾಣಿಕೆ ಮಾಡಿಕೊಂಡು ಅವರಲ್ಲಿ ಒಂದಿಬ್ಬರಿಗೆ ಅವಕಾಶ ಕೊಟ್ಟ ನಂತರ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಾದರೆ ಅದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಇಲ್ಲದಿದ್ದರೆ, ನೀವು ಬೇಡ ಎಂದು ಗಟ್ಟಿಯಾಗಿ ಕುಳಿತುಕೊಂಡರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಸದನ ವ್ಯವಸ್ಥಿತವಾಗಿ ನಡೆಯಬೇಕು ಎನ್ನುವುದಾದರೆ, ಸ್ವಲ್ಪ ಹೊಂದಾಣಿಕೆಗಳ ಅವಶ್ಯಕತೆಗಳು ಇದೆ ಎಂದು ನನಗನಿಸುತ್ತಿದೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ರೂಲಿಂಗ್ ಕೊಟ್ಟಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಂತರ ಅವರು ಸ್ಪಷ್ಟೀಕರಣವನ್ನು ಕೇಳಲಿ. ಈಗಾಗಲೇ 40 ನಿಮಿಷಗಳ ಕಾಲ ಏನೆಲ್ಲಾ ಮಾತನಾಡಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಕಾನೂನು ಮಂತ್ರಿಗಳು ಏನೋ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇನ್ನು ಮಾತನಾಡುವವರು ಇದ್ದಾರೆ. ಇನ್ನು ಸಾಕಷ್ಟು ವಿಷಯಗಳ ಬಗ್ಗೆ ಹೇಳಬೇಕಾಗಿದೆ. ಇನ್ನು ಜೆಡಿ(ಎಸ್) ರವರು ಮಾತನಾಡಿಲ್ಲ. ಮಾನ್ಯ ಸಿ.ಟಿ.ರವಿರವರು ಮಾತನಾಡಿಲ್ಲ. ನಮ್ಮ ಕಡೆ 4-5 ಜನರು ಮಾತನಾಡಲಿ.

**ಉಪ ಸಭಾಪತಿಯವರು:-** ನೀವು ಒಮ್ಮತದ ಅಭಿಪ್ರಾಯ ಕೊಟ್ಟರೆ ಅವಕಾಶ ಕೊಡಲು ಪೀಠ ತಯಾರಿದೆ. ಅದನ್ನು ಬಿಟ್ಟು ruled out ಎಂದು ಮಾಡುವುದಕ್ಕೆ ಪೀಠ ತಯಾರು ಇಲ್ಲ. ನಿಮ್ಮ ಅವರ ಹೊಂದಾಣಿಕೆ ಮೇಲೆ ಚರ್ಚೆಗೆ ಅವಕಾಶಗಳು ಆಗಬೇಕು. ಸದನ ಸರಿಯಾಗಿ ನಡೆಯಬೇಕೆಂಬ ಉದ್ದೇಶಗಳು ಇದ್ದರೆ, ಅವರು ಕೇಳುರುವಂತಹ ಇಬ್ಬರಿಗೆ ಅವಕಾಶ ಮಾಡಿಕೊಡಬಹುದು ಎನ್ನುವುದು ನನ್ನ ಅನಿಸಿಕೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಬೇಡಿಕೆಗಳು ಏನಿದೆ ಎನ್ನುವುದು ನಮಗೂ ಗೊತ್ತಿತ್ತು. ತಾವು ಅದನ್ನು ಸ್ಪಷ್ಟಪಡಿಸಿದ್ದೀರಿ. ನಾನು ಸದನಕ್ಕೆ ಬಂದಾಗ ಗೌರವಾನ್ವಿತ ಸದಸ್ಯರಾದ ಐವನ್ ಡಿ'ಸೋಜಾ ರವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಿದ್ದರು. ಈಗಾಗಲೇ ಅವರಿಗೆ 40 ನಿಮಿಷಗಳು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಾದ ನಂತರ ಮಾನ್ಯ ಸಭಾಪತಿಯವರು ರೂಲಿಂಗ್ ಕೊಟ್ಟು ಚರ್ಚೆ ಪ್ರಾರಂಭ ಮಾಡಿ ಅವರು ಹೋಗಿದ್ದಾರೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರಲ್ಲಿ ಇಬ್ಬರು ಮಾತನಾಡುತ್ತಾರೋ, ಮೂರು ಮಂದಿ ಮಾತನಾಡುತ್ತಾರೋ ಗೊತ್ತಿಲ್ಲ. ಒಬ್ಬರು ಹೆಚ್ಚಿಗೆ ಮಾತನಾಡಿದರೂ ಸರ್ಕಾರದ ತಕರಾರು ಏನು ಇಲ್ಲ. ಆದರೆ, ಮಾನ್ಯ ಸಭಾಪತಿಯವರು ಕೊಟ್ಟಿರುವಂತಹ ರೂಲಿಂಗ್ ಪ್ರಕಾರ ಮಾನ್ಯ ಐವನ್ ಡಿ'ಸೋಜಾ ರವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರು ಮಾತನಾಡುವುದನ್ನು ಪೂರ್ಣಗೊಳಿಸಲಿ.

**ಉಪ ಸಭಾಪತಿಯವರು:-** ಮಾನ್ಯ ಮಂತ್ರಿಗಳೇ, ಒಂದು ಮನವಿಯೇನೆಂದರೆ, ತಾವು ಕಾನೂನು ಮಂತ್ರಿಗಳಿದ್ದೀರಿ. ನಾನು ತಮ್ಮ ಹತ್ತಿರ ಹೇಳುತ್ತಿದ್ದೇನೆ. ತಾವು ಹಿರಿಯರು, ಕಾನೂನಿನ ಬಗ್ಗೆ ತಿಳುವಳಿಕೆ ಇರುವವರು. ಆದ್ದರಿಂದ, ನಾನು ಪೀಠದಲ್ಲಿ ಇದ್ದರೂ ಕೂಡ ಕೇಳಬಾರದೆಂದೇನೂ ಇಲ್ಲ. ಇದರಲ್ಲಿ ಇಷ್ಟು ಜನ ಸದಸ್ಯರು ಸಹಿ ಹಾಕಿ ಮಾತನಾಡಬೇಕೆಂದು ಹೇಳಿದಾಗ ಅದರಲ್ಲಿ ಆಯ್ಕೆ ಮಾಡಿ 4-5 ಜನರು ಮಾತನಾಡುವುದಕ್ಕೆ ಅವಕಾಶ ಕೊಡುವಂತಹ ಕೆಲಸ ಮಾಡಬಹುದು ಎಂದು ಕಾನೂನಿನ ವ್ಯವಸ್ಥೆ, ನಿಯಮದಲ್ಲಿ ಇದೆ ಅಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ರೂಲಿಂಗ್ ಆಗಿದೆ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಾನು ರೂಲಿಂಗ್‌ಗೆ against ಆಗಿ ಮಾತನಾಡುತ್ತಿಲ್ಲ. ಆದರೆ, ಮಾನ್ಯ ಕಾನೂನು ಮಂತ್ರಿಗಳಲ್ಲಿ ಸ್ವಲ್ಪ ಏನಾದರೂ ಬದಲಾವಣೆ ಮಾಡಿ ಮಾಡಬಹುದೇ ಎನ್ನುವಂತಹದ್ದನ್ನು ಕೇಳುತ್ತಿದ್ದೇನೆ.

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ಸಂಪೂರ್ಣ ಅಧಿಕಾರ ತಮಗೆ ಇದೆ. ಆದರೆ, ಮಾನ್ಯ ಸಭಾಪತಿಯವರು ಮತ್ತೊಂದು ವಿಷಯಕ್ಕೆ ಹೋಗಿ ಎಂದು ಹೇಳಿದ ಮೇಲೆ ಅವರು ಅದನ್ನು ಬಿಡಬೇಕಾಗಿರುವುದು ಅವರ ಧರ್ಮ. ಆದಾಗ್ಯೂ ನಮ್ಮಿಂದ ಇಬ್ಬರು ಮಾತನಾಡಲಿ ಎಂದು ಹೇಳಿದ್ದಾರೆ. ಆದರೆ, ಸನ್ಮಾನ್ಯ ಐವನ್ ಡಿ'ಸೋಜಾ ರವರು ಮಾತನಾಡುತ್ತಿದ್ದಾರೆ. ಸರ್ಕಾರದ ಅಜೆಂಡಾ ಪ್ರಕಾರ ಸನ್ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಏನಿದೆ, ಅದರ ಬಗ್ಗೆ ಮೊದಲು ಮಾನ್ಯ ಐವನ್ ಡಿ'ಸೋಜಾ ರವರು ಮಾತನಾಡಲಿ. ನಂತರ ಮಾನ್ಯ ರಮೇಶ್ ಬಾಬು ರವರು ಅನುಮೋದಿಸುತ್ತಾರೆ. ಅದಾದ ಮೇಲೆ ಅವರಲ್ಲಿ ಇಬ್ಬರಲ್ಲ, ಆ ಪಟ್ಟಿಯಲ್ಲಿ ಎಷ್ಟು ಜನರಿಗೆ ಅವಕಾಶ ಕೊಡಬೇಕು ಎಂದು ಹೇಳುತ್ತಿರೋ, ಅದಕ್ಕೆ ನನ್ನದೇನೂ ತಕರಾರು ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಸಲಹೆ . . .

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಇದರಲ್ಲಿ ಎಲ್ಲೋ ಒಂದು ಕಡೆ ಸದನ ಸರಿಯಾದ ವ್ಯವಸ್ಥೆಯಲ್ಲಿ ನಡೆಯಬೇಕು ಎಂದಾಗ ವಿಷಯಾಂತರಗಳು ಆಗಬಾರದು. ಈಗ ಮಾನ್ಯ ಕಾನೂನು ಮಂತ್ರಿಗಳು ಹೇಳಿದ ಹಾಗೆ ಮತ್ತೆ ಅವರು ಮಾತನಾಡಿದ ಮೇಲೆ ಅವಕಾಶ ಮಾಡಿಕೊಡುವಂತಹ ಕೆಲಸವನ್ನು ಮಾಡಿಕೊಡುತ್ತೇವೆ. ಈಗ ಮಾನ್ಯ ಐವನ್ ಡಿ'ಸೋಜಾ ರವರು ಮಾತನಾಡಿದ್ದಾರೆ. ಮಾನ್ಯ ರಮೇಶ್ ಬಾಬು ರವರು . . .

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದು ವಿಷಯದ ಬಗ್ಗೆ ಚರ್ಚೆ ನಡೆಯುವಾಗ ಮತ್ತೊಂದು ವಿಷಯವನ್ನು ಮಧ್ಯದಲ್ಲಿ ಪ್ರಸ್ತಾಪ ಮಾಡಬಾರದು. ಅದಕ್ಕೆ ಅನುಮೋದನೆ ಕೊಡಬಾರದು. ಹಾಗಾಗಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ನಾವು ಈಗ ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರ ಸಂಬಂಧಪಟ್ಟ ಅಬಕಾರಿ ಇಲಾಖೆಯಲ್ಲಿ ಆಗಿರುವಂತಹ ಭ್ರಷ್ಟಾಚಾರ ಕುರಿತಂತೆ ಚರ್ಚೆ

ನಡೆಯುತ್ತಿದೆ. ಈಗ ಮಧ್ಯದಲ್ಲಿ ಬೇರೆ ವಿಷಯವನ್ನು ತೆಗೆದುಕೊಂಡು ಮಂಡನೆ ಮಾಡಿ, ಅದಕ್ಕೆ ಅನುಮೋದನೆ ಮಾಡುವಂತಹ ವಿಷಯ ಏನಿದೆ? ಬೇರೆ ವಿಷಯವನ್ನು ಮಧ್ಯದಲ್ಲಿ ತರುವಂತಹದ್ದು ಸರಿ ಅಲ್ಲ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಎನ್.ರವಿಕುಮಾರ್‌ರವರೇ, ಹಾಗಾದರೆ ಮಾನ್ಯ ಸಭಾಪತಿಯವರು ತಪ್ಪು ಮಾಡಿದಂತಾಯಿತು ಅಲ್ಲವೇ? ತಾವು ಹೇಳಿದ ಪ್ರಕಾರ ಈಗ ಪೀಠ ತಪ್ಪು ಮಾಡಿದಂತಾಯಿತು. ಅವರು ಪೀಠ ತಪ್ಪು ಮಾಡಿದೆ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಈ ವಿಷಯವನ್ನು ಮುಗಿಸಲಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, 16 ಕೋಟಿ ರೂಪಾಯಿಗಳು ಏನಾಯಿತು? ದಿನಕ್ಕೆ 16 . . .

**ಶ್ರೀ ಆರ್.ಬಿ.ತಿಮ್ಮಾಪೂರ್:-** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:-** ಮಾನ್ಯ ಸಿ.ಟಿ.ರವಿ ಯವರೇ ಮತ್ತು ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರೇ, ದಯಮಾಡಿ ಕುಳಿತುಕೊಳ್ಳಿ.

(ಮುಂದು)

**(41) 27.01.2026 5.00 ಹೆಚ್‌ವಿ.ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಿದ್ದರು ಎನ್ನುವ ವಿಚಾರವನ್ನು ಮಾನ್ಯ ಸಚಿವರು ಸಹ ಸ್ಪಷ್ಟಪಡಿಸಿದ್ದಾರೆ. ಮಾನ್ಯ ಸಭಾಪತಿಯವರು ರೂಲಿಂಗ್ ಕೊಟ್ಟ ಮೇಲೆ ನಾವು ತಮ್ಮ ಪೀಠಕ್ಕೆ ವಿರೋಧ ಮಾಡಿಲ್ಲ. ಆದರೆ, ನಮ್ಮ ಬೇಡಿಕೆ ಏನಿತ್ತು, ಅದು ಇನ್ನೂ ಚರ್ಚೆಯಲ್ಲಿಯೇ ಇತ್ತು. ಚರ್ಚೆ ನಡೆಯುತ್ತಿರುವಾಗಲೇ ಆಡಳಿತ ಪಕ್ಷದ ಮಾನ್ಯ ಸದಸ್ಯರು ಎದ್ದು ನಿಂತು ತಮ್ಮ ಮಾತುಗಳನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ನಮ್ಮ ವಿರೋಧವೇನೂ ಇಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು ಅನುಮತಿಯನ್ನು ಕೊಟ್ಟ ಮೇಲೆ ಅವರು ಎದ್ದು ನಿಂತು ಮಾತನಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಒಂದು ನಾವು ಅರ್ಥ ಮಾಡಿಕೊಳ್ಳಬೇಕು….

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನನಗೆ ಅರ್ಥವಾಗಿದೆ. ತಾವು ಒಂದು ನಿಮಿಷ ಕುಳಿತುಕೊಳ್ಳಿ. ಪೀಠ ಒಂದು ಸಾರಿ ಒಂದು ನಿರ್ಧಾರವನ್ನು ಹೇಳಿದೆ. ನಮ್ಮ ಸದನದ ಹಿತದೃಷ್ಟಿಯಿಂದ ಕೆಲವು ಅಂಶಗಳ ಬಗ್ಗೆ ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇರುತ್ತದೆ. ಆ ಕೆಲಸವನ್ನು ಪೀಠ ಮಾಡಬೇಕಾಗುತ್ತದೆ. ಆದ್ದರಿಂದ ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ ರೀತಿಯಲ್ಲಿ ಮಾನ್ಯ ರಮೇಶ್‌ಬಾಬುರವರು ಮಾತನಾಡಿದ ನಂತರ ತಮಗೆ ಅವಕಾಶವನ್ನು ಕೊಡುವಂತಹ ವ್ಯವಸ್ಥೆ ಮಾಡಲಾಗುತ್ತದೆ. ಒಮ್ಮೆ ಪೀಠ ನಿರ್ಧಾರ ಮಾಡಿದಂತೆ ಮಾನ್ಯ ಐವನ್ ಡಿ'ಸೋಜಾರವರು ಘನತೆವೆತ್ತ ರಾಜ್ಯಪಾಲರ ಭಾಷಣವನ್ನು ಮಂಡನೆ ಮಾಡಿದ್ದಾರೆ. ಮಾನ್ಯ ರಮೇಶ್‌ಬಾಬುರವರು ಅದನ್ನು ಅನುಮೋದಿಸಿ ಮಾತನಾಡಬೇಕಾಗಿದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷಗಳ ವಿರೋಧದ ನಡುವೆ ಆಗಿರುವಂತಹ ಚರ್ಚೆ ಅದು. ಅದಕ್ಕೆ ನಮ್ಮ ಸಮ್ಮತಿ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ತಮಗೆ ಮಾತನಾಡುವಂತಹ ಅವಕಾಶವನ್ನು ನೀಡುವ ವ್ಯವಸ್ಥೆ ಮಾಡಲಾಗುತ್ತದೆ.

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇಲ್ಲಿಯೇ ಇದ್ದಾರೆ. ಅವರು ಅಧಿವೇಶನದ ಪ್ರಾರಂಭದ ದಿನ "ಘನತೆವೆತ್ತ ರಾಜ್ಯಪಾಲರು ಸದನಕ್ಕೆ ಬಂದಾಗ, ಭಾಷಣ ಮಾಡದೇ ಹೊರಟು ಹೋದರು, ಭಾಷಣ ಮಾಡಲೇ ಇಲ್ಲ" ಎಂದು ಹೇಳಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:–** ಸನ್ಮಾನ್ಯ ಸಭಾಪತಿಯವರೇ, ಆ ರೀತಿ ನಾನು ಹೇಳಿಲ್ಲ. ಅವರು ಏನೇನೋ ಹೇಳುವುದು ಬೇಡ.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಅದು ರೆಕಾರ್ಡ್ ಆಗಿದೆ. ರೆಕಾರ್ಡ್ ತೆಗೆದು ನೋಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ, ಪೀಠ ಒಮ್ಮೆ ನಿರ್ಧಾರ ಮಾಡಿ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡನೆ ಮಾಡಲು ಶ್ರೀ ಐವನ್ ಡಿ'ಸೋಜಾ ಅವರಿಗೆ ಮಾತನಾಡಲು ಅವಕಾಶವನ್ನು ನೀಡಲಾಗಿದೆ. ಈಗ ನಾವು ಹಿಂದಕ್ಕೆ ಹೋಗಲು ಆಗುವುದಿಲ್ಲ. ಈಗಾಗಲೇ ಶ್ರೀ ಐವನ್ ಡಿ'ಸೋಜಾರವರು ಮಾತನಾಡಿಯಾಗಿದೆ. ಅದಕ್ಕೆ ಅನುಮೋದನೆ ನೀಡುವಂತಹ ಕೆಲಸ ಬಾಕಿ ಇದೆ. ಈಗ ಹಳೆಯ ವಿಚಾರ ಬೇಡ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರುಗಳು ಸಹಕಾರ ನೀಡಬೇಕು.

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಒಂದು ವಿಚಾರದ ಮೇಲೆ ಚರ್ಚೆ ಜಾರಿಯಲ್ಲಿರುವಾಗ, ಮತ್ತೊಂದು ವಿಚಾರಕ್ಕೆ ಹೇಗೆ ಅವಕಾಶವನ್ನು ನೀಡಲಾಗಿದೆ?

**(ಗೊಂದಲ)**

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ);–** ಸನ್ಮಾನ್ಯ ಸಭಾಪತಿಯವರೇ, ಒಂದು ವಿಚಾರದ ಮೇಲಿನ ಚರ್ಚೆ ಅಂತಿಮವಾಗುವುದಕ್ಕೂ ಮೊದಲು ಮತ್ತೊಂದು ವಿಚಾರವನ್ನು ತೆಗೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ?

**(ಗೊಂದಲ)**

**ಉಪ ಸಭಾಪತಿಯವರು:–** ತಾವು ಹೇಳಿರುವುದು ನನಗೆ ಅರ್ಥವಾಗಿದೆ. ತಾವು ಹೇಳಿದಂತಹ ಎಲ್ಲ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧಾರವನ್ನು ಮಾಡಿ, ಅದಕ್ಕೆ ಅವಕಾಶವನ್ನು ಮಾಡಿಕೊಡಲಾಗಿದೆ. ತದನಂತರ ಮಾನ್ಯ ವಿರೋಧ ಪಕ್ಷದನಾಯಕರೇ ಆ ವಿಚಾರವಾಗಿ ಚರ್ಚೆ ಮಾಡಲು ತಮಗೆ ಅವಕಾಶವನ್ನು

ಮಾಡಿಕೊಡಲಾಗುತ್ತದೆ. ದಯಮಾಡಿ ಈಗ ಯಾವ ವಿಚಾರದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ, ಅದನ್ನು ಮುಕ್ತಾಯ ಮಾಡೋಣ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು ಅವಕಾಶವನ್ನು ಕೊಡಬಹುದು. ಆದರೆ, ಇದು ಸರಿಯೇ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಒಂದು ವಿಚಾರದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಬರದೇ ಹೇಗೆ ಮತ್ತೊಂದು ವಿಚಾರವನ್ನು ಹೇಗೆ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ?

**ಉಪ ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ತಮಗೂ ಮಾತನಾಡುವುದಕ್ಕೆ ಅವಕಾಶವನ್ನು ನೀಡಲಾಗುತ್ತದೆ. ಈಗ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಾಗಿದೆ. ಪೀಠದ ನಿರ್ಣಯದ ವಿರುದ್ಧ ಮಾತನಾಡುವುದಕ್ಕೆ ಬರುವುದಿಲ್ಲ. ಒಮ್ಮೆ ಒಂದು ನಿರ್ಧಾರವನ್ನು ತೆಗೆದುಕೊಂಡ ಮೇಲೆ ಆ ನಿರ್ಧಾರಕ್ಕೆ ಪೀಠವೂ ಬದ್ಧವಾಗಿರುತ್ತದೆ. ಆ ಬದ್ಧತೆಯನ್ನು ಪೂರೈಸಿದ ಮೇಲೆ ನಿಮಗೆ ಅವಕಾಶವನ್ನು ನೀಡಲಾಗುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ ಮತ್ತು ಮಾನ್ಯ ಎಸ್.ಎಲ್.ಭೋಜೇಗೌಡರೇ ದಯವಿಟ್ಟು ಸಹಕಾರ ನೀಡಿ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ(ಅಬಕಾರಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ,...... ನನಗೆ ಒಂದು ನಿಮಿಷ ಮಾತನಾಡಲು ಅವಕಾಶವನ್ನು ನೀಡಿ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ. ತಮಗೆ ಅವಕಾಶವನ್ನು ನೀಡಿದಾಗ ತಾವು ಮಾತನಾಡಿ. ತಾವು ಸಮರ್ಥಿಸಿಕೊಳ್ಳುವುದಕ್ಕೂ ತಮಗೆ ಅವಕಾಶವಿದೆ. ಅವರುಗಳು ಸಂಪೂರ್ಣ ಮಾತನಾಡಿದ ಮೇಲೆ ತಮಗೆ ಅವಕಾಶವನ್ನು ನೀಡಲಾಗುತ್ತದೆ. ಮಾನ್ಯ ತಿಮ್ಮಾಪುರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ ತಾವು ಹೇಳಬೇಕು. ತಮಗೆ ಅವಕಾಶವನ್ನು ನಾನು ನೀಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಘೋಷಣೆಯನ್ನು ಕೂಗಿದರು)**

**ಶ್ರೀ ಎನ್.ಎಸ್.ಬೋಸರಾಜು:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುವುದಕ್ಕೆ ಅವಕಾಶವನ್ನು ನೀಡುತ್ತಿಲ್ಲ. ಸದನವು ವ್ಯವಸ್ಥಿತ ರೀತಿಯಲ್ಲಿ ಇಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರ ಸಲಹೆಯನ್ನು ತೆಗೆದುಕೊಂಡು ಇನ್ನು ಇದಕ್ಕಿಂತ ಮೀರಿ ನಿಮ್ಮ ವಿವೇಚನೆಗೆ ಬಿಡಲಾಗುತ್ತದೆ. ಪೀಠ ಏನು ಮಾಡಬಹುದು, ಸದನವನ್ನು ವ್ಯವಸ್ಥಿತವಾಗಿ ನಡೆಸುವಂತಹ ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಅದನ್ನು ಮಾಡಲಾಗುತ್ತಿದೆ. ಅದನ್ನು ಬಿಟ್ಟು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವಂತಹ ಕೆಲಸವನ್ನು ಮಾಡಿ ಎಂದು ನಿಮಗೆ ಹೇಳಲಾಗಿದೆ. ತದನಂತರ, ಮಾನ್ಯ ವಿರೋಧ ಪಕ್ಷದವರಿಗೂ ಅವಕಾಶವನ್ನು ನೀಡಲಾಗುತ್ತದೆಂದು ಹೇಳಲಾಗಿದೆ. ಇದನ್ನೂ ಮೀರಿ ಹೋದರೆ, ಏನು ಮಾಡುವುದಕ್ಕೆ ಸಾಧ್ಯ? ಏನು ಮಾಡುವುದಕ್ಕೂ ಆಗುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರ ಮಾಡಿ ಭಂಡತನದಿಂದ ಬಂದು ಇಲ್ಲಿ ಕುಳಿತುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಗೌರವ ತರುವಂತಹ ಲಕ್ಷಣಗಳಲ್ಲ. ಭ್ರಷ್ಟಾಚಾರವನ್ನು ಸಮರ್ಥನೆ ಮಾಡಿಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಗೌರವ ತರುವ ಸಂಗತಿಯಲ್ಲ.

**(ಗೊಂದಲ)**

**(ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾತನಾಡಿ ಮುಗಿದಿದೆಯೇ? ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ನಾನು ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು. ಪೂರ್ತಿ ಮಾತನಾಡಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ತಾವು ಅವಕಾಶವನ್ನು ನೀಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ವಸಂತಕುಮಾರ್ ಎ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ವಿಷಯವನ್ನು ಮಂಡನೆ ಮಾಡಿದ್ದಾರೆ. ಮಾನ್ಯ ರಮೇಶ್ ಬಾಬುರವರು ಅನುಮೋದನೆ ಮಾಡಬೇಕಾಗಿದೆ.

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯವನ್ನು ಮಂಡಿಸಿದ್ದಾರೆ. ಮಾನ್ಯ ರಮೇಶ್‌ಬಾಬುರವರು ಅದನ್ನು ಅನುಮೋದಿಸಿದ್ದಾರೆ. ಅದರ ಮೇಲೆ ಚರ್ಚೆಯಾಗಬೇಕಾಗಿದೆ. ಮಾನ್ಯ ಐವನ್ ಡಿ'ಸೋಜಾರವರು ಅರ್ಧ ಮಾತನಾಡಿದ್ದಾರೆ, ಇನ್ನೂ ಮಾತನಾಡಬೇಕಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನನಗೆ ಮತ್ತೊಮ್ಮೆ ಎರಡನೆಯ ಬಾರಿಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇವತ್ತು ರಾಜ್ಯ ಸರ್ಕಾರ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ರಾಜ್ಯದ ಆರ್ಥಿಕ ಸ್ಥಿತಿಗೆ ಕೇಂದ್ರ ಸರ್ಕಾರ ಸಹಕಾರವನ್ನು ನೀಡದೇ ಇದ್ದರೂ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸಿದರೂ ಇವತ್ತು ರಾಜ್ಯ ಸರ್ಕಾರ .......

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿದರು)**

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಘೋಷಣೆಗಳನ್ನು ಕೂಗಿದರೆ ಹೇಗೆ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೇ, ತಾವು ಹೇಳಿದಂತೆ ಹೇಳಿದ್ದೇನೆ. ಇನ್ನೂ ಅದಕ್ಕಿಂತ ಮೀರಿ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ?

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ತಾವು ಹೇಳಿರುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಐವನ್ ಡಿ'ಸೋಜಾ ಮತ್ತು ರಮೇಶ್ ಬಾಬುರವರು ಮಾತನಾಡಿದ ಮೇಲೆ ಆ ಕಡೆಯ ಇಬ್ಬರು ಸದಸ್ಯರು ಮಾತನಾಡುವುದಕ್ಕೆ ಒಪ್ಪಿದ್ದೇವೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರು ಅದನ್ನು ಒಪ್ಪುತ್ತಿಲ್ಲ. ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಅದನ್ನು ಕನ್ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಅದಕ್ಕೂ ಒಪ್ಪುತ್ತಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು(ತಮ್ಮ ಪೀಠದಿಂದ ಎದ್ದು ನಿಂತು):–** ಮಾನ್ಯ ಸಿ.ಟಿ.ರವಿಯವರೇ ಮತ್ತು ಮಾನ್ಯ ಎನ್.ರವಿಕುಮಾರ್ ಮತ್ತು ಕೆ.ಎಸ್.ನವೀನ್‌ರವರೇ, ಎಲ್ಲರೂ ಕುಳಿತುಕೊಳ್ಳಿ. ದಯವಿಟ್ಟು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ ಪೀಠ ಒಂದು ಅದೇಶವನ್ನು ನೀಡಿದೆ. ಅದು ಎಲ್ಲರಿಗೂ ಗೊತ್ತಿದೆ. ಅದರ ಪ್ರಕಾರ ಅವರಿಬ್ಬರ ಮಾತುಗಳನ್ನು ಮುಗಿಸಿದ ನಂತರ ನಿಮ್ಮಗಳಿಗೆ ಅವಕಾಶವನ್ನು ಖಂಡಿತವಾಗಿಯೂ ಮಾಡಿಕೊಡಲಾಗುತ್ತದೆ. ಈ ನೋಟೀಸ್‌ಗೆ ಯಾರ ಸಹಿ ಮಾಡಿದ್ದೀರಿ ಮತ್ತು ಯಾರು ಹೆಸರು ಕೊಟ್ಟಿದ್ದೀರಿ ಅವರೆಲ್ಲರಿಗೂ ಮಾತನಾಡಲು ಖಂಡಿತವಾಗಿಯೂ ಅವಕಾಶವನ್ನು ಮಾಡಿಕೊಡಲಾಗುತ್ತದೆ. ಈ ಅವಕಾಶದಿಂದ ತಾವು ಏತಕ್ಕೋಸ್ಕರ ವಂಚಿತರಾಗುತ್ತಿದ್ದೀರಿ? ಈಗ ಇಲ್ಲವೆಂದು ಹೇಳಿದರೆ, ನಿಮಗೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ

ಮಾನ್ಯ ಮಾನ್ಯ ಸಭಾಪತಿಯವರು ಐವನ್ ಡಿ'ಸೋಜಾರವರ ಹೆಸರನ್ನು ಕರೆದಿದ್ದಾರೆ, ವಂದನಾ ನಿರ್ಣಯವನ್ನು ಮಂಡನೆ ಮಾಡಿ, ಅದನ್ನು ಅನುಮೋದನೆ ಮಾಡಿದ ನಂತರ ತಮಗೆ ಅವಕಾಶವನ್ನು ನೀಡಲಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ವಿಷಯ ಮುಗಿದ ನಂತರ ಆ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸರ್ಕಾರ ಉತ್ತರ ಕೊಟ್ಟ ನಂತರ ಆ ವಿಷಯವನ್ನು ತೆಗೆದುಕೊಳ್ಳಬೇಕಾಗಿತ್ತು.

**ಉಪ ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ಪೀಠ ಎದ್ದು ನಿಂತಾಗ, ನೀವು ಯಾರೂ ಎದ್ದು ನಿಲ್ಲಬಾರದು. ಕೂತ ನಂತರ ಎದ್ದು ನಿಂತು ಮಾತನಾಡಿ. ನಾನು ಹೇಳುವುದನ್ನು ಪೂರ್ಣವಾಗಿ ಕೇಳಿಸಿಕೊಳ್ಳಿ. ನಿಮಗೆ ಏನಾದರೂ ಹೇಳಬೇಕು ಅನಿಸಿದರೆ, ನಾನು ಕುಳಿತ ನಂತರ ಎದ್ದು ನಿಂತು ಹೇಳಿ. ಖಂಡಿತವಾಗಿಯೂ ಎಲ್ಲರಿಗೂ ಮಾತನಾಡಲು ಅವಕಾಶವನ್ನು ನೀಡಲಾಗುತ್ತದೆ. ಚರ್ಚೆ ಆಗಬೇಕು, ಚರ್ಚೆ ಆಗಬಾರದೆಂದು ಹೇಳುತ್ತಿಲ್ಲ. ಈಗಾಗಲೇ ಪೀಠ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಅದರಂತೆ ಅವರ ಹೆಸರನ್ನು ಕರೆದಿದೆ. ಅದನ್ನು ಮುಗಿಸೋಣ. ಪೀಠ ಹೇಳಿರುವುದಕ್ಕೆ ವಿರುದ್ಧವಾಗಿ ಆಗಿದೆ ಎನ್ನುವಂತೆ ಆಗಬಾರದು. ಅವರುಗಳು ತಮ್ಮ ಮಾತುಗಳನ್ನು ಮುಗಿಸಿದ ಮೇಲೆ ತಮಗೆ ಅವಕಾಶವನ್ನು ನೀಡಲಾಗುತ್ತದೆ. ತಾವು ಕೊಟ್ಟಿರುವ ನೋಟೀಸ್‌ಗೆ ಯಾರ್ಯಾರು ಸಹಿಯನ್ನು ಹಾಕಿದ್ದೀರಿ ಎಂದು ನಾನು ನೋಡಿದ್ದೇನೆ. ಇದರಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮಾತನಾಡುವುದಕ್ಕೆ ಪೀಠ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಈಗ ದಯಮಾಡಿ ಸಹಕರಿಸಿ. ಮಾನ್ಯ ಐವನ್ ಡಿ'ಸೋಜಾರವರು ತಮ್ಮ ಮಾತುಗಳನ್ನು ಬೇಗ ಮುಗಿಸಿದರೆ, ಮಾನ್ಯ ರಮೇಶ್‌ಬಾಬುರವರು ಅದನ್ನು ಅನುಮೋದನೆ ಮಾಡಿದ ನಂತರ ತಮಗೆ ಅವಕಾಶವನ್ನು ನೀಡಲಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾವು ಪೀಠದ ನಿರ್ಣಯದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ನಮಗೆ ಚರ್ಚೆಗೆ ಅವಕಾಶವನ್ನು ಕೊಟ್ಟ ನಂತರ, ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದಾಗ, ಪೀಠ, "ಆಯಿತು ಇದು ಚರ್ಚೆಯಾಗುತ್ತಿದೆ. ಮಂಡನೆ ಮಾಡಲಿ" ಎಂದು ಹೇಳಿತ್ತು. "ಚರ್ಚೆ ಪ್ರಾರಂಭ ಮಾಡಿ" ಎಂದು ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಅವರು ಮಂಡನೆ ಅಷ್ಟೇ ಮಾಡಬೇಕಾಗಿದೆ. ನಮ್ಮ ವಿಚಾರ ಚರ್ಚೆ ಮಾಡಿ ಮುಗಿದ ನಂತರ ಅವರು ಚರ್ಚೆ ಪ್ರಾರಂಭ ಮಾಡಬೇಕು.

(ಮುಂದುವರಿದಿದೆ)

(42) 27.1.2026 5.10 ಪಿಕೆ:ಕೆಎಸ್ (ಉಪಸಭಾಪತಿಗಳ ಉಪಸ್ಥಿತಿ)

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿಸೋಜಾರವರೇ ನಿಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ . . . .

**(ಗೊಂದಲ)**

**12. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ದಿನಾಂಕ 22ರಂದು ಆದ ನಡವಳಿಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ರಾಜ್ಯಪಾಲರ ಭಾಷಣದ ಪ್ರತಿಯನ್ನು lay ಮಾಡಿದ್ದೇವೆ ಎಂದು ಹೇಳಿದ ಮರು ಘಳಿಗೆಯಲ್ಲೇ ಆ ಕುರಿತು ನಾನು ಮೊದಲು ಪ್ರಶ್ನೆ ಮಾಡಿದೆ. ನಂತರ ಇತರ ಸದಸ್ಯರು ಪ್ರಶ್ನೆ ಮಾಡಿದರು. ಆಗ ಸಭಾನಾಯಕರು ಏನು ಮಾತನಾಡಿದರು ಎನ್ನುವ ವಿಚಾರ ನಡವಳಿಯಲ್ಲಿದೆ. ನಾನು ಅದನ್ನು ಓದುತ್ತೇನೆ. ಪ್ರಸ್ತುತ ವಿಚಾರವನ್ನು ಪೀಠ ಡೈವರ್ಟ್ ಮಾಡಿ ಬೇರೆ ವಿಷಯವನ್ನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದನ್ನು ಏಕೆ ವಿರೋಧ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ನಿಮಗೆ ತಿಳಿಸಬೇಕಿದೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಗಳು ಒಂದು ರೂಲಿಂಗ್ ಕೊಟ್ಟಿದ್ದಾರೆ. ಅದರ ಮೇಲೆ ಚರ್ಚೆ ಮಾಡುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ದಿಕ್ಕು ತಪ್ಪಿಸಬೇಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಪೀಠ ಒಂದು ಸಾರಿ . . . . **(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:–** ಈ ಬಗ್ಗೆ ಅವರ Chamber ನಲ್ಲಿ ಚರ್ಚೆ ಮಾಡಿ. ಪೀಠ ಒಂದು ಸಲ ತೀರ್ಪು ಕೊಟ್ಟಮೇಲೆ ಅದರ ಮೇಲೆ ಚರ್ಚೆ ಮಾಡುವುದು ಸಾಧುವಲ್ಲ. ಇಲ್ಲದಿದ್ದರೆ ನೀವು ಆವಾಗಲೇ ಈ ಕುರಿತು ಪ್ರಸ್ತಾಪ ಮಾಡಬೇಕಾಗಿತ್ತು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಹೇಳಿದ್ದು ಸರಿ ಎಂದು ಹೇಳುವುದಾದರೆ ಆ ಕುರಿತು justification ಕೊಡಲಿ. ಸಭಾಪತಿಯವರು ಆ ಪೀಠದಿಂದ ಏನು ಹೇಳಿದ್ದಾರೆ ಎನ್ನುವುದನ್ನು ಓದುತ್ತೇನೆ. "ಮಾನ್ಯ ಕಾರ್ಯದರ್ಶಿಯವರು ಘತನೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುವುದು" ಆಗ ಕಾರ್ಯದರ್ಶಿಗಳು " ಮಾನ್ಯ ಸಭಾಪತಿಗಳೆ, ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ" ಎಂದು ಹೇಳಿದರು. **(ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಕನ್ನಡ ಮತ್ತು ಆಂಗ್ಲ ಭಾಷೆಯ**

**ಪ್ರತಿಗಳನ್ನು ಲಗತ್ತಿಸಲಾಗಿದೆ)** ಆಗ ಮಾನ್ಯ ಸಭಾನಾಯಕರು ಎದ್ದು ನಿಂತು, "ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಇವತ್ತು ವಿಧಾನಮಂಡಲದಲ್ಲಿ ನಡೆದುಕೊಂಡ ರೀತಿಯನ್ನು ನಾವು [XXX]. ಅವರು ಸಂವಿಧಾನದ ಅನುಚ್ಛೇದ 163 ಮತ್ತು 176ಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇಡೀ ಕರ್ನಾಟಕದ ಜನತೆಗೆ ಮತ್ತು ವಿಧಾನ ಮಂಡಲಕ್ಕೆ ಅಗೌರವವನ್ನು ತೋರಿಸಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಂಡಿದ್ದಾರೆ" ಎಂದು ಹೇಳಿದರು. ಆಗ ನಾನು ಎದ್ದು ನಿಂತು "ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ನಡೆದುಕೊಂಡ ರೀತಿ ಸರಿಯಿಲ್ಲ ಎಂದು ಹೇಳಿದ ಮೇಲೆ ಕಾರ್ಯದರ್ಶಿಯವರು ಹೇಗೆ ಅವರ ಭಾಷಣದ ಪ್ರತಿಯನ್ನು ಮಂಡನೆ ಮಾಡುವುದಕ್ಕೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ" ಎಂದು ಹೇಳಿದೆ. ಈ ವಿಷಯ ಇಲ್ಲಿಗೆ ನಿಂತಿದೆ. ಹೀಗಿರುವಾಗ ಅವರಿಗೆ ಈ ವಿಚಾರದ ಮೇಲೆ ಚರ್ಚೆ ಮಾಡುವುದಕ್ಕೆ ಹೇಗೆ ಅವಕಾಶ ಮಾಡಿಕೊಡುತ್ತೀರಿ? ಮಾನ್ಯ ಸಭಾನಾಯಕರು, ನಾನು ಹಾಗೆ ಮಾತನಾಡಿಲ್ಲ, ಆ ರೀತಿ ಮಾತನಾಡಿದ್ದರೆ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ, ನಾನು ರಾಜ್ಯದ ಜನರಲ್ಲಿ ಕ್ಷಮೆ ಕೇಳುತ್ತೇನೆ ಎಂದು ಹೇಳಲಿ. ಇದರ ಬಗ್ಗೆ ಸಭಾನಾಯಕರು ಸ್ಪಷ್ಟನೆ ಕೊಡಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಇದರ ಮೇಲೆ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ, ತಮ್ಮ ಭಾಷಣದ ಮೊದಲ ಮತ್ತು ಕೊನೆಯ ವಾಕ್ಯವನ್ನು ಹೇಳಿದ್ದಾರೆ. ಈಗ ಅದನ್ನು read and recorded ಎಂದು ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ, ಪೀಠ ಆದೇಶ ಕೊಟ್ಟಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರವರು ಎತ್ತಿರುವ ಪ್ರಶ್ನೆಗೆ ಮಾನ್ಯ ಸಭಾನಾಯಕರು ಉತ್ತರ ಕೊಡಬೇಕು.

**(ಗೊಂದಲ)**

**ಶ್ರೀ ಎನ್. ಚೆಲುವರಾಯಸ್ವಾಮಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಾಡುವುದಕ್ಕೆ ಪೀಠ ಆದೇಶ ಕೊಟ್ಟಿದೆ. ಸದನ ನಡೆಯಬಾರದು ಎನ್ನುವ ಉದ್ದೇಶಕ್ಕೆ ವಿರೋಧ ಪಕ್ಷದ ಸದಸ್ಯರು ಹೀಗೆ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸಭಾನಾಯಕರು ಹೇಳಿದ ಮಾತಿಗೆ ಬೆಲೆ ಇಲ್ಲವೇ? ಅಥವಾ ಆ ರೀತಿ ಮಾತನಾಡಿಲ್ಲ ಎಂದು ಸಭಾನಾಯಕರು ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸಭಾನಾಯಕರ ಮಾತನ್ನು ತಿರಸ್ಕಾರ ಮಾಡುತ್ತೀರಾ? ಸಭಾನಾಯಕರ ಮಾತಿಗೆ ಗೌರವ ಕೊಡಬೇಡವೇ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಇದರ ಮೇಲೆ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ.

**ಶ್ರೀ ಕೆ.ಪ್ರತಾಪ್‌ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಐವನ್ ಡಿಸೋಜಾರವರು, ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದರು. ಆದರೆ, ಅವರ ಕಡೆಯಿಂದ ರಾಜ್ಯಪಾಲರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿ ಕೊಟ್ಟ ಮನವಿಯ ಮೇಲೆ ಮಾನ್ಯ ಸಭಾಪತಿಗಳು ರೂಲಿಂಗ್ ಕೊಟ್ಟಿದ್ದಾರೆಯೇ ಹೊರತು, ಸಭಾನಾಯಕರು ಏನು ಮಾತನಾಡಿದ್ದಾರೋ ಅದರ ಬಗ್ಗೆ ರೂಲಿಂಗ್ ಕೊಟ್ಟಿಲ್ಲ. ಅವರ ಮಾತು ಇವತ್ತಿಗೂ ಕಡತದಲ್ಲಿ ಇದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ನಾನು ರಾಜ್ಯಪಾಲರ ಬಗ್ಗೆ ಹಾಗೆ ಮಾತನಾಡಲಿಲ್ಲ ಎಂದು ಮಾನ್ಯ ಸಭಾನಾಯಕರು ಹೇಳಲಿ. ಅವರು ಏನು ಮಾತನಾಡಿದ್ದಾರೆ ಎನ್ನುವುದಕ್ಕೆ ನಾನು proof ಕೊಟ್ಟಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರು ದೊಡ್ಡ ವಕೀಲರು. ಈ ಸದನ ಇವತ್ತು ಒಂದು ಗಂಭೀರವಾದ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದೆ. ಸಭಾನಾಯಕರು ಈ ರೀತಿ ಹೇಳಿದರು ಎನ್ನುವುದರ ಮೇಲೆ ನೀವು ಚರ್ಚೆ ಮಾಡಬೇಕು ಎಂದು ಹೇಳುತ್ತಿದ್ದೀರಿ. ಕೆಲವು ಸಂದರ್ಭದಲ್ಲಿ ಚರ್ಚೆ ಮಾಡಲೇ ಬೇಕಾಗುತ್ತದೆ. ಒಂದು ಸದನದ ಸಭಾನಾಯಕರು ಸಂವಿಧಾನವನ್ನು ಎತ್ತಿ ಹಿಡಿಯಬೇಕು ಅಥವಾ ಅದರ ರಕ್ಷಣೆಗೆ ಬರಬೇಕು ಅಥವಾ ಅದನ್ನು ಉಲ್ಲಂಘನೆ ಮಾಡಿರುವಂತಹ ಕ್ರಮಗಳನ್ನು ಟೀಕಿಸಬೇಕೇ ಅಥವಾ ಟೀಕಿಸಬಾರದೇ; ಒಂದು ವೇಳೆ ಸಂವಿಧಾನದ ರೀತ್ಯಾ ಇರುವಂತಹ provision ಗಳನ್ನು ಅಥವಾ Supreme Court and High Court ಕೊಟ್ಟಿರುವ ತೀರ್ಪುಗಳನ್ನು ಈ ಸದನ ಬಿಟ್ಟರೆ ಇನ್ಯಾರೂ ಚರ್ಚೆ ಮಾಡುತ್ತಾರೆ? ಮಾನ್ಯ ಬೋಸರಾಜುರವರು ಏನು ಸ್ಟೇಟ್‌ಮೆಂಟ್ ಮಾಡಿದರೋ ಅದರ ಮೇಲೆ ಚರ್ಚೆ ಮಾಡಿ. ಎಲ್ಲರೂ ಪಾಲ್ಗೊಳ್ಳೋಣ. ಅಂತಿಮವಾಗಿ ಅದರಲ್ಲಿ ಏನು ಅಮೃತ ಬರುತ್ತದೆಯೋ, that should be the guiding spirit to the whole of the nation. ಇದು ಕರ್ನಾಟಕದಲ್ಲಿ ಮಾತ್ರವಲ್ಲ, ತೆಲ್ಲಂಗಾಣ, ತಮಿಳುನಾಡು, ಕೇರಳ ಮತ್ತು ಪಂಜಾಬ್ ರಾಜ್ಯಗಳಲ್ಲೂ ಕೂಡ ನಡೆದಿದೆ. ಇದು ಏಕೆ ನಡೆದಿದೆ? There is something missing, ಆ ಕಾರಣಕ್ಕೆ ನಾವು ಚರ್ಚೆ ಮಾಡಲೇ ಬೇಕು. ಮಾನ್ಯ ಭೋಸರಾಜುರವರು, ಇಲ್ಲ; ನಾನು ಆ ರೀತಿ ಹೇಳಲಿಲ್ಲ

ಎಂದು ಹೇಳುತ್ತಿಲ್ಲ. He stands by what he has said. It is on record. ಅದರ ಬಗ್ಗೆ ಚರ್ಚೆ ಮಾಡಲು ಎರಡು ಗಂಟೆ ಸಮಯವನ್ನು ನಿಗದಿ ಮಾಡಿಬಿಡಿ. ನಾವು ಅದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರೋಣ. ಅದನ್ನು ಯಾರೂ ಕೂಡ ಅಲ್ಲಗಳೆಯುವುದಿಲ್ಲ. ಆದರೆ, ಈ ಸಂದರ್ಭದಲ್ಲಿ, ತಾವೇನು ಘೋಷಣೆ ಮಾಡುತ್ತಿದ್ದೀರೋ ಅದನ್ನು ಬಿಟ್ಟು, ಮಾನ್ಯ ಐವನ್ ಡಿಸೋಜಾ ಅವರ ಮಾತನ್ನು ಕೇಳಿ. ಮಾನ್ಯ ರಮೇಶ್ ಬಾಬು ಅವರ ಮಾತುಗಳನ್ನು ಕೇಳಿ. ನಂತರ ಅಬಕಾರಿ ಸಚಿವರಾದ ಮಾನ್ಯ ತಿಮ್ಮಾಪುರರವರು ಉತ್ತರ ಕೊಡುತ್ತಾರೆ. ಈ ಕುರಿತು ಮತ್ತೆ ನೀವು ಮಾತನಾಡಿದ ಮೇಲೆ ಪೀಠ ಹೇಗೆ ನಿರ್ಣಯ ಕೊಡುತ್ತದೆಯೋ ಆ ರೀತಿ ಮಾಡಬಹುದು. ಮಾನ್ಯ ತಿಮ್ಮಾಪುರರವರಿಗೆ ಉತ್ತರ ಕೊಡಲು ಅವಕಾಶ ಮಾಡಿಕೊಡಬೇಕು. ಚರ್ಚೆಯನ್ನು conclude ಮಾಡದೆಯೇ ಘೋಷಣೆ ಕೂಗುವಂಥದ್ದು ಸರಿಯಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ಆಡಳಿತ ಪಕ್ಷದವರಿಗೆ ಸಹನೆ ಇರಬೇಕು. ಮಾನ್ಯ ಸಭಾನಾಯಕರ ಅನುಭವದ ಬಗ್ಗೆ ನಮಗೆ ಅಪಾರ ಗೌರವ ಇದೆ. ಅವರು ತುಂಬಿದ ಸಭೆಯಲ್ಲಿ 3–4 ಸಲ, ನಾನು ಆ ರೀತಿ ಮಾತನಾಡಿಲ್ಲ ಎಂದು ಒತ್ತಿ ಒತ್ತಿ ಹೇಳಿದ್ದಾರೆ. ಅವರು ಏನು ಮಾತನಾಡಿದ್ದಾರೆ ಎನ್ನುವ ಬಗ್ಗೆ ನೋಟ್ ಕೊಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ಸಭಾನಾಯಕರು ತಿರಸ್ಕಾರ ಮಾಡಿದ ಮೇಲೆ ಸದಸ್ಯರು ಹೇಗೆ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಆಗುತ್ತದೆ? ಸಭಾನಾಯಕರು ತಿರಸ್ಕಾರ ಮಾಡಿದ್ದಾರೆ. ಅವರು ತಿರಸ್ಕಾರ ಮಾಡಿದ ಮೇಲೆ ರೂಲಿಂಗ್ ಪಾರ್ಟಿಯವರು ಹೇಗೆ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತೀರಿ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ನೀವು ಹೇಗೆ lay ಮಾಡುತ್ತೀರಿ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಗಳೆ, ಈ ವಿಷಯವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ನಾವೇನು ಮಾತನಾಡಿದ್ದೇವೆ; ಅವರೇನು ಮಾತನಾಡಿದ್ದಾರೆ ಎನ್ನುವುದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ರಾಜ್ಯಪಾಲರ ಭಾಷಣವನ್ನು ಮಾನ್ಯ ಸಭಾನಾಯಕರು ತಿರಸ್ಕರಿಸಿದ ಮೇಲೆ ನೈತಿಕವಾಗಿ ವಂದನಾ ನಿರ್ಣಯವನ್ನು ಮಂಡಿಸುವುದಕ್ಕೆ ಆಗುತ್ತದೆಯೇ ದಯವಿಟ್ಟು ಹೇಳಬೇಕು. ಅವರು ತಿರಸ್ಕಾರ ಮಾಡಿದ್ದಾರೆ. ಹಾಗಿದ್ದರೆ ಆಡಳಿತ ಪಕ್ಷದ ಸದಸ್ಯರಿಗೆ ಸಭಾನಾಯಕರ ಮಾತಿನ ಬಗ್ಗೆ ತಿರಸ್ಕಾರ ಇದೆಯೇ ಎನ್ನುವುದರ ಬಗ್ಗೆಯಾದರೂ ಹೇಳಲಿ. ನಾವು ಸಭಾನಾಯಕರ ಮಾತನ್ನು ಒಪ್ಪುವುದಿಲ್ಲ ಎಂದು ಹೇಳಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಕಾನೂನು ಸಚಿವರಾದ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇಲ್ಲಿ ಕುಳಿತುಕೊಂಡಿದ್ದಾರೆ. ಸಭಾನಾಯಕರಿಗೆ ನಾನು ಮತ್ತೊಮ್ಮೆ ಎಲ್ಲರ ಪರವಾಗಿ ವಿನಂತಿ ಮಾಡುತ್ತೇನೆ. ನನ್ನ ಪ್ರಶ್ನೆ ಇಷ್ಟೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ಆಡಳಿತ ಪಕ್ಷದವರು ವಂದನಾರ್ಪಣ ಪ್ರಸ್ತಾವವನ್ನು ಮಾಡುತ್ತಿದ್ದಾರೆ.

(ಮುಂದು)

(43) 27-1-2026 5.20 ಡಿಎಸ್-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಪ್ರಸ್ತಾವವನ್ನು ಮಾನ್ಯ ಐವನ್ ಡಿ'ಸೋಜಾರವರು ಸೂಚಿಸುವಂಥದ್ದು, ಮಾನ್ಯ ರಮೇಶ್ ಬಾಬುರವರು ಅನುಮೋದಿಸುವಂಥದ್ದು. ಸೂಚಿಸುವುದು, ಅನುಮೋದಿಸುವುದು ಯಾವಾಗ? ಮಾನ್ಯ ಸಭಾನಾಯಕರು ಅದಕ್ಕೆ ಅಸಮ್ಮತಿಯನ್ನು ಸೂಚಿಸಿದ ಮೇಲೆ ಆಡಳಿತ ಪಕ್ಷದವರು ಸೂಚಿಸುವುದು, ಅನುಮೋದಿಸುವುದು ಹೇಗಾಗುತ್ತದೆ? ಪೀಠ ಮಂಡಿಸಿದೆ. ಪೀಠ ಮಂಡಿಸಿರುವ ಬಗ್ಗೆ ನಮ್ಮದು ತಕರಾರು ಇಲ್ಲ. ಮಂಡಿಸಿದ ಮೇಲೆ ಮಾನ್ಯ ಸಭಾನಾಯಕರು ಇದನ್ನು ಎತ್ತಿದ ಮೇಲೆ ಅವರು ಹೇಗೆ ಸೂಚಿಸುತ್ತಾರೆ, ಅನುಮೋದಿಸುತ್ತಾರೆ, ಯಾವ ಕಾನೂನಿನ ಅಡಿಯಲ್ಲಿ ಅನುಮೋದಿಸುತ್ತಾರೆ ಎಂಬುದನ್ನು ಹೇಳಲಿ, ಇದು ನಮಗೆ ಬೇಕಾಗಿರುವಂಥದ್ದು. ಮಾನ್ಯ ಸಭಾನಾಯಕರು ಹೇಳಿಬಿಡಲಿ. ಅದೇನು ಇದೆ ಅದನ್ನು ಓದಿ ಹೇಳಲಿ. ನಾನು ನಿಮಗೆ ಪ್ರತಿಯನ್ನು ಕೊಟ್ಟಿದ್ದೇನೆ. ಅದನ್ನು ಅವರಿಗೂ ತಲುಪಿಸಿ. ಅವರು ನಾನು ಈ ಮಾತನ್ನು ಹೇಳಿಲ್ಲ ಎಂಬುದನ್ನು ಹೇಳಲಿ. ನಾವು ಅದನ್ನು ಕ್ಲೋಸ್ ಮಾಡುತ್ತೇವೆ ಅಷ್ಟೆ.

**ಶ್ರೀ ಎನ್.ರವಿಕುಮಾರ್ (ಆಡಳಿತ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಭೋಜೇಗೌಡರವರೇ, ಅದನ್ನು ನೀವು ಪೀಠಕ್ಕೆ ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಪೀಠಕ್ಕೆ ಕೊಟ್ಟಿದ್ದೇನೆ. ಅವರು ಹೇಳಿಬಿಡಲಿ, ನಾವು ಇಲ್ಲಿಗೆ close ಮಾಡುತ್ತೇವೆ. ಸುಮ್ಮನೆ ಸಮಯ ವ್ಯರ್ಥ ಏಕೆ? ಮಾನ್ಯ ಸಭಾನಾಯಕರ ಬಗ್ಗೆ ನಮಗೆ ಬಹಳ ಗೌರವ ಇದೆ. ಮಾನ್ಯ ಸಭಾನಾಯಕರ ಧ್ವನಿ ಇಡೀ ಆಡಳಿತ ಪಕ್ಷದ ಧ್ವನಿಯಾಗಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಭಾನಾಯಕರ ಮೇಲೆ ನಮಗೆ ವಿಶ್ವಾಸ ಇಲ್ಲ, ಅವರ ಮಾತಿನ ಬಗ್ಗೆ ತಿರಸ್ಕಾರವಿದೆ ಎಂದು ಹೇಳಲಿ. ರಾಜ್ಯಪಾಲರ ಮಾತಿನ ಬಗ್ಗೆ ಮಾತ್ರ ನಮಗೆ ವಿಶ್ವಾಸ ಇದೆ ಎಂದು ಹೇಳಲಿ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಕೊಟ್ಟಿರುವಂತಹ ಪ್ರತಿ ಏನಿದೆ ಅದರಲ್ಲಿ ಮಾನ್ಯ ಸಭಾಪತಿಯವರು ಮಾತನಾಡುತ್ತಾರೆ, ಆಮೇಲೆ ಕಾರ್ಯದರ್ಶಿಯವರು ಅದನ್ನು ಮಂಡನೆ ಮಾಡುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರೇ, ಅದನ್ನು ಓದಿ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾನಾಯಕರು "ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಇವತ್ತು ವಿಧಾನ ಮಂಡಲದಲ್ಲಿ ನಡೆದುಕೊಂಡಿರುವ ರೀತಿಯನ್ನು ನಾವು [XXX]. ಅವರು ಸಂವಿಧಾನದ ಅನುಚ್ಛೇದ 163 ಮತ್ತು 176ಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇಡೀ ಕರ್ನಾಟಕದ ಜನತೆ ಮತ್ತು ವಿಧಾನ ಮಂಡಲಕ್ಕೆ ಅಗೌರವವನ್ನು ತೋರಿಸಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಂಡಿದ್ದಾರೆ" ಎಂದು ಹೇಳಿದ್ದಾರೆ. ಎಲ್ಲಿ ನಾವು ರಾಜ್ಯಪಾಲರ ಭಾಷಣವನ್ನು ತಿರಸ್ಕಾರ ಮಾಡಿದ್ದೇವೆ ಎಂದು ಹೇಳಿದ್ದೇವೆ ಅಥವಾ ಅವರು ಮಾಡಿಲ್ಲ ಎಂದು ಎಲ್ಲಿ ಹೇಳಿದ್ದೇವೆ? ಸಂವಿಧಾನದ ಅನುಚ್ಛೇದ 176 ಅನ್ನು ಅವರು ಗಮನಿಸಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲೆ ನಮಗೆ ಗೌರವವಿದೆ. ಮಾನ್ಯ ಸಚಿವರು ಅದಕ್ಕೆ ತೆರೆ ಎಳೆಯುತ್ತಾರೆ ಎಂದು ನಾನು ಭಾವಿಸಿದ್ದೆ. ಅದಕ್ಕೆ ಮಾನ್ಯ ಸಚಿವರು ತೆರೆ ಎಳೆಯಬೇಕು. ಮಾನ್ಯ ಸಭಾನಾಯಕರ ಗೌರವಕ್ಕೆ ಚ್ಯುತಿ ಆಗುವುದಿಲ್ಲ. ಮಾನ್ಯ ಸಭಾನಾಯಕರು ಹೇಳಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಯಾರ ಮಾತಿಗೆ ಅವರು ವಂದನಾ ನಿರ್ಣಯವನ್ನು ಮಾಡುತ್ತಿದ್ದಾರೆ? ಇವರು ಅವರ ಮೇಲೆ objection ಹಾಕಿ, F.I.R. ಹಾಕಿ, Charge Sheet file ಮಾಡಿ, ಇವರು ಯಾವ ಆಧಾರದ ಮೇಲೆ....

**ಉಪ ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ಬಹಳ ಸ್ಪಷ್ಟವಾಗಿದೆ. ನಾನು ಎಲ್ಲವನ್ನು ತೆಗೆದು ನೋಡುತ್ತಿದ್ದೆ, ಪೀಠ ಆದೇಶ ಮಾಡಿದೆ. ಪೀಠದ ಆದೇಶದ ವಿರುದ್ಧ ಮಾತನಾಡುವುದಕ್ಕೆ ಬರುವುದಿಲ್ಲ ಎನ್ನುವುದು ನಿಮಗೆಲ್ಲರಿಗೂ ಗೊತ್ತಿದೆ. ಅದೇನು ಹೇಳಿದೆ ಎಂದರೆ, ಸಭಾಪತಿಯವರು: "ಘನತೆವೆತ್ತ ರಾಜ್ಯಪಾಲರು ಉಭಯ ಸದನವನ್ನುದ್ದೇಶಿಸಿ ಒಂದು ಪ್ಯಾರಾ ಭಾಷಣವನ್ನು ಮಾಡಿದ್ದಾರೆ. ಮೊದಲನೇ ಮತ್ತು ಕೊನೆಯ ಸಾಲುಗಳನ್ನು ಓದಿದ್ದಾರೆ. ಇದರ ಅರ್ಥ 'read and recorded' ಎಂದು ಆಗುತ್ತದೆ. ಅವರು ಭಾಷಣ ಮಾಡಿದಂತೆ ಆಗಿದೆ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶಗಳನ್ನು ನೀಡಿದಂತಹ ಸಂದರ್ಭದಲ್ಲಿ ಭಾಷಣ ಮಾಡಿಲ್ಲ ಎನ್ನುವುದರ ಬಗ್ಗೆ ನೀವು ಚರ್ಚೆ ಮಾಡಬಹುದು. ಈಗ ಅದಕ್ಕೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಘನತೆವೆತ್ತ ರಾಜ್ಯಪಾಲರು ತಾವೇ ತೀರ್ಮಾನ ಮಾಡಿ ಭಾಷಣವನ್ನು ಓದಿದ್ದಾರೆ. 1 ರಿಂದ 10 ಸಾಲುಗಳನ್ನು

ಓದಿದ್ದಾರೆ ಎನ್ನುವಂಥದ್ದನ್ನು ಪೀಠ ಹೇಳಿದೆ. ನೀವು ಪ್ರಶ್ನೆ ಕೇಳಿದ ಮೇಲೆ ಪೀಠ ಒಂದು ಸಲ ಆದೇಶ ಮಾಡಿರುವುದನ್ನು.....

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಓದಿಲ್ಲ ಎಂದು ನಾವು ಹೇಳುತ್ತಿಲ್ಲ. ಅವರು ಓದಿದ್ದಾರೆ. ಆದರೆ, ಆ ಸಮಯದಲ್ಲಿ ಮಾನ್ಯ ಸಭಾನಾಯಕರು ಆಡಿರುವ ಮಾತಿಗೆ ನಾವು ಮಾತನಾಡುತ್ತಿರುವಂಥದ್ದು. ರಾಜ್ಯಪಾಲರು ಓದಿರುವುದಕ್ಕೆ ನನ್ನ ಒಪ್ಪಿಗೆ ಇದೆ ಎಂದು ಅವರು ಹೇಳಿದರೆ ಅಲ್ಲಿಗೆ ಮುಗಿಯಿತು.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ್ದೇನೆ ಎಂದು ಈಗಲೂ ಹೇಳುತ್ತೇನೆ, ನಾನು ಮಾತನಾಡಿರುವುದು ರೆಕಾರ್ಡ್‌ನಲ್ಲಿ ಇದೆ. As per Article 163 and 176 of the Constitution ಪ್ರಕಾರ ಪ್ರತಿಭಟಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ನಾನು ಕೇಳಬೇಕು ಎಂದೇನೂ ಇಲ್ಲ. ನಾನು ಸಭಾನಾಯಕರಾಗಿ ಮಾತನಾಡಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾವು ರಾಜ್ಯಪಾಲರ ಭಾಷಣವನ್ನು ಒಪ್ಪಿದ್ದೇವೆ ಎಂದು ಅವರು ಹೇಳಿದ ಮೇಲೆ ಸೂಚಿಸಲಿ, ಅನುಮೋದಿಸಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಎಂದರೆ ಇಡೀ ಆಡಳಿತ ಪಕ್ಷದ ನಾಯಕರು ಎಂದು ನಾನು ಭಾವಿಸಿದ್ದೇನೆ. ಯಾರೋ ಒಬ್ಬ ಸದಸ್ಯರು ಆಕ್ಷೇಪವನ್ನು ಎತ್ತಿದರೆ ಅದು ಬೇರೆ ಪ್ರಶ್ನೆ. ಅವರು ಆಡಳಿತ ಪಕ್ಷದ ಎಲ್ಲರ ಧ್ವನಿಯಾಗಿ ಮಾತನಾಡಿದ್ದಾರೆ ಎಂದು ನಾವು ಭಾವಿಸಿದ್ದೇವೆ. ಅವರು ಆಡಳಿತ ಪಕ್ಷದ ನಾಯಕರಾಗಿ ಮಾತನಾಡಿದ ನಂತರ.....

**ಶ್ರೀ ಹೆಚ್.ಕೆ.ಪಾಟೀಲ್:–** ಅವರು ಏನು ಮಾತನಾಡಿದ್ದಾರೆ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಕಾನೂನು ಪ್ರಕಾರ ಮಾತನಾಡಿದ್ದೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರೇ ಓದಿದ್ದೀರಲ್ಲಾ, ಸಂವಿಧಾನದ ಅನುಚ್ಛೇದ 163, 176ರ ಬಗ್ಗೆ ಉಲ್ಲೇಖ ಮಾಡಿದ್ದಾರಲ್ಲಾ? ಅವರು ಈಗ ಯಾವ ನೈತಿಕತೆಯ ಮೇಲೆ ವಂದನಾ ನಿರ್ಣಯವನ್ನು ಮಂಡಿಸುತ್ತಿದ್ದಾರೆ ಎಂಬುದನ್ನು ಹೇಳಲಿ?

**ಉಪ ಸಭಾಪತಿಯವರು:–** ಮುಂದಿನ ದಿನಗಳಿಗೆ ಈ ವಿಚಾರಗಳ ಬಗ್ಗೆ ಚರ್ಚೆಯಾಗುವ ಅವಶ್ಯಕತೆಗಳಿವೆ. ಒಳ್ಳೆಯ ರೀತಿಯಲ್ಲಿ ಚರ್ಚೆಯನ್ನು ಮಾಡಿ ಇದಕ್ಕೊಂದು ಪರಿಹಾರ ಕಂಡುಹಿಡಿಯೋಣ.

**ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 163, 176ರ ಬಗ್ಗೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮಾತನಾಡಿದ್ದಾರೆ. ಅದರ ಜೊತೆಗೆ further

he went on and said, ಈ ತರಹದ precedents ಬೇರೆ ರಾಜ್ಯಗಳಲ್ಲೂ ನಡೆಯುತ್ತಿದೆ. ಇದರ ಬಗ್ಗೆ ಸರಿಯೋ ತಪ್ಪೋ ಎನ್ನುವಂಥದ್ದು ಚರ್ಚೆಯಾಗಲಿ. ಏಕೆಂದರೆ ಸಂಸತ್ತಿನ ವ್ಯವಸ್ಥೆಯಲ್ಲಿ ಬಹಳ ಸಲ ತಪ್ಪುಗಳು ಆಗುತ್ತಾ ಬಂದಿವೆ, ಸರಿಯಾಗುತ್ತಾ ಬರುತ್ತಿರುತ್ತವೆ. He has been so open and off and he accepted. ಇದರ ಬಗ್ಗೆ ಚರ್ಚೆಯಾಗಲಿ ಎಂದು ಹೇಳಿದ ಮೇಲೆ ಇದರ ಬಗ್ಗೆ ಚರ್ಚೆಯಾಗುವ ಅವಶ್ಯಕತೆ ಇದೆ. ಮಾನ್ಯ ಭೋಜೇಗೌಡರವರು ಏನು ಹೇಳುತ್ತಿದ್ದಾರೆ, he is only sticking on to that point. ಅವರು ಆಕ್ಷೇಪಣೆ ಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದಾರೆ. He has made a very valid objection under Article 163 and 176 of the Constitution. Particularly he has quoted the Articles of the Consitution. Under this provision, I am disagreeing about what the Hon'ble Governor has spoken and I am protesting it ಎಂದು ಹೇಳುತ್ತಿದ್ದಾರೆ. It is a very technical point. ನಾವು ಈ ರೀತಿ ಗುದ್ದಾಡಿದರೆ ಏನು ಪ್ರಯೋಜನ?

**ಉಪ ಸಭಾಪತಿಯವರು:-** ಎರಡೂ ಕಡೆಯೂ technical ಆಗಿಯೇ ಹೇಳುತ್ತಿದ್ದೀರಿ, ಇಲ್ಲ ಎಂದು ನಾನು ಹೇಳುತ್ತಿಲ್ಲ. ಎಲ್ಲೋ ಒಂದು ಕಡೆ conclusion ಗೆ ಬರಬೇಕಲ್ಲವೇ? ಬರೀ ನೀವು ಆಗಾಗ್ಗೆ ಮಾಡುತ್ತಿದ್ದರೆ ಎಲ್ಲಿ ಬಗೆಹರಿಯುತ್ತದೆ?

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಚ್.ಕೆ.ಪಾಟೀಲ್‌ರವರು ಹೇಳಿದ ಮೇಲೆ what he has said, ಇದರ ಬಗ್ಗೆ ಚರ್ಚೆಯಾಗಲಿ ಎಂದು ಹೇಳಿದ ಮೇಲೆ ನಮ್ಮಲ್ಲೇ ಚರ್ಚೆ ಮಾಡೋಣ. For this also they are disagreeing.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ,....

**ಉಪ ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ಕುಳಿತುಕೊಳ್ಳಿ. ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾತನಾಡಬೇಕಾದರೆ ನೀವು ಮಧ್ಯದಲ್ಲಿ ಎದ್ದು ನಿಂತರೆ ನಾನು ಯಾರ ಮಾತು ಕೇಳಬೇಕು, ಕುಳಿತುಕೊಳ್ಳಿ.

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, ನಾನು ಮನವಿ ಮಾಡುತ್ತಿರುವುದೇನೆಂದರೆ ಒಂದು ಸಲ ಅದರ ಬಗ್ಗೆ ಚರ್ಚೆಯಾಗಲಿ, ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎಂದು ಅವರು ಹೇಳಿದ್ದಾರೆ. ಆದರೆ, ಈಗ ಅದರ ಬಗ್ಗೆ ಮಾತನಾಡುವುದರಲ್ಲಿ ಅರ್ಥ ಏನಿದೆ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಸರ್ಕಾರದ ಪರವಾಗಿ ಮಂತ್ರಿಗಳೆಲ್ಲರೂ ಅಲ್ಲಿಗೆ ಹೋಗಿ ವಿನಂತಿ ಮಾಡಿಕೊಂಡರು. ಜಂಟಿ ಸದನವನ್ನು ಉದ್ದೇಶಿಸಿ ತಾವು ಮಾತನಾಡಬೇಕೆನ್ನುವ ವಿಚಾರ ಪ್ರಸ್ತಾಪ ಮಾಡಿದಾಗ ಗೌರವದಿಂದ ಬಂದು ಅವರು ಯಾವ ರೀತಿ

ಮಾತನಾಡಬೇಕು, ಎಷ್ಟರ ಬಗ್ಗೆ ಮಾತನಾಡಬೇಕು ಎನ್ನುವ ದೃಷ್ಟಿಯಿಂದ ಆ ಚೌಕಟ್ಟಿನಲ್ಲಿ ಅವರು ಮಾತನಾಡಿದ್ದಾರೆ. ಅವರು ಮಾತನಾಡಿದ್ದಕ್ಕೆ ಗೌರವ ಸಲ್ಲಿಸುವ ಜವಾಬ್ದಾರಿ, ಆ ಪ್ರಸ್ತಾವವನ್ನು ಮಂಡಿಸುವ ಜವಾಬ್ದಾರಿ ಸರ್ಕಾರದ್ದು. ಅವರು ಮಾತನಾಡಿರುವುದು ಗೌರವ ಪೂರ್ವಕವಾಗಿ ಇಲ್ಲ ಎನ್ನುವಂತಹ ತಿರಸ್ಕಾರದ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದಾಗ ವಂದನಾ ನಿರ್ಣಯವನ್ನು ಮಂಡಿಸುವಂತಹ ಅಗತ್ಯತೆ ಎಲ್ಲಿದೆ? ಈ ರೀತಿ ಮಾತನಾಡಿ ಯಾವ ರೀತಿ ವಂದನೆಯನ್ನು ಸಲ್ಲಿಸುತ್ತೀರಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಕೆಲವು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಅವರು ಬಹಳ ಬುದ್ಧಿವಂತರು ಎನ್ನುವುದು ನನಗೂ ಗೊತ್ತು. ಅವರು ಎಷ್ಟು ಬುದ್ಧಿವಂತರು ಎಂದರೆ cake cut ಮಾಡಬೇಕೆಂದರೆ ಎಲ್ಲರೂ ಚಾಕು ತರುತ್ತಾರೆ. ಆದರೆ, ಅವರಿಗೇನು ಚಾಕು ಬೇಕಿಲ್ಲ, ಅವರು ದಾರದಲ್ಲೇ ಕುಯ್ಯುತ್ತಾರೆ. ಅವರು ಅಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ನಮಗೇನು ಚಿಂತೆ ಇಲ್ಲ. ಅಂದರೆ, ಅವರ ಬುದ್ಧಿವಂತಿಕೆ ಅಷ್ಟೆ. ನಾನು ಹೇಳುವುದೇನೆಂದರೆ, ನಾನು ಕೂಡ ಮಾಧ್ಯಮಗಳಲ್ಲಿ ನೋಡಿದ್ದೇನೆ. ಮಾನ್ಯ ಸಭಾನಾಯಕರು ಇಲ್ಲಿ ಏನು ಹೇಳಿದ್ದಾರೆ ಎಂದು ರೆಕಾರ್ಡ್‌ನಲ್ಲಿ ಇದೆ. ಮಾನ್ಯ ಸಚಿವರು ಒಂದು ಮಾತನ್ನು ಹೇಳಿದ್ದಾರೆ, ಅದನ್ನು ಕೆಳಮನೆಯಲ್ಲೂ ಹೇಳಿದ್ದಾರೆ. ಮಾನ್ಯ ರಾಜ್ಯಪಾಲರು ಬಂದರು, ಅವರು ಏನನ್ನೂ ಓದಲಿಲ್ಲ, ಹೊರಟು ಹೋದರು, ಆದ್ದರಿಂದ ಅದನ್ನು ನಾನು ಖಂಡಿಸಿದ್ದೇನೆ ಎಂದು ಹೇಳಿದರು. ಓದಲಿಲ್ಲ ಎಂದು ಹೇಳಿದಾಗ, ಮೊದಲನೇ ಸಾಲು ಮತ್ತು ಕೊನೆಯ ಸಾಲು ಓದಿದ್ದಾರೆ, ಅಲ್ಲಿಗೆ ಅದನ್ನು ಓದಿದಂತೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ಈಗ ಮಾನ್ಯ ಸಚಿವರು ಕೂಡ ಸ್ಪಷ್ಟ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅದನ್ನೇ ಹೇಳಿದರು, ಸ್ಪಷ್ಟ ಆಯಿತು. ಮಾನ್ಯ ಸಚಿವರು ಅವರು ಓದಲಿಲ್ಲ ಎಂದು ಹೇಳಿದರು. ಕೆಳಮನೆಯಲ್ಲಿ ಅವರನ್ನು ಕೇಳಿದಾಗ "I will stand by my words", ನಾನು ಈಗಲೂ ಹೇಳುತ್ತೇನೆ ಎಂದು ಎರಡನೇ ಸಲವೂ ಪ್ರಸ್ತಾಪ ಮಾಡಿದರು.

(ಮುಂದು)

**(44) 27/01/2026 5:30 ಎಸ್‌ಪಿಆರ್/ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು)**

ಮಾನ್ಯ ಸಚಿವರು "ಓದಲಿಲ್ಲ" ಎಂದು ಹೇಳಿದ್ದು, ಮುಖ್ಯಮಂತ್ರಿಗಳು "ಇಲ್ಲ ಓದಿದ್ದಾರೆ" ಎಂದು ಹೇಳಿದರು. ಈ ಎರಡರ ವ್ಯತ್ಯಾಸವು ಈಗ ನಮಗೆ ಬೇಕಾಗಿದೆ. ಓದಿಲ್ಲ ಎಂದು ಹೇಳಿದ ಮೇಲೆ, [XXX] ಮಾಡಿದ್ದೀರಿ. [XXX] ಮತ್ತು "ವಂದನೆ" ಈ ಎರಡೂ ಒಟ್ಟೊಟ್ಟಿಗೆ ಹೇಗೆ ಹೋಗಲಿಕ್ಕೆ ಸಾಧ್ಯ? ಇದು ಸಾಧ್ಯವಿಲ್ಲ. ಯಾವುದಾದರೂ ಒಂದು ಬೇಕು. ಇದು ಒಂದನೆಯದು. ಇನ್ನು ಎರಡನೆಯದ್ದು ಏನೆಂದರೆ, ಮುಖ್ಯಮಂತ್ರಿಗಳು ಹೇಳಿದ್ದು ಹಾಗೂ

ನಮ್ಮ ನಿಯಮಾವಳಿಗಳ ಪುಸ್ತಕದಲ್ಲಿ ಇರುವುದು ಸರಿಯಾದರೆ, ಅದು ಸರಿ ಎನ್ನುವುದು ಎಲ್ಲರದ್ದು ತೀರ್ಮಾನವಾದರೆ, ನೀವು ಗೂಂಡಾಗಿರಿ ಮಾಡಿದ್ದು ಮತ್ತು ಅವರನ್ನು ತಡೆದಿದ್ದು ಏಕೆ? ಅದು ಸರಿ ಹೋದ ಮೇಲೆ ಅಲ್ಲಿಗೆ ಮುಗಿಯಿತು. ಅವರ ಮೇಲೆ ಧಿಕ್ಕಾರ ಕೂಗಿದ್ದು ಏಕೆ? ಇದರಲ್ಲಿ ನಮಗೆ ಸ್ಪಷ್ಟನೆ ಬೇಕಾಗಿದೆ. ಈ ಸ್ಪಷ್ಟನೆ ಕೊಟ್ಟರೆ..., ನಿಂದನೆ ಮತ್ತು ವಂದನೆ ಎರಡೂ ಒಟ್ಟಿಗೆ ಬೇಡ. ಅದನ್ನು ಚರ್ಚೆ ಮಾಡೋಣ. ಆಮೇಲೆ ನಿಮಗೂ ಗೊತ್ತಿರುವಂತೆ there are many grey areas. ಇಂತಹವುಗಳೆಲ್ಲಾ ಮೊದಲು ಈ ಹಿಂದೆ ನಡೆದಿಲ್ಲ. ಕೆಲವು ಕಾಲದಲ್ಲಿ ನಡೆದಿವೆ, ಅದರ ಬಗ್ಗೆ ಯಾರೂ ಸೀರಿಯಸ್ ಇಲ್ಲ; ಅದನ್ನು ಅಲ್ಲಿಗೆ ಬಿಟ್ಟು ಹೋದರು. ಈ ಹಿಂದೆ ಶ್ರೀ ಹಂಸರಾಜ್ ಭಾರದ್ವಾಜ್ ರವರು ರಾಜ್ಯಪಾಲರಾಗಿದ್ದಾಗ ನಡೆದಿದ್ದು ನಮಗೂ ಗೊತ್ತು. ಅದೇ ರೀತಿಯಾಗಿ ಶ್ರೀ ಖುರ್ಷಿದ್ ಆಲಂ ಖಾನ್ ರವರು ಇದ್ದಾಗ ಏನು ನಡೆಯಿತು ಎಂಬುದು ನಮಗೆ ಗೊತ್ತು. ಅವತ್ತು ಬೇರೆಯಾಗಿ ಹಾಗೂ ಇವತ್ತು ಬೇರೆಯಾಗಿ ನಿಯಮಾವಳಿಗಳ ಪುಸ್ತಕದಲ್ಲಿ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಹೇಳಿದ್ದು ಸರಿಯೇ ಅಥವಾ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಸರಿಯೇ? ಒಂದು ಸಲ ಇದನ್ನು ತೆಗೆದುಕೊಳ್ಳಬೇಕಾದರೆ, ಇದನ್ನು ಮಂಡಿಸಬೇಕೇ ಅಥವಾ ಅದನ್ನು ತೆಗೆದುಕೊಳ್ಳಬೇಕಾದರೆ, ವಿರೋಧ ಮಾಡಿದ್ದು, ಧಿಕ್ಕಾರ ಹಾಕಿದ್ದು, ಅಪಮಾನ ಮಾಡಿದ್ದು ಅದರಲ್ಲೂ ಒಬ್ಬ ಹಿರಿಯ, ಜೊತೆಗೆ ಒಬ್ಬ ದಲಿತ ರಾಜ್ಯಪಾಲರಿಗೆ ಅಪಮಾನ ಮಾಡಿದ್ದು ನಿಮಗೆ ಸರಿ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಶಿವಕುಮಾರ್ ಕೆ:–** ಮಾನ್ಯ ಸಭಾಪತಿಯವರೆ, ದಯಮಾಡಿ ದಲಿತ ಕಾರ್ಡ್ ಅನ್ನು ಮಾತ್ರ ಪ್ಲೇ ಮಾಡಬಾರದು.

**ಉಪ ಸಭಾಪತಿಯವರು:–** ಸಭಾನಾಯಕರೇ, ಸದಸ್ಯರು ಏನೋ ಮಾತನಾಡಬೇಕೆಂದು ಹೇಳಿದ್ದರು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರು ನಡೆದುಕೊಂಡು ಬರಲಿಲ್ಲ; ಬದಲಿಗೆ ಓಡಿಹೋದರು ಎಂತಲೂ ಹೇಳಿದ್ದಾರೆ. ಹೀಗಾಗಿ...,

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೆ, ಶ್ರೀ ಎನ್.ರವಿಕುಮಾರ್ ರವರೇ...,

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡಿದ ನಂತರ ಅವರು ಸ್ಪಷ್ಟೀಕರಣ ನೀಡಿದ್ದರೆ ಸರಿಯಾಗಿರುತ್ತಿತ್ತು.

**ಉಪ ಸಭಾಪತಿಯವರು:–** ಸಚಿವರೇ, ಸದಸ್ಯರು ಏನೋ ಹೇಳುತ್ತಾರೆ; ನೋಡಿ, ಅದಕ್ಕೂ ಸಹ ನೀವೇ ಉತ್ತರಿಸಿ.

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೆ, ಅವರು ಅಧಿವೇಶನ ನಡೆಯಬಾರದು ಎಂಬುದಾಗಿ ಯೋಚನೆಯನ್ನು ಮಾಡಿಕೊಂಡು ಬಂದಿದ್ದಾರೆ. ಹೀಗಾಗಿ ಅವರಿಗೆ ಎಷ್ಟೇ ಸ್ಪಷ್ಟೀಕರಣ ನೀಡಿದರೂ ಅವರು ಅಷ್ಟನ್ನೇ ಹೇಳುತ್ತಾರೆ ಮತ್ತು ಕೊನೆಯತನಕ ಅದನ್ನೇ ಮಾತನಾಡುತ್ತಾರೆ. ಅವರಿಗೆ ಬೇರೆಯದ್ದನ್ನು ಮಾತನಾಡುವುದಕ್ಕೆ ಏನೂ ಇಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ, ಅವರದ್ದು ವಂದನೆಯೋ ಅಥವಾ [XXX]ಯೋ? ಯಾವುದಾದರೂ ಒಂದರ ಬಗ್ಗೆ ಹೇಳಿ.

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೆ, ಅವರು ಕೇಳುತ್ತಿರುತ್ತಾರೆ, ನಾವು ಹೇಳುತ್ತಿರುತ್ತೇವೆ.

**(ಗೊಂದಲ)**

**ಉಪ ಸಭಾಪತಿಯವರು:–** ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಸದನ ನಡೆಸುವುದು ಪೀಠದ ಜವಾಬ್ದಾರಿಯಾಗಿದೆ. ನಮ್ಮ ಪ್ರಯತ್ನ ನಾವು ಮಾಡುತ್ತೇವೆ. ಅದನ್ನು ಮೀರಿ ಹೋದರೆ, ನಾವೇನು ಮಾಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೆ, ಅವರು ರಾಜ್ಯಪಾಲರನ್ನು ಗುತ್ತಿಗೆ ತೆಗೆದುಕೊಂಡಿದ್ದಾರೆಯೇ? ಅವರು ರಾಜ್ಯಪಾಲರ ಬಗ್ಗೆ ಅಷ್ಟೇಕೆ…, ಅವರು ನಮಗೂ ಸಹ ರಾಜ್ಯಪಾಲರಾಗಿದ್ದಾರೆ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಸಚಿವರಲ್ಲಿ ಕೆಲವು ಸ್ಪಷ್ಟನೆ ಕೊಟ್ಟರೆ…,

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ, ಇನ್ನು ಮುಂದೆ ಸಭಾನಾಯಕರು ಯಾವುದೇ ಹೇಳಿಕೆಗಳನ್ನು ಕೊಟ್ಟರೂ ಸಹ ಅದನ್ನು ಸದನವು ಗಂಭೀರವಾಗಿ ತೆಗೆದುಕೊಳ್ಳತಕ್ಕದಲ್ಲ ಎಂಬುದಾಗಿ ಅವರು ಹೇಳಲಿ. ಆಗ ನಾವು ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

**ಉಪ ಸಭಾಪತಿಯವರು:–** ಶ್ರೀ ಸಿ.ಟಿ.ರವಿಯವರೇ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಕಾನೂನು ಸಚಿವರಲ್ಲಿ ಸ್ಪಷ್ಟನೆ ಕೇಳಬಯಸುತ್ತೇನೆ. ಸಭಾನಾಯಕರು ಪ್ರಾರಂಭದಲ್ಲಿ ಆರ್ಟಿಕಲ್ 163 ಮತ್ತು 176 ಗಳ ಬಗ್ಗೆ ಉಲ್ಲೇಖಿಸಿ ಮಾತನಾಡುತ್ತಿರುವಾಗ, ಅದೇ ಆರ್ಟಿಕಲ್ 163 ಮತ್ತು 176 (2) ಎನ್ನುವುದು ಎಲ್ಲೆಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಿಗೆ ಧಕ್ಕೆ ಬರುವ ಅಂಶಗಳು ಏನಾದರೂ ಇದ್ದ ಸಂದರ್ಭದಲ್ಲಿ ಆ ವಿಷಯಗಳನ್ನು…, ಘನತೆವೆತ್ತ ರಾಜ್ಯಪಾಲರಿಗೆ ಆ ಭಾಷಣದ ಪ್ರತಿ ಸಿಕ್ಕ ನಂತರ ಅದನ್ನು review ಮಾಡುವುದಕ್ಕಾಗಿ ಸಚಿವ

ಸಂಪುಟಕ್ಕೆ ಕಳುಹಿಸುವಂತಹ ಅಧಿಕಾರ ಅವರಿಗೆ ಇದೆ ಎನ್ನುವುದನ್ನು ನಮ್ಮ ಕಾನೂನು ಪುಸ್ತಕಗಳು ಸ್ಪಷ್ಟವಾಗಿ ಹೇಳುತ್ತವೆ. ಇದನ್ನು ಓದಿ ಮಾನ್ಯ ಕಾನೂನು ಸಚಿವರು ಸ್ಪಷ್ಟಪಡಿಸಿದ್ದಾರೆ. ಪ್ಯಾರಾ ನಂ.2 ರಿಂದ ಪ್ಯಾರಾ ನಂ.11 ರವರೆಗೆ ಏನು ಅಂಶಗಳಿವೆ, ಈ ವಿಷಯಗಳನ್ನು ನನ್ನ ಭಾಷಣದಲ್ಲಿ ಹೇಳುವುದಕ್ಕಾಗುವುದಿಲ್ಲ ಎನ್ನುವುದನ್ನು ಅವರ ಗಮನಕ್ಕೆ ತಂದ ಸಂದರ್ಭದಲ್ಲಿಯೂ ಸಹ ಅವರು ಯಥಾವತ್ತಾಗಿ ಮತ್ತೆ ಮಂಡನೆ ಮಾಡಿಸುವ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಕಾನೂನು ಸಚಿವರಲ್ಲಿ ನಾನು ಕೇಳಲು ಬಯಸುವುದೇನೆಂದರೆ, ಸದನದಲ್ಲಿ ರಾಜ್ಯಪಾಲರಿಗೆ ಧಿಕ್ಕಾರವನ್ನು ಕೂಗಿ, ಆ ಸದನದ ಸದಸ್ಯರು ಸದನದಲ್ಲಿ ರಾಜ್ಯಪಾಲರನ್ನು ಅಡ್ಡ ಹಾಕಿ, ಅವರ ಸಂಪೂರ್ಣ ...,

**ಉಪ ಸಭಾಪತಿಯವರು:–** ನೀವು ಹೇಳುವ ಅಂಶಗಳನ್ನು ಹೇಳಿ. ಅದಕ್ಕೆ ಸಚಿವರು ಉತ್ತರಿಸಲಿ. ಅಲ್ಲಿ ಆಗಿರುವುದು ಎಲ್ಲವೂ ಗೊತ್ತಿದೆ; ಹೀಗಾಗಿ ಮತ್ತೇಕೆ ಅದನ್ನು repeat ಮಾಡುತ್ತೀರಿ?

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ಒಂದು ಸೆಕೆಂಡ್‌ನಲ್ಲಿ ನಾನು ಇದನ್ನು ಮುಗಿಸುತ್ತೇನೆ. ಯಾರೇ ಸದಸ್ಯರು ಮಾತನಾಡುವುದಾದರೆ, ಮೊದಲಿಗೆ ರಾಜ್ಯಪಾಲರಿಗೆ ಕ್ಷಮೆಯನ್ನು ಕೇಳಿ, ವಂದನಾ ನಿರ್ಣಯವನ್ನು ಪ್ರಾರಂಭ ಮಾಡಬೇಕು. ನಾನು ರಾಜ್ಯಪಾಲರಿಗೆ ಕ್ಷಮೆಯನ್ನು ಕೇಳುತ್ತಿದ್ದೇನೆ ಮತ್ತು ಸದನದ ಕ್ಷಮೆಯನ್ನು ಕೇಳುತ್ತಿದ್ದೇನೆ ಎಂದು ಹೇಳಿ ಪ್ರಾರಂಭ ಮಾಡಬೇಕು.

**ಉಪ ಸಭಾಪತಿಯವರು:–** ಸರಿ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ,...

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ ಕಾನೂನು ಸಚಿವರು ಯೀಲ್ಡ್ ಆಗಬೇಕು; ಇದರಲ್ಲಿ ಒಂದು ಟೆಕ್ನಿಕಲ್ ಪಾಯಿಂಟ್ ಇದೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೆ,...

**ಉಪ ಸಭಾಪತಿಯವರು:–** ಕುಳಿತುಕೊಳ್ಳಿ. ಕಾನೂನು ಸಚಿವರು ಮಾತನಾಡುತ್ತಾರೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ದಯಮಾಡಿ ಒಂದೇ ಒಂದು ನಿಮಿಷ. ನಾನು ಮೂರು ಬಾರಿ ಅವಕಾಶ ಕೇಳಿದ್ದೇನೆ; ಅವರಿಗೆ ನಾಲ್ಕು ಬಾರಿ ಅವಕಾಶವನ್ನು ನೀಡಿದ್ದೀರಿ. ನಮಗೆ ಅವಕಾಶವನ್ನೇ ಕೊಟ್ಟಿಲ್ಲ. ಅದು ಟೆಕ್ನಿಕಲ್ ಪಾಯಿಂಟ್...,

**(ಗೊಂದಲ)**

**ಉಪ ಸಭಾಪತಿಯವರು:–** ನಿಮಗೆ ಅನುಮೋದನೆಗೆ ಅವಕಾಶವಿದೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ನಾನು ಕಾನೂನು ಸಚಿವರಲ್ಲಿ ದಯಮಾಡಿ ಮನವಿ ಮಾಡಿಕೊಳ್ಳುತ್ತೇನೆ; ಅವರು ಒಂದು ನಿಮಿಷ ಯೀಲ್ಡ್ ಆಗಲಿ. ಇದು ವಿಷಯಾಂತರ ಆಗುತ್ತಿದೆ. ಇದೇ ತಿಂಗಳ 22 ನೇ ತಾರೀಖಿನಂದು ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ವಿಧಾನ ಸಭೆ ಸಭಾಂಗಣದಲ್ಲಿ ಭಾಷಣವನ್ನು ಮಾಡಿದರು. ಇದಾದ ನಂತರ ಸನ್ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ ಸಭಾಂಗಣದಲ್ಲಿಯೇ ಸದನ ಸೇರಿದಾಗ, ಕಾರ್ಯದರ್ಶಿಯವರು ರಾಜ್ಯಪಾಲರು ಮಾತನಾಡಿದ್ದನ್ನು ಇಲ್ಲಿ ಪ್ರೆಸೆಂಟ್ ಮಾಡಿದ್ದಾರೆ. ಇದಾದ ನಂತರ 23 ನೇ ತಾರೀಖಿನಂದು ಸಭಾಪತಿಯವರು ರೂಲಿಂಗ್ ಅನ್ನು ಕೊಟ್ಟಿದ್ದಾರೆ. ಇವತ್ತೂ ಸಹ ಅವರು ರೂಲಿಂಗ್ ಅನ್ನು ನೀಡಿ, ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸಿದ ಮೇಲೆ ಸದಸ್ಯರಾದ ಶ್ರೀ ಐವನ್ ಡಿ’ಸೋಜಾ ರವರು ಈಗಾಗಲೇ 12 ನಿಮಿಷ ಮಾತನಾಡಿದ್ದಾರೆ. ತದ ನಂತರ ತಾವು ಪೀಠಕ್ಕೆ ಬಂದಿದ್ದೀರಿ. ಮಧ್ಯದಲ್ಲಿ ಯಾವುದೋ ಟೆಕ್ನಿಕಲ್ ಪಾಯಿಂಟ್ ಅನ್ನು ತೆಗೆದುಕೊಂಡು ವಿಷಯಾಂತರ ಮಾಡುವ ಪ್ರಯತ್ನವನ್ನು ಉದ್ದೇಶಪೂರ್ವಕವಾಗಿ ಬಿ.ಜೆ.ಪಿ. ಮಿತ್ರರು ಮಾಡುತ್ತಿದ್ದಾರೆ. ಅವರಿಗೆ ಅವಕಾಶವಿದ್ದರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದರೆ, ಏನು ತಪ್ಪಾಗಿದೆಯೋ ಅದನ್ನು ಹೇಳಲಿ. ಅವರಿಗೆ ಅವಕಾಶವಿದೆ. ಸುಮ್ಮನೆ ಇಲ್ಲಿ ಸಭಾನಾಯಕರನ್ನು ಎಳೆದುಕೊಂಡು ಬಂದು ದಾರಿ ತಪ್ಪಿಸುವಂತಹ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶ್ರೀ ರಮೇಶ್ ಬಾಬು ರವರು ಒಂದೇ ಒಂದು ಸಾಲಿನಲ್ಲಿ ನಾನು ಯಾವಾಗ ಹೇಳಿದ್ದೇನೆ ಎನ್ನುವುದನ್ನು ಹೇಳಲಿ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ,...

**ಉಪ ಸಭಾಪತಿಯವರು:–** ಶ್ರೀ ರಮೇಶ್ ಬಾಬುರವರೇ ಕುಳಿತುಕೊಳ್ಳಿ. ನೀವುಗಳು Elementary School ಮಕ್ಕಳು ಆಡಿದಂತೆ ಆಡುತ್ತಿದ್ದೀರಲ್ಲ; ಇದಕ್ಕೆ ಗೌರವವಿಲ್ಲವೇ? ನೀವುಗಳೆಲ್ಲರೂ ಸದನದ ಗೌರವದ ಬಗ್ಗೆ ಮಾತನಾಡುತ್ತೀರಿ. ಪೀಠ ಹೇಳಿದಾಗ ನೀವುಗಳು ಕುಳಿತುಕೊಳ್ಳಬೇಕು. ಒಬ್ಬೊಬ್ಬರೇ ನಿಂತು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, 22ನೇ ತಾರೀಖು ಮಾನ್ಯ ಸಭಾನಾಯಕರು ಮಂಡನೆ ಮಾಡಿದ ತಕ್ಷಣವೇ, ಸಭಾನಾಯಕರು ಮಾತನಾಡಿದ ಮರುಕ್ಷಣವೇ ನಾನು ಎದ್ದು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೆ, ಸದಸ್ಯರು 23 ಮತ್ತು 24 ನೇ ತಾರೀಖಿನ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಅವರಿಗೆ ತಿಳಿದಿರಲಿ ಎಂದು ನಾನು ಹೇಳಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾವು ಸುಮಾರು ಒಂದು ಗಂಟೆ ಕಾಲ ಈಗ ಚರ್ಚೆ, ಮಾತು, ವಾದ–ವಿವಾದ ಎಲ್ಲಾ ಮಾಡುತ್ತಿದ್ದೇವೆ. ಈಗ ನಮ್ಮ ಎದುರಿಗೆ ಬಂದಿರುವ ಪ್ರಶ್ನೆ ಮತ್ತು ವಿಷಯ ಏನೆಂದರೆ,... ನಾನು ಹೇಳಿರುವ ಮತ್ತು ಆಡಿರುವ ಮಾತುಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ

ಶ್ರೀ ಎನ್.ರವಿಕುಮಾರ್ ರವರು ಅದನ್ನು ಬೆಂಬಲಿಸಿ ನಾನು ಹೇಳಿದ ಮಾತುಗಳ ಬಗ್ಗೆ ಹೇಳಿದರು. ನಾನು ವಿಧಾನ ಸಭೆ ಹಾಗೂ ಹೊರಗೂ ಸಹ ಹೇಳಿದ್ದೇನೆ. ವಿಧಾನ ಸಭೆಯಲ್ಲಿ ನಾನು ಮಾತನಾಡಿದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ತಮಗೆ ವಿಷಯ ಸಂಪೂರ್ಣವಾಗಿ ಗೊತ್ತಿರಲಿ. ನಮ್ಮ ಸ್ನೇಹಿತರು ಈಗ ಪ್ರಸ್ತಾಪ ಮಾಡಿದರು. ನಾವು ರಾಜ್ಯಪಾಲರ ಬಳಿ ಹೋಗಿದ್ದೆವು; ಅವರು 11 ಅಂಶಗಳನ್ನು ಬಿಡುವಂತೆ ಹೇಳಿದ್ದರು, ಆದರೆ ಅದನ್ನು ನೀವು ಬಿಡಲಿಲ್ಲ; ಅದನ್ನು ಹಾಗೆಯೇ ಪ್ರಿಂಟ್ ಮಾಡಿಸಿದ್ದೀರಿ ಎಂಬುದಾಗಿ ತಿಳಿಸಿದರು. ರಾಜ್ಯಪಾಲರ ಬಳಿ ಹೋದಾಗ, ಮಾನ್ಯ ರಾಜ್ಯಪಾಲರು ನಮಗೆ ಏನು ಹೇಳಿದರು, ನಾವು ಅವರಿಗೆ ಏನು ಹೇಳಿದೆವು; ನಮ್ಮ ಅಭಿಪ್ರಾಯ, ನಿಲುವು ಏನಿತ್ತು ಎನ್ನುವುದರ ಬಗ್ಗೆ ನಾನು ವಿವರವಾಗಿ ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಷ್ಟು ತಮಗೆ ಸ್ಪಷ್ಟಪಡಿಸುತ್ತೇನೆ. ಈಗ ತಾವು ಏನು ವಿಚಾರ ಕೇಳುತ್ತಿದ್ದೀರಿ; ಇದು ವಿಸ್ತೃತವಾಗಿ ಚರ್ಚೆಯಾಗಲೇಬೇಕಾದದ್ದು ಆಗಿದೆ. ಸಭಾನಾಯಕರು ಏನು ಹೇಳಿದ್ದಾರೆಯೋ, ಅದನ್ನು ಶ್ರೀ ಎಸ್.ಎಲ್.ಭೋಜೇಗೌಡರು ಓದಿ ತಿಳಿಸಿದ್ದಾರೆ. ಅದರಲ್ಲಿ ನನ್ನ ದೃಷ್ಟಿಯಿಂದ ಕಾನೂನಿನ ವಿಚಾರವಿದೆ. ಆದರೆ, ಇದನ್ನು ನಮ್ಮ ಸರ್ಕಾರ ತಿರಸ್ಕಾರ ಮಾಡಿಲ್ಲ. ಆರ್ಟಿಕಲ್ 163 ಮತ್ತು 176 ಈ ಎರಡರ ಬಗ್ಗೆ ನಾವು ಬಹಳಷ್ಟು ಸುದೀರ್ಘವಾಗಿ ಚರ್ಚೆ ಮಾಡಬೇಕು. "ರಾಜ್ಯಪಾಲರು ಓಡಿ ಹೋದರು" ಎಂದು ನಾನು ಹೇಳಿದೆ ಎಂಬ ಮಾತು ಪ್ರಸ್ತಾಪವಾಯಿತು. ಶ್ರೀ ಪಿ.ಹೆಚ್.ಪೂಜಾರ್ ರವರೇ ಆರ್ಟಿಕಲ್ 51 ಅನ್ನು ದಯಮಾಡಿ ತಾವು ಗಮನಿಸಬೇಕು. ಇದನ್ನು ನಾನು ಏಕೆ ಹೇಳಿದೆ? ನಾನು ಆ ಸದನದಲ್ಲಿ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

**(ಮುಂದು)**

(45)27-01-2026/5-40/bkp-ak **(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಕೆ. ಪಾಟೀಲ್( ಮುಂದು):-**

ಶ್ರೀಯುತ ಪೂಜಾರ್‌ರವರೆ, ತಾವು ದಯಮಾಡಿ ನಾನು ಹೇಳುವುದನ್ನು ಗಮನಿಸಬೇಕು. ನಾನು ಆ ಸದನದಲ್ಲಿ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. But if you ask me a question, I am also liable to reply to that question. ಕಾರಣ, ಇದು ಜಂಟಿ ಅಧಿವೇಶನವಾಗಿದೆ. ಅದು ಜಂಟಿ ಸದನವಾಗಿತ್ತು. ಆ ಜಂಟಿ ಸದನದ ನಂತರ ನಾನು ಆ ಒಂದು ಹೇಳಿಕೆಯನ್ನು ಮಾಡಿದ್ದೆ. ಅದಕ್ಕೆ ಆ ಸದನದಲ್ಲಿ ಉತ್ತರ ನೀಡಬೇಕಾಗಿರುವಂತಹ ಬಾಧ್ಯತೆ ನನಗೆ ಏನಿತ್ತು. ಅದೇ ಬಾಧ್ಯತೆ ಈ ಸದನದಲ್ಲಿ ಕೂಡ ನಾನು ಉತ್ತರ ಕೊಡಬೇಕಾದ ಅಗತ್ಯ ಇದೆ.

ಮಾನ್ಯ ಸಭಾಪತಿಯವರೆ, ಮಾನ್ಯ ರಾಜ್ಯಪಾಲರು 1 ಲೈನ್ ಓದಿದರೋ, 2 ಲೈನ್ ಓದಿದರೋ, 3 ಲೈನ್ ಓದಿದರೋ, ಅವರು 'ಜೈಹಿಂದ್' ಎಂದು ಹೇಳಿದರು. ಅದೆಲ್ಲವೂ ಸರಿ. ಅದೆಲ್ಲವನ್ನೂ ನಾವು ಮತ್ತು ನೀವು ಕೂಡ

ಕೇಳಿಸಿಕೊಂಡಿದ್ದೇವೆ. ಆದಾದ ಮೇಲೆ Article 51 starts operating not only on His Excellency the Governor but on all of us. That article applies not only to those who were in the House but to all Indian citizens.

ರಾಷ್ಟ್ರಗೀತೆಗೆ, ರಾಷ್ಟ್ರ ಧ್ವಜಕ್ಕೆ ನಾವು ಏನು ಗೌರವವನ್ನು ಕೊಡಬೇಕು, ಏನು ಮಾಡಬೇಕೆನ್ನುವುದರ ಬಗ್ಗೆ ಸ್ಪಷ್ಟವಾದ ಉಲ್ಲೇಖ ಮಾಡಲಾಗಿದೆ. ಅಮೇಲೆ ಒಂದು ಲಘು ಪ್ರಕಟಣೆಯನ್ನು ಹೊರಡಿಸಿದ್ದರು. ಆ ಒಂದು ಪ್ರತಿಯನ್ನು ತಮಗೆಲ್ಲರಿಗೂ ಕೊಟ್ಟಿದ್ದಾರೆ. ಅದನ್ನು ರಾಜ್ಯಪಾಲರಿಗೆ ಮಾತ್ರ ಕೊಟ್ಟಿರುವುದಿಲ್ಲ. ನೀವು ಸಹಿತ ಆ ಶಿಷ್ಟಾಚಾರದಂತೆ ನಡೆದುಕೊಳ್ಳಬೇಕು. ರಾಜ್ಯಪಾಲರು ಬಂದ ಕೂಡಲೇ  ಮುಖ್ಯಮಂತ್ರಿಗಳು ಮುಂದಿನ ಸಾಲಿನಲ್ಲಿ ನಿಂತು, ಅವರಿಗಿಂತ ಮುಂದೆ ಸನ್ಮಾನ್ಯ ಸಭಾಪತಿಯವರು, ಗೌರವಾನ್ವಿತ ಸಭಾಧ್ಯಕ್ಷರು, ಇವರೆಲ್ಲರೂ ಮುಂದೆ ನಿಂತುಕೊಂಡು ರಾಜ್ಯಪಾಲರಿಗೆ ಹೂವಿನ ಬೊಕ್ಕೆಯನ್ನು ಕೊಡಬೇಕು, ತದನಂತರ ಮುಖ್ಯಮಂತ್ರಿಗಳು, ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು, ಅಮೇಲೆ ತಮ್ಮ ಸದನದ ಸರ್ಕಾರಿ ಮುಖ್ಯ ಸಚೇತಕರು, ಕೆಳ ಮನೆಯ ಸರ್ಕಾರಿ ಮುಖ್ಯ ಸಚೇತಕರು, ಇವರೆಲ್ಲರೂ ಸೇರಿದಂತೆ ಅವರಿಗೆ ಹೂವಿನ ಬೊಕ್ಕೆಯನ್ನು ಕೊಟ್ಟು, ಅವರನ್ನು procession ನಲ್ಲಿ ಕರೆದುಕೊಂಡು ಬರುತ್ತೇವೆ. ಆ ಒಂದು procession ನೊಳಗೆ ಆ ಒಂದು grand steps ಹತ್ತಿದ ಕೂಡಲೇ ಮುಖ್ಯಮಂತ್ರಿಗಳು ಹೀಗೆ ಬರುತ್ತಾರೆ, ಸಭಾನಾಯಕರು ಹೀಗೆ ಬರುತ್ತಾರೆ, ನಾವು ಸಹ ಮುಂದೆ ಹೋಗಿ ಕುಳಿತುಕೊಳ್ಳುತ್ತೇವೆ.

**(ಈ ಹಂತದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆ ಲಘು ಪ್ರಕಟಣೆಯ ಪ್ರತಿಯನ್ನು ಸಂಬಂಧಪಟ್ಟವರಿಂದ ಪಡೆದುಕೊಂಡರು)**

ನಮ್ಮ ಪದ್ಧತಿ ಪ್ರಕಾರ ಮಾನ್ಯ ರಾಜ್ಯಪಾಲರು ಬಂದು ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಬೇಕು. Even he will not sit. National Anthem play ಆಗುತ್ತದೆ. ಅವರು ನಿಲ್ಲುತ್ತಾರೆ. ಆದಾದ ನಂತರ ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಸಭಾಧ್ಯಕ್ಷರು ಕುಳಿತುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಎಷ್ಟು ಭಾಷಣವನ್ನು ಮಾಡಬೇಕೋ ಆ ಭಾಷಣವನ್ನು ಅವರು ಮಾಡುತ್ತಾರೆ. ಆ ಒಂದು ಭಾಷಣ ಮಾಡುವಾಗ ಇವರಿಬ್ಬರು ಕುಳಿತುಕೊಳ್ಳುತ್ತಾರೆ.  ಅಮೇಲೆ ಇವರು ಎದ್ದೇಳುತ್ತಾರೆ. ರಾಜ್ಯಪಾಲರು ಬಹುತೇಕ ಸಂದರ್ಭಗಳಲ್ಲಿ ಕುಳಿತುಕೊಳ್ಳುವುದೇ ಇಲ್ಲ.  ಭಾಷಣ ಮುಗಿದ ಮೇಲೆ ನಿಲ್ಲುತ್ತಾರೆ. ನಿಂತ ಮೇಲೆ ರಾಷ್ಟ್ರಗೀತೆಯಾಗುತ್ತದೆ. ಆ ಒಂದು ರಾಷ್ಟ್ರಗೀತೆಯಾದ ಮೇಲೆ  ಮೊದಲು ಬರುವಾಗ ಹೀಗೆ ಬಂದಿರುತ್ತಾರೆ. ನಂತರ ವಿರೋಧ ಪಕ್ಷದವರನ್ನೆಲ್ಲಾ ಭೇಟಿಯಾಗಿ ಆ ಕಡೆಯಲ್ಲಿ ಹೋಗುತ್ತಾರೆ. ಇದು ನಮ್ಮಲ್ಲಿ ಇರುವಂತಹ ಪದ್ಧತಿಯಾಗಿದೆ.  ನಾನು ತಮಗೆ ಹೇಳುವುದಕ್ಕೆ ಬಯಸುವುದೇನೆಂದರೆ, now I will quote from

Bulletin Part–II dated 14th January, 2026 issued by the Karnataka Legislative Council. It reads as follows:–

"On reaching the dais and before…"

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೆ, I have not yielded.

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವಾಗಿ ಒಂದೇ ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಬಯಸುತ್ತೇನೆ.

**Sri H.K. PATIL:** Now I will quote from Bulletin Part–II dated 14th January, 2026 issued by the Karnataka Legislative Council. It reads as follows:–

"The procession in this form will proceed to the Legislative Assembly Chamber. The Marshal announces the arrival of His Excellency the Governor. Hon'ble Members are requested to remain standing until His Excellency the Governor takes the seat on the dais. The procession will proceed towards the dais. On reaching the Floor of the House in front of the dais, the procession bifurcates. On reaching the dais and before His Excellency the Governor takes the seat, National Anthem will be played. On the dais, the Hon'ble Chairman will sit on the Governor's left and Hon'ble Speaker on the right. His Excellency the Governor occupies the central seat. The Secretaries take their seats in front of the dais.

His Excellency the Governor will then read the address. It is a convention that no member shall obstruct or interrupt the Address either before or after the Address or during its duration with any speech, point of order…

The National Anthem will again be played after the conclusion of the address."

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಒಂದು ಲೈನ್ ಮೇಲೆ ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**Sri H.K. PATIL:** No, disturbing will not confuse anybody.

**ಉಪ ಸಭಾಪತಿಯವರು:–** ಅವರು ಮಾತನಾಡಿದ ಮೇಲೆ ನೀವು ಮಾತನಾಡಿ.

**ಶ್ರೀ ಕೆ.ಎಸ್. ನವೀನ್((ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, it is not disturbing.

**Sri D.S. ARUN:** We are not disturbing.

**Sri H.K. PATIL:** Take his time and speak.

**Sri K.S. NAVEEN:** We want to interrupt at the right time on exactly what you said; on exactly the lines what you just mentioned.

**ಉಪ ಸಭಾಪತಿಯವರು:–** ಒಂದೇ ವಿಷಯವನ್ನು ಪದೇ ಪದೇ ಏತಕ್ಕೆ ಹೇಳುತ್ತಿದ್ದೀರಿ? ಒಂದು ನಿಮಿಷ ನೀವು ಕುಳಿತುಕೊಳ್ಳಿ. ಸಚಿವರು ತಮ್ಮ ಭಾಷಣವನ್ನು ಪೂರ್ಣಗೊಳಿಸಬೇಕು.

**Sri H.K. PATIL:** To quote further,

> "The National Anthem will again be played after the conclusion of the address."

See, this is not only for we people. This is for the Governor and to the last person of the House.

**ಶ್ರೀ ಭಾರತಿ ಶೆಟ್ಟಿ(ನಾಮನಿರ್ದೇಶಿತರು):–** ರಾಷ್ಟ್ರ ಗೀತೆಯಾದ ಮೇಲೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಹೆಚ್.ಕೆ. ಪಾಟೀಲ್:–** ಅದು ಬೇಕೆಂದರೆ ನಾನು ಅದರ ಬಗ್ಗೆ ಓದುತ್ತೇನೆ.

**ಉಪ ಸಭಾಪತಿಯವರು:–** ನೋಡಿ, ಗೊತ್ತಿರುವ ವಿಚಾರದ ಬಗ್ಗೆ ಹೇಳುವುದಕ್ಕಿಂತ ಮಧ್ಯೆದಲ್ಲಿ ಶ್ರೀಯುತ ಡಿ.ಎಸ್.ಅರುಣ್ ರವರು ಏನೋ ಒಂದು ವಿಚಾರವಾಗಿ ಹೇಳಬೇಕೆಂದು ಕೇಳಿರುತ್ತಾರೆ. ಅ ವಿಚಾರ ಏನೆಂದು ಅವರು ಹೇಳಲಿ. ಅದರ ಬಗ್ಗೆ ಕ್ಲಾರಿಫೈ ಆಗಲಿ ಬಿಡಿ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿರುವಂತಹ ವಿಚಾರವಾಗಿ ನಾವೆಲ್ಲರೂ ಸಾಕ್ಷಿಗಳು ಇದ್ದೇವೆ. It is undisputed. ನಾವೆಲ್ಲರೂ ನೋಡುತ್ತಿದ್ದೆವು. ಮಾನ್ಯ ಸಚಿವರು ಗಮನಿಸಬೇಕು. ಅದು ಏನೆಂದರೆ, ಮಾನ್ಯ ರಾಜ್ಯಪಾಲರು ಭಾಷಣವನ್ನು ಓದಬೇಕಾದರೆ ಬಹಳ ಕ್ಲಿಯರ್ ಆಗಿ ಮೊದಲನೆಯ ವಾಕ್ಯ ಮತ್ತು ಕೊನೆಯ ವಾಕ್ಯವನ್ನು ಓದುತ್ತಾರೆ. ಕೊನೆಯಲ್ಲಿ "ಜೈಹಿಂದ್" ಹೇಳುತ್ತಾರೆ. The

National Anthem will be played. ಅವರು ನಿಲ್ಲುತ್ತಾರೆ. ಅವರು ನಿಂತಾಗ ಯಾರು National Anthem ಅನ್ನು play ಮಾಡಬೇಕಾಗಿತ್ತು? ಸರ್ಕಾರ ಅದನ್ನು play ಮಾಡಬೇಕಾಗಿದ್ದು, ಬೇಕೆಂದೇ ಅದನ್ನು ಅವರು play ಮಾಡುವುದಿಲ್ಲ. ಆದಾದ ಮೇಲೆ ದಿಕ್ಕಾರ ಹೇಳಲಿಕ್ಕೆ ಶುರು ಮಾಡುತ್ತಾರೆ. ಇದಕ್ಕೆ ನಾವೆಲ್ಲರೂ ಸಾಕ್ಷಿಬೂತರಿದ್ದೇವೆ. ನಾವೆಲ್ಲರೂ ಅದನ್ನು ನೋಡಿದ್ದೇವೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, I also have a clarification. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ನೋಡಿ, ಸರ್ಕಾರ play ಮಾಡಬೇಕಾಗಿರುವುದು. ರಾಜ್ಯಪಾಲರ ಹತ್ತಿರ ಸ್ಪೀಕರ್ ಇರುವುದಿಲ್ಲ. Switch ಇರುವುದಿಲ್ಲ.

**ಉಪ ಸಭಾಪತಿಯವರು:-** ಈಗ ಇದು ತಪ್ಪೋ ಸರಿಯೋ ಈ ರೀತಿ ಆಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಅದಕ್ಕೆ ಏನು ವ್ಯವಸ್ಥೆಗಳನ್ನು ಮಾಡಬೇಕೆನ್ನುವುದರ ಬಗ್ಗೆ ಚರ್ಚೆ ಇದಾಗಿದೆ.

**(ಗೊಂದಲ)**

**Sri H.K. PATIL:** Why are you objecting me from speaking?

**ಶ್ರೀ ಡಿ.ಎಸ್.ಅರುಣ್:-** ರಾಷ್ಟ್ರಗೀತೆಯನ್ನು ರಾಜ್ಯಪಾಲರು play ಮಾಡುವುದಿಲ್ಲ. ಅವರ ಹತ್ತಿರ switch ಇರುವುದಿಲ್ಲ. ನೀವು ಇದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪಸತಿಯವರು:-** ಇದರ ಬಗ್ಗೆ ಅರ್ಥವಾಗಿದೆ. ನೀವು ಏನು ಹೇಳಬೇಕೆಂದು ಇದ್ದೀರಿ, ಅದನ್ನು ನೀವು ಹೇಳಿದ್ದೀರಿ. ಶ್ರೀಯುತ ಕೆ.ಎಸ್.ನವೀನ್ ರವರೆ, ನೀವು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ನನ್ನದು ಒಂದೇ ಒಂದು ಸಣ್ಣ ಕ್ಲಾರಿಫಿಕೇಷನ್ ಇದೆ.

**ಉಪ ಸಭಾಪಸತಿಯವರು:-** ಶ್ರೀಯುತ ಕೆ.ಎಸ್. ನವೀನ್‌ರವರೆ, ಆಗುವುದಿಲ್ಲ, ಕುಳಿತುಕೊಳ್ಳಿ. ಮಾನ್ಯ ಸಚಿವರಿಗೆ ಮಧ್ಯೆದಲ್ಲಿ ಯೀಲ್ಡ್ ಮಾಡಿ ಶ್ರೀ ಡಿ.ಎಸ್. ಅರುಣ್ ರವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಲಾಗಿದೆ.

**ಶ್ರೀ ಎಸ್. ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪಸತಿಯವರು:-** ಇದಕ್ಕೆ ಒಂದು ಕ್ಲಾರಿಟಿ ಸಿಗುತ್ತದೆ ಎಂದರೆ ಚರ್ಚೆ ಮಾಡೋಣ. ಅದಕ್ಕೇನು dispute ಇಲ್ಲ. ಮಾನ್ಯ ಸಚಿವರಿಗೆ ಮಾತನಾಡಲಿಕ್ಕೆ ಬಿಡಿ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಸತ್ಯವನ್ನು ...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಸಚಿವರು ಗಮನಿಸಬೇಕು, ದಯಮಾಡಿ ಮಾನ್ಯ ಕಾನೂನು ಸಚಿವರ ಹೇಳಿಕೆ ಬಗ್ಗೆ ನಮಗೆ ಯಾವುದೇ ಅಭ್ಯಂತರವಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಸತ್ಯವನ್ನು ಕೇಳುವಲ್ಲಿ ಸಹನೆ ಬೇಕು. ಕೇಳುವಂತಹ ಧೈರ್ಯ ಬೇಕು, ಸತ್ಯ ನಿಮ್ಮ ವಿರುದ್ಧ ಇತ್ತು ಎಂದರೆ ಅದಕ್ಕೆ ತಕರಾರು, ಅಡ್ಡಿ ಮಾಡುವುದಲ್ಲ. ಮಾನ್ಯ ಸದಸ್ಯರಾದ ಆ ತಾಯಿ ಮುಂದಿನದ್ದನ್ನು ಓದಿ ಎಂದು ಹೇಳಿದರು. It is as follows:–

> "His Excellency, the Governor will leave the Chamber in procession in the same order in which the procession entered the Chamber."

ನೀವು ನನಗೆ ಇದನ್ನು ಓದಲಿಕ್ಕೆ ಹೇಳಿದುದು, ನನಗೆ ಬಹಳ ಅನುಕೂಲವಾಯಿತು. ಏಕೆಂದರೆ, what I was trying to explain, you have made it easy for me to explain it. ಮಾನ್ಯ ಸಭಾಪತಿಯವರೆ, ಅಲ್ಲಿ ತಾವೆಲ್ಲರೂ ಇದ್ದೀರಿ. ಮಾನ್ಯ ರಾಜ್ಯಪಾಲರು ನಿಲ್ಲಲಿಲ್ಲ, ಅವರು ಇಳಿದು ಹೊರಟೇ ಬಿಟ್ಟರು. When he started moving, naturally the National Anthem will be played; that you all please understand. (2) This is not played by the Government of Karnataka. This is played by the legislature; you know. Kindly understand.

**DEPUTY CHAIRMAN:** What is the solution from your side? ಏಕೆಂದರೆ, ಇದರ ಬಗ್ಗೆ ಸುಮ್ಮನೆ ಚರ್ಚೆ ಮಾಡುವುದಲ್ಲ, ಇದರ ಬಗ್ಗೆ ಏನು ಮಾಡಬೇಕೆಂದು ಹೇಳಿ. ಅದರ ಬಗ್ಗೆ ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬಹುದಾಗಿದೆ. ಆ ಕಡೆಯಿಂದ ಮತ್ತು ಈ ಕಡೆಯಿಂದ ಅಭಿಪ್ರಾಯಗಳನ್ನು ತೆಗೆದುಕೊಂಡು ಈ ವಿಚಾರವನ್ನು ಕ್ಲಿಯರ್ ಮಾಡಬೇಕೆನ್ನುವುದು ಸದನದ ಉದ್ದೇಶವಾಗಿದೆ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರು ಅಲ್ಲಿಗೆ ಹೋದಾಗ National Anthem ಅನ್ನು ಬಿಟ್ಟು, "ಜನಗಣಮನ" ಹಾಡಿಸುವುದನ್ನು ಬಿಟ್ಟು, ಅವರು ಮಾಡಬೇಕಾಗಿರುವ ಕೆಲಸವನ್ನು ಬಿಟ್ಟು ಅವರು ಹೋಗುತ್ತಾರೆಂದರೆ ನಾನು ಏನು ಹೇಳಲಿ. ರಾಜ್ಯಪಾಲರು walking ಹೋದರು ಎಂದು ಹೇಳಲಾ? What do you want me to do? What you want us to do?

**(ಗೊಂದಲ)**

**(ಮುಂದು)**

**(046) 27.01.2026 05.50 ಎಸ್‌ವಿ-ಎಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):-** ರಾಜ್ಯಪಾಲರಿಗೆ ಸಹನೆ ಇರಬೇಕು. ಕಾನೂನನ್ನು ತಿಳಿದಿರಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಒಬ್ಬೊಬ್ಬರೇ ಮಾತನಾಡಿದರೆ ಅವಕಾಶ ಕೊಡಬಹುದು. ಈಗ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ಅದರಲ್ಲಿ ನಿಮಗೇನಾದರೂ dispute ಇದ್ದರೆ ಒಬ್ಬೊಬ್ಬರು ಒಂದೊಂದು ವಾಕ್ಯದಲ್ಲಿ ಹೇಳಿ. ಅದಕ್ಕೆ ಆಮೇಲೆ ಮಾನ್ಯ ಸಚಿವರು clarification ಕೊಡಲಿ.

**ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ಕೊಡಿ. ಮಾನ್ಯ ಸಭಾನಾಯಕರಾಗಲೀ, ನಾನಾಗಲೀ ಯಾವುದನ್ನೂ ನಾವು ಹಾಗೆ ಹೇಳಿಲ್ಲ ಎಂದು ಹೇಳುವುದಿಲ್ಲ. ಇದು ರಾಷ್ಟ್ರಮಟ್ಟದ debate ಆಗಬೇಕು. ನಾನು ಆರ್ಟಿಕಲ್ 51 ಬಗ್ಗೆ ಹೇಳಿದೆನು. ತಮಿಳುನಾಡಿನಲ್ಲಿ ಯಾವುದರ ಬಗ್ಗೆ ಚರ್ಚೆಯಿದೆ ಗೊತ್ತೇ?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಚಿವರೆ, ದಯಮಾಡಿ ಮೊದಲು ಕರ್ನಾಟಕದ ವಿಷಯ ನೋಡೋಣ. ನಂತರ ತಮಿಳುನಾಡಿನ ಬಗ್ಗೆ ಮಾತನಾಡೋಣ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಮೊದಲು ಇಲ್ಲಿನ ವಿಷಯ ಪರಿಹರಿಸಿಕೊಳ್ಳೋಣ. Then you can go to that matter.

**ಶ್ರೀ ಹೆಚ್. ಕೆ. ಪಾಟೀಲ್:-** ಈಗ ಅಲ್ಲಿಗೆ ಹೋಗುವುದಿಲ್ಲ. ಚರ್ಚೆ ಮಾಡುವುದೇನಿದೆಯೋ ಅದನ್ನು ಚರ್ಚೆ ಮಾಡೋಣ. ಆದರೆ ಈ ರೀತಿ ಚರ್ಚೆಯಲ್ಲ. ಇದೇ ವಿಷಯದ ಬಗ್ಗೆ ಎರಡು ತಾಸು ಚರ್ಚೆಗೆ ಅವಕಾಶ ಕೊಡಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಚಿವರೆ, ಆಡಳಿತ ಪಕ್ಷದ ಸದಸ್ಯರು ಧಿಕ್ಕಾರ ಕೂಗಿದ್ದು ಸರಿಯೇ ಎಂದು ಹೇಳಿ.

**(ಗೊಂದಲ)**

**ಉಪ ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಮಗೆ ಈ ವಿಷಯದ ಬಗ್ಗೆ ಚರ್ಚೆ ಬೇಕೇ ಅಥವಾ ಬೇಡವೇ? ಚರ್ಚೆ ಬೇಕಾದರೆ ಅದಕ್ಕೆ ಅವಕಾಶ ಮಾಡಿಕೊಡಲಾಗುವುದು.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರನ್ನು ಗೌರವಯುತವಾಗಿ ಕಳುಹಿಸಿಕೊಡಬೇಕಾದುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರ ಘನತೆವೆತ್ತ ರಾಜ್ಯಪಾಲರನ್ನು ನಡೆಸಿಕೊಂಡಿರುವ ರೀತಿಯ ಬಗ್ಗೆ ಇಡೀ ರಾಜ್ಯದ ಜನತೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:–** ಚರ್ಚೆಗೆ ಸಿದ್ಧವಿದ್ದೇವೆಂದು ಸರ್ಕಾರವೇ ಹೇಳರುವುದರಿಂದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ. ಎಲ್ಲರಿಗೂ ಮಾತನಾಡುವಂಥದ್ದಿರುತ್ತದೆ. ಒಬ್ಬೊಬ್ಬರೇ ಮಾತನಾಡಿ. ಮಾನ್ಯ ಭಾರತಿ ಶೆಟ್ಟಿಯವರೇ, ಹೇಳಿ. ಅತ್ಯಂತ ಸಂಕ್ಷಿಪ್ತವಾಗಿ ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. "ನಾನು ಓಡಿ ಹೋದೆ" ಎನ್ನುವ ಪದವನ್ನು ಅವರು ಉಲ್ಲೇಖ ಮಾಡಿದರು. ನಾನು ಅವರ ಹತ್ತಿರ ಒಂದು ವಿನಂತಿ ಮಾಡುತ್ತೇನೆ. ಹಿಂದೆ ಇದ್ದಂಥ ಶ್ರೀ ಹನ್ಸ್‌ರಾಜ್ ಭಾರದ್ವಾಜ್ ಅವರ ಭಾಷಣದ ಸಂದರ್ಭದಲ್ಲಿ ಈ ರೀತಿಯ ಗೊಂದಲ ಉಂಟಾದಾಗ ಇವರು ಆ ರೀತಿಯ ಶಬ್ದವನ್ನು ಬಳಕೆ ಮಾಡಿದ್ದಾರೆಯೇ? ಆಗ ಏನಾದರೂ ಘೋಷಣೆಯನ್ನು ಕೂಗಿದ್ದಾರೆಯೇ? ಅದರ ಆತ್ಮಾವಲೋಕನ ಮಾಡಬೇಕು. ಎರಡನೆಯದಾಗಿ ಅವರು ರಾಷ್ಟ್ರಗೀತೆಗೆ ಅಪಮಾನ ಮಾಡಿದರೆಂದು ಹೇಳಿದರು.

**ಉಪ ಸಭಾಪತಿಯವರು:–** ಮಾನ್ಯ ಭಾರತಿ ಶೆಟ್ಟಿಯವರೆ, ಬಹುಶಃ ಇದನ್ನು ಚರ್ಚೆಗೆ ತೆಗೆದುಕೊಂಡಾಗ ನೀವು ಈ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಈಗ ಒಂದು ಹಂತಕ್ಕೆ ತಂದು, ಮುಂದುವರೆಸೋಣ. ಈಗ ಚರ್ಚೆ ಮಾಡುವುದಕ್ಕೆ ಅವರು ಸಿದ್ಧರಿದ್ದೇವೆಂದು ಹೇಳುತ್ತಿದ್ದಾರೆ. ಅದಕ್ಕೆ ಒಂದು ಸಮಯವನ್ನು ನಿಗದಿ ಮಾಡೋಣ. ಈಗ ಎಲ್ಲದರ ಮಧ್ಯೆ ನಮ್ಮದು, ನಮ್ಮದು, ಒಂದು ವಾಕ್ಯದಲ್ಲಿ, ಇದು ಏಕೆ?

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:–** ನೀವು ಈಗಾಗಲೇ ಮಾತನಾಡಿದ್ದೀರಿ. ಮಾನ್ಯ ಪೂಜಾರ್ ಅವರೇ, ನಿಮಗೆ ಅವಕಾಶ ಕೊಡಲಾಗಿದೆ. ಪ್ರತಿಬಾರಿ ನೀವು ಅವರಿಗೆ ಕೌಂಟರ್ ಮಾಡುವುದಕ್ಕಾಗುವುದಿಲ್ಲ. ಮಾತನಾಡಿದವರೇ ಮಾತನಾಡುವುದಾದರೆ ಇದಕ್ಕೆ ಏನರ್ಥವಿದೆ ಹೇಳಿ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೇ, ವಂದನಾ ನಿರ್ಣಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

**ಉಪ ಸಭಾಪತಿಯವರು:–** ನೋಡಿ. ಇದನ್ನು ಈಗಾಗಲೇ ಹೇಳಿದೆ. ಅವರು ವಿರೋಧ ಮಾಡಿದ್ದಾರೆ ಎನ್ನುವುದನ್ನು ಮತ್ತೆ ಮತ್ತೆ ಹೇಳಬೇಡಿ. ಅದನ್ನು solve ಮಾಡುವುದಕ್ಕೆ ಏನಿದೆ ಎಂಬುದನ್ನು ಹೇಳಿ. ನೀವು ಈಗಾಗಲೇ ಮಾತನಾಡಿದ್ದೀರಿ. ಒಂದೇ ಪದದಲ್ಲಿ ಮುಗಿಸಬೇಕು.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೆ, ಮಾನ್ಯ ರಾಜ್ಯಪಾಲರು ಮಾಡಿರುವಂಥ ಯಥಾವತ್ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸುತ್ತಿದ್ದಾರೆಯೋ ಅಥವಾ ಸರ್ಕಾರ ಮನಸೋ ಇಚ್ಛೆ ಪ್ರಿಂಟ್ ಮಾಡಿರುವ ಬುಕ್‌ನ ಬಗ್ಗೆ ವಂದನಾ ನಿರ್ಣಯ ಮಂಡಿಸುತ್ತಿದ್ದಾರೆಯೋ ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಕೆ.ಪಾಟೀಲರು ಬುದ್ಧಿವಂತರು. Selective ಯಾಕೆ ಆಗುತ್ತಾರೆ? ಆಡಳಿತ ಪಕ್ಷದ ಸದಸ್ಯರು ಧಿಕ್ಕಾರ ಕೂಗಿದ್ದು ಸರಿಯೇ?

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):–** 2019ರಲ್ಲಿ ನೀವು ಬಿ.ಜೆ.ಪಿಯ ಸದಸ್ಯರೆಲ್ಲಾ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ಬಾವಿಗೆ ಹೋಗಿದ್ದಿರಿ. ನಿಮಗೆ ಯಾವ ರೀತಿ ಬೇಕೋ ಆ ರೀತಿ ಮಾಡುತ್ತೀರಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸಂವಿಧಾನದ ಅನುಚ್ಛೇದ 175 ಮತ್ತು 176 ಏನು ಹೇಳುತ್ತದೆ? ಆಡಳಿತ ಪಕ್ಷದ ಸದಸ್ಯರ ನಡೆ ಸಾಂವಿಧಾನಿಕವಾಗಿದೆಯೇ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ನಮ್ಮ ಮೇಲೆ ಗೂಂಡಾಗಿರಿ ಮಾಡಿದ್ದೀರಿ.

**ಶ್ರೀ ಎನ್. ಎಸ್. ಬೋಸರಾಜು:–** ನೀವು ಗೂಂಡಾಗಿರಿ ಮಾಡುವವರು.

**(ಗೊಂದಲ)**

**ಉಪ ಸಭಾಪತಿಯವರು:–** ಸದನ ಈಗ ಒಂದು ಹಂತಕ್ಕೆ ಬರುತ್ತಿದೆ. ಸುಮ್ಮನೆ dispute ಮಾಡಬೇಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಒಂದು ಗಂಟೆಯಿಂದ ಅವಕಾಶಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಎಲ್ಲರೂ ಹೀಗೆ ಮಾತನಾಡುತ್ತಿದ್ದರೆ ನಾವು ಯಾಕೆ ಕುಳಿತಿರುವುದು? ಬೆಳಗ್ಗೆಯಿಂದ ಸತತವಾಗಿ ಅವಕಾಶ ಕೇಳುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ನೀವು ಅತ್ಯಂತ ಸಂಕ್ಷಿಪ್ತವಾಗಿ ಮಾತನಾಡಿ. ಮಾನ್ಯ ನವೀನ್ ಅವರೇ, ನೀವು ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್. ಕೆ. ಪಾಟೀಲ್ ಅವರು ತಮ್ಮ ಅನುಭವವನ್ನು ಬುದ್ಧಿವಂತಿಕೆ ಮೂಲಕ ವ್ಯಕ್ತಪಡಿಸಿದರು. ಅದನ್ನು ನಾವು ಒಪ್ಪುತ್ತೇವೆ. ಮಾನ್ಯ ಸಚಿವರೆ, ಅದರಲ್ಲಿ ನೀವು ಕೆಲವು ಸಂಗತಿಗಳನ್ನು ಮರೆಮಾಚಿದ್ದೀರಿ. ಅಲ್ಲಿ ರಾಷ್ಟ್ರಗೀತೆಯು ಚಾಲನೆಯಿದ್ದಾಗ ಅವರು ಹೋಗಿದ್ದರೆ, ಅದು ತಿರಸ್ಕಾರ ಆಗುತ್ತಿತ್ತು. ಅವರ ಜೊತೆಗೆ ಸಭಾಪತಿಗಳೂ ಹೋದರು, ಸಭಾಧ್ಯಕ್ಷರೂ ಹೋದರು. ಮುಖ್ಯಮಂತ್ರಿಗಳೂ ಹೋದರು. ನೀವೂ ಹೋದಿರಿ. ನೀವೆಲ್ಲರೂ ಅವರ ಹಿಂದೆ ಹೋದಿರಿ. ಅಂದರೆ ನೀವೆಲ್ಲರೂ ತಿರಸ್ಕಾರ ಮಾಡಿದ್ದೀರಾ? ಆ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರು ಧಿಕ್ಕಾರ ಕೂಗಿದರು. ಬಟ್ಟೆ ಹರಿದುಕೊಂಡರು, ಅಡ್ಡ ಹಾಕಿದರು. ಇದನ್ನು ಯಾವ ರೀತಿ ಸಮರ್ಥನೆ ಮಾಡುತ್ತೀರಿ? ಸಂವಿಧಾನದ 175 ಮತ್ತು 176ನೇ ಅನುಚ್ಛೇದ ಏನು ಹೇಳುತ್ತದೆ? ಅದನ್ನು ನಾನು ಸಂಕ್ಷಿಪ್ತವಾಗಿ ಓದುತ್ತೇನೆ. ಅವರು ಭಾಷಣಕ್ಕೆ ಬರುವ ಸಂದರ್ಭ ಇರಬಹುದು, ಹೋಗುವ ಸಂದರ್ಭ ಇರಬಹುದು, ಭಾಷಣದ ಅವಧಿಯಲ್ಲಿ ಇರಬಹುದು, ವಿಘ್ನವುಂಟು ಮಾಡತಕ್ಕದ್ದಲ್ಲ. ಅಡ್ಡಿಯುಂಟು ಮಾಡತಕ್ಕದ್ದಲ್ಲ. ಅದನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ರಾಜ್ಯಪಾಲರಿಗೆ ತೋರಿದ ತೀವ್ರ ಅಗೌರವವೆಂದು ಪರಿಗಣಿಸತಕ್ಕದ್ದು. ಅಂಥ ಸದಸ್ಯ ಅಥವಾ ಸದಸ್ಯರನ್ನು ಸದನದಲ್ಲಿ ಮಂಡಿಸಬಹುದಾದ ಪ್ರಸ್ತಾಪದ ಮೇರೆಗೆ ಅಧಿವೇಶನ ಗೊತ್ತು ಪಡಿಸಿದ ಅವಧಿಗೆ ಅಥವಾ ಉಳಿದ ಅವಧಿಗೆ ಅಮಾನತುಗೊಳಸತಕ್ಕದ್ದು. Option ಇಲ್ಲ. Suspend ಮಾಡಿ ಎಂದು ಹೇಳುತ್ತದೆ. ರಾಜ್ಯಪಾಲರಿಗೆ ಅಪಮಾನ ಮಾಡಿರುವವರನ್ನು ಈ ಸದನ ಗೌರವದಿಂದ ಕಾಣುವುದಾದರೆ ನೀವು ಖಂಡನಾ ನಿರ್ಣಯ ಮಂಡಿಸಿ. ವಂದನಾ ನಿರ್ಣಯ ಏಕೆ ಮಂಡಿಸುತ್ತೀರಿ? ಈ ಸದನ ಅದನ್ನು ಅಗೌರವ ಎಂದು ಪರಿಗಣಿಸುವುದಾದರೆ ಮೊದಲು ಅವರನ್ನು ಅಮಾನತು ಮಾಡಿ. ಅದನ್ನು ತೀರ್ಮಾನ ಮಾಡಿ ಆಮೇಲೆ ಸದನ ನಡೆಸಬೇಕಿತ್ತು. ಇಲ್ಲಿ option ಕೊಟ್ಟಿದ್ದಾರೆಯೇ? ಇಲ್ಲಿ ಆಯ್ಕೆಯನ್ನು ಕೊಟ್ಟಿಲ್ಲ.

**ಉಪ ಸಭಾಪತಿಯವರು:–** ನಿಯಮದ ಪ್ರಕಾರವೇ ಹೋಗುವುದಾದರೆ ಪ್ರತಿಯೊಬ್ಬರ ಸಮಸ್ಯೆಗಳೂ ಇವೆ. ನೀವು ಹೇಳುತ್ತಿರುವುದು ಸರಿಯಿದೆ. ಮಾನ್ಯ ಕಾನೂನು ಸಚಿವರೇ ಅದಕ್ಕೆ ಉತ್ತರ ಕೊಡಬೇಕು. ಇರುವಂಥ ನಿಯಮಗಳನ್ನು ಪಾಲನೆ ಮಾಡಬೇಕಾದುದು ಸದನದ ಎಲ್ಲರ ಕರ್ತವ್ಯವೂ ಹೌದು. ಪ್ರತಿಯೊಂದು ಸಂದರ್ಭಗಳಲ್ಲಿಯೂ ನಿಯಮಗಳನ್ನು ಪಾಲನೆ ಮಾಡಬೇಕು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾನಾಯಕರೇ, ಇದು ಬಹಳ simple ಆಗಿರುವುದು complication ಮಾಡಿಕೊಳ್ಳಬೇಡಿ. ಮಾನ್ಯ ಎಸ್.ಎಲ್. ಭೋಜೇಗೌಡರು ಬಹಳ ಸಿಂಪಲ್ ಆಗಿ ಕೇಳಿದರು. ಮಾನ್ಯ ಸಭಾನಾಯಕರು ತಮ್ಮ ಹೇಳಿಕೆಯನ್ನು withdraw ಮಾಡಿಕೊಂಡು ನಮ್ಮದು ಈಗ ವಂದನಾ ನಿರ್ಣಯ, ಖಂಡನಾ ನಿರ್ಣಯ ಅಲ್ಲ ಎಂದು ಹೇಳಲಿ.

**ಶ್ರೀ ಹೆಚ್. ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸರ್ಕಾರ ಚರ್ಚೆಗೆ ಸಿದ್ಧವಿದೆ ಎಂದು ಮಾನ್ಯ ರವಿಯವರಿಗೆ ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ಕುಳಿತುಕೊಳ್ಳಿ. ಈ ವಿಚಾರದಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇವೆ. ಈ ಸಂದರ್ಭದಲ್ಲಿ ಇನ್ನು ಮುಂದೆ ಈ ವಿಚಾರದ ಬಗ್ಗೆ ಚರ್ಚೆಗೆ ಆಸ್ಪದವಿರುವುದಿಲ್ಲ. ದಯವಿಟ್ಟು ಎಲ್ಲರೂ ಸಹಕಾರ ಕೊಡಿ. ಈಗ ಅವರು ಓದಲಿ. ತದನಂತರ ಚರ್ಚೆಗೆ ಅವಕಾಶ ಕೊಡಲಾಗುವುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಂದನಾ ನಿರ್ಣಯನವನ್ನು ಮಂಡಿಸಬಹುದು.

**ಉಪ ಸಭಾಪತಿಯವರು:–** ಒಂದು ನಿಮಿಷ ಕೇಳಿ. ಅವರು ವಂದನಾ ನಿರ್ಣಯವನ್ನು ಮಂಡಿಸಲಿ. ಈ ಚರ್ಚೆಯಾದ ನಂತರ ಅದನ್ನು ಅನುಮೋದಿಸೋಣ.

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ.... ಅಲ್ಲಿಯೇ ಇರುವುದು ವಿಷಯ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಪೀಠದ ವಿಚಾರವನ್ನು ನಾವು ವಿರೋಧಿಸಿಲ್ಲ ಮಾನ್ಯ ಸಭಾಪತಿಯವರೇ. ಸರ್ಕಾರ ಹೇಳುತ್ತಿರುವುದನ್ನೂ ನಾವು ಗಣನೆಗೆ ತೆಗೆದುಕೊಂಡಿದ್ದೇವೆ. ಇದು ನಮ್ಮ ಸಣ್ಣ ಪ್ರಶ್ನೆ. ಇಲ್ಲಿ ರಾಜ್ಯಪಾಲರ ವಿಚಾರಗಳನ್ನು ಬಹಳ ಚರ್ಚೆ ಮಾಡುವಂತಿಲ್ಲ, ಮಾಡಲೂಬಾರದು. ಆದರೆ ಪದ್ಧತಿಯಂತೆ ಇಲ್ಲಿ ವಂದನಾ ನಿರ್ಣಯವನ್ನು ಮಂಡಿಸಬೇಕು. ಆ ಪದ್ಧತಿಯ ಪ್ರಕಾರವೇ ಮಾಡಲಿ. ಈಗ ನಾನು ಎರಡು ವಿಷಯಗಳನ್ನು ಹೇಳಿದ್ದೇನೆ. [XXX] ಮಾಡಿದ್ದೀರಿ. ವಂದನೆಯನ್ನೂ ಮಾಡುತ್ತೀರಿ. ಎರಡೂ ಒಟ್ಟಿಗೆ ಹೋಗುವಂತಿಲ್ಲ. ನೀವು [XXX] ಮಾಡುವುದಾದರೆ ವಂದನೆ ಬೇಡ. ನೀವು [XXX]ಯನ್ನೇ ಮಾಡಿ. ನೀವು ವಂದನೆ ಮಾಡುತ್ತೀರಿ ಎನ್ನುವುದಾದರೆ ಮೊದಲು ಕ್ಷಮೆ ಯಾಚಿಸಿಬಿಡಿ. ಮೊದಲು ಮಾನ್ಯ ರಾಜ್ಯಪಾಲರಿಗೆ ಒಂದು ಪತ್ರ ಕಳುಹಿಸಿ. ಈ ರೀತಿ ಆಗಿದ್ದಕ್ಕೆ ಸರ್ಕಾರ ಕ್ಷಮೆ ಯಾಚಿಸುತ್ತದೆ ಎಂದು ವಿಷಾದ ವ್ಯಕ್ತ ಪಡಿಸಿ ಚರ್ಚೆ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು)**

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಏಕೆ ಅಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೀರಿ? ನಮಗೆ ಅದು ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದು ಸಂವಿಧಾನ. ಸಂವಿಧಾನವನ್ನು ಹಿಡಿದುಕೊಂಡು ಅಲ್ಲಾಡಿಸಿದರೆ ಗೌರವ ಬರುವುದಿಲ್ಲ. ಸಂವಿಧಾನದ ಗೌರವವನ್ನು ಎತ್ತಿ ಹಿಡಿಯಬೇಕು. ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ಗೌರವ ಕೊಡಬೇಕೆಂದರೆ ಅದನ್ನು ಮಾಡಿ ಮೊದಲು.

**ಶ್ರೀ ಅಬ್ದುಲ್ ಜಬ್ಬಾರ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಕೇವಲ ನಿಮಗೆ ಮಾತ್ರ ರಾಜ್ಯಪಾಲರಲ್ಲ. ನಮಗೂ ರಾಜ್ಯಪಾಲರು. ನೀವೇಕೆ ಗುತ್ತಿಗೆ ಪಡೆದುಕೊಂಡಿದ್ದೀರಿ? ಅವರು ರಾಜ್ಯಕ್ಕೆ ರಾಜ್ಯಪಾಲರು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸಂವಿಧಾನಕ್ಕೆ ಗೌರವ ಇಲ್ಲ ಎಂದರೆ ಅದಕ್ಕೆ ಏನು ಬೆಲೆ ಇರುತ್ತದೆ?

**(ಗೊಂದಲ)**

**(ಮುಂದು)**

(47) 27-01-2026, 6.0, ಕೆಜಿ.ಆರ್ಎನ್ (ಉಪ ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಎರಡೂ ಕಡೆಯ ಸದಸ್ಯರು ಒಟ್ಟಿಗೆ ಪರಸ್ಪರ ಮಾತನಾಡ ತೊಡಗಿದರು)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಕ್ಷಮೆ ಕೇಳಬೇಕು. ಅವರು ರಾಜ್ಯಪಾಲರಾಗಿದ್ದ ಶ್ರೀ ವಜುಭಾಯಿ ವಾಲಾ ರವರಿಗೆ ಧಿಕ್ಕಾರ ಹಾಕಿದವರು. ಅವರು 2019 ರಲ್ಲಿ ರಾಜ್ಯಪಾಲರಿಗೆ ಧಿಕ್ಕಾರ ಹಾಕಿದವರು. ಅವರಿಗೆ ನಾಚಿಕೆಯಾಗಬೇಕು. ವಿಧಾನಸಭೆಯಲ್ಲಿ ಬಾವಿಗೆ ಇಳಿದು ಧಿಕ್ಕಾರ ಹಾಕಿದರು. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ರಾಜ್ಯಪಾಲರಿಗೆ ಗೌರವ ಕೊಡದೆ ಅವರಿಗೆ ಅವಮಾನ ಮಾಡಿ ಕಳುಹಿಸಿಕೊಟ್ಟರು. ಅವರಿಗೆ ಧಿಕ್ಕಾರ ಹಾಕಿದರು. ಇದನ್ನು ಮಾಡಿದಕ್ಕೆ 'ವಂದನಾ ನಿರ್ಣಯ ಮಂಡನೆ' ಮಾಡುತ್ತಾರೆಯೇ? ಇದು ಸರಿಯೇ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮಗೂ ರಾಜ್ಯಪಾಲರ ಮೇಲೆ ಗೌರವ ಇದೆ. ನಾವು ಅವರು ಹೇಳಿದ ಮೇಲೆ ಗೌರವ ಕೊಡಬೇಕೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರು ರಾಜ್ಯಪಾಲರಿಗೆ ಎಚ್ಚರಿಕೆಯನ್ನು ಕೊಡುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ರಾಷ್ಟ್ರಗೀತೆ ನಡೆಯುವ ಸಮಯದಲ್ಲಿ ಹೊರಗೆ ಹೋಗಿದ್ದು ತಪ್ಪು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಎಲ್ಲಾದರೂ ಇತಿಹಾಸದಲ್ಲಿ ರಾಷ್ಟ್ರಪತಿಯವರಿಗೆ ಮತ್ತು ರಾಜ್ಯಪಾಲರಿಗೆ ಎಚ್ಚರಿಕೆ ನೀಡಿರುವುದು ಇದೆಯೇ? ಅವರು ಬೆರಳನ್ನು ತೋರಿಸಿ ಎಚ್ಚರಿಕೆಯನ್ನು ಕೊಡುತ್ತಾರೆ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಎರಡೂ ಕಡೆಯ ಸದಸ್ಯರು ಪರಸ್ಪರ ಧಿಕ್ಕಾರಗಳನ್ನು ಕೂಗುತ್ತಿದ್ದರು)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಅವರು ಸದನದ ಕಾರ್ಯಕಲಾಪಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ರಾಜ್ಯಪಾಲರು ಸಂವಿಧಾನವನ್ನು ಉಲ್ಲಂಘನೆ ಮಾಡಿದ್ದಾರೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಆ ರೀತಿಯ ಸಂಪ್ರದಾಯ ನಮ್ಮದಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 06 ಗಂಟೆ 02 ನಿಮಿಷಗಳಿಗೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(48) 27.01.2026 6.50 ಟಿಸಿಹೆಚ್-ಬಿಎನ್‌ಎಸ್

**(ಸಂಜೆ 6 ಗಂಟೆ 03 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 6 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**13. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆ ಪೀಠದಿಂದ ನಮ್ಮ ಬೇಡಿಕೆಯ ಬಗ್ಗೆ ತಾವು ಇನ್ನೂ ತೀರ್ಮಾನ ಮಾಡಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದಂತಹ ಭಾಷಣವನ್ನು ನಾನು ಸ್ವಾಗತ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೇ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಅವರು ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸಿದ ನಂತರ ನಾನು ನಿಮಗೆಲ್ಲರಿಗೂ ನಾಳೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಈಗ ಅದನ್ನು ಅರ್ಧಕ್ಕೆ ನಿಲ್ಲಿಸುವುದು ಈ ಸದನಕ್ಕೆ ಗೌರವ ಬರುವಂಥದ್ದಲ್ಲ. ಈಗಾಗಲೇ ಮಾನ್ಯ ಐವನ್ ಡಿ'ಸೋಜಾ ರವರು ಪ್ರಾರಂಭ ಮಾಡಿಬಿಟ್ಟಿದ್ದಾರೆ. ಅವರು ಪ್ರಾರಂಭ ಮಾಡದಿದ್ದರೆ ನಾನು ನಿಮಗೆ ಚರ್ಚೆಗೆ ಅವಕಾಶ ಕೊಡುತ್ತಿದ್ದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಷ್ಟೊತ್ತು ನಡೆದ ಚರ್ಚೆ . . .

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ನಾನು ಹೇಳುವುದನ್ನು ದಯಮಾಡಿ ಸ್ವಲ್ಪ ಕೇಳಿ. ನಿಮಗೂ ತುಂಬಾ ಜವಾಬ್ದಾರಿ ಇದೆ. ಸದನವನ್ನು ನಡೆಸುವಂಥ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೆ ಮತ್ತು ಆಡಳಿತ ಪಕ್ಷದ ನಾಯಕರಿಬ್ಬರಿಗೂ ಇದೆ. ಹಾಗಾಗಿ ಅವರು ಪ್ರಾರಂಭ ಮಾಡಿದ್ದಾರೆ. ಮಾನ್ಯ ಐವನ್ ಡಿ'ಸೋಜಾ ರವರೇ, ತಾವು ಮಾತನಾಡಿ ಮುಗಿಸಿ. ವಿರೋಧ ಪಕ್ಷದ ನಾಯಕರೇ, ನಾಳೆ ನಿಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಇದಕ್ಕೆ ಒಂದು ಸ್ಪಷ್ಟವಾದಂತಹ ruling ಅನ್ನು ಕೊಟ್ಟರೆ ನಾವು ಮುಂದುವರೆಸಬಹುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನೀವು adjourn ಮಾಡಿ ಹೋಗುವುದಕ್ಕೆ ಕಾರಣ ಇದೆ. ನಮ್ಮ ಬೇಡಿಕೆ ಏನಿತ್ತು ಅದರ ಬಗ್ಗೆ ಚರ್ಚೆ ಮುಗಿಯಲಿಲ್ಲ. **(ಗೊಂದಲ)** ಆದ್ದರಿಂದ

ಮಾನ್ಯ ಸದಸ್ಯರು ಗದ್ದಲ ಮಾಡಿದ್ದರಿಂದ ತಾವು ಹೋಗಿದ್ದೀರಿ. ಈಗ ತಾವು ಬಂದಮೇಲೆ ಅದಕ್ಕೆ ಉತ್ತರ ಕೊಡಬೇಕಲ್ಲವೇ? **(ಗೊಂದಲ)** ಅದಾದಮೇಲೆ ನಾವು ಒಪ್ಪುವುದಕ್ಕೆ ಸಿದ್ಧರಿದ್ದೇವೆ. **(ಗೊಂದಲ)** ತಾವು ಈ ರೀತಿ ಮಾಡುವುದು ಬೇಡ. **(ಗೊಂದಲ)** ಮಾನ್ಯ ಸಭಾಪತಿಯವರೇ, ಇದಕ್ಕೆ ಉತ್ತರ ಕೊಡಬೇಕು. **(ಗೊಂದಲ)** ವಂದನೆ ಮತ್ತು ನಿಂದನೆ ಎರಡೂ ಒಟ್ಟಿಗೆ ಹೋಗುವುದಿಲ್ಲ. **(ಗೊಂದಲ)** ವಂದನೆಯೇ, ನಿಂದನೆಯೇ ಎಂಬುದು ತೀರ್ಮಾನ ಆಗಬೇಕು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾತನಾಡಿದಂತಹ ಭಾಷಣವನ್ನು ಗೌರವಾನ್ವಿತ ರಾಜ್ಯಪಾಲರು ಸಂಪೂರ್ಣವಾಗಿ ಭಾಷಣವನ್ನು ಓದದಿದ್ದರೂ ಕೂಡ ನಮ್ಮ ಸರ್ಕಾರ ಒಟ್ಟಾರೆ ರಾಜ್ಯದ ಆರ್ಥಿಕ, ಸಾಮಾಜಿಕ ಹಾಗೂ ಭೌತಿಕ ಅಭಿವೃದ್ಧಿಯ ವೇಗವನ್ನು ದ್ವಿಗುಣಗೊಳಿಸಲು ನನ್ನ ಸರ್ಕಾರ ಕಂಕಣಬದ್ಧವಾಗಿದೆ ಎಂದು ಹೇಳುವ ಮೂಲಕ ಅವರು ತಮ್ಮ ಭಾಷಣವನ್ನು ಕೊನೆಗೊಳಿಸಿದ್ದಾರೆ. **(ಗೊಂದಲ)** ತಮ್ಮ ಪ್ರಕಾರ ಹಾಗೂ ನಮ್ಮ ದೇಶದ ಸಂವಿಧಾನದ ಅನುಚ್ಛೇದ 176(1) ರ ಪ್ರಕಾರ ಅವರು ಭಾಷಣವನ್ನು ಸಂಪೂರ್ಣವಾಗಿ ಓದಬೇಕಾಗಿತ್ತು ಎಂಬುದು ನಮ್ಮ ಅನಿಸಿಕೆ. **(ಗೊಂದಲ)** ಆದರೆ ಅವರು ಮೊದಲ ಮತ್ತು ಕೊನೆಯ ಸಾಲುಗಳನ್ನು ಓದುವ ಮೂಲಕ ತಮ್ಮ ಭಾಷಣವನ್ನು ಸದನದ ಮುಂದೆ ಮಂಡಿಸಿದ ಕಾರಣಕ್ಕಾಗಿ ಮತ್ತು ಸದನ ಅದನ್ನು accept ಮಾಡಿದ ಕಾರಣಕ್ಕಾಗಿ . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರಿಗೆ ಅವಮಾನ ಮಾಡಿರುವುದು ಸರಿ ಇದ್ದರೆ ಸರ್ಕಾರದ ತೀರ್ಮಾನವೇನು? ಇದರ ಬಗ್ಗೆ ತಾವು ರೂಲಿಂಗ್ ಅನ್ನು ಕೊಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಈಗಾಗಲೇ ruling ಕೊಡಲಾಗಿದೆ. ಈಗ ಆಡಳಿತ ಪಕ್ಷದವರು ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸುವುದಕ್ಕೆ ಪೀಠ ಅವಕಾಶ ಕೊಟ್ಟ ನಂತರ ಮಧ್ಯದಲ್ಲ ನಿಲ್ಲಿಸಬಾರದು, complete ಮಾಡಿಸಿ ನಾಳೆ ನಿಮಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಲಾಗುತ್ತದೆ ಎಂದು ruling ಕೊಟ್ಟಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಮಾಡಲಿ. **(ಗೊಂದಲ)** ಅವರು ಮಾಡುವುದು ವಂದನೆಯೇ ಅಥವಾ ನಿಂದನೆಯೇ?

**ಉಪ ಸಭಾಪತಿಯವರು:–** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ಅದನ್ನು ನಾಳೆ ಚರ್ಚೆ ಮಾಡೋಣ. **(ಗೊಂದಲ)** ದಯವಿಟ್ಟು co–operate ಮಾಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ತೀರ್ಮಾನ ಆಗಬೇಕೆಂದು ನಮ್ಮ ವಾದ ಇರುವುದು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರಿಗೆ ಗೌರವಾರ್ಪಣೆ ಮಾಡುವುದಕ್ಕೋಸ್ಕರ ನಾವು ಈಗಾಗಲೇ ಸದನದ ಮುಂದೆ **(ಗೊಂದಲ)** ನಿರ್ಣಯವನ್ನು ಮಂಡನೆ ಮಾಡಿದ್ದೇವೆ. **(ಗೊಂದಲ)** ಈ ಒಂದು ಸಂದರ್ಭದಲ್ಲಿ ನಾನು ಮುಂದೆ ರಾಜ್ಯದ ರಾಜ್ಯಪಾಲರ ನಡೆ ಮತ್ತು ರಾಜ್ಯಪಾಲರು ಮಂಡಿಸಿದಂತಹ ಈ ಭಾಷಣವನ್ನು ಹೆಚ್ಚು ಕೂಲಂಕಷವಾಗಿ ಇದರ ಬಗ್ಗೆ ಚರ್ಚೆ ಮಾಡಲು ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಕಾನೂನು ಸಚಿವರು ಕೂಡ ಅದನ್ನು ಹೇಳುತ್ತಿದ್ದರು.

**(ಗೊಂದಲ)**

**ಉಪ ಸಭಾಪತಿಯವರು:–** ಈ ಪೀಠ ಚರ್ಚೆಗೆ ಒಪ್ಪಿಕೊಂಡಿದೆ. ಚರ್ಚೆಗೆ ಅವಕಾಶ ಮಾಡಿಕೊಡಲಾಗುವುದೆಂದು ಹೇಳಲಾಗಿದೆ. ಆದ್ದರಿಂದ ದಯಮಾಡಿ ಸಹಕಾರ ನೀಡಿ. ನೀವೆಲ್ಲಾ ಹಿರಿಯ ಸದಸ್ಯರು ಇದ್ದೀರಿ, ನೀವು ಅರ್ಥ ಮಾಡಿಕೊಳ್ಳದಿದ್ದರೆ ಯಾರು ಏನೂ ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ನಿಂದನೆಯೇ ಅಥವಾ [XXX]ಯೇ ಎಂದು ಸಭಾನಾಯಕರು ಹೇಳಲಿ. ಅದನ್ನು ಒಪ್ಪಿಕೊಳ್ಳಲಿ. **(ಗೊಂದಲ)** ಇಲ್ಲದಿದ್ದರೆ ಇದು ಸರಿ ಹೋಗುವುದಿಲ್ಲ. ದಯವಿಟ್ಟು ಇದಕ್ಕೆ ಉತ್ತರ ಕೊಡಿಸಿ. ಏನು ತೀರ್ಮಾನ ತೆಗೆದುಕೊಂಡಿದೆ? **(ಗೊಂದಲ)** ಅದನ್ನು ಸದನದಲ್ಲಿ ವ್ಯಕ್ತಪಡಿಸಿ. ತಾವು ರೂಲಿಂಗ್ ಕೊಟ್ಟಿದ್ದು ಅದು ಬೇರೆ ವಿಷಯ. **(ಗೊಂದಲ)** ನಿಂದನೆ ಮಾಡುತ್ತಿದ್ದಾರೋ ಅಥವಾ [XXX] ಮಾಡುತ್ತಿದ್ದಾರೋ ಎಂದು ಹೇಳಬೇಕು. **(ಗೊಂದಲ)** ಇಲ್ಲವೆಂದರೆ ಇವರ ನಡೆ ಸರಿ ಕಾಣುವುದಿಲ್ಲ. **(ಗೊಂದಲ)** ನಮಗೆ ಉತ್ತರ ಬೇಕು.

(ಗೊಂದಲ)

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, the House is not in order.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸುಮಾರು 46 ಪುಟಗಳ ಭಾಷಣವನ್ನು ಗೌರವಾನ್ವಿತ ರಾಜ್ಯಪಾಲರು ಸುಮಾರು 54 ಸೆಕೆಂಡ್‌ಗಳಲ್ಲಿ ತಮ್ಮ ಭಾಷಣವನ್ನು ಮುಗಿಸಿದರು. ಆದರೆ ರಾಜ್ಯದ ನಿರೀಕ್ಷೆ ಏನಿತ್ತು ಎಂದರೆ, ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನಕ್ಕೆ ಬರುತ್ತಾರೆ ಮತ್ತು ಅಲ್ಲಿ ಎರಡೂ ಸದನದ ಸದಸ್ಯರುಗಳನ್ನುದ್ದೇಶಿಸಿ ಮಾತನಾಡುತ್ತಾರೆ. **(ಗೊಂದಲ)** ಇಂದಿನ ನಡೆ ಬಗ್ಗೆ ತನ್ನ ಸರ್ಕಾರ **(ಗೊಂದಲ)** ಈ ರಾಜ್ಯದ ರಾಜಕೀಯ ಪರಿಸ್ಥಿತಿ ಮತ್ತು ರಾಜ್ಯದ ಒಟ್ಟಾರೆ ಅಭಿವೃದ್ಧಿಯ ಬಗ್ಗೆ ರಾಜ್ಯಪಾಲರು ಭಾಷಣವನ್ನು ಮಾಡಿದ್ದಾರೆ. **(ಗೊಂದಲ)** ಗೌರವಾನ್ವಿತ ರಾಜ್ಯಪಾಲರ ಸುಮಾರು 46 ಪುಟಗಳ ಭಾಷಣದಲ್ಲಿ ಅನೇಕ ವಿಚಾರಗಳ ಬಗ್ಗೆ ಈ ಒಂದು ಭಾಷಣದ ಪುಸ್ತಕದಲ್ಲಿ ಹೇಳಿದ್ದಾರೆ. ಈ ದೇಶದ ಮತ್ತು ಈ ರಾಜ್ಯದ ರಾಜಕೀಯ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ ಮತ್ತು ಆರ್ಥಿಕ ಪರಿಸ್ಥಿತಿ ಮತ್ತು ಈ ರಾಜ್ಯದ ಒಟ್ಟಾರೆ ಅಭಿವೃದ್ಧಿ ದೃಷ್ಟಿಯಿಂದ ಅವರು ಒಂದು ಒಳ್ಳೆಯ ಭಾಷಣವನ್ನು ಮಾಡಿದ್ದಾರೆಂದು ನಾನು **(ಗೊಂದಲ)** ಹೇಳುತ್ತಿದ್ದೇನೆ. ಗೌರವಾನ್ವಿತ ರಾಜ್ಯಪಾಲರು, ರಾಜ್ಯದಲ್ಲಿ ನಮ್ಮ ಸರ್ಕಾರ ಮುಂದೆ ಏನೇನು ಮಾಡುತ್ತದೆ, ಏನೆಲ್ಲಾ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೇವೆ, **(ಗೊಂದಲ)** ನಮ್ಮ ರಾಜ್ಯದ ಜನತೆ ಹೇಗೆ ಆರ್ಥಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡಿದ್ದಾರೆ, ಅವರ ಬಗ್ಗೆ ಇರುವಂಥ ಕಾಳಜಿಯನ್ನು ಈ ಒಂದು ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. **(ಗೊಂದಲ)** ಆದರೆ ಅವರು ಮಾಡಿದಂತಹ ಭಾಷಣದಲ್ಲಿ ನಾನು ಅನೇಕ ವಿಚಾರಗಳನ್ನು ತಮ್ಮ ಮುಂದೆ ಇವತ್ತು ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಸರ್ಕಾರ ಇದಕ್ಕೆ ಕ್ಷಮೆ ಕೇಳಬೇಕು. ಇದು ನಿಂದನೆಯೇ ಅಥವಾ [XXX]ಯೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸರ್ಕಾರ ಎರಡನ್ನೂ ಮಾಡುವುದೇ? ಅಂದರೆ ಇವರು Governor ರವರನ್ನು ಖಂಡಿಸುವುದು ಮತ್ತು ಆಮೇಲೆ Governor ರವರು ಭಾಷಣ ಮಾಡಿದ್ದಾರೆಂದು ಸ್ವಾಗತ ಕೂಡ ಮಾಡುವುದು. **(ಗೊಂದಲ)** ಹಾಗಾದರೆ ಸರ್ಕಾರದ stand ಏನು?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು double standard ಸರ್ಕಾರ. ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ. **(ಗೊಂದಲ)** ಇದಕ್ಕೆ ಪದ್ಧತಿಗಳಿವೆ. ಪದ್ಧತಿಗಳ ಪ್ರಕಾರ ಅಲ್ಲಿ ಓದಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ರಾಜ್ಯದಲ್ಲಿ ಮಾತನಾಡತಕ್ಕಂಥ ಅನೇಕ ಸಂದರ್ಭಗಳಲ್ಲಿ ಈ ಒಂದು ಭಾಷಣದಲ್ಲಿ ನನಗೆ ಅನಿಸಿದ ಪ್ರಮುಖ ಅಂಶವೇನೆಂದರೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಕ್ಕೆ ಸೌಹಾರ್ದವಾಗಿ ಆರ್ಥಿಕವಾಗಿ ಬೇರೆ ಬೇರೆ ವಿಚಾರಗಳಲ್ಲಿ ಸಹಾಯ ಮಾಡಬೇಕು. ಇವತ್ತಿನ ದಿವಸ ರಾಜ್ಯ ಮತ್ತು ಕೇಂದ್ರಕ್ಕೆ ಇರತಕ್ಕಂಥ ಸಂಬಂಧಗಳ ಬಗ್ಗೆ ನಾನು ಹೆಚ್ಚು ಮಾತನಾಡುವಂತಾಗಿದೆ. **(ಗೊಂದಲ)** ಇವತ್ತಿನ ದಿವಸ ಕೇಂದ್ರ ಸರ್ಕಾರ ರಾಜ್ಯದ ಅನೇಕ ಯೋಜನೆಗಳಿಗೆ ತನ್ನ ನಿಧಿಯನ್ನು ಘೋಷಣೆ ಮಾಡಿದ್ದರು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, House is not in order. ದಯವಿಟ್ಟು ಇದಕ್ಕೆ ಒಪ್ಪಿಕೊಳ್ಳಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅದು ಕೊಡಲಿಲ್ಲ ಎಂದು ನಮ್ಮ ಕೂಗಿದೆ. **(ಗೊಂದಲ)** ಇವತ್ತಿನ ದಿವಸ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಾಡಬೇಕಾದಂಥ ಯೋಜನೆಗಳು, **(ಗೊಂದಲ)** ಕೇಂದ್ರ ಸರ್ಕಾರದ ಯೋಜನೆಗಳು ರಾಜ್ಯದಲ್ಲಿ ಅನುಷ್ಠಾನಗೊಂಡಿದ್ದರೆ ಆ ಯೋಜನೆಗಳಿಗೂ ಕೂಡ ಕೇಂದ್ರ ಸರ್ಕಾರ ಸರಿಯಾದ ರೀತಿಯಲ್ಲಿ ಅನುದಾನ ಬಿಡುಗಡೆ ಮಾಡಲಿಲ್ಲವೆಂಬುದು ನನ್ನ ಅನಿಸಿಕೆಯಾಗಿದೆ. **(ಗೊಂದಲ)** ಇವತ್ತಿನ ದಿವಸ ಕೇಂದ್ರ ಸರ್ಕಾರ, federal system of Government ನಲ್ಲಿ ಕರ್ನಾಟಕವು ಭಾರತ ದೇಶದಲ್ಲಿಯೇ ಅತ್ಯಂತ ಹೆಚ್ಚು, second highest G.S.T. ಮತ್ತು ರೆವಿನ್ಯೂ ಕೊಡತಕ್ಕಂಥ ರಾಜ್ಯವಾಗಿದೆ. **(ಗೊಂದಲ)** ಮಹಾರಾಷ್ಟ್ರ ಹೊರತುಪಡಿಸಿದರೆ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ರೆವಿನ್ಯೂ ಬರುತ್ತಿದೆ. **(ಗೊಂದಲ)** ಹಾಗಾಗಿ, ಕರ್ನಾಟಕ ರಾಜ್ಯಕ್ಕೆ ಕೊಡಬೇಕಾದ ಪಾಲು ಕೊಡಲಿಲ್ಲವೆಂದು ಹೇಳುತ್ತಿದ್ದೇನೆ. ಗೌರವಾನ್ವಿತ ರಾಜ್ಯಪಾಲರು ಇದರಲ್ಲಿ ಏನು ಉಲ್ಲೇಖ ಮಾಡಿದ್ದಾರೆ, ಇದು ಸರಿಯಾದುದಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರು ಏನು ಮಾಡುತ್ತಿದ್ದಾರೆ?

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ದಯವಿಟ್ಟು ಸಹಕಾರ ಮಾಡಿ. **(ಗೊಂದಲ)** ನಾನು ನಿಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. **(ಗೊಂದಲ)** ನೀವು ಮತ್ತೆ ಅದನ್ನೇ ಮಾಡಿದರೆ ಈ ಸದನಕ್ಕೆ ಇದು ಗೌರವ ತರುವಂಥದ್ದು ಅಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕೇಂದ್ರ ಪುರಸ್ಕೃತ ಯೋಜನೆಗಳು ಮತ್ತು ತೆರಿಗೆಯ ಪಾಲು ಮತ್ತು ಅನೇಕ ವಿಚಾರಗಳಲ್ಲಿ, ನೀತಿ ವಿಚಾರಗಳಲ್ಲಿ ದಮನಕಾರಿ ಪರಿಸ್ಥಿತಿಯನ್ನು ಎದುರಿಸಿದ್ದೇವೆ ಎಂದು ಹೇಳಿದ್ದಾರೆ. **(ಗೊಂದಲ)** ಇದರಿಂದ ಒಕ್ಕೂಟ ವ್ಯವಸ್ಥೆಯಲ್ಲಿ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. **(ಗೊಂದಲ)** 15ನೇ ಹಣಕಾಸಿನ ಆಯೋಗದ ಅವಧಿಯಲ್ಲಿ ರೂ.1.25 ಲಕ್ಷ ಕೋಟಿ ರೂಪಾಯಿಗಳಷ್ಟು ಬೃಹತ್ ಪ್ರಮಾಣದ ಸಂಪನ್ಮೂಲ ಸಿಗದೇ ವಂಚನೆಯಾಗಿದೆ ಎಂದು ರಾಜ್ಯಪಾಲರು ಹೇಳಬೇಕಿತ್ತು. ಇವತ್ತಿನ ದಿವಸ ಕೇಂದ್ರ ಸರ್ಕಾರ ಕಣ್ತೆರೆಯಬೇಕಾಗುತ್ತದೆ. **(ಗೊಂದಲ)** ಈ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡಬೇಕಾಗುತ್ತದೆ. **(ಗೊಂದಲ)** ಇವತ್ತು ರಾಜ್ಯದಿಂದ ಕೇಂದ್ರಕ್ಕೆ ಹಲವಾರು ಬಿ.ಜೆ.ಪಿ. ಸಂಸದರು ಆಯ್ಕೆಯಾಗಿ ಹೋಗಿದ್ದಾರೆ ಮತ್ತು 5 ಜನ ಸಚಿವರು ಕೂಡ ಇದ್ದಾರೆ. ಈ ರಾಜ್ಯಕ್ಕೆ ಇಷ್ಟು ದೊಡ್ಡ ಮೋಸ ಮತ್ತು ತೆರಿಗೆಯಲ್ಲಿ ವಂಚನೆಯಾದಾಗ ಯೋಜನೆಗಳ ಬಗ್ಗೆ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳದೇ ಇದ್ದಾಗ...

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಂದನೆಯೋ, [**XXX**]ಯೋ ಎಂದು ಸರ್ಕಾರ ತೀರ್ಮಾನ ಮಾಡಬೇಕು. ಇವರು ಗೌರವಾನ್ವಿತ ರಾಜ್ಯಪಾಲರು ಬಂದಾಗ ಧಿಕ್ಕಾರ ಕೂಗುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಗಳಾಗಿ ಅವರು ಈ ರಾಜ್ಯಕ್ಕೆ ಏನು ಮಾಡಿದ್ದಾರೆ ಎಂದು ಕೇಳಬೇಕಾಗುತ್ತದೆ. **(ಗೊಂದಲ)** ಇವತ್ತಿನ ದಿವಸ ರಾಜ್ಯದ ಹಿತಾಸಕ್ತಿಯ ವಿರುದ್ಧವಾಗಿ ಬಿ.ಜೆ.ಪಿ. ಪಕ್ಷದ ನಾಯಕರುಗಳು ಕೆಲಸ ಮಾಡುತ್ತಿರುವುದನ್ನು ನಾನು ಹೇಳಬೇಕಾಗುತ್ತದೆ. **(ಗೊಂದಲ)** ಇವತ್ತಿನ ದಿವಸ ಬಿ.ಜೆ.ಪಿಯವರಿಗೆ ಬದ್ಧತೆ ಇದ್ದಿದ್ದರೆ, ಅವರು ರಾಜ್ಯ ಸರ್ಕಾರದ ಪರವಾಗಿ ಹೋರಾಟ ಮಾಡಬೇಕು. **(ಗೊಂದಲ)** ನಮ್ಮ ರಾಜ್ಯ ಸರ್ಕಾರಕ್ಕೆ ನ್ಯಾಯಕೊಡಬೇಕು. 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಸುಮಾರು **(ಗೊಂದಲ)** ರೂ. 1.2 ಲಕ್ಷ ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತದ ಸಂಪನ್ಮೂಲ ರಾಜ್ಯಕ್ಕೆ ವಂಚನೆಯಾದಾಗ, 16ನೇ ಹಣಕಾಸು ಆಯೋಗಕ್ಕೆ ಮನವರಿಕೆ ಮಾಡಿಕೊಡುವಂಥ ಕೆಲಸವನ್ನು ತಾವು ಮಾಡದೇ ಇದ್ದು; ಈ ರಾಜ್ಯಕ್ಕೆ ಅನ್ಯಾಯ ಮಾಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. **(ಗೊಂದಲ)** ಇವತ್ತಿನ ದಿವಸ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಏನು ಬಾಂಧವ್ಯ ಇತ್ತೋ ಈ ಬಾಂಧವ್ಯವನ್ನು ಅಳಿಸಿ ಹಾಕುವಂಥ ಕೆಲಸವನ್ನು ನಮ್ಮ ರಾಜ್ಯದ ಬಿ.ಜೆ.ಪಿ. ನಾಯಕರು ಮಾಡಿದ್ದಾರೆಂದು ನಾನು ಘಂಟಾಘೋಷವಾಗಿ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ರೀತಿ ತೀರ್ಮಾನ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಅನ್ಯಾಯವನ್ನು ಮಾಡಿದಾಗ ಈ ಸರ್ಕಾರ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಈ ರಾಜ್ಯಕ್ಕೆ ಅನ್ಯಾಯವಾಗಿದೆ. ಆರ್ಥಿಕವಾಗಿ ಅನ್ಯಾಯ **(ಗೊಂದಲ)** ಯೋಜನೆಗಳಲ್ಲಿ ಅನ್ಯಾಯವಾಗಿದೆ. ರಾಜ್ಯದ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಅನ್ಯಾಯವಾಗಿದೆ. **(ಗೊಂದಲ)** ರಸ್ತೆಗಳ ನಿರ್ಮಾಣ ಮಾಡುವುದರಲ್ಲಿ ಅನ್ಯಾಯವಾಗಿದೆ **(ಗೊಂದಲ)**.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಬಿ.ಜೆ.ಪಿ ಪಕ್ಷದ ಸದಸ್ಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಉಪ ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ನಾಳೆ ನಿಮಗೆ ಮಾತನಾಡಲು ಅವಕಾಶ ಕೊಡಲಾಗುತ್ತದೆ ತಾವು ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** House order ಗೆ ಬರಲಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. **(ಗೊಂದಲ)** ಇವತ್ತಿನ ದಿವಸ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯನವರು, ಈ ರಾಜ್ಯದ ಪರವಾಗಿ, ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಎಷ್ಟು ದೊಡ್ಡ ಸಂದರ್ಭ ಬಂದರೂ ಕೂಡ, ಆರ್ಥಿಕವಾಗಿ ಕೇಂದ್ರ ಸರ್ಕಾರ ಸಹಾಯ ಮಾಡದೇ ಇದ್ದರೂ ಕೂಡ ಈ ರಾಜ್ಯವನ್ನು ಮುನ್ನಡೆಸಿದಂತಹ ಕೀರ್ತಿ ಇದೆ. ಈ ಕೀರ್ತಿ ಆರ್ಥಿಕ ತಜ್ಞರಾದ ಸನ್ಮಾನ್ಯ ಸಿದ್ಧರಾಮಯ್ಯನವರಿಗೆ ಸೇರಬೇಕು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**(ಮುಂದು)**

(49)27.1.2026/7.00/ಎಂ.ಎಂ–ಕೆ.ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಎದ್ದು ನಿಂತು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)**

**ಶ್ರೀ ಐವನ್ ಡಿ'ಸೋಜಾ (ಮುಂದು):–**

ರಾಜ್ಯಕ್ಕೆ ಇಷ್ಟು ಮೋಸವಾದರೂ ಕೂಡ, ರಾಜ್ಯಕ್ಕೆ ಇಷ್ಟು ತೊಂದರೆಗಳಾದರೂ ಕೂಡ, ಆರ್ಥಿಕವಾಗಿ ನಮಗೆ ಅವರು ಮೋಸ ಮಾಡಿದರೂ ಕೂಡ ರಾಜ್ಯದ ಜನತೆಗೆ ಕೊಟ್ಟ ಮಾತನ್ನು ಉಳಿಸಿದಂತಹ ಸರ್ಕಾರ ಅದು ಸನ್ಮಾನ್ಯ ಸಿದ್ದರಾಮಯ್ಯನವರೇ ಹೊರತು ಬೇರೆ ಯಾರೂ ಅಲ್ಲ ಎಂದು ಹೇಳಬಯಸುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚು ದಿವಸಗಳು ಆಡಳಿತ ನಡೆಸಿದಂತಹ ರಾಜ್ಯದ ಮುಖ್ಯಮಂತ್ರಿಗಳಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದಿ: ದೇವರಾಜ ಅರಸುರವರನ್ನು ಬಿಟ್ಟರೆ, ಈ ರಾಜ್ಯದಲ್ಲಿ ಅತ್ಯಂತ ಹೆಚ್ಚು ದಿನಗಳ ಕಾಲ ಆಡಳಿತವನ್ನು ನಡೆಸಿ ಹತ್ತಾರು ಬಜೆಟ್‌ಗಳನ್ನು ಮಂಡನೆ ಮಾಡಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಇಷ್ಟು ಎತ್ತರಕ್ಕೆ ಏರಿಸಿದ್ದರೆ ಅದಕ್ಕೆ ಸನ್ಮಾನ್ಯ ಸಿದ್ದರಾಮಯ್ಯನವರು ಕಾರಣವೆಂದು ಹೇಳಬಯಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ದುಂಡಾವರ್ತಿಯನ್ನು ಮೆರೆಯುತ್ತಿದೆ, ನಾವು ಇದನ್ನು ವಿರೋಧ ಮಾಡುತ್ತೇವೆ. ಸರ್ಕಾರದ ಈ ನಡೆಯನ್ನು ವಿರೋಧ ಮಾಡುತ್ತಾ ಈಗ ಬಾವಿಗೆ ಬರುತ್ತಿದ್ದೇವೆ.

**(ಈ ಹಂತದಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಹಾಗೂ ಜೆ.ಡಿ(ಎಸ್) ಪಕ್ಷದ ಶ್ರೀ ಎಸ್.ಎಲ್. ಭೋಜೇಗೌಡರನ್ನು ಹೊರತುಪಡಿಸಿ ವಿರೋಧಪಕ್ಷದ ಇನ್ನುಳಿದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಐವನ್ ಡಿಸೋಜಾ:–** ರಾಜ್ಯ ಒಟ್ಟಾರೆಯಾಗಿ ಸಮಸ್ಯೆಗೆ ಸಿಲುಕಿದಾಗ ಅದನ್ನು (ಗೊಂದಲ) ನಿಭಾಯಿಸುವುದಕ್ಕೆ ಬರ ಬರಲಿ ಅಥವಾ ಬೇರೆ ಯಾವುದೇ ಕಾರಣಗಳಿರಲಿ ಇಡೀ ರಾಜ್ಯಕ್ಕೆ ಅನ್ಯಾಯವಾದಾಗ ರಾಜ್ಯದ ಯಾವುದೇ ಬಿ.ಜೆ.ಪಿ. ನಾಯಕರು ಕೇಂದ್ರಸರ್ಕಾರದ ಮನವೊಲಿಸುವುದಕ್ಕೆ ಪ್ರಯತ್ನ ಮಾಡದಿರುವುದು ಬೇಸರದ ಸಂಗತಿಯಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ದುಂಡಾವರ್ತಿ ಸರ್ಕಾರ **(ಗೊಂದಲ)** ಈ ಸರ್ಕಾರದ ದುಂಡಾವರ್ತಿ ನಡೆಯುವುದಿಲ್ಲ. ನಾವು ಯಾವುದೇ ಕಾರಣಕ್ಕೂ ಇದನ್ನು (ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಇವತ್ತು ಬರ ಬಂದು ಆರ್ಥಿಕ ನಷ್ಟವಾದಾಗ, ಬೆಳೆ ನಷ್ಟವಾದಾಗ ಈ ರಾಜ್ಯಕ್ಕೆ ಬರಬೇಕಾದ ಪಾಲು ಪಡೆಯಲು (ಗೊಂದಲ) ನಾವು ಸುಪ್ರೀಂ ಕೋರ್ಟ್‌ಗೆ ಹೋಗಬೇಕಾಯಿತು. ಸುಪ್ರೀಂ ಕೋರ್ಟ್‌ನ ಆದೇಶದಂತೆ ಇವತ್ತು ರಾಜ್ಯ ಸರ್ಕಾರದ ಪಾಲು ಕೊಡಿ ಎಂದು ಕೇಳುವ ಮಟ್ಟಕ್ಕೆ ಕೇಂದ್ರ ಸರ್ಕಾರ ಬಂದಿರುವಂಥದ್ದು ಈ ದೇಶದ ಚರಿತ್ರೆಯಲ್ಲಿ ಅತ್ಯಂತ ನಾಚಿಕೆಗೇಡಿನ ಕೆಲಸವೆಂದು ಹೇಳಬಯಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೊದಲು ಸರ್ಕಾರ ಉತ್ತರ ಕೊಡಲಿ ಇದು ವಂದನೆಯೇ ಅಥವಾ ನಿಂದನೆಯೇ ಎಂಬುದನ್ನು ಸ್ಪಷ್ಟಪಡಿಸಲಿ. ವಂದನೆ ಮತ್ತು ನಿಂದನೆ ಎರಡನ್ನೂ ಒಟ್ಟಿಗೆ ಒಪ್ಪುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ಕರ್ನಾಟಕ ರಾಜ್ಯದ ಬೆಳವಣಿಗೆಯ ಹಿತದೃಷ್ಟಿಯಿಂದ ಬಿ.ಜೆ.ಪಿ.ಯವರಿಗೆ ರಾಜ್ಯದ ಬಗ್ಗೆ ಹಿತಾಸಕ್ತಿ ಇಲ್ಲ. ರಾಜ್ಯದಲ್ಲಿ ಇವತ್ತು ಎಷ್ಟೋ ಬ್ರಿಡ್ಜ್‌ಗಳಾಗಿವೆ, ರಸ್ತೆಗಳಾಗಿವೆ ಆದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಮಲತಾಯಿ ಧೋರಣೆ ತೋರುವ ಮೂಲಕ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಪಾತಾಳಕ್ಕೆ ಕೊಂಡೊಯ್ಯುವಂತಹ ಕೆಲಸ ಮಾಡಿದೆ. ಇವತ್ತು ಸನ್ಮಾನ್ಯ ಸಿದ್ಧರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಅವರ ಅನುಭವದ ಮೂಲಕ ಅವರು ಜನರಿಗೆ ಕೊಟ್ಟಂತಹ ಆಶ್ವಾಸನೆಗಳನ್ನು ಈಡೇರಿಸುವಂತಹ ಕೆಲಸ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ತುಂಬಾ ಸಮಯ ಬೇಕು. I have a lot of subjects to speak. ನಾಳೆಗೆ ಮುಂದುವರೆಸಿ.

**ಉಪ ಸಭಾಪತಿಯವರು:–** House order ನಲ್ಲಿ ಇಲ್ಲದಿದ್ದಾಗ ಮಾತನಾಡಿದರೆ ಅದಕ್ಕೆ ಗೌರವ ಬರುತ್ತದೆಂದು ನಾನು ಅಂದುಕೊಳ್ಳುವುದಿಲ್ಲ. ದಯವಿಟ್ಟು ನಾಳೆ ಅದರ ಬಗ್ಗೆ ಚರ್ಚೆ ಮಾಡೋಣ ಪ್ಲೀಸ್. . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಸರ್ಕಾರ ಉತ್ತರ ಕೊಡಬೇಕು. ಇದು ನಿಂದನೆಯೇ ಅಥವಾ ವಂದನೆಯೇ?

**ಉಪ ಸಭಾಪತಿಯವರು:–** ಬಾವಿಗಿಳಿದು protest ಮಾಡಿದರೆ ನಿಮಗೇನು ಉತ್ತರ ಸಿಗುತ್ತದೆ? ದಯವಿಟ್ಟು ಚರ್ಚೆ ಮಾಡುವುದಕ್ಕೆ ಪೀಠ ನಾಳೆ ಅವಕಾಶ ಕೊಡುತ್ತದೆ. ಆಗ ಚರ್ಚೆ ಮಾಡಿ, ಈಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಬಾವಿಗಿಳಿಯದೇ ಬೇರೆ ದಾರಿ ಏನಿದೆ ದಯಮಾಡಿ ತಾವು ಹೇಳಬೇಕು.

**ಉಪ ಸಭಾಪತಿಯವರು:–** ನೀವು ಅದೊಂದೇ ಕೆಲಸವನ್ನು ಸರಿಯಾಗಿ ಮಾಡುವುದು. ತಮ್ಮ ಜಾಗಗಳಿಗೆ ಹೋಗಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ವಂದನೆಯೇ, ನಿಂದನೆಯೇ ಹೇಳಲಿ. ನಮ್ಮ ಪ್ರಶ್ನೆಗೆ ಉತ್ತರ ಕೊಡದೇ ದುಂಡಾವರ್ತಿ ಮಾಡುವುದು ಸರ್ಕಾರಕ್ಕೆ ಸರಿ ಇದೆಯೇ?

**ಉಪ ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಾಯಂಕಾಲ 7 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 28ನೇ ಜನವರಿ ಮಾಹೆ 2026ರಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

“ಪುಟಸಂಖ್ಯೆ 148,152,156,157,170,176,177,178 ರಲ್ಲಿರುವ **[xxx]** ಈ ಚಿಹ್ನೆಯು ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾದ ಪದಗಳು ಎಂಬುದನ್ನು ಗುರುತಿಸುತ್ತದೆ.”